# ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಒಲಿಂಪಿಕ್ಸ್ ಪೋಸ್ಟರ್‌ನಲ್ಲಿ ಕಿಂಗ್ ಕೊಹ್ಲಿ

2028ರಲ್ಲಿ ಲಾಸ್ ಏಂಜಲಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡಾ ಸೇರ್ಪಡೆಯಾಗಿದ್ದು, ಒಲಿಂಪಿಕ್ಸ್ ಸಮಿತಿ ಪೋಸ್ಟರ್ ಬಿಡುಗಡೆ ಮಾಡಿದೆ. ಈ ಪೋಸ್ಟರ್‌ನಲ್ಲಿ ವಿರಾಟ್ ಕೊಹ್ಲಿ ಅವರ ಭಾವಚಿತ್ರವನ್ನು ಹೊರತುಪಡಿಸಿ ಮತ್ಯಾವ ಕ್ರಿಕೆಟಿಗನಿಗೂ ಅವಕಾಶ ನೀಡಲಾಗಿಲ್ಲ.

### ಸೊಂಪಾದ ಪುಟಗಳು

ನಮ್ಮಂತೆ ಅವರೂ ದ್ವೀಪ ನಿರ್ಮಿಸುತ್ತಿದ್ದಾರೆ, ಆದರೆ ಎಷ್ಟು ವ್ಯತ್ಯಾಸ?

ನೂರೆಂಟು ವಿಶ್ವ – ವಿಶ್ವೇಶ್ವರ ಭಟ್ 6



ದೈವ ಭೂತಗಳೂ ಯಕ್ಷ ಗಂಧರ್ವರೂ

ಕಾಡುದಾರಿ – ಹರೀಶ್ ಕೇರ 7

### ದಾರಿದೀಪೋಕ್ತಿ



ನಮ್ಮ ಎಲ್ಲ ವರ್ತನೆಗಳಲ್ಲಿ ಮುಖ್ಯವಾದುದು ಒಬ್ಬರು ಇನ್ನೊಬ್ಬರಿಗೆ ಕೊಡುವ ಮರ್ಯಾದೆ ಮತ್ತು ಗೌರವ. ಯಾರಾದರೂ ಹಿರಿಯರಿಗೆ ಕಾಲು ಮುಟ್ಟಿ ನಮಸ್ಕರಿಸಿದರೆ ಅದಕ್ಕಿಂತ ಮಿಗಿಲಾದ ನಡೆ ಯಾವುದೂ ಇಲ್ಲ ಎಂದೆನಿಸುತ್ತದೆ.

### ವಕ್ರತುಂಡೋಕ್ತಿ

ನಾವು ಯಾರನ್ನು ಒಪ್ಪಿಕೊಳ್ಳುತ್ತೇವೆ ಎಂಬುದೊಂದೇ ಅಲ್ಲ, ಯಾರನ್ನು ದೂರ ಸರಿಸುತ್ತೇವೆ ಎಂಬುದರ ಮೇಲೆಯೂ ಜನ ನಮ್ಮನ್ನು ಅಳೆಯಬಹುದು.

### ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ | ಮುಂದಿನ ಹಾದಿ ಬಗ್ಗೆ ತೀರ್ಮಾನ ಸಂಭವ

# ಜಾತಿಗಣತಿ ಭವಿಷ್ಯ ಇಂದು

ವಿಶ್ವವಾಣಿ ಸುದ್ದಿಮನೆ

**ಬೆಂಗಳೂರು:** ರಾಜ್ಯದಲ್ಲಿ ಬಿರುಗಾಳಿ ಎಬ್ಬಿಸಿರುವ ಜಾತಿ ಗಣತಿಯ ಭವಿಷ್ಯದ ಅಂತಿಮ ತೀರ್ಮಾನ ಬಹುತೇಕ ಇಂದಿನ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಆಗುವುದು ನಿಶ್ಚಿತ ಎನ್ನಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಕುರಿತಾದ ಚರ್ಚೆ ಮಾತ್ರ ಅಜೆಂಡಾವಾಗಿದೆ. ಈಗಾಗಲೇ ಒಕ್ಕಲಿಗ, ಲಿಂಗಾಯತ ಸಮುದಾಯದ ಸಚಿವರು ಬಹಿರಂಗವಾಗಿಯೇ ಮರು ಸಮೀಕ್ಷೆಗೆ ಆಗ್ರಹಿಸಿದ್ದಾರೆ. ಆದ್ದರಿಂದ ಸಭೆಯಲ್ಲಿ ಸಹಜವಾಗಿಯೇ, ಜಾತಿ ಗಣತಿಯನ್ನು ವಿಶ್ಲೇಷಿಸಿ, ತಮ್ಮ ವಾದವನ್ನು ಮಂಡಿಸುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ. ಈ ನಡುವೆ ಹಿಂದುಳಿದ ಸಮುದಾಯದ ಬಹುತೇಕ ಸಚಿವರು ಹಾಗೂ ದಲಿತ ಸಚಿವರು ಜಾತಿ ಗಣತಿಯ ಪರವಾಗಿರುವುದರಿಂದ, ಪರ–ವಿರೋಧದ ಜುಗಲ್ಬಂದಿ ಜೋರಾಗಿರುವ ಸಾಧ್ಯತೆಯಿದೆ ಎಂದು ವಿಶ್ಲೇಷಿಸಲಾಗಿದೆ.

ತೀವ್ರ ವಿರೋಧ ವ್ಯಕ್ತವಾಗುತ್ತಿರುವುದರಿಂದ ಜಾತಿ ಗಣತಿಗೆ ಸಂಬಂಧಿಸಿ ದಂತೆ ಹಿರಿಯ ಸಚಿವರ ನೇತೃತ್ವದಲ್ಲಿ ಸಚಿವ ಸಂಪುಟದ ಉಪ ಸಮಿತಿ ರಚಿಸಿ, ತಾತ್ಕಾಲಿಕವಾಗಿ ವಿಷಯವನ್ನು ಮುಂದೂಡುವ ಲೆಕ್ಕಾಚಾರದಲ್ಲಿ ಕೆಲ ಸಚಿವರಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಹೈಕಮಾಂಡ್‌ನಿಂದ ಒಪ್ಪಿಗೆ ಪಡೆದಿರುವುದರಿಂದ, ಸಮಯದ ಮಿತಿ ನೀಡಿ, ಉಪ ಸಮಿತಿ ರಚನೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ. ಆದರೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದಲೇ ಇದಕ್ಕೆ ವಿರೋಧ ವ್ಯಕ್ತವಾಗುವ ಸಾಧ್ಯತೆಯಿರುವುದರಿಂದ ಯಾವ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನುವ ಸ್ಪಷ್ಟನೆ ಸಭೆಯ ಬಳಿಕವೇ ಸಿಗಲಿದೆ.

#### ಒಕ್ಕಲಿಗ, ಲಿಂಗಾಯತ ಸಚಿವರ ವಾದವೇನು?

- ಉಪಜಾತಿಗಳನ್ನು ಬೇರ್ಪಡಿಸಿ, ನಮ್ಮ ಸಮುದಾಯದ ಜನಸಂಖ್ಯೆ ಕಡಿಮೆ ತೋರಿಸಲಾಗಿದೆ
- ಇದು ಜಾರಿಯಾದರೆ, ಕಾಂಗ್ರೆಸ್ ವಿರುದ್ಧ ಸಮುದಾಯ ತಿರುಗಿಬೀಳಲಿದೆ
- ಆದ್ದರಿಂದ ಜಾತಿಗಣತಿಯನ್ನು ಮರುಸಮೀಕ್ಷೆ ನಡೆಸಬೇಕು, ಇಲ್ಲವೇ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ
- ಈ ಬಗ್ಗೆ ಚರ್ಚಿಸಲು ಸಂಪುಟ ಉಪಸಮಿತಿ ರಚಿಸಬೇಕು

#### ಅಲ್ಪಸಂಖ್ಯಾತ, ಒಬಿಸಿ ಸಚಿವರ ವಾದವೇನು?

- ಜಾತಿ ಗಣತಿ ಒಪ್ಪಿಕೊಂಡರೆ ಪ್ರಬಲ ಸಮುದಾಯ ಕಾಂಗ್ರೆಸ್ ಬೆನ್ನಿಗೆ ನಿಲ್ಲಲಿದೆ
- ಇದರಿಂದ ಭವಿಷ್ಯದಲ್ಲಿ ಮುಸ್ಲಿಂ, ಪರಿಶಿಷ್ಟ ಮತಗಳು ಸಾಲಿಡ್ ಆಗಿ ಕಾಂಗ್ರೆಸ್ ಜತೆ ಇರಲಿವೆ
- ಈ ಗಣತಿಯನ್ನು ಮುಂದಿಟ್ಟುಕೊಂಡು ಒಳ ಮೀಸಲು ಜಾರಿ ಸುಲಭ
- ಪಕ್ಷದ ಹೈಕಮಾಂಡ್‌ನ ಭರವಸೆಯಾಗಿರುವುದರಿಂದ ಪಾಲಿಸುವುದು ಸೂಕ್ತ

#### ಹೋರಾಟಕ್ಕೆ ಸಿದ್ಧತೆ

ಈ ನಡುವೆ ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ, ವಿಶ್ವಕರ್ಮ ಸೇರಿದಂತೆ ಹಲವು ಸಮುದಾಯದವರು ತಮ್ಮ ಜಾತಿಯ ಸಂಖ್ಯೆಯನ್ನು ತೀರಾ ಕಡಿಮೆ ತೋರಿಸಲಾಗಿದೆ ಎನ್ನುವ ಆರೋಪ ಮಾಡುತ್ತಿರುವುದರಿಂದ ಈ ಎಲ್ಲ ಸಮುದಾಯಗಳು ಒಂದಾಗಿವೆ. ಒಂದು ವೇಳೆ ಸಂಪುಟದಲ್ಲಿ ಜಾತಿ ಗಣತಿಗೆ ಅನುಮೋದನೆ ಸಿಕ್ಕರೆ, ಎಲ್ಲ ಸಮುದಾಯಗಳು ಒಂದಾಗಿಯೇ ಹೋರಾಟ ನಡೆಸಲು ತೀರ್ಮಾನಿಸಿವೆ.

#### ಸರಕಾರದ ಇಕ್ಕಟ್ಟೇನು?

ಜಾತಿಗಣತಿಯಲ್ಲಿ ಮುಸ್ಲಿಂ, ಎಸ್‌ಸಿ, ಎಸ್‌ಟಿ ಮತಗಳೇ ನಿರ್ಣಾಯಕವಾಗಿವೆ. ಉತ್ತರ ಕರ್ನಾಟಕದಲ್ಲಿ ಲಿಂಗಾಯತರ ವಿರೋಧ ಕಟ್ಟಿಕೊಂಡು ಗೆಲ್ಲುವುದು ಸುಲಭವಲ್ಲ. ಆದರೆ ಕಾಂಗ್ರೆಸ್‌ನೊಂದಿಗೆ ನಿಲ್ಲುವ ಪ್ರಮುಖ ಜಾತಿಗಳಿಗೆ ಅನುಕೂಲವಾಗಿ ಈ ಗಣತಿ ಇದೆ. ಜಾತಿ ಗಣತಿಯ ಬಹಿರಂಗ ಕಾಂಗ್ರೆಸ್ ಪಕ್ಷದ ಭರವಸೆಯೂ ಆಗಿದೆ. ಆದ್ದರಿಂದ ಅತ್ತ ಧರಿ–ಇತ್ತ ಪುಲಿ ಎನ್ನುವ ಸ್ಥಿತಿಯಲ್ಲಿ ಸರಕಾರವಿದೆ.

ಎಚ್.ಕಾಂತರಾಜ್ ಆಯೋಗವು ರಾಜ್ಯದ ಸಾಮಾಜಿಕ, ಆರ್ಥಿಕ ಸಮೀಕ್ಷೆಯ ವರದಿ ಸಲ್ಲಿಸಿದೆ. ಏ.17ರ ಸಚಿವ ಸಂಪುಟದಲ್ಲಿ ಚರ್ಚೆ ನಡೆಯಲಿದೆ. ಇದರಿಂದ ಯಾರಿಗೂ ಅನ್ಯಾಯವಾಗಲು ಬಿಡುವುದಿಲ್ಲ. ಸಂಪುಟ ಸಭೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಚಿವರಿಗೆ ಅವಕಾಶ ನೀಡಲಾಗುವುದು. ಒಕ್ಕಲಿಗ ಸಮುದಾಯದ ಸಚಿವರು, ಶಾಸಕರ ಅಭಿಪ್ರಾಯಗಳನ್ನೂ ಆಲಿಸಲಾಗುವುದು.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ರಾಜ್ಯದಲ್ಲಿ ವೀರಶೈವ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯವನ್ನು ಎದುರು ಹಾಕಿಕೊಂಡು ಅಧಿಕಾರ ನಡೆಸಲು ಸಾಧ್ಯವಿಲ್ಲ. ರಾಜ್ಯದಲ್ಲಿ ವೀರಶೈವ ಲಿಂಗಾಯತರ ಸಂಖ್ಯೆ ಅಧಿಕವಾಗಿದೆ. ಎರಡನೇ ಸ್ಥಾನದಲ್ಲಿ ಒಕ್ಕಲಿಗ ಸಮುದಾಯವಿದೆ. ಜಾತಿ ಜನಗಣತಿ ವರದಿ ಬಿಡುಗಡೆ ಮಾಡುವುದಾಗಿ ಸರಕಾರ ಸುಮ್ಮನೆ ಹೇಳುತ್ತಿದೆ. ಒಂದೊಮ್ಮೆ ಬಿಡುಗಡೆ ಮಾಡಿದರೆ ಒಕ್ಕಲಿಗರು ಮತ್ತು ಲಿಂಗಾಯತರು ಒಗ್ಗೂಡಿ ಹೋರಾಟ ಮಾಡುತ್ತೇವೆ.

– **ಶಾಮನೂರು ಶಿವಶಂಕರಪ್ಪ** ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ

### ಒಂದನೇ ತರಗತಿ ಸೇರ್ಪಡೆಗೆ 5 ವರ್ಷ 5 ತಿಂಗಳು ನಿಗದಿಪಡಿಸಿ ಹೊಸ ಆದೇಶ

# ಶಾಲಾ ಸೇರ್ಪಡೆ ವಯೋಮಿತಿ ಸಡಿಲ

**ಬೆಂಗಳೂರು:** ರಾಜ್ಯ ಸರಕಾರ ಮತ್ತು ಶಿಕ್ಷಣ ಇಲಾಖೆಯು 1ನೇ ತರಗತಿಗೆ ದಾಖಲಾತಿಯ ವಯೋಮಿತಿಯನ್ನು ಸಡಿಲಗೊಳಿಸಿದ್ದು, 5 ವರ್ಷ 5 ತಿಂಗಳಿರುವ ಮಕ್ಕಳಿಗೂ ಶಾಲಾ ದಾಖಲಾತಿಗೆ ಅವಕಾಶ ಕಲ್ಪಿಸಲಾಗಿದೆ.

ಸಮಗ್ರ ಶಿಕ್ಷಣ ಯೋಜನೆ ಸಮಿತಿಯ ಶಿಫಾರಸಿನ ಆಧಾರದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ವಯೋಮಿತಿ ಗೊಂದಲಕ್ಕೆ ತೆರೆ ಬಿದ್ದಿದೆ. ಈ ಹಿಂದೆ, ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 1ನೇ ತರಗತಿಗೆ ದಾಖಲಾತಿಗೆ 6 ವರ್ಷ ಪೂರೈಸಿರುವುದು ಕಡ್ಡಾಯವಾಗಿತ್ತು. ಈ ನಿಯಮದಿಂದಾಗಿ ವಾರ್ಷಿಕವಾಗಿ ಸುಮಾ ರು 5 ಲಕ್ಷ ಮಕ್ಕಳು ಶಾಲಾ ದಾಖಲಾತಿಯಲ್ಲಿ ಸಮಸ್ಯೆ ಎದುರಿಸುತ್ತಿದ್ದರು. ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿದ್ದವು. ಸಮಿತಿಯು 5 ವರ್ಷ 10 ತಿಂಗಳಿಗೆ ವಯೋಮಿತಿ ಸಡಿಲಿಕೆಗೆ ಶಿಫಾರಸು ಮಾಡಿತ್ತು. ಆದರೆ, ಶಿಕ್ಷಣ ಇಲಾಖೆಯು ಇದಕ್ಕಿಂತಲೂ ಹೆಚ್ಚಿನ ಸಡಿಲಿಕೆ ಘೋಷಿಸಿ, 5 ವರ್ಷ 5 ತಿಂಗಳಿರುವ ಮಕ್ಕಳಿಗೂ ದಾಖಲಾತಿಗೆ ಅನುಮತಿ ನೀಡಿದೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ಹಂಚಿಕೊಂಡಿದ್ದು, ಈ ಸಡಿಲಿಕೆಯು 2025ರ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗಲಿದೆ. ಮುಂದಿನ ವರ್ಷದಿಂದ 1ನೇ ತರಗತಿಗೆ ದಾಖಲಾತಿಗೆ 6 ವರ್ಷ ಕಡ್ಡಾಯವಾಗಿರಲಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಪೋಷಕರು ಮಕ್ಕಳ ಮೇಲೆ ಒತ್ತಡ ಹೇರಬಾರದು. ಮಕ್ಕಳನ್ನು ಮಿಷನ್ ನಂತೆ ಓದಿಸುವುದರಿಂದ ಮಾನಸಿಕ ಒತ್ತಡ ಹೆಚ್ಚಾಗುತ್ತದೆ ಎಂದು ಅವರು ಪೋಷಕರಿಗೆ ಮನವಿ ಮಾಡಿದ್ದಾರೆ.

ದ್ವಿತೀಯ ಪಿಯುಸಿಯ 2ನೇ ಪರೀಕ್ಷೆಯ ಫಲಿತಾಂಶದ ಬಳಿಕ ಸಿಇಟಿ ಫಲಿತಾಂಶ ಪ್ರಕಟವಾಗಲಿದೆ. ಮೊದಲ ಪರೀಕ್ಷೆಯಲ್ಲಿ ಸುಮಾರು 1.7 ಲಕ್ಷ ಮಕ್ಕಳು ಅನುತ್ತೀರ್ಣವಾಗಿದ್ದು, ಅವರಲ್ಲಿ 1.5 ಲಕ್ಷ ಮಕ್ಕಳು ಎರಡನೇ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದಾರೆ.

→ 4

#### ಎಲ್‌ಕೆಜಿಗೆ ನಾಲ್ಕು ವರ್ಷವಾಗಿರಬೇಕು

ಈ ವರ್ಷ 5 ವರ್ಷ 5 ತಿಂಗಳು ಆಗಿರುವ ಮಗು 1ನೇ ತರಗತಿಗೆ ಅರ್ಹತೆ ಪಡೆಯಬಹುದು. ಮುಂದಿನ ವರ್ಷಕ್ಕೆ ಇದು ಅನ್ವಯ ಆಗುವುದಿಲ್ಲ. ಎಸ್‌ಇಪಿ (ಸ್ಟೇಟ್ ಎಜುಕೇಶನ್ ಪಾಲಿಸಿ) ನಿಯಮದ ಪ್ರಕಾರ 1ನೇ ಕ್ಲಾಸ್ ಸೇರಬೇಕಂದ್ರೆ 6 ವರ್ಷ ಆಗಿರಲೇಬೇಕು. ಖಾಸಗಿ ಶಾಲೆಯಲ್ಲಿ ಮಕ್ಕಳು ಓದುತ್ತಿದ್ದರೆ ಎಲ್‌ಕೆಜಿ, ಯುಕೆಜಿ ಆಗಿರಲೇಬೇಕು. ಮಗು ಸರಕಾರಿ ಶಾಲೆಯಲ್ಲಿ ಓದಿದ್ದರೆ ಅಂಗನವಾಡಿ ಮುಗಿಸಿರಬೇಕು. 1ನೇ ತರಗತಿಯ ಪ್ರವೇಶದ ಜತೆಗೆ ಎಲ್‌ಕೆಜಿ ಪ್ರವೇಶ ಪಡೆಯುವ ಮಕ್ಕಳಿಗೆ 4 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ.

ಇತರ ರಾಜ್ಯಗಳಲ್ಲಿ 1ನೇ ತರಗತಿಗೆ 6 ವರ್ಷದ ವಯೋಮಿತಿ ಕಡ್ಡಾಯವಾಗಿದೆ. ಆದರೆ, ಕರ್ನಾಟಕದಲ್ಲಿ ಎಸ್‌ಇಪಿ ಯೋಜನೆಯಿಂದಾಗಿ ಕೆಲವು ಮಕ್ಕಳು ಕಡಿಮೆ ವಯಸ್ಸಿನಲ್ಲೇ ಶಾಲೆಗೆ ಸೇರುತ್ತಿದ್ದಾರೆ. ಈ ಸಂದರ್ಭದಲ್ಲಿ ವಯೋಮಿತಿ ಸಡಿಲಿಕೆಯಿಂದ ಪೋಷಕರ ಗೊಂದಲ ತೀರಿದೆ.

–**ಮಧು ಬಂಗಾರಪ್ಪ** ಶಿಕ್ಷಣ ಸಚಿವ

## ಗುತ್ತಿಗೆ ಮೀಸಲು ಮಸೂದೆ ರಾಷ್ಟ್ರಪತಿಗೆ

**ಬೆಂಗಳೂರು:** ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ಗುತ್ತಿಗೆಯಲ್ಲಿ ಶೇ.4ರಷ್ಟು ಮೀಸಲಾತಿ ಕಲ್ಪಿಸಿದ್ದ ಮಸೂದೆಯನ್ನು ರಾಜ್ಯಪಾಲ ಥಾವರ್ ಸಿಂಗ್ ಗೆಹ್ಲೋಟ್ ಅವರು ರಾಷ್ಟ್ರಪತಿಗೆ ಕಳುಹಿಸಿದ್ದಾರೆ. ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲು ನೀಡಲು ಅವಕಾಶ ವಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಸಂವಿಧಾನದ ಆರ್ಟಿಕಲ್ 14, 15, 16 ಉಲ್ಲೇ ಖಿಸಿ ನಿರಾಕರಣೆ ಮಾಡಿದೆ ಎಂದು ರಾಜ್ಯಪಾಲರು ಕೆಲ ತೀರ್ಪುಗಳನ್ನು ಉಲ್ಲೇಖಿಸಿದ್ದಾರೆ.

## ಲಾರಿ ಮುಷ್ಕರ: ಸರಕು ಸೇವೆ ವ್ಯತ್ಯಯ

**ಬೆಂಗಳೂರು:** ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಡೆಸುತ್ತಿರುವ ಲಾರಿ ಮುಷ್ಕರ 3ನೇ ದಿನಕ್ಕೆ ಕಾಲಿರಿಸಿದ್ದು, ಸರಕು ಸೇವೆ ಯಲ್ಲಿ ವ್ಯತ್ಯಯವಾಗಿದೆ. ಹೊರರಾಜ್ಯಗಳಿಂದ ಸರಕು ಸಾಗಾಣಿಕೆಯ ಲಾರಿಗಳು ಕರ್ನಾಟಕಕ್ಕೆ ಆಗಮಿಸುತ್ತಿಲ್ಲ. ಮುಷ್ಕರಕ್ಕೆ ಸುಮಾರು 69 ಸಂಘಟನೆ ಬೆಂಬಲ ನೀಡಿದ್ದು, 6 ಲಕ್ಷ ಲಾರಿಗಳು ಸಂಚಾರ ಸ್ತಬ್ದಗೊಳಿಸಿವೆ.

## ಸಿಎಂ ಸೇರಿ ಇತರರಿಗೆ ನೋಟಿಸ್ ಜಾರಿ

**ಬೆಂಗಳೂರು:** ಮುಡಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ನಿರ್ದೇಶನ ಕೋರಿ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಸಿಎಂ ಮತ್ತು ಅವರ ಪತ್ನಿ ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿದ್ದು, ಏಪ್ರಿಲ್ 28ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

### ಫನ್‌ತರಂಗ

– ರಘುಪತಿ ಶೃಂಗೇರಿ –

ನಾನು ಒಂದು ವರ್ಷದಲ್ಲಿ ಮಾಡಿದ್ದನ್ನು ನಮ್ಮ ಪಿಎಂ ಹತ್ತು ವರ್ಷದಿಂದ ಮಾಡಲು ಸಾಧ್ಯವಾಗಿಲ್ಲ – ಕೈ ಮುಖಂಡ ಸುದ್ದಿ




## ಚೀನಾ ವಿರುದ್ಧದ ಅಮೆರಿಕ ಪ್ರತಿಸುಂಕ ಶೇ.245ಕ್ಕೆ ಏರಿಕೆ

**ವಾಷಿಂಗ್ಟನ್:** ಅಮೆರಿಕ ಆಮದು ಮಾಡಿಕೊಳ್ಳುವ ಚೀನಾದ ಉತ್ಪನ್ನಗಳ ಮೇಲೆ ಶೇ.245ರಷ್ಟು ಪ್ರತಿಸುಂಕ ವಿಧಿಸಲಾಗುತ್ತದೆ ಎಂದು ಶ್ವೇತಭವನ ಹೇಳಿದೆ. ಇದರಿಂದ ಪ್ರತಿಸುಂಕ ಕುರಿತು ಜಗತ್ತಿನ ಎರಡು ದೊಡ್ಡ ಆರ್ಥಿಕ ಶಕ್ತಿಗಳಾದ ಅಮೆರಿಕ ಮತ್ತು ಚೀನಾ ನಡುವಿನ ಸಂಘರ್ಷ ಮತ್ತಷ್ಟು ತಾರಕಕ್ಕೇರಿದಂತಾಗಿದೆ.

'ಅಮೆರಿಕದ ಬೋಯಿಂಗ್ ಕಂಪನಿಯಿಂದ ವಿಮಾನಗಳನ್ನು ಪಡೆಯದಂತೆ ಚೀನಾ ತನ್ನ ವಿಮಾನಯಾನ ಸಂಸ್ಥೆಗಳಿಗೆ ಸೂಚನೆ ನೀಡಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಟ್ರೂತ್ ಸೋಷಿಯಲ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಕಿಡಿ ಕಾರಿದ್ದಾರೆ.

ಹೊಸ ವ್ಯಾಪಾರ ಒಪ್ಪಂದಗಳ ಕುರಿತು ಚರ್ಚಿಸಲು 75 ದೇಶಗಳು ಈಗಾಗಲೇ ಸಂಪರ್ಕ ಮಾಡಿವೆ. ಇದೆಲ್ಲದರ ಪರಿಣಾಮ, ಕೆಲ ಸರಕುಗಳ ಮೇಲಿನ ಗರಿಷ್ಠ ಪ್ರತಿಸುಂಕಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ. ಆದರೆ ಚೀನಾ ಮಾತ್ರ ಪ್ರತೀಕಾರ ತೀರಿಸಿ ಕೊಳ್ಳುತ್ತಿದೆ ಎಂದು ಶ್ವೇತಭವನ ದೂರಿದೆ.

## ಭೋವಿ ನಿಗಮದ ಮಾಜಿ ಎಂಡಿ ಸೆರೆ

**ಬೆಂಗಳೂರು:** ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ನಿಗಮದ ಹಿಂದಿನ ನಿರ್ದೇಶಕಿ ಆರ್.ಲೀಲಾವತಿ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದೆ. ನ್ಯಾಯಾಲಯವು ಏಳು ದಿನ ಕಸ್ಟಡಿಗೆ ನೀಡಿದೆ. 2018–2023ರ ಅವಧಿಯಲ್ಲಿ ಫಲಾನುಭವಿಗಳ ಹೆಸರಿನಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ, ನಿಗಮದ ಹಣವನ್ನು ವರ್ಗಾವಣೆ ಮಾಡಿಕೊಂಡ ಪ್ರಕರಣದಲ್ಲಿ ಹಿಂದಿನ ಮತ್ತೊಬ್ಬ ನಿರ್ದೇಶಕ ಬಿ.ಕೆ.ನಾಗರಾಜಪ್ಪ ಅವರನ್ನು ಇ.ಡಿ ಈಗಾಗಲೇ ಬಂಧಿಸಿದೆ. ಈ ಇಬ್ಬರೂ ನಿರ್ದೇಶಕರಾಗಿದ್ದ ಅವಧಿಯಲ್ಲಿ ಒಟ್ಟು ₹97 ಕೋಟಿಯನ್ನು ನಿಗಮದ ಖಾತೆಯಿಂದ ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಈ ಬಗ್ಗೆ ನಮ್ಮ ಬಳಿ ಸೂಕ್ತ ಸಾಕ್ಷ್ಯಗಳಿವೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

### ಹಿಂದೂ ಧಾರ್ಮಿಕ ಟ್ರಸ್ಟ್‌ನಲ್ಲಿ ಮುಸ್ಲಿಮರಿಗೂ ಅವಕಾಶ ನೀಡಲು ಸಿದ್ಧರಿದ್ದೀರಾ?

## ವಕ್ಫ್: ವಿಚಾರಣೆ ಆರಂಭ

**ದೆಹಲಿ:** ವಕ್ಫ್ ತಿದ್ದುಪಡಿ ಕಾಯ್ದೆ 2025ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಮಾಡಿದ ಸುಪ್ರೀಂ ಕೋರ್ಟ್, ಹಿಂದೂ ಧಾರ್ಮಿಕ ಟ್ರಸ್ಟ್‌ನಲ್ಲಿ ಮುಸ್ಲಿಂರಿಗೂ ಅವಕಾಶ ನೀಡಲು ಇಚ್ಛಿಸುತ್ತಿದ್ದೀರಾ? ಎಂದು ಕೇಂದ್ರ ಸರಕಾರವನ್ನು ಪ್ರಶ್ನಿಸಿದೆ.

ಅರ್ಜಿಗಳ ವಿಚಾರಣೆ ಆರಂಭಿಸಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿ ಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ.ವಿಶ್ವನಾಥನ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಎರಡು ಆಯಾಮದ ಪ್ರಶ್ನೆಗಳನ್ನು ಉಭಯ ಪಕ್ಷಗಳ ಮುಂದಿಟ್ಟಿತು.

ನಾವು ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಬೇಕೇ ಅಥವಾ ಹೈಕೋರ್ಟ್‌ಗೆ ವರ್ಗಾಯಿಸಬೇಕೇ? ಎರಡನೆಯದಾಗಿ, ನೀವು ನಿಜವಾಗಿಯೂ ಏನು ಆಗಬೇಕೆಂದು ಬಯಸುತ್ತಿದ್ದೀರಿ ಮತ್ತು ಏನೆಂದು ವಾದಿಸಲು ಯತ್ನಿಸುತ್ತಿದ್ದೀರಿ ಎಂಬುದನ್ನು ಸಂಕ್ಷಿಪ್ತವಾಗಿ ಸೂಚಿಸಿ? ಎಂದು ಸಿಜೆಐ ಕೇಳಿದರು. ಎರಡನೇ ಅಂಶವು ನಮಗೆ ಮೊದಲ ಅಂಶದ ಬಗ್ಗೆ ನಿರ್ಧಾರ ಕೈಗೊಳ್ಳಲು ಒಂದು ಹಂತದವರೆಗೆ ಅನುಕೂಲವಾಗಿರುತ್ತದೆ ಎಂದೂ ಹೇಳಿದ್ದಾರೆ.

#### 72 ಅರ್ಜಿಗಳು ಸಲ್ಲಿಕೆ

ಸಂಸತ್ತಿನಲ್ಲಿ ಇತ್ತೀಚೆಗೆ ಅಂಗೀಕಾರ ಪಡೆದ ವಕ್ಫ್ ತಿದ್ದುಪಡಿ ಮಸೂದೆಯು ರಾಷ್ಟ್ರಪತಿ ಮುರ್ಮು ಅಂಕಿತದ ಬಳಿಕ ಕಾಯ್ದೆಯಾಗಿ ಜಾರಿಗೆ ಬಂದಿದೆ. ಈ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ಎಐಎಂಐಎಂ ವರಿಷ್ಠ ಅಸಾದುದ್ದೀನ್ ಓವೈಸಿ, ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ), ಜಮಿಯತ್ ಉಲಮಾ–ಇ–ಹಿಂದ್, ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ), ಕಾಂಗ್ರೆಸ್ ಸಂಸದರಾದ ಇಮ್ರಾನ್ ಪ್ರತಾಪ್‌ಗಢಿ ಮತ್ತು ಮೊಹಮ್ಮದ್ ಜಾವೇದ್ ಸೇರಿದಂತೆ ಸುಮಾರು 72 ಅರ್ಜಿಗಳು ಸಲ್ಲಿಕೆಯಾಗಿವೆ. ಕಾಯ್ದೆಯ ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳ ಸಂಬಂಧ ಕೇಂದ್ರವು ಏಪ್ರಿಲ್ 8ರಂದು ಸುಪ್ರೀಂಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಿ, ಈ ವಿಷಯದಲ್ಲಿ ಯಾವುದೇ ಆದೇಶ ಹೊರಡಿಸುವ ಮೊದಲು ನಮ್ಮ ವಾದ ಆಲಿಸಬೇಕೆಂದು ಕೋರಿತ್ತು. ಅರ್ಜಿದಾರರ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಹಾಜರಾಗಿ, ವಾದ ಮಂಡಿಸಿದರು.

## ಬಿ.ಆರ್.ಗವಾಯಿ ಮುಂದಿನ ಸಿಜೆಐ

**ದೆಹಲಿ:** ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರು ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಲಿದ್ದಾರೆ.

ನ್ಯಾ.ಬಿ.ಆರ್.ಗವಾಯಿ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಬುಧವಾರ ಅಧಿಕೃತವಾಗಿ ಶಿಫಾರಸು ಮಾಡಿರುವ ಸಿಜೆಐ ಸಂಜೀವ್ ಖನ್ನಾ ಅವರು, ಕೇಂದ್ರದ ಕಾನೂನು ಸಚಿವಾಲಯದ ಅನುಮೋದನೆಗೆ ಕಳುಹಿಸಿಕೊಟ್ಟಿದ್ದಾರೆ.

ನ್ಯಾ.ಬಿ.ಆರ್.ಗವಾಯಿ ಅವರು ಮೇ 14ರಂದು ಸುಪ್ರೀಂಕೋರ್ಟ್‌ನ 52ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನ್ಯಾ.ಗವಾಯಿ ಅವರು ನವೆಂಬರ್‌ನಲ್ಲಿ ನಿವೃತ್ತರಾಗಲಿದ್ದು, ಸಿಜೆಐ ಹುದ್ದೆಯಲ್ಲಿ ಅವರಿಗೆ 6 ತಿಂಗಳ ಸೇವಾವಧಿಯಷ್ಟೇ ಸಿಗಲಿದೆ. ಪ್ರಸ್ತುತ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿರುವ ನ್ಯಾ.ಸಂಜೀವ್ ಖನ್ನಾ (64) ಅವರು ಮೇ 13ರಂದು ನಿವೃತ್ತರಾಗಲಿದ್ದಾರೆ.

### ವರದಿ ತಿರಸ್ಕಾರ ಕಷ್ಟ | ಶಿಫಾರಸುಗಳ ಜಾರಿ ದಾರಿ ದೂರ

# ಸರಕಾರ ಸುಭದ್ರಕ್ಕೆ ಜಾತಿಗಣತಿ ಅಸ್ತ್ರ

ಶಿವಕುಮಾರ್ ಬೆಳ್ಳಿತಟ್ಟೆ

**ಬೆಂಗಳೂರು:** ಬಹು ಚರ್ಚಿತ ಜಾತಿ ಗಣತಿ ವರದಿ ಈಗಾಗಲೇ ತಿರಸ್ಕಾರವೂ ಆಗದೆ, ಅನುಷ್ಠಾನವೂ ಆಗದೆ ರಾಜ್ಯದ ಪ್ರಬಲ ರಾಜಕೀಯ ಅಸ್ತ್ರವಾಗಿ ಉಳಿಯುವ ಎಲ್ಲ ಸೂಚನೆಗಳು ರಾಜಕೀಯ ವಲಯದಲ್ಲಿ ಕಾಣತೊಡಗಿವೆ. ಸುಮಾರು ದಶಕದ ಹಿನ್ನೆಲೆ ಇರುವ ಸಾಮಾಜಿಕ ಮತ್ತು ಶೈಕ್ಷಣಿಕ ಅಧ್ಯಯನ ವರದಿ (ಜಾತಿ ಗಣತಿ )ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಷ್ಠಾನ ಮಾಡುವುದಕ್ಕೇನೋ ಸಿದ್ಧರಿದ್ದಾರೆ. ಆದರೆ ಪರಿಸ್ಥಿತಿ ಅಷ್ಟು ಸುಲಭವಿಲ್ಲ ಎನ್ನುತ್ತವೆ ಮೂಲಗಳು.

ಈ ವರದಿಯನ್ನು ರಾಜ್ಯ ಸಂಪುಟದ ಅನೇಕ ಸಚಿವರೂ ಸೇರಿದಂತೆ ಪ್ರತಿಪಕ್ಷಗಳ ಅನೇಕ ನಾಯಕರು ವಿರೋಧಿಸುತ್ತಿದ್ದಾರೆ. ಯಾವ ಸಚಿವರು, ಯಾವ ಕಾರಣಕ್ಕೆ ಹೇಗೆ ವಿರೋಧಿಸುತ್ತಾರೆ ಎನ್ನುವುದು ಗುರುವಾರ ನಡೆಯುವ ವಿಶೇಷ ಸಚಿವ ಸಂಪುಟ ಸಭೆಯ ನಂತರ ತಿಳಿಯಲಿದೆ. ಹಾಗಂತ ಸಚಿವರು ವಿರೋಧಿಸಿದ್ದಾರೆ ಎಂದು ಈ ಜಾತಿ ಗಣತಿ ವರದಿಯನ್ನು ಏಕಾಏಕಿ ತಿರಸ್ಕರಿಸುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ, ಇದರ ಅನುಷ್ಠಾನ ಆಗಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದೆ ಎನ್ನಲಾಗಿದೆ. ಹಾಗೆಯೇ ಇದರ ವಿಚಾರದಲ್ಲಿ ಭಿನ್ನಾಭಿಪ್ರಾಯ ತಂದುಕೊಂಡು ಸರಕಾರಕ್ಕೆ ಸಂಚಕಾರ ತಂದುಕೊಳ್ಳಬಾರದು ಎಂದು ಪಕ್ಷದ ವರಿಷ್ಠ ಮಲ್ಲಿಕಾರ್ಜುನ ಖರ್ಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಎಚ್ಚರಿಕೆ ನೀಡಿದ್ದಾರೆ.

ಹೀಗಾಗಿ ಸಚಿವರು ತಮ್ಮ ಜಾತಿ, ಜನಾಂಗದ ಸಂಘಟನೆಗಳು ಹೇಳುತ್ತಿರುವ ರೀತಿಯಲ್ಲಿ ವರದಿಯನ್ನೇ ತಿರಸ್ಕರಿಸಿ ಎಂದು ಕಡ್ಡಿ ಮುರಿದಂತೆ ಹೇಳಲಾಗದು. ವರದಿಯನ್ನು ತೀರಾ ವಿರೋಧಿಸಿದರೆ, ಕ್ಷೇತ್ರ ಮತ್ತು ಜಿಲ್ಲೆಗಳಲ್ಲಿ ಅಹಿಂದ ವರ್ಗದ ಅಸಮಾಧಾನಕ್ಕೆ ಗುರಿಯಾಗಬೇಕಾಗುತ್ತದೆ ಎನ್ನುವ ಆತಂಕ ಸಚಿವರು, ಶಾಸಕರಿಗಿದೆ. ಹೀಗಾಗಿ ಜಾತಿ ಗಣತಿ ವರದಿಯನ್ನು ಸರಕಾರ ಒಂದೇ ಏಟಿಗೆ ತಿರಸ್ಕರಿಸಲಾಗದು ಎನ್ನುತ್ತಾರೆ ಕಾಂಗ್ರೆಸ್ ನಾಯಕರು.

→ 4




#### ಮುಂದೇನು?

1. ಸಚಿವ ಸಂಪುಟದ ಉಪಸಮಿತಿ ರಚಿಸಬಹುದು
2. ತಜ್ಞರ ಸಮಿತಿ ರಚನೆ ಮಾಡಬಹುದು
3. ಮಾಹಿತಿ ಕ್ರೋಢೀಕರಣ, ಮಾರ್ಪಾಡಿಗಾಗಿ ಸಮಿತಿ ರಚಿಸಬಹುದು
4. ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಬಹುದು
5. ವರದಿ ಕುರಿತ ಚರ್ಚೆಯನ್ನು ಮುಂದೂಡಬಹುದು

### ಕಲ್ಯಾಣ ಕರ್ನಾಟಕ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಖರ್ಗೆ ಎಚ್ಚರಿಕೆ

# ಕಿತ್ತಾಡಿಕೊಂಡಿದ್ದರೆ ಸರಕಾರ ಬೀಳಿಸ್ತಾರೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಯಾವ ರಾಜ್ಯದಲ್ಲಿ ಕಾಂಗ್ರೆಸ್ ನಾಯಕರು ಬಲಿಷ್ಠವಾಗಿದ್ದಾರೋ ಅಲ್ಲಿ ಕೇಂದ್ರ ಸರಕಾರ ಇ.ಡಿ, ಸಿಬಿಐ ಬಳಸಿ ಹೆದರಿಸುವ ಕೆಲಸ ಮಾಡುತ್ತಿದೆ. ಈಗ ರಾಜ್ಯದ ಮೇಲೂ ಅವರ ದೃಷ್ಟಿ ಬಿದ್ದಿದೆ. ನೀವೆಲ್ಲ ಒಟ್ಟಾಗಿ ಇರಬೇಕು. ಜಾಗೃತರಾಗಿಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ನಾಯಕರಿಗೆ ಎಚ್ಚರಿಕೆ ನೀಡಿದರು.

ಬುಧವಾರ ನಗರದ ಕೆಸಿಟಿ ಕಾಲೇಜು ಆವರಣದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ಕರ್ನಾಟಕದ ಜನರು ನಿಮಗೆ ಆಶೀರ್ವಾದ ಮಾಡಿ ಅಧಿಕಾರದಲ್ಲಿ ಕೂರಿಸಿದ್ದಾರೆ. ನಿಮ್ಮಲ್ಲಿ ಏನೇ ಬೇಧಭಾವ ಇದ್ದರೂ ಒಂದಾಗಿರಬೇಕು. ಒಂದಾಗದಿದ್ದರೆ, ಮೋದಿ–ಶಾ ನಿಮ್ಮ ಮೇಲೆ ದಾಳಿ ಮಾಡುತ್ತಾರೆ. ನಿಮ್ಮನ್ನು ಹೆದರಿಸುತ್ತಾರೆ. ಸರಕಾರ ಬೀಳಿಸುತ್ತಾರೆ ಎಂದು ಎಚ್ಚರಿಸಿದರು.

ಸಿಎಂ ಸಿದ್ದರಾಮಯ್ಯ ಮಾತನಾಡಿ, ಪ್ರಧಾನಿ ಮೋದಿ ಅವರು ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುತ್ತೇನೆ ಅಂದಿದ್ದರು. ಇದುವರೆಗೆ 20 ಲಕ್ಷ ಜನರಿಗೂ ಉದ್ಯೋಗ ನೀಡಿಲ್ಲ. ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಹೂಡಿಕೆ ಹೆಚ್ಚಾದಷ್ಟೂ ಉದ್ಯೋಗ ಸೃಷ್ಟಿ ಹೆಚ್ಚಾಗುತ್ತವೆ. ಕೇಂದ್ರ ಸರಕಾರ ದೇಶದ ಯುವ ಜನತೆಯನ್ನು ಸಂಪೂರ್ಣ ನಿರ್ಲಕ್ಷಿಸುತ್ತಿದೆ. ಆದರೆ ನಮ್ಮ ಸರಕಾರ ಯುವ ಜನತೆ ಕೈಗೆ ಉದ್ಯೋಗ ನೀಡಿ ಅವರ ಬದುಕು ಕಟ್ಟುವ ಕೆಲಸ ಮಾಡುತ್ತಿದೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಮಾತನಾಡಿದರು. ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ಅಧ್ಯಕ್ಷೆ ಕನೀಜ್ ಫಾತೀಮಾ ಅಧ್ಯಕ್ಷತೆ ವಹಿಸಿದ್ದರು.

ಬುಧವಾರ ಕಲಬುರಗಿಯ ಕೆಸಿಟಿ ಕಾಲೇಜು ಆವರಣದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉದ್ಯೋಗ ಮೇಳದಲ್ಲಿ ಕಾಂಗ್ರೆಸ್ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.

#### ಮುಂದೆ ಕ್ರಿಶ್ಚಿಯನ್ ಭೂಮಿ ಮೇಲೆ ಕಣ್ಣು

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು 1937ರಲ್ಲಿ ನೆಹರು ಅವರು ಸ್ಥಾಪಿಸಿ ಜನರು ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಲು ಪ್ರಯತ್ನಿಸಿದ್ದರು. ಅಂತಹ ಪತ್ರಿಕೆಯ ಮೇಲೆ ಇ.ಡಿ ದಾಳಿ ನಡೆಸಿ ಸೋನಿಯಾ ಗಾಂಧಿ ಅವರ ಮೇಲೆ ಕೇಸು ದಾಖಲಿಸಲಾಗಿದೆ. ನಿಮಗೆ ನಾಚಿಕೆಯಾಗಬೇಕು. ನಿಮ್ಮ ಆರ್ಗನೈಸರ್ ದೇಶದ ಜನರ ಒಗ್ಗಟ್ಟು ಕೆಡಿಸುವ ಕೆಲಸ ಮಾಡುತ್ತಿದೆ. ಈಗ ವಕ್ಫ್ ಆಗಿದೆ. ಮುಂದೆ ಕ್ರಿಶ್ಚಿಯನ್ ಅವರ 7 ಕೋಟಿ ಹೆಕ್ಟೆರ್ ಜಮೀನಿನ ಮೇಲೆ ಕಣ್ಣು ಬಿದ್ದಿದೆ ಎಂದು ಆರ್ಗನೈಜರ್ ಬರೆದಿದೆ. ಆದರೆ, ಇತ್ತೀಚೆಗೆ ಆ ಮಾತನ್ನು ವಾಪಸ್ ಪಡೆದುಕೊಂಡಿದೆ ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ದೇಶ ಒಡೆಯುವ ಪ್ರಯತ್ನಗಳಿಂದ ಸುಳ್ಳು ಕೇಸ್ ದಾಖಲಿಸಿ, ಕಾಂಗ್ರೆಸ್ ಪಕ್ಷವನ್ನು ಬಗ್ಗಿಸುವ ಪ್ರಯತ್ನ ಮಾಡಿದರೆ ನಾವು ಬಗ್ಗುವುದಿಲ್ಲ, ಜಗ್ಗುವುದಿಲ್ಲ. ಗಾಂಧಿ ಕುಟುಂಬದಲ್ಲಿ ಎರಡು ಜೀವ ಹೋಗಿವೆ. ಆಗಲೂ ಹೆದರಿಲ್ಲ, ನಿಮ್ಮ ಇ.ಡಿ, ಸಿಬಿಐ ಕೇಸ್‌ಗಳಿಗೆ ಹೆದರುವುದಿಲ್ಲ.

– **ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ

## ಸಮಾಚಾರ ಸಣ್ಣದಲ್ಲ

### ಮೇ.31ರವರೆಗೆ ಜೋಳ ಖರೀದಿಗೆ ಬೆಲೆ

**ಹಾವೇರಿ:** ನೋಂದಣಿ ಯಾದ ರೈತರಿಂದ ಬೆಂಬಲ ಬೆಲೆಯಡಿ ಜೋಳವನ್ನು ಮೇ.31 ರವರೆಗೆ ಖರೀದಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ. ಪ್ರತಿ ರೈತರಿಂದ ಪ್ರತಿ ಎಕರೆಗೆ 20 ಕ್ವಿಂಟಾಲ್‌ನಂತೆ ಗರಿಷ್ಟ 150 ಕ್ವಿಂ. ಜೋಳ ಖರೀದಿಸಲು ನಿರ್ದೇಶಿಸಲಾಗುವುದು. ಸರಕಾರದ ನಿರ್ದೇಶನದಂತೆ ಕಳೆದ 2024-25ನೇ ಸಾಲಿನ ಹಿಂಗಾರು ಋತುವಿನಲ್ಲಿ ಬೆಳೆದ ಜೋಳವನ್ನು ಕನಿಷ್ಟ ಬೆಂಬಲಬೆಲೆ ಯೋಜನೆಯಡಿ ಈಂಕಿ ಗುಣಮಟ್ಟಗಳ ಜೋಳವನ್ನು ಹಾವೇರಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಖರೀದಿ ಏಜೆನ್ಸಿಯಾಗಿ ನೇಮಿಸಿರುತ್ತದೆ. ಹೈಬ್ರಿಡ್ ಜೋಳ 3371 ರು.ಹಾಗೂ ಮಾಲ್ದಂಡಿ ಜೋಳ 3,421 ರು.ರಂತೆ ದರ ನಿಗದಿಪಡಿಸಿ ರೈತರ ನೋಂದಣಿ ಪ್ರಕ್ರಿಯೆಯನ್ನು ಮಾ.25ರಿಂದ ಪ್ರಾರಂಭಿಸಲಾಗಿದೆ. ಈಗಾಗಲೇ ಖರೀದಿ ಆರಂಭಿಸಲಾಗಿದ್ದು, ಖರೀದಿ ಕೇಂದ್ರಗಳನ್ನು ಹಾವೇರಿ, ರಾಣೇಬೆನ್ನೂರು, ಬ್ಯಾಡಗಿ, ಹಿರೇಕೆರೂರು, ಹಾನಗಲ್, ಸವಣೂರು ಮತ್ತು ಶಿಗ್ಗಾಂವ್ ಎಪಿಎಂಸಿ ಆವರಣದಲ್ಲಿ ತೆರೆಯಲಾಗಿರುತ್ತದೆ. ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಿಇಟಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ

**ಹಾವೇರಿ:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಎಂಜನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುತ್ತಿರುವ ಸಿಇಟಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಾವೇರಿ ನಗರದ ಜಿ.ಎಚ್.ಕಾಲೇಜ್ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಬುಧವಾರ ಹಾಗೂ ಗುರುವಾರ ಎರಡು ದಿನ ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 13 ಕೇಂದ್ರಗಳಲ್ಲಿ ಸುಗಮ ಪರೀಕ್ಷೆ ಎಲ್ಲ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಂದು 4587 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಈಗಾಗಲೇ ಜಿಲ್ಲಾಡಳಿತದಿಂದ ಎಲ್ಲ ರೀತಿಯ ತಯಾರಿ ಮಾಡಿಕೊಳ್ಳಲಾಗಿದೆ ಎಂದರು.

### ಫೆಲೋಶಿಪ್: ಅರ್ಜಿ ಆಹ್ವಾನ

**ಕಾರವಾರ:** ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಕಿರು ಅಧ್ಯಯನ ನಡೆಸಲು ತಲಾ 1.50 ಲಕ್ಷ ರು.ಗಳಂತೆ ಫೆಲೋಶಿಪ್ ನೀಡುತ್ತಿದ್ದು, ಅರ್ಜಿ ಆಹ್ವಾನಿಸಲಾಗಿದೆ. ಕನಕದಾಸರ ಮುಂಡಿಗೆ ಸಾಹಿತ್ಯ-ತಾತ್ವಿಕ ವಿವೇಚನ, ಕರ್ನಾಟಕ ತತ್ವಪದಗಳ ಚಾರಿತ್ರಿಕ ಅಧ್ಯಯನ, ಕನ್ನಡದಲ್ಲಿ ಅನುಭಾವ ಸಾಹಿತ್ಯ-ತಾತ್ವಿಕ ಅಧ್ಯಯನ, ಕನ್ನಡದಲ್ಲಿ ಕೀರ್ತನ ಸಾಹಿತ್ಯದ ಸಮಾಜೋ-ಸಾಂಸ್ಕೃತಿಕ ಅಧ್ಯಯನ ಈ ವಿಷಯಗಳ ಕುರಿತು ಅಧ್ಯಯನ ನಡೆಸಬೇಕು. 12 ತಿಂಗಳ ಅವಧಿಯ ಈ ಅಧ್ಯಯನ ಯೋಜನೆಯ ಬಗ್ಗೆ ಆಸಕ್ತ ಯುವ ಸಂಶೋಧನಾರ್ಥಿಗಳು ತಮ್ಮ ವಿದ್ಯಾರ್ಹತೆ, ಸಂಶೋಧನೆಯ ಬಗೆಗಿನ ಅನುಭವ ಹಾಗೂ ತಮ್ಮ ಆಸಕ್ತಿ ಕ್ಷೇತ್ರವನ್ನು ಒಳಗೊಂಡ ವಿವರಗಳನ್ನು ಹಾಗೂ ಆಯ್ಕೆ ಮಾಡಿಕೊಂಡ ವಿಷಯವನ್ನು ಕುರಿತು ಅಧ್ಯಯನ ವ್ಯಾಪ್ತಿ ಮತ್ತು ಆಕರ ಸಾಮಗ್ರಿಗಳನ್ನು ಒಳಗೊಂಡ ಸಂಕ್ಷಿಪ್ತ ಮಾಹಿತಿಯಿರುವ ಸಾರಲೇಖನವನ್ನು ಅರ್ಜಿಯೊಂದಿಗೆ ಲಗತ್ತಿಸಿರಬೇಕು. ಆಸಕ್ತಿಯಿರುವ 20 ರಿಂದ 55 ವರ್ಷ ವಯಸುಳ್ಳ ರಾಜ್ಯದ ಎಲ್ಲ ಭಾಗದ ಅಭ್ಯರ್ಥಿಗಳು ಅರ್ಜಿಯನ್ನು ಅಧ್ಯಯನ ಕೇಂದ್ರ ಇ-ಮೇಲ್‌ಗೆ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸಲು ಮೇ.20 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ದೂ.ಸಂ. 080-22113147, 6364529319ಗೆ ಸಂಪರ್ಕಿಸಬಹುದು.

### ಏ.22ರಂದು ಗೃಹ ರಕ್ಷರಕ್ಷಕ ಸಂದರ್ಶನ

**ಕಾರವಾರ:** ಉತ್ತರ ಕನ್ನಡ ಜಿಲ್ಲಾ ಗೃಹರಕ್ಷಕ ದಳದಲ್ಲಿ ಪ್ರಸ್ತುತ ಖಾಲಿವಿರುವ 181 (ಪರಿಷ್ಕೃತ ಖಾಲಿ ಹುದ್ದೆಗಳ ಸಂಖ್ಯೆ) ಸ್ವಯಂ ಸೇವಕ/ ಗೃಹರಕ್ಷಕಿಯರ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಗೃಹ ರಕ್ಷರಕ್ಷಕ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸಂದರ್ಶನವನ್ನು ಏ.22 ರಂದು ಬೆಳಗ್ಗೆ 8 ಗಂಟೆಗೆ ಕಾರವಾರದ ಜಿಲ್ಲಾ ಸಶಸ್ತ ಮೀಸಲು ಪಡೆ ಮೈದಾನದಲ್ಲಿ ಹಾಜರಾಗುವಂತೆ ತಿಳಿಸಿದ್ದಾರೆ. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಆಧಾರ್ ಕಾರ್ಡ್ ಮತ್ತು ಎಸ್.ಎಸ್.ಎಲ್.ಸಿ ಅಂಕಪಟ್ಟಿ ಮೂಲ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ. 08382-20013 ಸಂಪರ್ಕಿಸಬಹುದು.

**CHANGE OF NAME**

I, **AHMAD IMAMHUSEN BIJAPUR** (Old Name) have changed my name and shall hereafter be known as **AHMED BIJAPUR** (New Name) R/o Chapparaband Colony, Dharwad, State: Karnataka, Vide affidavit sworn before notary Esther Rani at Dharwad on 16/04/2025.

ಹವಾಮಾನಾಧಾರಿತ ಬೆಳೆ ವಿಮೆಗೆ ಸರಕಾರದ ಸ್ಪಂದನೆ ಇಲ್ಲ: ಸಂಸದ

# ಬೆಳೆ ವಿಮಾ ಪರಿಹಾರ ಕೊಡಿಸಲು ಪ್ರಯತ್ನ

ನಗರದ ಸುದ್ದಿಗೋಷ್ಠಿಯಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿದರು.

**ಶಿರಸಿ:** ಜಿಲ್ಲೆಯ ರೈತರಿಗೆ ಅಸಮಾಧಾನ ಮೂಡಿಸಿದ ಬೆಳೆವಿಮೆ ಕುರಿತಂತೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ನಡೆಸಿದರು.

ರೈತರಿಗೆ ಹವಾಮಾನಾಧಾರಿತ ಬೆಳೆ ವಿಮೆ ಮೊತ್ತ ಕೊಡಿಸಲು ರಾಜ್ಯ ಸರಕಾರದ ಸ್ಪಂದನೆಯೇ ಇಲ್ಲ. ಆದರೂ ಸಂಸದನಾಗಿ ಬೆಳೆ ವಿಮಾ ಪರಿಹಾರ ಕೊಡಿಸಲು ನಿರಂತರ ಪ್ರಯತ್ನ ಮಾಡುತ್ತಿರುವೆ ಎಂದು ಸಂಸದ ಕಾಗೇರಿ ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಹವಾಮಾನಾಧಾರಿತ ಬೆಳೆ ವಿಮಾ ಪರಿಹಾರ ಮೊತ್ತ ಈವರೆಗೂ ಕೈಸೇರಿಲ್ಲ. ಕೇಂದ್ರ ಸರಕಾರದಿಂದ ಮೂರು ಬಾರಿ ವಿಮಾ ಕಂಪನಿಗೆ ಸೂಚನೆ ನೀಡಿದಾಗಲೂ ಮಳೆ ಮಾಪನದ ಕಾರಣ ಹೇಳಿ ವಿಮಾ ಕಂಪನಿ ಮೊತ್ತ ನೀಡಲು ವಿಳಂಬ ಮಾಡುತ್ತಿದೆ. ರಾಜ್ಯದಲ್ಲಿ ಮಳೆ ಮಾಪನ ಕೇಂದ್ರಗಳ ನಿರ್ವಹಣೆ ರಾಜ್ಯ ಸರಕಾರದಿಂದ ಸಮರ್ಪಕವಾಗಿದ್ದರೆ ಇಂದು ರೈತರಿಗೆ ಇಂಥ ಸ್ಥಿತಿ ಬರುತ್ತಿರಲಿಲ್ಲ. ಇನ್ನಾದರೂ ಮಳೆ ಮಾಪನ ಘಟಕಗಳನ್ನು ದುರಸ್ತಿ ಮಾಡಿಸಬೇಕು ಎಂದರು.

ಲೋಕಸಭಾ ಅಧಿವೇಶನದಲ್ಲಿ ಸುದೀರ್ಘ ಚರ್ಚೆಗೆ ಒಳಪಡಿಸಿ ವಕ್ಫ್ ಕಾಯಿದೆ ತಿದ್ದುಪಡಿ ಅಂಗೀಕರಿಸಲಾಗಿದೆ. ಇದರಿಂದ ಕಾಂಗ್ರೆಸ್ ಅಲ್ಪಸಂಖ್ಯಾತ ಓಲೈಕೆ ರಾಜಕಾರಣದ ನಿಯಂತ್ರಣ ಸಾಧ್ಯವಾಗಿದೆ. ವಕ್ಫ್ ಮಂಡಳಿಗೆ ಸಂದಾಯವಾಗುವ ನ್ಯಾಯಯುತ ಹಣದಿಂದ ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಅನುಕೂಲ ಆಗಲಿದೆ ಜತೆಗೆ ವಕ್ಫ್ ಆಸ್ತಿಗಳ ದಾಖಲೀಕರಣ ಆಗಲಿದೆ. ಈ ಬಗ್ಗೆ ಮುಸ್ಲಿಂ ಜನಾಂಗದಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಕಾಂಗ್ರೆಸ್ ಕೈಬಿಡಬೇಕು ಎಂದರು.

ಪಕ್ಷದ ಪ್ರಮುಖರಾದ ಸದಾನಂದ ಭಟ್, ಶರ್ಮಿಳಾ ಮಾದನಗೇರಿ ಇದ್ದರು.

**ಅಡಿಕೆ ಬೆಳೆಗಾರರ ಹಿತ ಕಾಪಾಡಲು ಕೇಂದ್ರ ಬದ್ಧ**

ಹುರಿದ ಅಡಿಕೆಗೆ ತೆರಿಗೆ ಹೆಚ್ಚಿಸಿದ ಕಾರಣ ದೇಸಿಯ ಅಡಿಕೆಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗುತ್ತಿದೆ. ಅಡಿಕೆ ಬೆಳೆಗಾರರ ಹಿತ ಕಾಪಾಡಲು ಕೇಂದ್ರ ಸರಕಾರ ಬದ್ಧವಾಗಿದೆ. ಜನಸಾಮಾನ್ಯರ ಆರ್ಥಿಕ ಶಕ್ತಿ ವೃದ್ಧಿಸಲು ಸಹಕಾರ ಕ್ಷೇತ್ರದ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿ ಗುಜರಾತ್‌ನಲ್ಲಿ ತ್ರಿಭುವನ್ ಸಹಕಾರ ರಾಷ್ಟ್ರೀಯ ವಿಶ್ವವಿದ್ಯಾಲಯ ನಿರ್ಮಿಸಲು ನಿರ್ಣಯ ಕೈಗೊಳ್ಳಲಾಗಿದೆ. ಇದರಿಂದ ಭವಿಷ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಹಕಾರ ಕ್ಷೇತ್ರದ ಉದ್ಯೋಗಾಕಾಂಕ್ಷಿಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ ಎಂದು ಹೇಳಿದರು.

## ವಾನಳ್ಳಿಯಲ್ಲಿ 'ಸುರ ಸಾನಿಕ': ಕಲ್ಲಾರೆಮನೆಗೆ ಸಮ್ಮಾನ

**ಶಿರಸಿ:** ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಸ್ವಾದಿಸುವ ಸದಾ ಪ್ರೋತ್ಸಾಹ ನೀಡುವ ವಾತಾವರಣ ಹೆಚ್ಚಬೇಕು. ಇದರಿಂದ ಮಾನಸಿಕ ನೆಮ್ಮದಿ ಸಾಧ್ಯವಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ವಾನಳ್ಳಿಯಲ್ಲಿ ಅವರು ವಿಶ್ವಶಾಂತಿ ಸೇವಾ ಟ್ರಸ್ಟ್ ಕರ್ನಾಟಕ, ಬೆಂಗಳೂರಿನ ಅವಿನಾಶಿ ಸಂಸ್ಥೆ ಜಂಟಿಯಾಗಿ ಹಮ್ಮಿಕೊಂಡ 'ಸುರ ಸಾನಿಕ' ವೇಣು ವಾದನ, ಯಕ್ಷ ರೂಪಕ, ಸನ್ಮಾನ ಕಾರ್ಯಕ್ರಮಕ್ಕೆ ಚಂಡೆ ನುಡಿಸಿ ಚಾಲನೆ ನೀಡಿದರು.

ಸಾಮಾಜಿಕ ಕಾರ್ಯಕರ್ತ ದೀಪಕ ದೊಡ್ಡೂರು, ಒಂದು ಕಾರ್ಯಕ್ರಮದ ಸಂಘಟನೆಗೆ ಎಷ್ಟೆಲ್ಲ ಕಷ್ಟ ಇದೆ ಎಂಬುದರ ಅರಿವಿದೆ. ಇಂಥ ಕಾರ್ಯಕ್ರಮಗಳಿಗೆ ಬೆನ್ನೆಲಬಾಗಿ ಎಲ್ಲರೂ ಜತೆಯಾಗಬೇಕು. ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮಾಡುವುದಕ್ಕಿಂತ ನಗರದಲ್ಲಿ ಕಾರ್ಯಕ್ರಮ ಮಾಡುವುದು ಕೊಂಚ ಸುಲಭ ಎಂದರು.

ಸಮ್ಮಾನಿತ ಪ್ರಕಾಶ ಹೆಗಡೆ ಕಲ್ಲಾರೆಮನೆ, ಯಾರೂ ಪ್ರಶಸ್ತಿ ಹಿಂದೆ ಹೋಗದೇ ಅದು ಬಂದಾಗ ವಿನಮ್ರವಾಗಿ ಸ್ವೀಕರಿಸಬೇಕು ಎಂದು ಪ್ರೀತಿಯಿಂದ ಸ್ವೀಕರಿಸಿದ್ದೇನೆ ಎಂದರು.

ಟ್ರಸ್ಟ್ ಅಧ್ಯಕ್ಷ, ಹಿರಿಯ ಪತ್ರಕರ್ತ, ರಾಘವೇಂದ್ರ ಹೆಗಡೆ ಸ್ವಾಗತಿಸಿದರು. ಟ್ರಸ್ಟ್ ಕಾರ್ಯದರ್ಶಿ ಗಾಯತ್ರೀ ರಾಘವೇಂದ್ರ ಸಮ್ಮಾನ ಪತ್ರ ವಾಚಿಸಿದರು. ಪ್ರೊ. ರಾಘವೇಂದ್ರ ಜಾಜಿಗುಡ್ಡೆ ನಿರ್ವಹಿಸಿದರು.

ವಿಶ್ವಶಾಂತಿ ಸರಣಿಯ ಹತ್ತನೇ ಆವೃತ್ತಿಯ ವಿಶ್ವಾಭಿಗಮನಂ ಯಕ್ಷ ರೂಪಕ ಪ್ರದರ್ಶನ ಕಂಡಿತು.

ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕಲೆಯ ಮೂಲಕ ಒಗ್ಗೂಡಲು ಸಾಧ್ಯ. ಅದೇ ವಿಶ್ವಶಾಂತಿಯ ಮೂಲ. ಕಲ್ಲಾರೆಮನೆ ಪ್ರಕಾಶ ಹೆಗಡೆ ಅವರು ನಮ್ಮ ಜಿಲ್ಲೆಗೆ ಅವರು ನಮ್ಮವರು. ಆದರೆ, ಅವರ ಸಾಧನೆ, ಪ್ರಸಿದ್ಧಿ, ಸಾಧನೆ ನೋಡಲು ಬೆಂಗಳೂರಲ್ಲಿ ಗೊತ್ತಾಗುತ್ತದೆ ಎಂದರು.

ವಾನಳ್ಳಿ ಸೊಸೈಟಿ ಅಧ್ಯಕ್ಷ ಎಂ.ಎ.ಹೆಗಡೆ ಕಾನಮುಷ್ಕಿ ಮಾತನಾಡಿದರು. ಸುಮಾ ಹೆಗಡೆ ಸಂಗಡಿಗರು ಪ್ರಾರ್ಥಿಸಿದರು.

ಇದಕ್ಕೂ ಮುನ್ನ ಪ್ರಕಾಶ ಹೆಗಡೆ ಕಲ್ಲಾರೆಮನೆ ಅವರ ಕೊಳಲು, ಕಾರ್ತಿಕ ಭಟ್ಟ ಅವರ ತಬಲಾದಲ್ಲಿ ನಡೆದ ವೇಣು ವಾದನ ಮುದ ನೀಡಿತು. ಬಳಿಕ ನಡೆದ ವಿಶ್ವಶಾಂತಿ ಸರಣಿಯ ಹತ್ತನೇ ಕಲಾ ಕುಸುಮ ವಿಶ್ವಾಭಿಗಮನಂ ಯಕ್ಷ ರೂಪಕವು ಗೋಕುಲ ನಿರ್ಗಮನ ಸನ್ನಿವೇಶ ಕಟ್ಟಿಕೊಟ್ಟಿತು. ಕು. ತುಳಸಿ ಹೆಗಡೆ ಪ್ರಸ್ತುತಿಯ ರೂಪಕಕ್ಕೆ ಪ್ರಸಿದ್ಧ ಭಾಗವತ ಕೇಶವ ಹೆಗಡೆ ಕೊಳಗಿ, ಮದ್ದಲೆಯಲ್ಲಿ ಶಂಕರ ಭಾಗವತ್, ಚಂಡೆಯಲ್ಲಿ ವಿಘ್ನೇಶ್ವರ ಗೌಡ, ಪ್ರಸಾಧನದಲ್ಲಿ ವೆಂಕಟೇಶ ಬೊಗ್ರಿಮಕ್ಕಿ ಸಹಕಾರ ನೀಡಿದರು. ಉದಯ ಪೂಜಾರ ಧ್ವನಿ ಬೆಳಕಿನ ಸಂಯೋಜನೆ ಮಾಡಿದ್ದರು.

> ಅಭಿವೃದ್ಧಿ ಅದರ ಅವಧಿಯಲ್ಲಿ ಅದಾಗೇ ಆಗುತ್ತದೆ. ಹಾಗೂ ಅಭಿವೃದ್ಧಿ ಎಂದರೆ ಸೌಲಭ್ಯ, ಆರ್ಥಿಕ ಅಭಿವೃದ್ಧಿ ಒಂದಷ್ಟೇ ಅಲ್ಲ. ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಶ್ರದ್ಧೆ ಕೂಡ ಬೆಳೆಸಿಕೊಳ್ಳಬೇಕು. ಅದರಿಂದ ನೆಮ್ಮದಿ ಸಾಧ್ಯ.
> -ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

## ಬಾಲಕಿ ಕುಟುಂಬಕ್ಕೆ ಶಾಸಕ ತೆಂಗಿನಕಾಯಿ ಭೇಟಿ

**ಹುಬ್ಬಳ್ಳಿ:** ಹುಬ್ಬಳ್ಳಿಯ ಅಶೋಕನಗರದಲ್ಲಿ ಇತ್ತೀಚೆಗೆ 5 ವರ್ಷದ ಬಾಲಕಿಯ ಅತ್ಯಾಚಾರಕ್ಕೆ ಯತ್ನಿಸಿ ಕೊಲೆಗೈದ ಆರೋಪಿಯನ್ನು ಬಂಧಿಸುವ ವೇಳೆ ಗಾಯಗೊಂಡು ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಶಾಸಕ ಮಹೇಶ ತೆಂಗಿನಕಾಯಿ ಆರೋಗ್ಯ ವಿಚಾರಿಸಿದರು. ಹುಬ್ಬಳ್ಳಿಯ ಕೆ.ಎಮ್.ಸಿ ಆಸ್ಪತ್ರೆಯಲ್ಲಿ ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿ, ಅವರ ಕಾರ್ಯಕ್ಕೆ ಅಭಿನಂದನೆ ಸಲ್ಲಿಸಿದರು. ಹುಬ್ಬಳ್ಳಿಯ ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕಖಿಐಅನ್ನಪೂರ್ಣ ಹಾಗೂ ಅವರ ತಂಡವು ಎನ್ಕೌಂಟರ್ ಮೂಲಕ ಸಮಾಜಘಾತುಕನನ್ನು ಹೊಡೆದು ಹಾಕಿದ್ದು ಶ್ಲಾಘನೀಯವೆಂದು ಶಾಸಕರು ಇದೇ ಸಮಯದಲ್ಲಿ ತಿಳಿಸಿದರು.

## ಏ.19ಕ್ಕೆ ಸರಕಾರದ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

**ಹಾವೇರಿ:** ಕೇಂದ್ರ ಸರಕಾರದ ಬೆಲೆ ಏರಿಕೆ ಹಾಗೂ ಜನ ವಿರೋ ನೀತಿಯನ್ನು ಖಂಡಿಸಿ ಏ.19ರಂದು ಬೆಳಗ್ಗೆ 10ಕ್ಕೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಾವೇರಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಡಾ. ಸಂಜಯ ಡಾಂಗೆ ಹೇಳಿದರು.

ನಗರದ ಕೆಪಿಸಿಸಿ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹನ್ನೊಂದು ವರ್ಷಗಳಿಂದ ಕೇಂದ್ರದಲ್ಲಿ ಕಚ್ಚಾ ತೈಲ ಬೆಲೆ ಕಡಿಮೆ ಇದ್ದರೂ ಬಿಜೆಪಿ ಅಕಾರಕ್ಕೆ ಬಂದ ಬಳಿಕ ಪೆಟ್ರೋಲ್, ಡಿಸೇಲ್, ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಕಾಣುತ್ತಲೇ ಇದೆ. ಡಾಲರ್ ಮೌಲ್ಯ ಹೆಚ್ಚಳವಾಗಿ ರುಪಾಯಿ ಅಪಮೌಲ್ಯವಾಗುತ್ತಿದೆ. ಹಾಲು, ಮೊಸರು, ಬಟ್ಟೆ, ಯಾವುದೇ ವಸ್ತು ಖರೀದಿಸಿದರೂ ಜಿಎಸ್‌ಟಿ ಕಟ್ಟಬೇಕಾಗಿದೆ.

ಕೇಂದ್ರ ಬಿಜೆಪಿ ನಾಯಕರು ಖಾಸಗಿ ಕಂಪನಿಗಳ ಜತೆಗೆ ಹೊಂದಾಣಿಕೆ ಮಾಡಿಕೊಂಡು ಅವರನ್ನು ತೃಪ್ತಿ ಪಡಿಸುವ ಸಲುವಾಗಿ ದೇಶದ ಬಡ ಜನರ ಮೇಲೆ ಬೆಲೆ ಏರಿಕೆ ಹೊರೆಯನ್ನು ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಏ.17ರಂದು ಕೇಂದ್ರ ಬೆಲೆ ಏರಿಕೆ ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಸಿಎಂ, ಡಿಸಿಎಂ, ಸಚಿವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದ್ದು ಏ.19ರಂದು ಹಾವೇರಿಯಲ್ಲಿ ಪ್ರತಿಭಟಿಸಲಾಗುವುದು.

ಜಿಲ್ಲೆಯ ಆರು ಜನ ಶಾಸಕರು, ಪರಿಷತ್ ಸದಸ್ಯರು, ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ. ಅಂದು ಪುರಸಿದ್ದೇಶ್ವರ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಹೊಸಮನಿ ಸಿದ್ದಪ್ಪ ವೃತ್ತವನ್ನು ತಲುಪಲಿದೆ. ಈ ಹಿನ್ನೆಲೆ ಪಕ್ಷದ ಹಿರಿಯ ನಾಯಕರು, ಯುವ ಕಾಂಗ್ರೆಸ್, ಮಹಿಳಾ, ವಿವಿಧ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಸನ್ನ ಹಿರೇಮಠ, ಬಾಬುಸಾಬ ಮೋಮಿನಗಾರ, ಜಮೀರ ಜಿಗರಿ, ನಾಸೀರಖಾನ ಪಠಾಣ ಇದ್ದರು.



ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಹಾಗೂ ಜಿಲ್ಲಾ ಕಾಂಗ್ರೆಸ್ ವಕ್ತಾರ್ ಡಾ. ಸಂಜಯ ಡಾಂಗೆ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

**ಸಾಧಕ ಬಾಧಕಗಳ ಚರ್ಚೆ**

ಜಾತಿಗಣತಿ ವಿಷಯಕ್ಕೆ ಸಂಬಂಸಿದಂತೆ ಸರಕಾರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಿದೆ. ಸಂಪುಟ ಸಭೆಗೂ ಮುನ್ನ ಅಖಿಲ ಭಾರತ ವೀರಶೈವ ಮಹಾಸಭಾದ ಎಸ್.ಎಸ್ ಮಲ್ಲಿಕಾರ್ಜುನ, ವಿನಯ ಕುಲಕರ್ಣಿ, ಎಂ.ಬಿ ಪಾಟೀಲ, ಲಕ್ಷ್ಮಿ ಹೆಬ್ಬಾಳ್ಕರ ಸೇರಿ ಹಲವು ನಾಯಕರು ಸಭೆ ನಡೆಸಲಿದ್ದಾರೆ. ಯಾವ ಸಮಾಜಕ್ಕೂ ಅನ್ಯಾಯ ಆಗಬಾರದು, ಕೆಳ ಹಂತದವರಿಗೂ ಸರಕಾರಿ ಸೌಲಭ್ಯ ಸಿಗಬೇಕು. ಈ ನಿಟ್ಟನಲ್ಲಿ ಜಾತಿಗಣತಿ ಜಾರಿಗೊಳಿಸಲು ಮುಂದಾಗಿದ್ದು, ಸಮಾಜವನ್ನು ಬೆಂಬಲಿಸಿ, ಸರಕಾರದ ನಿರ್ಣಯಕ್ಕೂ ಬದ್ದರಾಗಿರುತ್ತೇವೆ ಎಂದು ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ತಿಳಿಸಿದರು.

## ಶ್ರೀಗಳು ಸಮಾಜ ಕಟ್ಟಲು ಪ್ರಯತ್ನ

ಪಂಚಮಸಾಲಿ ಸಂಘಟನಾ ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಸಿ.ಸಿ.ಪಾಟೀಲ ಮಾತನಾಡಿದರು. ಪಂಚಮಸಾಲಿ ಸಂಘದ ಅಧ್ಯಕ್ಷರು, ಮುಖಂಡರು ಇದ್ದರು.

**ನರಗುಂದ:** ಪಂಚಮಸಾಲಿ ಸಮಾಜವನ್ನು ಜಯ ಮೃತ್ಯುಂಜಯ ಸ್ವಾಮಿಗಳು ಸಂಘಟನೆಗೆ ವಿಶೇಷ ಆದ್ಯತೆ ನೀಡಿ ವಿಸ್ವಾಸದಿಂದ ಸಮಾಜವನ್ನು ಕಟ್ಟುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಇದರಲ್ಲಿ ಸಂಘಟನೆ ಮಾಡುವಲ್ಲಿ ಯಾವುದೇ ಲೋಪವಾಗಿಲ್ಲಾ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಇಲ್ಲಿಯ ಹಳೇ ಎಪಿಎಂಸಿ ಪ್ರಾಂಗಣದಲ್ಲಿನ ಪಂಚಮಸಾಲಿ ಸಂಘದ ಕಚೇರಿಯಲ್ಲಿ ನಡೆದ ಸಂಘಟನಾ ಸಭೆಯಲ್ಲಿ ಅವರು ಮಾತನಾಡಿ, ಜಯಮೃತ್ಯುಂಜಯ ಸ್ವಾಮಿಗಳು ಯಾವ ಪಕ್ಷದ ಜತೆಗೂ ಗುರುತಿಸಿಕೊಂಡಿಲ್ಲ, ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕಲ್ಪಿಸುವ ಸಂಬಂಧ ನಡೆದ ಕೂಡಲಸಂಗಮದಿಂದ ಹೊರಡಿಸಲಾದ ಪಾದಯಾತ್ರೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಇತ್ತೀಚೆಗೆ ಹುಬ್ಬಳ್ಳಿಯ ಹೋಟೆಲ್ ವೊಂದರಲ್ಲಿ ಸಭೆ ಮಾಡಿ ಆ ಸಭೆಯಲ್ಲಿ ಪಾಲ್ಗೊಂಡಿದ್ದವರಲ್ಲಿ ಮುರಗೇಶ ನಿರಾಣಿ ಅವರೊಬ್ಬರಿಗೆ ಮಾತ್ರ ಪಂಚಮಸಾಲಿ ಸಮಾಜದ ಬಗ್ಗೆ ಮಾತನಾಡುವ ನೈತಿಕತೆ ಇದೆ ಎಂದರು.

ಅವತ್ತು ನಾನು ಸಬೆಗೆ ಬರೋದು ನಿಶ್ಚಿತವಿಲ್ಲ ಸಭೆಗೆ ಹೋಗೋದು ಬೇಡ ಎಂದು ಆದೇಶ ಮಾಡಿದರೆ ನಾನು ಅನಿವಾರ್ಯವಾಗಿ ಬಿಡಬೇಕಾಗುತ್ತದೆ ಎಂದರು.

ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷ ಬಿ.ಎಂ.ಬೆಳಹಾರ, ಕಾಂಗ್ರೆಸ್ ಮುಖಂಡ ಎಸ್ .ಡಿ.ಕೊಳ್ಳಿಯವರ ಮಾತನಾಡಿದರು. ಡಾ.ಎಫ್. ಕೆ.ಸವದತ್ತಿ, ನ್ಯಾಯವಾದಿ ಎಸ್.ಆರ್.ಪಾಟೀಲ, ಉಮೇಶಗೌಡ ಪಾಟೀಲ, ವಿ.ಎನ್.ಕೊಳ್ಳಿಯವರ, ಎಸ್.ವಿ.ಹುಂಬಿ, ಅಪ್ಪಣಗೌಡ ನಾಯ್ಕರ, ನಿಂಗಣ್ಣ ಗಾಡಿ, ಶಿವಾನಂದ ಮುತ್ತವಾಡ, ಚನ್ನಬಸಪ್ಪ ಕಂಠಿ, ಸಂಗಪ್ಪ ಪೂಜಾರ, ಸಿದ್ದಪ್ಪ ಯಲಿಗಾರ, ರಾಜುಗೌಡ ಪಾಟೀಲ, ಈಶ್ವರಗೌಡ ಪಾಟೀಲ, ಬಿ.ಡಿ.ಪಾಟೀಲ, ಬಸು ಪಾಟೀಲ, ರಾಚನಗೌಡ ಪಾಟೀಲ.ಪ್ರಕಾಶ ಪಟ್ಟಣಶೆಟ್ಟಿ ಪಾಲ್ಗೊಂಡಿದ್ದರು.

## ಕುರುಬ ಸಮಾಜದ ಜಿಲ್ಲಾಧ್ಯಕ್ಷ ಸಾವು

**ಹಾವೇರಿ:** ಕರ್ನಾಟಕ ಪ್ರದೇಶ ಕುರುಬ ಸಂಘದ ಹಾವೇರಿ ಜಿಲ್ಲೆಯ ಜಿಲ್ಲಾಧ್ಯಕ್ಷರಾದ ಮಾರುತಿ ಹರಿಹರ (52) ಬುಧವಾರ ಬೆಳಗ್ಗೆ ಕೇರಳದ ಶಬರಿಮಲೆ ಹತ್ತಿರ ಚಲುಸುತ್ತಿದ್ದ ವಾಹನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದು ಪರಿಣಾಮ ಅಪಘಾತ ಅಸುನೀಗಿದ್ದಾರೆ. ಹಾನಗಲ್ಲ ನಗರದ ಕಮಾಟಗೇರಿ ಓಣಿಯ ಮೂಲ ನಿವಾಸಿಗಳಾದ ಇವರು ಅಪ್ಪಟ ಅಯ್ಯಪ್ಪನ ಭಕ್ತರಾಗಿದ್ದು, ಸಮಾಜ ಸೇವಕರು, ಹಾನಗಲ್ಲ ನಗರದ ಜನತಾ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿ ಕೂಡಾ ಸೇವೆ ಸಲ್ಲಿದ್ದ ಅವರು, ಶಬರಿಮಲೆಗೆ ಹೋಗುವಾಗ ಈ ಅಪಘಾತ ಉಂಟಾಗಿದೆ. ಅವರೊಂದು ಅವರ ಮಗ ಸೇರಿದಂತೆ 32 ಜನರು ಸೇರಿ ಮಂಗಳವಾರದಂದು ಮಿನಿ ಬಸ್ ಮಾಡಿಕೊಂಡು ಶಬರಿಮಲೆ ಅಯ್ಯಪ್ಪನ ದರ್ಶನ ಮಾಡಲೆಂದು ಪ್ರವಾಸ ಕೈಗೊಂಡಿದ್ದರು. ಬುಧವಾರ ಬೆಳಗಿನ 7.30 ಸುಮಾರಿಗೆ ಅವರಿದ್ದ ವಾಹನ ಚಲಿಸುವಾಗ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ವಾಹನದ ಮುಂದಗಡೆ ಕುಳಿತಿದ್ದ ಮಾರುತಿ ಹರಿಹರ ಅವರಿಗೆ ತಲೆಗೆ ಭೀಕರ ಪೆಟ್ಟು ಬಿದ್ದು ವಿಪರೀತ ರಕ್ತಸ್ರಾವ ಪರಿಣಾಮವಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ವಾಹನದಲ್ಲಿದ್ದ ಒಟ್ಟು 32 ಜನರಲ್ಲಿ ಐದಾರು ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಎಲ್ಲರೂ ಆರಾಮಾಗಿದ್ದಾರೆ. ಇವರೊಬ್ಬರಿಗೆ ಭೀಕರ ಪೆಟ್ಟು ಬಿದ್ದ ಪರಿಣಾಮವಾಗಿ ಸ್ಥಳದಲ್ಲಿ ಕೊನೆ ಉಸಿರೆಳೆದಿದ್ದಾರೆ. ಗುರವಾರ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

## ಜಿಲ್ಲಾ ವಿಪತ್ತು ನಿರ್ವಹಣಾ ವಿಡಿಯೋ ಕಾನ್ಫರೆನ್ಸ್ ಸಭೆ

**ಹಾವೇರಿ:** ಜಿಲ್ಲೆಯಲ್ಲಿ ಕಳೆದ 15 ದಿನಗಳಿಂದ ಮಳೆಯಾಗುತ್ತಿದ್ದು, ಕುಡಿಯುವ ನೀರು ಹಾಗೂ ಬೆಳೆಹನಿಗಳ ಕುರಿತು ಜಂಟಿ ಸಮೀಕ್ಷೆ ಮಾಡಿ ತುರ್ತಾಗಿ ವರದಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ್ ದಾನಮ್ಮನವರ ತಿಳಿಸಿದರು.

> ಕುಡಿಯುವ ನೀರು ಅಭಾವವಿರುವ ತಾಲೂಕವಾರ ಗ್ರಾಪಂಗಳಿಂದ ಖಾಸಗಿ ಬೋರವೆಲ್‌ಗಳನ್ನು ಪಡೆದು ನೀರು ಪೂರೈಕೆ ಮಾಡಬೇಕು ಮತ್ತು ತೆಗೆದುಕೊಂಡಿರುವ ಖಾಸಗಿ ಬೋರೆವೆಲ್‌ಗಳ ಮಾಹಿತಿಯನ್ನು ಜಂಟಿ ಸಮೀಕ್ಷೆ ಮಾಡಿ ಸರಿಯಾದ ವರದಿ ಸಲ್ಲಿಸಬೇಕು.
> -ಡಾ.ವಿಜಯ ಮಹಾಂತೇಶ್ ದಾನಮ್ಮನವರ, ಜಿಲ್ಲಾಧಿಕಾರಿ

ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿ ಅವರು, ಜಿಲ್ಲೆಯಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ ಅಧಿಕಾರಿಗಳು ತಕ್ಷಣ ಕಾರ್ಯ ಪ್ರವೃತ್ತರಾಗಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು. ಮಳೆಯಾದ ದಿನ ಅವಘಡ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಜಂಟಿ ಸಮೀಕ್ಷೆ ಮಾಡಿ ಕೂಡಲೇ ವರದಿ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಅಧಿಕಾರಿಗಳ ನಿರ್ಲಕ್ಷ್ಯತನ ಹಾಗೂ ಕೆಲಸದಲ್ಲಿ ವಿಳಂಬತನ ಸಹಿಸಲಾಗುವುದಿಲ್ಲ, ಹಾಗೇನಾದರೂ ಕಂಡುಬಂದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಜಿಲ್ಲಾಧಿಕಾರಿಗಳು: ಜಿಲ್ಲೆಯಲ್ಲಿ ಬೇಸಿಗೆ ಮಳೆಯಿಂದ ಹಾನಿಗೋಳಗಾದ ಮನೆಗಳು ಹಾಗೂ ಬೆಳೆಗಳ ಕುರಿತು ಪ್ರಶ್ನೆ ಮಾಡಿದಾಗ, ಸಂಬಂಧಿಸಿದ ಅಧಿಕಾರಿಗಳು ಸಮರ್ಪಕ ಮಾಹಿತಿ ನೀಡಲು ತಡಕಾಡಿದರು. ಇದರಿಂದ ಅಸಮಾಧಾನಗೊಂಡ ಜಿಲ್ಲಾಧಿಕಾರಿಗಳು ಹಾರಿಕೆ ಉತ್ತರಗಳು ಕೇಳಲು ಸಭೆ ಮಾಡಿಲ್ಲ, ಎಲ್ಲವನ್ನು ಸಿದ್ಧಪಡಿಸಿಕೊಂಡು ಸಭೆಗೆ ಹಾಜರಾಗಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ವಿಪತ್ತು ನಿರ್ವಹಣಾ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ್ ದಾನಮ್ಮನವರ ಮಾತನಾಡಿದರು.

**ಬೆಳೆ ವಿಮೆ, ಕುಡಿವ ನೀರು ಪೂರೈಕೆಗೆ ಕ್ರಮ**

ಮಳೆಯಿಂದಾಗಿ ಹಾನಿಗೊಳಗಾದ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಸಮೀಕ್ಷೆ ಮಾಡಿ ಬೆಳೆ ಹಾನಿಗೆ ಒಳಗಾಗಿದ್ದರೆ ಜಂಟಿ ಸಮೀಕ್ಷೆ ಮಾಡಿ ಕೂಡಲೇ ವರದಿ ಸಲ್ಲಿಸಬೇಕು. ಇದರಿಂದ ರೈತರಿಗೆ ಸೂಕ್ತ ಸಮಯದಲ್ಲಿ ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ. ಕೆಲಸಗಳು ತುರ್ತಾಗಬೇಕು, ಜನರೊಂದಿಗೆ ಬೆರೆಯಬೇಕು. ಉತ್ತಮ ಸ್ಪಂದಿಸಬೇಕು ಆಗ ಜನರಿಗೆ ಜಿಲ್ಲಾಡಳಿತ ತಮ್ಮೊಂದಿಗೆ ಇದೆ ಅನ್ನುವ ಭಾವನೆ ಬರುತ್ತದೆ. ಹಾನಿಗೋಳಗಾದ ಸ್ಥಳಗಳ ವೀಕ್ಷಣೆ ಮಾಡಿ ವರದಿ ಒಪ್ಪಿಸಬೇಕು ಎಂದು ಅಧಿಕಾರಿಗಳನ್ನು ಎಚ್ಚರಿಸಿದರು.

## ಅಧೀನ ಬಾಂಡ್‌ಗಳ ಬಿಡುಗಡೆ ಖರೀದಿ

**ಶಿರಸಿ:** ರಾಜ್ಯದ ಪ್ರತಿಷ್ಠಿತ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕು ಆಕರ್ಷಕ ಶೇ.9.25 ರಷ್ಟು ಬಡ್ಡಿದರದಲ್ಲಿ ದೀರ್ಘಾವಧಿಯ ಅಧೀನ ಬಾಂಡ್‌ಗಳ ಪ್ರಥಮ ಸರಣಿಯನ್ನು ಬಿಡುಗಡೆಗೊಳಿಸಿದ್ದು, ಈ ಬಾಂಡ್‌ಗಳು ಸಾರ್ವಜನಿಕರ ಖರೀದಿಗೆ ಏ.16 ರಿಂದಲೇ ಲಭ್ಯವಿದೆ ಎಂದು ಬ್ಯಾಂಕಿನ ಅಧ್ಯಕ್ಷ ಜಯದೇವ ಯು.ನಿಲೇಕಣಿಯವರು ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಭಾರತೀಯ ರಿಸರ್ವ ಬ್ಯಾಂಕಿನ ಅನುಮತಿ ಮೇರೆಗೆ ರಾಜ್ಯದಲ್ಲಿಯೇ ಪ್ರಪ್ರಥಮ ಬಾರಿಗೆ ಇಂತಹ ಬಾಂಡುಗಳನ್ನು ಶಿರಸಿ ಅರ್ಬನ್ ಸಹಕಾರಿ ಬ್ಯಾಂಕು ಸಾರ್ವಜನಿಕರಿಗೋಸ್ಕರ ಬಿಡುಗಡೆಗೊಳಿಸುತ್ತಿದ್ದು, ಈ ಮೂಲಕ 20 ಕೋಟಿ ರು.ವನ್ನು ಬಂಡವಾಳಕ್ಕಾಗಿ ಶೇಖರಿಸುವ ಗುರಿಯನ್ನು ಬ್ಯಾಂಕು ಹೊಂದಿದೆ. 120 ತಿಂಗಳ (10 ವರ್ಷಗಳ) ಅವಧಿ ಹೊಂದಿರುವ ಈ ಬಾಂಡುಗಳು ಹೂಡಿಕೆದಾರರಿಗೆ ಇಂದಿನ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿಯೇ ಅತ್ಯಂತ ಸ್ಪರ್ಧಾತ್ಮಕ ಶೇ.9.25 ರಷ್ಟು ಬಡ್ಡಿದರವನ್ನು ನೀಡುತ್ತಿದ್ದು, ಈ ದೀರ್ಘಾವಧಿ ಅಧೀನ ಬಾಂಡುಗಳ ಮೂಲಕ ತಮ್ಮ ಬಂಡವಾಳವನ್ನು ಹೂಡಲು ಸಾರ್ವಜನಿಕರಿಗೆ ಇದೊಂದು ಉತ್ತಮ ಅವಕಾಶವಾಗಿದೆ. 1,000 ರು.ಮುಖಬೆಲೆಯನ್ನು ಈ ಬಾಂಡುಗಳು ಹೊಂದಿದ್ದು, ಕನಿಷ್ಠ 10 ಬಾಂಡುಗಳನ್ನು ಸಾರ್ವಜನಿಕರು ಖರೀದಿಸಬೇಕಾಗಿದ್ದು, ತದನಂತರ ಹೆಚ್ಚುವರಿ ಒಂದು ಬಾಂಡಿನಂತೆ ಖರೀದಿ ಮಾಡಬಹುದಾಗಿದೆ. ತ್ರೈಮಾಸಿಕ ಶೇ. 9.25ರಷ್ಟು ಬಡ್ಡಿಯನ್ನು ಸತತ 10 ವರ್ಷಗಳ ಅವಧಿಗೆ ಈ ಬಾಂಡುಗಳ ಮೇಲೆ ಹೂಡಿಕೆದಾರರು ಪಡೆಯಬಹುದಾಗಿದೆ.

## ಅತಿವೃಷ್ಟಿಯಿಂದಾಗಿ ಸ್ಥಗಿತಗೊಳಿಸಿದ ಮನೆಗಳ ಬಿಲ್ ತಡೆ

**ಸವಣೂರ:** ಕ್ಷೇತ್ರದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಜನಸಾಮಾನ್ಯರ ಮುಂದೆ ತಲೆ ತಗ್ಗಿಸಬೇಕಾದ ದುಸ್ಥಿತಿ ಎದುರಾಗಿದೆ. ಅಂತಹ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕೆಂದು ಶಾಸಕ ಯಸೀರ ಅಹ್ಮದ್ ಖಾನ ಎ.ಸಿ ಶುಭಂ ಶುಕ್ಲ ಅವರಿಗೆ ತಿಳಿಸಿದರು.

ಉಪ ವಿಭಾಗಾಧಿಕಾರಿಗಳ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಕ್ಷೇತ್ರದಲ್ಲಿ ಈ ಹಿಂದೆ ಅತಿವೃಷ್ಟಿಗೊಳಗಾದ ಸಂದರ್ಭದಲ್ಲಿ ವಿವಿಧ ಕಾರಣಗಳಿಂದ ಸ್ಥಗಿತಗೊಳಿಸಿ ಮನೆಗಳ ಬಿಲ್ ಗಳನ್ನು ತಡೆ ಹಿಡಿಯಲಾಗಿತ್ತು ಈ ವಿಚಾರವಾಗಿ ಶಾಸಕರು ಶಿಗ್ಗಾಂವಿ ಹಾಗೂ ಸವಣೂರು ತಾಲೂಕಿನ ಮನೆಗಳ ಯಾದಿ ಸಂಪೂರ್ಣ ವಿವರಣೆಯೊಂದಿಗೆ ಬೆಂಗಳೂರಿಗೆ ಆಗಮಿಸಲು ಸೂಚಿಸಿದರೂ ಸಹ ಸವಣೂರಿನ ಕಂದಾಯ ಇಲಾಖೆ ವಿಷಯ ನಿರ್ವಾಹಕ ಹಳಕಲ್ ಬಾರದ ಕಾರಣ ಕೆಂಡಾ ಮಂಡಲವಾದ ಶಾಸಕರು, ವಿಷಯ ನಿರ್ವಾಹಕರನ್ನು ತರಾಟೆಗೆ ತೆಗೆದುಕೊಂಡರು.

ಸಭೆಯಲ್ಲಿ ಕೆಲ ಅಧಿಕಾರಿಗಳಿಗೆ ಕೈಮುಗಿದು ಸಾರ್ವಜನಿಕ ಕೆಲಸಗಳನ್ನು ಸಕಾಲಕ್ಕೆ ಮಾಡಿಕೊಡುವಂತೆ ಮನವಿ ಮಾಡಿ, ವಿಳಂಬ ಧೋರಣೆ ಕೈಗೊಳ್ಳುತ್ತಿರುವ ಅಧಿಕಾರಿಗಳಿಗೆ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡು ಒಂದು ವಾರದ ಗಡುವು ನೀಡಿದರು. ಒಂದು ವಾರದ ನಂತರ ಸರಿಯಾಗಿ ಕೆಲಸ ಮಾಡದ ಅಧಿಕಾರಿಯನ್ನುಅಮಾನತು ಮಾಡಬೇಕೆಂದು ಎಸಿ ಶುಭಂ ಶುಕ್ಲಾ ಅವರಿಗೆ ತಿಳಿಸಿದರು.

ಲ್ಯಾಂಡ್ ಗ್ರ್ಯಾಂಟ್, ಕೆ.ಜಿಪಿ, ಪಹಣಿ ಪತ್ರಗಳ ಕೆಲಸಗಳಿಗೆ ಪರಿಹಾರ ಕ್ರಮಗಳು ಬೆಂಗಳೂರಲ್ಲಿ ಇಲ್ಲಾ ಎಲ್ಲವೂ ಈ ಕಚೇರಿಯಲ್ಲಿಯೇ ಇವೆ. ಅವು ತಮ್ಮ ನಿತ್ಯದ ಕೆಲಸವಾಗಿದೆ. ಆದ್ದರಿಂದ ಅಧಿಕಾರಿಗಳು ನಿಮ್ಮ ಕರ್ತವ್ಯ ಪ್ರಜ್ಞೆ ಅರಿತು ಕಾರ್ಯನಿರ್ವಹಿಸಲು ಮನವಿ ಮಾಡಿದರು.

ತಾಲೂಕಿನ 9 ಗ್ರಾಪಂಯಲ್ಲಿ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಕೊನೆಯಲ್ಲಿ ಪುನಃ ಅಧಿಕಾರಿಗಳಿಗೆ ಮನವಿ ಮಾಡಿದ ಶಾಸಕರು, ದಯವಿಟ್ಟು ಕ್ಷೇತ್ರದ ಜನರು ಕಷ್ಟದಲ್ಲಿದ್ದಾರೆ ಅವರಿಗೆ ಸಕಾಲದಲ್ಲಿ ಸೇವೆ ಮಾಡಿ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಉತ್ಸುಕತೆ ಇದೆ. ಅಧಿಕಾರಿಗಳು, ಜನಸಾಮಾನ್ಯರನ್ನು ನಿತ್ಯ ಅಲೆದಾಡಿಸುವುದರಿಂದ ನಿಮ್ಮ ದೂರುಗಳೇ ಕೇಳಿ ಬರುತ್ತಿವೆ. ಇದರಿಂದಾಗಿ ನಾವು ಕೆಲಸ ಮಾಡಲು ಕಷ್ಟವಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರ ಭರತರಾಜ ಕೆ.ಎನ್, ಗ್ರೇಡ್ 2 ತಹಶೀಲ್ದಾರ ಗಣೇಶ ಸವಣೂರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ ಮುಲ್ಲಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸುಭಾಸ ಮಜ್ಜಗಿ, ಪ್ರಮುಖರಾದ ಪಾಂಡಪ್ಪ ತಿಪ್ಪಕನವರ, ಎಂ. ದಿವಾನಸಾಬನವರ, ಗಿರೀಶ ಅಂಗಡಿ, ನೂರ ಅಹ್ಮದ ಜಿ. ಮುಲ್ಲಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

> ಈ ನಡುವೆ ತಮ್ಮ ಬೆಂಬಲಿಗರು ಹಾಗೂ ಭೂಮಾಪನಾ ಇಲಾಖೆ ಅಧಿಕಾರಿಯೊಂದಿಗೆ ವೀರಾವೇಶದ ಪರಿಯಲ್ಲಿ ವಾಗ್ವಾದ ಆರಂಭಗೊಂಡಿತು. ಬಳಿಕ ಶಾಸಕರು ಮಧ್ಯ ಪ್ರವೇಶಿಸಿ ನಿಮ್ಮ ಸಮಸ್ಯೆ ಬಗೆ ಹರಿಯಲು ಎಸಿ ಅವರ ನ್ಯಾಯಾಲಯದಲ್ಲಿ ಮನವಿ ಮಾಡಿ, ಎಸಿ ಅವರು ಅದರ ಸತ್ಯಾಸತ್ಯತೆಗಳ ಪರಿಶಿಲಿಸಿ ಅತಿ ಶೀಘ್ರದಲ್ಲಿ ಯಾರ ತಪ್ಪಿದ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಿ.
> -ಯಸೀರ ಅಹ್ಮದ್ ಖಾನ ಎ.ಸಿ ಶುಭಂ ಶುಕ್ಲ, ಶಾಸಕ

## ಸಮಾಚಾರ ಸಣ್ಣದಲ್ಲ

### ಡಾ.ಅಂಬೇಡ್ಕರ್ ಜಯಂತಿ ಆಚರಣೆ

**ಧಾರವಾಡ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಭಾರತ ದೇಶ ಕಂಡ ಶ್ರೇಷ್ಠ ನಾಯಕರಲ್ಲಿ ಒಬ್ಬರು. ಅವರು ಸಾಮಾಜಿಕವಾಗಿ ಮೂಡಿಸಿದ ಸಂಚಲನಗಳು ಹಿರಿದಾಗಿದ್ದು, ಅವರ ವಿಚಾರಧಾರೆಗಳು ಇಂದಿಗೂ ಪ್ರಸ್ತುತ. ಅವರ ತತ್ವಾದರ್ಶಗಳು ಸುಂದರ ಸಮಾಜವನ್ನು ನಿರ್ಮಿಸುವಂತಿದೆ ಎಂದು ಶಿಕ್ಷಕ ಸತೀಶ್.ಆರ್. ಅವರು ಅಭಿಪ್ರಾಯ ಪಟ್ಟರು. ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮದ ವಕ್ತಾರರಾಗಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ.ಅನಿತಾ ರೈ, ಆಡಳಿತಾಧಿಕಾರಿ ಡಾ.ಶ್ರೀಕಾಂತ ಕೆ, ಶ್ರೀಕೃಷ್ಣ ಜೋಶಿ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕ ಸೋಮಲಿಂಗ ವೈಯಕ್ತಿಕ ಗೀತೆಯನ್ನು ಹಾಡಿದರು. ಸುನೀಲಕುಮಾರ ಶಿರಾಲಿ ಸ್ವಾಗತಿಸಿದರು. ಗಿರೀಜಾ ಜೆ. ನಿರೂಪಿಸಿದರು. ನಾಗಮ್ಮಾ ವಂದಿಸಿದರು.

### 'ಬರ್ತೀಯೇನ ಗೆಳತಿ' ಕೃತಿ ಬಿಡುಗಡೆ ನಾಳೆ

**ಧಾರವಾಡ:** ರವಿದಾಸ ಪ್ರಕಾಶನ ಹಾಗೂ ದಿ ಇನ್‌ಸ್ಟಿಟ್ಯೂಶನ್ ಆಫ್ ಎಂಜಿನಿಯರ್ಸ್ ಸಂಯುಕ್ತ ಆಶ್ರಯದಲ್ಲಿ ವಿದ್ಯಾ ಡಿ. ಕದಂ ಅವರ 'ಬರ್ತೀಯೇನ ಗೆಳತಿ' ಕವನ ಸಂಕಲನ ಜನಾರ್ಪಣೆ ಕಾರ್ಯಕ್ರಮವನ್ನು ಏ.18 ರಂದು ಬೆಳಗ್ಗೆ 11 ಗಂಟೆಗೆ 'ದಿ ಇನ್‌ಸ್ಟಿಟ್ಯೂಶನ್ ಆಫ್ ಎಂಜಿನಿಯರ್ಸ್' ಧಾರವಾಡ ಸ್ಥಾನಿಕ ಕೇಂದ್ರದ ಬಾಳೇಕುಂದ್ರಿ ಭವನದಲ್ಲಿ ಆಯೋಜಿಸಲಾಗಿದೆ. ಹಿರಿಯ ಕವಯಿತ್ರಿ ಹಾಗೂ ಸಾಂಸ್ಕೃತಿಕ ಚಿಂತಕಿ ಡಾ. ಹೇಮಾ ಪಟ್ಟಣಶೆಟ್ಟಿ ಅವರು ಪುಸ್ತಕ ಜನಾರ್ಪಣೆ ಮಾಡುವರು. ಧಾರವಾಡದ ಸಾಹಿತಿ,ಪ್ರಸಿದ್ಧ ವೈದ್ಯ ಡಾ.ಸಂಜೀವ ಕುಲಕರ್ಣಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಇತಿಹಾಸ ತಜ್ಞ ಡಾ.ಲಕ್ಷ್ಮಣ್ ತೆಲಗಾವಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಕರ್ನಾಟಕ ಇತಿಹಾಸ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ರಾಜಶೇಖರ್ ಮತ್ತು ರವಿದಾಸ ಪ್ರಕಾಶನದ ಗಂಗಮ್ಮ ಸುರೇಶ ಭಂಡಾರಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಡಾ.ಅಂಬೇಡ್ಕರ್ ಜಯಂತ್ಯುತ್ಸವ

**ಧಾರವಾಡ:** ರಜತಗಿರಿಯಲ್ಲಿ ಯಲ್ಲಮ್ಮ ದೇವಿ ನಗರ ಅಭಿವೃದ್ಧಿ ಸಂಘ ಹಾಗೂ ಯಲ್ಲಮ್ಮ ದೇವಿ ಮಹಿಳಾ ಮಂಡಳದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ 134 ನೇ ಜಯಂತಿ ಆಚರಿಸಲಾಯಿತು. ಯಲ್ಲಮ್ಮ ದೇವಿ ನಗರ ಅಭಿವೃದ್ಧಿ ಸಂಘದ ಅಧ್ಯಕ್ಷ ಕುಬೇರ ಹೋಂಗಲ, ಯಲ್ಲಮ್ಮ ದೇವಿ ಮಹಿಳಾ ಮಂಡಳದ ಅಧ್ಯಕ್ಷೆ ಸುಜಾತಾ ಸಾಂಬ್ರಾಣಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಮಂಜುನಾಥ ಗಾಮನಗಟ್ಟಿ, ಗುರುನಾಥ ಮುರಗೋಡ, ಮಲ್ಲೇಶ ಸಾಂಬ್ರಾಣಿ, ಅರವಿಂದ ಹೆಬ್ಬಳ್ಳಿ ಇತರಿದ್ದರು.

### ಕೆಎಸ್‌ಆರ್‌ಟಿಸಿ ಡಕೋಟಾ ಬಸ್

**ಹುಬ್ಬಳ್ಳಿ:** ಹುಬ್ಬಳ್ಳಿಯಿಂದ ಬಾಗಲಕೋಟೆಗೆ ಹೋಗುವ ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಬಸ್ ಹತ್ತಬೇಕು ಎನ್ನುವಾಗ ಒಂದು ಚೂರು ವಿಚಾರ ಮಾಡಬೇಕಾಗಿದೆ.

ಏಕೆಂದರೆ ನಾವು ಪ್ರಯಾಣ ಮಾಡುವ ಬಸ್ ಯಾವಾಗ ಹೋಗಿ ತಲುಪುತ್ತೆ ಎನ್ನುವುದು ಗೊತ್ತಾಗುವುದಿಲ್ಲ. ಇದಕ್ಕೆ ತಾಜಾ ಉದಹಾರಣೆ ಬುಧವಾರ ನಡೆದಿದೆ. ಹುಬ್ಬಳ್ಳಿಯಿಂದ ಬಾಗಲಕೋಟೆಗೆ ಹೋಗುವ ಬಸ್ ಮಾರ್ಗ ಮಧ್ಯೆ, ನರಗುಂದ ತಾಲೂಕಿನ ಕೊಣ್ಣೂರು ಬಳಿ ಪಂಚರ ಆಗಿದೆ. ಪಂಚರ ತೆಗೆಯಲು ಬಸ್‌ನಲ್ಲಿ ಜಾಕ್ ಇಲ್ಲ. ಇನ್ನು ಬಸ್ ಚಾಲಕನು ರಸ್ತೆ ಮಧ್ಯೆ ಹೋಗುವ ಲಾರಿ ಚಾಲಕರಿಗೆ ಕೈ ಮಾಡಿ ಜಾಕ್ ಕೊಡಿ ಪಂಚರ್ ತೆಗೆಯಬೇಕಿದೆ ಎನ್ನುವ ಮಾತು ರಾಜ್ಯದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಬಸ್‌ಗಳ ಪರಿಸ್ಥಿತಿ ಎಂತಹದ್ದು ಇದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೆಎಸ್‌ಆರಟಿಸಿ ಅಧಿಕಾರಿಗಳು ಯಾವ ಕ್ರಮ ಕೈಗೊಳ್ಳುವ ನಿರ್ಧಾರ ಮಾಡ್ತಾರೆ ಎನ್ನುವುದು ನೋಡಬೇಕಿದೆ.

{ಸಿದ್ದರಾಮಯ್ಯ } ಮುಖ್ಯಮಂತ್ರಿ

**ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿರುವುದು ಜಾತಿ ಗಣತಿಯಲ್ಲ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ. ಈ ವರದಿ ಅನುಷ್ಠಾನ ಸಂದರ್ಭದಲ್ಲಿ ಯಾವುದೇ ಸಮುದಾಯಗಳಿಗೆ ಅನ್ಯಾಯವಾಗಲು ಬಿಡಲ್ಲ. ಜಾತಿ ಗಣತಿಗೆ ಒಕ್ಕಲಿಗ ಸಮುದಾಯ ವಿರೋಧ ವ್ಯಕ್ತಪಡಿಸಿದ್ದರೇ, ಸಚಿವ ಸಂಪುಟದಲ್ಲಿ ಇರುವ ಒಕ್ಕಲಿಗ ಸಚಿವರುಗಳು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ.**

'ಪಂಚ ಗ್ಯಾರಂಟಿ' ಕಿರುಹೊತ್ತಿಗೆ ಬಿಡುಗಡೆಗೊಳಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ

# ನಾವು ನುಡಿದಂತೆ ನಡೆದಿದ್ದೇವೆ

ಗದಗ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ ಹಾಗೂ ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ ಅವರ ನೂತನ ಕಚೇರಿಯನ್ನು ಉದ್ಘಾಟಿಸಿ ನಂತರ ಬಿಡುಗಡೆಗೊಳಿಸಿದರು.

**ಗದಗ:** ಸರಕಾರದ ಮಹಾತ್ವಾಕಾಂಕ್ಷಿ ಯೋಜನೆಗಳಾದ ಪಂಚಗ್ಯಾರಂಟಿ ಯೋಜನೆಗಳ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಹೊರತರಲಾದ ಜಿಲ್ಲಾ ಮಟ್ಟದಲ್ಲಿ 'ಪಂಚ ಗ್ಯಾರಂಟಿ' ನುಡಿದಂತೆ ನಡಿದಿದ್ದೇವೆ ಎಂಬ ಗದಗ ಜಿಲ್ಲೆಯ ಕಿರುಹೊತ್ತಿಗೆಯನ್ನು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಹೇಳಿದರು.

ನಗರದ ಮುಳಗುಂದ ನಾಕಾ ಸಮೀಪದ ಕೆಎಸ್‌ಆರ್‌ಟಿಸಿ ಡಿಪೋ ಎದುರಿನ ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಗದಗ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಹಾಗೂ ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ ಅವರ ನೂತನ ಕಚೇರಿಯನ್ನು ಉದ್ಘಾಟಿಸಿ ನಂತರ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಶರೀಫ್ ಬಿಳಿಯಲಿ, ಬಸವರಾಜ ಬೆಳದಡಿ, ವಿವೇಕ ಯಾವಗಲ್, ದೇವಪ್ಪ ಮೋರನಾಳ, ಪುಲಕೇಶಗೌಡ ಪಾಟೀಲ, ವಿರುಪಾಕ್ಷಪ್ಪ ಯಾರಸಿ, ಈಶಣ್ಣ ಹುಣಸಿಕಟ್ಟಿ, ರಾಜೀವ ಗೊಡಚಪ್ಪ ಕುಂಬ, ಗೀತಾ ಸುರೇಶ ಬೀರಣ್ಣವರ, ವೀರಯ್ಯ ಮಠಪತಿ, ಫಕ್ರುಸಾಬ ಚಿಕ್ಕಮಣ್ಣೂರ, ಆರ್ ಆರ್ ಗಡ್ಡದ್ದೇವರಮಠ , ಗದಗ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಸದಸ್ಯರುಗಳಾದ ಕೃಷ್ಣಗೌಡ ಎಚ್ ಪಾಟೀಲ, ಮೀನಾಕ್ಷಿ ಬೆನಕಣ್ಣವರ, ದೇವರಡ್ಡಿ ತಿರ್ಲಾಪುರ, ಶಂಭು ಎಸ್ ಕಾಳೆ, ರಮೇಶ ಹೊನ್ನಿನಾಯ್ಕರ್ , ಭಾಷಾಸಾಬ ಮಲ್ಲಸಮುದ್ರ , ದಯಾನಂದ ಪವಾರ, ನಿಂಗಪ್ಪ ದೇಸಾಯಿ, ಸಂಗಮೇಶ ಕೆರಕಲಮಟ್ಟಿ, ಸಂಗಮೇಶ ಎಂ ಹಾದಿಮನಿ, ಮಲ್ಲಪ್ಪ ದಂಡಿನ, ಗಣೇಶ ಸಿಂಗ್ ಮಿಟಾಡ, ಮಲ್ಲಪ್ಪ ಎಚ್ ಬಾರಕೇರ, ಸಾವಿತ್ರಿ ಹೂಗಾರ ಸೇರಿದಂತೆ ಗದಗ ಜಿಲ್ಲಾ ಹಾಗೂ ತಾಲೂಕು ಪ್ರಾಧಿಕಾರದ ಸದಸ್ಯರು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್. ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಗಣ್ಯರು, ಹಿರಿಯರು, ಗ್ಯಾರಂಟಿ ಯೋಜನೆಯ ಸಂಬಂಧಿತ ಇಲಾಖಾ ಅಧಿಕಾರಿಗಳು, ಫಲಾನುಭವಿಗಳು ಹಾಜರಿದ್ದರು.

**ಕಾರ್ಯಕ್ರಮದಲ್ಲಿ ಗಣ್ಯರು ಭಾಗಿ**

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ನೀಲಮ್ಮ ಬೋಳನವರ, ಹೇಮಂತಗೌಡ ಪಾಟೀಲ, ಶರಣಪ್ಪ ಬೆಟಗೇರಿ, ಪಿ.ಬಿ. ಅಳಗವಾಡಿ, ದೀಪಕ ಲಮಾಣಿ, ಸದಸ್ಯರಾದ, ರೂಪಾ ಅಂಗಡಿ, ಶಿವನಗೌಡ ಪಾಟೀಲ ಇದ್ದರು.

## ಜಗಜ್ಯೋತಿ ಬಸವೇಶ್ವರ ಜಯಂತಿಗೆ ಪೂರ್ವಸಿದ್ಧತೆ

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಪ್ರಯುಕ್ತ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ.ಎಂ ಮಾತನಾಡಿದರು.

**ಗದಗ:** ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಏ.30 ರಂದು ಬೆಳಗ್ಗೆ 11 ಗಂಟೆಗೆ ನಗರದ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಅರ್ಥಪೂರ್ಣವಾಗಿ ಹಾಗೂ ಸುವ್ಯವಸ್ಥಿತವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಪ್ರಯುಕ್ತ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಗಳನ್ನೊಳಗೊಂಡ ಮೆರವಣಿಗೆಯು ನಗರದ ವಿವಿಧ ವೃತ್ತಗಳಲ್ಲಿ ಸಂಚರಿಸಿ ಕಾರ್ಯಕ್ರಮದ ಸ್ಥಳಕ್ಕೆ ಬಂದು ತಲುಪಲಿದೆ. ಕಾರ್ಯಕ್ರಮದಲ್ಲಿ ಸಂಗೀತಗಾರರು ಬಸವೇಶ್ವರರ ವಚನಗಳನ್ನು ಪ್ರಸ್ತುತಪಡಿಸಲಿದ್ದಾರೆ. ಜಗಜ್ಯೋತಿ ಬಸವೇಶ್ವರರ ಕುರಿತು ಆಳವಾಗಿ ಅಧ್ಯಯನ ಮಾಡಿದಂತಹವರಿಂದ ಉಪನ್ಯಾಸ ಕಾರ್ಯಕ್ರಮ ಜರುಗಲಿದೆ. ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ ಮುದ್ರಿಸಲು ಕ್ರಮ ವಹಿಸಬೇಕು. ಎಲ್ಲ ಅಧಿಕಾರಿಗಳು ಜಯಂತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಒಟ್ಟಾರೆಯಾಗಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಅಚ್ಚುಕಟ್ಟಾಗಿ ನಡೆಸಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು. ಸಭೆಯಲ್ಲಿ ವೇದಿಕೆ ವ್ಯವಸ್ಥೆ, ಅಲ್ಪೋಹಾರ, ಬ್ಯಾನರ್ ಅಳವಡಿಕೆ ಕುರಿತು ಚರ್ಚಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರಯ್ಯಸ್ವಾಮಿ ಸರ್ವರನ್ನು ಸ್ವಾಗತಿಸಿ ವಂದಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಮುದಾಯದ ಮುಖ್ಯಸ್ಥರು, ಗಣ್ಯರು, ಹಿರಿಯರು ಹಾಜರಿದ್ದರು.

## ಸ್ತ್ರೀ ಶಕ್ತಿಗಾಗಿ ಸಚಿವ ಸ್ಥಾನ ತ್ಯಜಿಸಿದ್ದ ಅಂಬೇಡ್ಕರ್

ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಅಂಬೇಡ್ಕರ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಯಿತು.

**ಧಾರವಾಡ:** ಮಹಿಳಾ ಸಬಲೀಕರಣ, ಸ್ತ್ರೀಶಕ್ತಿ ವರ್ಧಿಸುವ ಹಿಂದೂ ಬಿಲ್ ಮಂಡನೆಗೆ ಒಪ್ಪದ ಸಂಸತ್ ನೀತಿ ಖಂಡಿಸಿ, ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ಎಸೆದು ಸಂಪುಟ ತ್ಯಜಿಸಿದ ಮೊಟ್ಟ ಮೊದಲ ಸಮಾನತಾವಾದಿ ಡಾ.ಬಿ.ಆರ್.ಅಂಬೇಡ್ಕರರೇ ಮೊದಲಿಗರು ಎಂದು ಡಾ.ಶ್ಯಾಮಲಾ ರತ್ನಾಕರ ಹೇಳಿದರು.

ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ , ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಸಂವಿಧಾನ ರಚನೆಯಲ್ಲಿ ಡಾ.ಅಂಬೇಡ್ಕರ್ ಅವ ಕೊಡುಗೆ ಅಪಾರ ಎಂದು ತಿಳಿಸಿದರು.

ದಲಿತ ಸಾಹಿತ್ಯ ಚಿಂತಕ ಸಿದ್ಧರಾಮ ಹಿಪ್ಪರಗಿ ಮಾತನಾಡಿ, ಭೀಮರಾವ ಅಂಬೇಡ್ಕರರು ತೀರಿ ಹೋದ ಮೇಲೆ ಅವರ ಮಹತ್ವ ಎಷ್ಟೊಂದು ಅಪರಿಮಿತ ಎಂಬ ಅರಿವು ಜನರಲ್ಲಿ ಮೂಡಿದೆ. ಅಂಬೇಡ್ಕರರು ಅಧಿಕಾರದಲ್ಲಿ ಮುಂದುವರಿದಿದ್ದರೆ ದೇಶವನ್ನು ಬುದ್ಧಭಾರತ ಮಾಡುತ್ತಿದ್ದರೆಂದು ಅಭಿಪ್ರಾಯಪಟ್ಟರು.

ಡಾ. ಲಿಂಗರಾಜ ಅಂಗಡಿ ಮಾತನಾಡಿದರು. ಧಾರವಾಡದ ಮಹಿಳಾ ಮಂಡಳ ದವರು, ಸಮುದಾಯ, ಧಾರವಾಡ ಜಾಗೃತ ಗೀತೆಗಳನ್ನು ಪ್ರಸ್ತುತ ಪಡಿಸಿದರು. ವೇದಿಕೆ ಮೇಲೆ ಕೆಪಿಇಎಸ್ ಸಂಸ್ಥೆಯ ಡಾ.ಜಿ.ಎಮ್.ಪಾಟೀಲ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಸಂಜೀವ ಪಾಟೀಲ ಹಾಗೂ ರಂಗಕರ್ಮಿ ಸಿದ್ಧರಾಮ ಹಿಪ್ಪರಗಿ ಉಪಸ್ಥಿತರಿದ್ದು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಾಂತೇಶ ನರೇಗಲ್, ಶಾಂತವೀರ ಬೆಟಗೇರಿ, ಬಿ.ಐ.ಈಳಗೇರ, ಎಫ್.ಬಿ.ಕಣವಿ, ಬಿ.ಜಿ.ಬಾರ್ಕಿ, ಎಸ್ .ಎಮ್ ದಾನಪ್ಪಗೌಡರ, ನಾರಾಯಣ ಭಜಂತ್ರಿ, ಡಾ. ಪ್ರಭಾಕರ ಲಗಮನ್ನವರ, ಬಸವರಾಜ ಗೊರವರ,ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ, ಜಯಶ್ರೀ ಪಾಟೀಲ,ಗಣೇಶ ಜೋಶಿ, ಸುವರ್ಣ ಸುರಕೋಡ ಉಪಸ್ಥಿತರಿದ್ದರು.

ಪ್ರಮೀಳಾ ಜಕ್ಕನ್ನವರ ಪ್ರಾರ್ಥಿಸಿದರು.ಪ್ರೊ. ಕೆ ಎಸ್ ಕೌಜಲಗಿ ಸ್ವಾಗತಿಸಿದರು. ಡಾ. ಜಿನದತ್ ಹಡಗಲಿ ನಿರೂಪಿಸಿದರು. ಡಾ.ಎಸ್ ಎಸ್. ದೊಡಮನಿ ವಂದಿಸಿದರು.

**ಮಹಿಳೆಯರಿಗೆ ಸಮಾನ ಅವಕಾಶ ಬರಲು ಡಾ. ಅಂಬೇಡ್ಕರ್ ಅವರ ಕೊಡುಗೆ ಮೆಚ್ಚುವಂತಹದ್ದು. ಇಂದಿನ ರಾಜಕಾರಣಿಗಳು ಅನೇಕ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡರೂ ಕುರ್ಚಿ ಬಿಡುವುದಿಲ್ಲ. ಬಾಬಾಸಾಹೇಬರು ತಾವು ತಪ್ಪು ಮಾಡದೇ ಇದ್ದರೂ, ಬೇರೆಯವರು ಮಾಡಿದ್ದ ತಪ್ಪಿಗೆ ಅಧಿಕಾರದಿಂದ ದೂರ ಸರಿದರು.**

**-ಡಾ.ಶ್ಯಾಮಲಾ ರತ್ನಾಕರ**

## ಕೃತಕ ಬುದ್ಧಿಮತ್ತೆ ಒಂದು ಮಹಾನ್ ಶಕ್ತಿ

ಕೃತಕ ಬುದ್ಧಿಮತ್ತೆ ಆಧರಿತ ಸಂಶೋಧನಾ ವರ್ತಮಾನ ಮತ್ತು ಭವಿಷ್ಯದ ಸಾಧನ' ಕುರಿತು 2 ದಿನಗಳ ವಿಶೇಷ ಕಾರ್ಯಾಗಾರವನ್ನು ಎಸ್‌ಡಿಎಂ ವಿವಿ ಉಪ ಕುಲಪತಿ ಡಾ. ನಿರಂಜನ್ ಕುಮಾರ್ ಉದ್ಘಾಟಿಸಿದರು.

**ಧಾರವಾಡ:** ಎಸ್.ಡಿ.ಎಂ.ವೈದ್ಯಕೀಯ ಮಹಾವಿದ್ಯಾಲಯದ, ಸೂಕ್ಷ್ಮಾಣುಜೀವಿ ಶಾಸ್ತ್ರ ವಿಭಾಗವು 'ಕೃತಕ ಬುದ್ಧಿಮತ್ತೆ ಆಧರಿತ ಸಂಶೋಧನಾ ವರ್ತಮಾನ ಮತ್ತು ಭವಿಷ್ಯದ ಸಾಧನ' ಕುರಿತು 2 ದಿನಗಳ ವಿಶೇಷ ಕಾರ್ಯಾಗಾರವನ್ನು 'ಕೃತಕ ಬುದ್ಧಿಮತ್ತೆಯೊಂದಿಗೆ ನಿಮ್ಮ ಸಂಶೋಧನೆಯನ್ನು ಪರಿವರ್ತಿಸಿ' ಎಂಬ ಧ್ಯೇಯೆಯೊಂದಿಗೆ ಏರ್ಪಡಿಸಲಾಗಿತ್ತು.

ಕರ್ನಾಟಕದಾದ್ಯಂತ 75 ಕ್ಕೂ ಹೆಚ್ಚು ನುರಿತ ಸಂಶೋಧಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಎಸ್.ಡಿ.ಎಂ.ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ನಿರಂಜನ್ ಕುಮಾರ್ ಮುಖ್ಯ ಅತಿಥಿಗಳಾಗಿ, ಕಾರ್ಯಾಗಾರನ್ನು ಉದ್ಘಾಟಿಸಿ ಮಾತನಾಡಿದರು.

ಎಸ್.ಡಿ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ರತ್ನಮಾಲಾ ಎಂ. ದೇಸಾಯಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಒಂದು ಮಹಾನ್ ಶಕ್ತಿಯಾಗಿದ್ದು ಅದನ್ನು ನಾವು ಜಾಗರೂಕತೆಯಿಂದ ಬಳಸಬೇಕು. ಪ್ರಸ್ತುತ ಬೋಧನಾ ವಿಧಾನ ಮತ್ತು ಕೃತಕ ಬುದ್ಧಿಮತ್ತೆಯು ಜತೆಯಲ್ಲಿ ಸಾಗಬೇಕು ಎಂದು ತಿಳಿಸಿದರು. ಸಹ ಉಪ ಕುಲಪತಿಗಳಾದ ವಿ. ಜೀವಂಧರ ಕುಮಾರ, ಕುಲ ಸಚಿವ ಡಾ.ಚಿದೇಂದ್ರ ಶೆಟ್ಟರ್, ಹಣಕಾಸು ಅಧಿಕಾರಿಗಳಾದ ವಿ. ಜಿ. ಪ್ರಭು, ಸಂಶೋಧನಾ ನಿರ್ದೇಶಕ ಡಾ.ಕೆ. ಸತ್ಯಮೂರ್ತಿ, ಕಾರ್ಯಾಗಾರದ ಸಂಘಟನಾ ಅಧ್ಯಕ್ಷರು ಮತ್ತು ಸೂಕ್ಷ್ಮಾಣುಜೀವಿ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಅಜಂತಾ ಜಿ.ಎಸ್, ಕಾರ್ಯಾಗಾರದ ವಿಕ್ಷಕರಾದ ಡಾ. ಕವಿತಾ ಯೇವೂರ, ಹಿರಿಯ ಸೂಕ್ಷ್ಮಾಣು ಜೀವಿ ಶಾಸ್ತ್ರಜ್ಞರಾದ ಡಾ. ರಾಘವೇಂದ್ರ ಕುಲಕರ್ಣಿ, ಅಂಗ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಡಾ.ಶಾರೂನ್ ಬೈಸಿಲ್ ಮತ್ತು ಡಾ.ರೋಹಿತ ಅವರು ಕೃತಕ ಬುದ್ಧಿಮತ್ತೆಯ ಕುರಿತು ಪರಿಣಿತ ಉಪನ್ಯಾಸ ನೀಡಿದರು.

ಸಂಘಟನಾ ಕಾರ್ಯದರ್ಶಿಗಳಾದ ಡಾ. ಸುಘೋಷ ಕುಲಕರ್ಣಿ ಅವರು ಅತಿಥಿಗಳನ್ನು ಸ್ವಾಗತಿಸಿದರು. ಡಾ. ಶಾರೂನ್ ಬೈಸಿಲ್ ಅವರು ಎ.ಐ.ಪ್ರಾಮುಖ್ಯತೆ ಮತ್ತು ಕಾರ್ಯಾಗಾರದ ಮಹತ್ವ ತಿಳಿಸಿದರು. ಡಾ.ಪವಿತ್ರಾ ಜೈನ್ ಕಾರ್ಯಕ್ರಮ ನಿರೂಪಿಸಿದರು. ಡಾ. ಶುಭದಾ ವಂದನಾರ್ಪಣೆ ಸಲ್ಲಿಸಿದರು.

**ಕೃತಕ ಬುದ್ಧಿಮತ್ತೆಯು ಒಂದು ಶಕ್ತಿಯುತ ಸಾಧನವಾಗಿದ್ದು, ಅದನ್ನು ನೈತಿಕತೆಯಿಂದ, ಸೃಜನಾತ್ಮಕ ಮತ್ತು ನಾವಿನ್ಯತೆಯೊಂದಿಗೆ ಬಳಸಬೇಕು. ಕೃತಕ ಬುದ್ಧಿಮತ್ತೆಯು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಮತ್ತು ಅಧ್ಯಯನಕ್ಕೆ ಸಹಕಾರಿಯಾಗಿದೆ.**

**-ಡಾ. ನಿರಂಜನ್ ಕುಮಾರ್, ಎಸ್‌ಡಿಎಂ ವಿವಿ ಉಪಕುಲಪತಿ**

## ಜಿಲ್ಲಾ ಮಟ್ಟದ ಜನತಾ ದರ್ಶನ ಏ.19 ರಂದು

**ಗದಗ:** ಏ.19 ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಮುಳಗುಂದ ಪಟ್ಟಣದ ಎಸ್.ಜೆ.ಜೆ.ಎಂ ಪ್ರೌಢಶಾಲೆಯ ಆವರಣದಲ್ಲಿ ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಜರುಗಲಿದೆ ಎಂದು ಜಿಲ್ಲಾಧಿಕಾರಿ ಸಿ. ಎನ್.ಶ್ರೀಧರ್ ಅವರು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನತಾ ದರ್ಶನ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಏ.19 ರಂದು ಜರುಗಲಿರುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿದ್ದು ಸಾರ್ವಜನಿಕರಿಂದ ಸ್ವೀಕೃತವಾಗುವ ಆಯಾ ಇಲಾಖೆಯ ಮನವಿಗಳ ಬಗ್ಗೆ ಸಚಿವರ ಸಮಕ್ಷಮದಲ್ಲಿ ಮನವಿಯ ಬಗ್ಗೆ ವಿವರಣೆ ನೀಡಬೇಕು ಎಂದು ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಜಿಪಂ ಸಿಇಒ ಭರತ್.ಎಸ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ.ಎಂ ಸೇರಿದಂತೆ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಎಸ್‌ಡಿಎಂ 'ಟೆಕ್ನೋವೇಶನ್' ಫೆಸ್ಟ್‌ನಲ್ಲಿ ಸಾಧನೆ

**ಧಾರವಾಡ:** ನಗರದ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಕೃತಕ ಬುದ್ಧಿಮತ್ತೆ ವಿಭಾಗದ 6 ನೇ ಸೆಮಿಸ್ಟರ್ ವಿದ್ಯಾರ್ಥಿನಿ ಅನುಷಾ ಎ. ರಾವ್ ಪ್ರತಿಷ್ಠಿತ 'ಟೆಕ್ನೋವೇಶನ್' ಸ್ಪರ್ಧೆಯಲ್ಲಿ ಅಗ್ರ 25 ತಂಡಗಳಲ್ಲಿ ಸ್ಥಾನ ಗಳಿಸುವ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ್ದಾರೆ. ಅಂತಿಮ ಸುತ್ತಿನಲ್ಲಿ ಅನುಷಾ ಅವರ ನಾವೀನ್ಯತೆ ಮತ್ತು ತಾಂತ್ರಿಕ ಕೌಶಲಗಳು ಕ್ಲಿಷ್ಟ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ನೆರವಾಗುವ ತಂತ್ರಜ್ಞಾನ ಗಮನ ಸೆಳೆಯಿತು. ಇಂಡಿಯಾ ಸೆಲ್ಯುಲಾರ್ ಮತ್ತು ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ ಮತ್ತು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಭಾರತ ಸರಕಾರ, ನವದೆಹಲಿ ಆಯೋಜಿಸಿದ್ದ 'ಟೆಕ್ನೋವೇಶನ್' ಸ್ಪರ್ಧೆಯು ದೇಶದಾದ್ಯಂತದ ಯುವ ಇನ್ನೋವೇಟರ್‌ಗಳಿಗೆ ರಾಷ್ಟ್ರೀಯ ವೇದಿಕೆಯನ್ನು ಒದಗಿಸಿತ್ತು. ಎಸ್‌ಡಿಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಜೀವಂಧರ ಕುಮಾರ್, ಪ್ರಾಂಶುಪಾಲರಾದ ಡಾ.ರಮೇಶ್.ಎಲ್.ಚಕ್ರಸಾಲಿ, ಎಐಎಂಎಲ್ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಆರ್.ಬಿರಾದರ್ ಮತ್ತು ಎಲ್ಲ ಶಿಕ್ಷಕರು ಸಾಧನೆಗಾಗಿ ವಿದ್ಯಾರ್ಥಿನಿಯನ್ನು ಅಭಿನಂದಿಸಿದರು.

## ಶಿಕ್ಷಕರರ ನೇಮಕಕ್ಕೆ ಅರ್ಜಿ

**ಗದಗ:** ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಡಿಯಲ್ಲಿ ಬರುವ ಸರಕಾರಿ ಬಾಲಕರ, ಬಾಲಕಿಯರ ಬಾಲಮಂದಿರಗಳಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಾಗಿ ಆರ್ಟ ಕ್ರಾಫ್ಟ್ ಶಿಕ್ಷಕರು, ಸಂಗೀತ ಶಿಕ್ಷಕರು, ದೈಹಿಕ,ಯೋಗಾ, ಗಣಿತ,ವಿಜ್ಞಾನ, ಇಂಗ್ಲಿಷ್ ಶಿಕ್ಷಕರನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಈ ಮೇಲಿನ ಹುದ್ದೆಗಳು ತಾತ್ಕಾಲಿಕವಾಗಿದ್ದು, (1 ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ) ಯಾವುದೇ ಸಂದರ್ಭದಲ್ಲಿ ಖಾಯಂಗೊಳಿಸಲಾಗುವುದಿಲ್ಲ. ಅರ್ಜಿಗಳನ್ನು ಮೇ.2 ರೊಳಗಾಗಿ ಸಾಯಂಕಾಲ 5.30ರೊಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾಡಳಿತ ಭವನ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿಗೆ ಸಂಪರ್ಕಿಸಬಹುದಾಗಿದೆ.

## ಸೈಕಿಯಾಟ್ರೀಕ್ ಕೇರ್ ನಿಗಾ ಘಟಕ ಆರಂಭ

**ಧಾರವಾಡ:** ನಗರದ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ ನ್ಯೂರೋ-ಸೈಕಿಯಾಟ್ರೀಕ್ ಕೇರ್ ತೀವ್ರ ನಿಗಾ ಘಟಕದ ಉದ್ಘಾಟನಾ ಸಮಾರಂಭವನ್ನು ಡಿಮ್ಹಾನ್ಸ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟೆರಿಯನ್ ಶರದ ಪೈ ಅವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಡಾ.ಅರುಣಕುಮಾರ ಸಿ. ನಿರ್ದೇಶಕರು ಡಿಮ್ಹಾನ್ಸ ಧಾರವಾಡ, ಮೇಜರ ಸಿದ್ದಲಿಂಗಯ್ಯ ಹೀರೆಮಠ ಮುಖ್ಯ ಆಡಳಿತಾ ಧಿಕಾರಿಗಳು ಡಿಮ್ಹಾನ್ಸ ಧಾರವಾಡ, ಡಾ.ರಾಘವೇಂದ್ರ ಬಿ. ನಾಯಕ್ ವೈದ್ಯಕೀಯ ಅಧೀಕ್ಷಕರು ಡಿಮ್ಹಾನ್ಸ ಧಾರವಾಡ, ಕೆ.ಎಲ್ ತಿಲಕಚಂದ್ ನಿವೃತ್ತ ಮುಖ್ಯ ಆಯುಕ್ತರು ಆದಾಯ ತೆರಿಗೆ ಇಲಾಖೆ, ರೋಟೇರಿ ಯನ್ ಶಂಕರ ಹಿರೇಮಠ ಸಹಾಯಕ ಗವರ್ನರ್, ಪ್ರಥಮ ಮಹಿಳೆ ಪದ್ಮಜಾ ಅವರು ಆಗಮಿಸಿದ್ದರು. ಅತಿಥಿಗಳಾಗಿ ರೋಟೇರಿಯನ್ ಸಂಜಯ ಶೆಟ್ಟಿ, ರೋಟೇರಿಯನ್ ಆನಂದ ಪಟ್ವಾ, ರೋಟೇರಿಯನ್ ಮಿನಾಲ್ ಶಾ, ರೋಟೇರಿಯನ್ ಗೋವಿಂದ.ವಿ.ಮಗಚಿಕೊಂಡಿ ಅಧ್ಯಕ್ಷರು ರೋಟರಿ ಕ್ಲಬ್ ವಿದ್ಯಾನಗರ ಹುಬ್ಬಳ್ಳಿ ಮತ್ತು ಲವಲಿ ಮ್ಯಾ ಥೂಸ್ ನರ್ಸಿಂಗ ಅಧೀಕ್ಷಕರು ಆಗಮಿಸಿದ್ದರು. ಡಾ. ಅರುಣ ಕುಮಾರ ಸಿ. ನಿರ್ದೇಶಕರು ಡಿಮ್ಹಾನ್ಸ ಮಾತನಾಡಿದರು. ರೋಟೇರಿಯನ್ ಗೋವಿಂದ.ವಿ.ಮಗಚಿಕೊಂಡಿ ಅಧ್ಯಕ್ಷರು ರೋಟರಿ ಕ್ಲಬ್ ವಿದ್ಯಾನಗರ ಹುಬ್ಬಳ್ಳಿ ಸ್ವಾಗತಿಸಿದರು. ರೋಟೇರಿಯನ್ ಡಾ.ಮಹಿಮಾ ದಂಡ ಅವರು ನಡೆಸಿಕೊಟ್ಟರು. ಡಾ. ಚೈತ್ರಾ ಪ್ರಾರ್ಥ ನೆ ಗೀತೆ ಹಾಡಿದರು.

## ಸ್ಲಂ ಮಂಡಳಿಯಿಂದ ಆಶ್ರಯ ಮನೆ: ಶಾಸಕ

ಪುರಸಭೆಯ ಆಶ್ರಯ ಯೋಜನೆ ಸಮಿತಿ ಸಭೆಯಲ್ಲಿ ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿದರು.

**ಅಣ್ಣಿಗೇರಿ:** ನವಲಗುಂದ ಶಾಸಕ ಎನ್.ಎಚ್.ಕೋನರಡ್ಡಿ ನೇತೃತ್ವದಲ್ಲಿ ಪುರಸಭೆಯ ಆಶ್ರಯ ಯೋಜನೆ ಸಮಿತಿ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಶಾಸಕ ಎನ್.ಎಚ್ ಕೊನರಡ್ಡಿ, ಆಶ್ರಯ ಯೋಜನೆಗೆ ಈಗಾಗಲೆ ಪಲಾನುಭವಿಗಳನ್ನು ಆಯ್ಕೆಮಾಡಿ ಹಕ್ಕುಪತ್ರಗಳನ್ನು ವಿತರಿಸಿದ್ದು, ಮುಂಬರುವ ದಿನಗಳಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಅನುದಾನ ನೀಡಿ ಮನೆಗಳನ್ನು ನಿರ್ಮಿಸುವ ಕಾರ್ಯ ಪ್ರಾರಂಭಿಸಲಾಗುವುದೆಂದರು.

ಅಣ್ಣಿಗೇರಿ ನಗರದಲ್ಲಿ ಯಾರು ವಸತಿ ರಹಿತರಾಗಿ ಇರಬಾರದು. ಎಲ್ಲ ಅರ್ಹ ಫಲಾನುಭವಿಗಳಿಗೆ ಮನೆ ನೀಡಬೇಕೆಂಬುದೆ ನನ್ನ ಕನಸು ಎಂದು ಶಾಸಕರು ತಿಳಿಸಿದರು.

ಇದೆ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾದ ಆಶ್ರಯ ಸಮಿತಿ ಸದಸ್ಯರಾಗಿ ನೇಮಕರಾದ ಚಾಂದಸಾಬ ಹುಲಿ ಹಾಗೂ ಮುತ್ತು ಬಿಷ್ಟೆಕ್ಕನವರ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಉಪವಿಭಾಗಧಿಕಾರಿ ಶಾಲಂ ಹುಸೇನ್, ತಹಸೀಲ್ದಾರ ಮಂಜುನಾಥ ದಾಸಪ್ಪನವರ, ಪುರಸಭೆ ಮುಖ್ಯಾಧಿಕಾರಿ ವಾಯ್.ಜಿ.ಗದ್ದಿಗೌಡರ, ಅಣ್ಣಿಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮಾಯಣ್ಣವರ, ಪುರಸಭೆ ಸದಸ್ಯರಾದ ಬಾಬಾಜಾನ ಮುಲ್ಲಾನವರ, ಹಸನಸಸಾಬ ಸುಂಕದ, ಶಾಧಿಕ ಠಾಣೇದ, ಅಮೃತಪ್ಪ ಗುರಿಕಾರ ಹಸನಸಾಬ ಗಡ್ಡದ ಉಪಸ್ಥಿತರಿದ್ದರು.

## ವಿಶೇಷ ಆಯ್ಕೆ ಶಿಬಿರ ಇಂದು

**ಗದಗ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕ್ರೀಡಾ ವಸತಿ ಶಾಲೆ, ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿಯುಸಿ ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸಲುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿರುತ್ತದೆ. ಆದರೆ ಸದರಿ ಆಯ್ಕೆ ಶಿಬಿರಗಳಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡುವ ದೃಷ್ಟಿಯಿಂದ ರಾಜ್ಯದ ಕೆಲವು ಸ್ಥಳಗಳಲ್ಲಿ ವಿಶೇಷ ಆಯ್ಕೆ ಶಿಬಿರಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಆಯ್ಕೆ ಶಿಬಿರಗಳಲ್ಲಿ ಭಾಗಿಯಾಗಿರುವ ಆದರೆ ರಾಜ್ಯಮಟ್ಟದ ಆಯ್ಕೆ ಶಿಬಿರಕ್ಕೆ ಆಯ್ಕೆಯಾಗದ ಅಭ್ಯರ್ಥಿಗಳು ತಮ್ಮ ಪ್ರದರ್ಶನವನ್ನು ಉತ್ತಮ ಪಡಿಸಿಕೊಳ್ಳಲು ಉದ್ದೇಶಿಸಿದಲ್ಲಿ ಈ ಬಗ್ಗೆ ಅರ್ಜಿ ನಮೂನೆಯಲ್ಲಿ ಕಡ್ಡಾಯವಾಗಿ ದಾಖಲಿಸಿ ವಿಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದು. 8ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿ ಗಳು ಪ್ರಸ್ತುತ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, 8ನೇ ತರಗತಿ ಪ್ರವೇಶಕ್ಕೆ ಜೂನ್-2025 ಕ್ಕೆ ಅನ್ವಯವಾಗುವಂತೆ 14 ವರ್ಷ ವಯಸ್ಸಿನ ಒಳಗೆ ಇರಬೇಕು. ಪ್ರಥಮ ಪಿಯುಸಿ ಪ್ರವೇಶ ಬಯಸುವ ಅಭ್ಯರ್ಥಿಗಳ ವಯಸ್ಸು ಜೂನ್-2025ಕ್ಕೆ ಅನ್ವಯ ವಾಗುವಂತೆ 18 ವರ್ಷ ಒಳಗೆ ಇರಬೇಕು. ಗದಗ ಬೆಟಗೇರಿಯ ಹಾಕಿ ಕ್ರೀಡಾಂಗಣದಲ್ಲಿ ಏ.17 ರಂದು ಬೆ.9 ಗಂಟೆಗೆ ಜರುಗಲಿದೆ.

# ಸರಕಾರದಿಂದ ಮುಸ್ಲಿಂ ಓಲೈಕೆ ರಾಜಕಾರಣ

## ಜನಾಕ್ರೋಶ ಯಾತ್ರೆ ವೇದಿಕೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಆಕ್ರೋಶ

**ಬೆಳಗಾವಿ:** ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಮುಸ್ಲಿಂ ಓಲೈಕೆ ರಾಜಕಾರಣ ಮಾಡುತ್ತಿದೆ. ಹಿಂದೂಗಳಿಗೆ ಸರಕಾರಿ ಸೌಲಭ್ಯ ವಂಚಿಸಿ ಮುಸ್ಲಿಂ ಸಮುದಾಯಕ್ಕೆ ಮಾತ್ರ ನೀಡುತ್ತಿರುವ ಸರಕಾರಕ್ಕೆ ಜನ ತಕ್ಕ ಪ್ರತ್ಯುತ್ತರ ನೀಡಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಆಕ್ರೋಶ ಹೊರಹಾಕಿದರು.

ಬುಧವಾರ ಬೆಳಗಾವಿ ನಗರದಲ್ಲಿ ಹಮ್ಮಿಕೊಂಡಿದ್ದ ಜನಾಕ್ರೋಶ ಯಾತ್ರೆ ವೇದಿಕೆ ಸಮಾರಂಭ ಉದ್ದೇಶಿಸಿ ಮಾತನಾಡಿ, ಭ್ರಷ್ಟಾಚಾರಕ್ಕಾಗಿ ಹುಟ್ಟಿದ ಪಕ್ಷವೇ ಕಾಂಗ್ರೆಸ್, ದೇಶ ಹಾಗೂ ರಾಜ್ಯದಲ್ಲಿ ದಶಕಗಳ ಕಾಲ ಆಡಳಿತ ನಡೆಸಿರುವ ಇವರಿಗೆ ಬಡತನ ನಿರ್ಮೂಲನೆ ಸಾಧ್ಯವಾಗಿಲ್ಲ. ಮುಸ್ಲಿಂ ಓಲೈಸುವ ಕಾಂಗ್ರೆಸ್‌ಗೆ ಜನ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, ಒಂದು ಸಮಾಜವನ್ನು ಓಲೈಸಲು ಜಾತಿ ಗಣತಿಯ ವರದಿಯನ್ನು ಜಾರಿ ಮಾಡಲು ಕಾಂಗ್ರೆಸ್ ಸರಕಾರ ಹೊರಟಿದೆ. ಹಿಂದುಳಿದ ವರ್ಗದವರಿಂದ ಮೀಸಲಾತಿ ಕಸಿದುಕೊಳ್ಳುವ ಕೆಲಸ ಮಾಡುತ್ತಿದೆ. ಮೀಸಲಾತಿ ಕೇಳಿದ ಪಂಚಮಸಾಲಿ ಸಮುದಾಯದ ಮೇಲೆ ಲಾಟಿ ಚಾರ್ಜ್ ಮಾಡಲಾಗಿದೆ. ಸರಕಾರ ಕೇವಲ ಪಂಚಮಸಾಲಿ ಸಮುದಾಯಕ್ಕಲ್ಲ, ಕಿತ್ತೂರು ರಾಣಿ ಚೆನ್ನಮ್ಮಳ ವಂಶಸ್ಥರರಿಗೆ ಅಪಮಾನವನ್ನು ಮಾಡಿದೆ ಎಂದರು.

ಬುಧವಾರ ಬೆಳಗಾವಿ ನಗರದಲ್ಲಿ ಹಮ್ಮಿಕೊಂಡಿದ್ದ ಜನಾಕ್ರೋಶ ಯಾತ್ರೆ ವೇದಿಕೆ ಸಮಾರಂಭದಲ್ಲಿ ಬಿಜೆಪಿ ನಾಯಕರು ಶಕ್ತಿ ಪ್ರದರ್ಶಿಸಿದರು.

### ಭ್ರಷ್ಟಾಚಾರದಲ್ಲಿ ಮುಳುಗಿದೆ

ಸಂಸದ ಯದುವೀರ ಒಡೆಯರ್ ಮಾತನಾಡಿ, ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಹಗರಣಗಳು ಹೆಚ್ಚಾಗಿವೆ. ತಮ್ಮ ಎಲ್ಲ ವಿಫಲತೆಗಳಿಗೆ ಕೇಂದ್ರ ಸರಕಾರದ ಕಡೆ ಬೊಟ್ಟು ತೋರಿಸುತ್ತಿದ್ದಾರೆ. ಯಾವುದೇ ಯೋಜನೆಗಳು ಸಂಪೂರ್ಣವಾಗಿ ಜಾರಿಗೊಳ್ಳುತ್ತಿಲ್ಲ. ಪ್ರಗತಿಪರವಾದ ರಾಜ್ಯ ಈಗ ಹಿಂದುಳಿದ ರಾಜ್ಯವೆಂದು ಗುರುತಿಸಲಾಗುತ್ತಿದೆ ಎಂದು ಹೇಳಿದರು.

ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಮಾತನಾಡಿ, ಕರ್ನಾಟಕದಲ್ಲಿ ಐದುವರ್ಷ ಪೂರ್ಣಗೊಳಿಸಿದ ಬಳಿಕ ಪುನಃ ಅದೇ ಸರಕಾರ ಅಧಿಕಾರಕ್ಕೆ ಬರುವುದಿಲ್ಲ. ಭ್ರಷ್ಟ ಕಾಂಗ್ರೆಸ್ ಸರಕಾರಕ್ಕೆ ಮುಂದಿನ ಬಾರಿ ಜನರು ಅವಕಾಶವನ್ನು ನೀಡುವುದಿಲ್ಲ. 2028 ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ. ಬಡ ಮಧ್ಯಮ ಸೇರಿದಂತೆ ಎಲ್ಲ ವರ್ಗಗಳ ಕಲ್ಯಾಣಕ್ಕಾಗಿ ಬಿಜೆಪಿ ಸರಕಾರ ಕೆಲಸ ಮಾಡಲಿದೆ ಎಂದರು.

ಈ ಸಂದರ್ಭದಲ್ಲಿ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ದುರ್ಯೋಧನ ಐಹೊಳೆ, ಶಶಿಕಲಾ ಜೊಲ್ಲೆ, ಮಾಜಿ ಸಂಸದ ಅಣ್ಣಾಸಾಹೇಬ್ ಜೊಲ್ಲೆ, ಮಾಜಿ ಎಂ.ಎಲ್.ಸಿ. ಮಹಾಂತೇಶ ಕವಟಗಿಮಠ, ಬಿಜೆಪಿ ನಗರ ಅಧ್ಯಕ್ಷೆ ಗೀತಾ ಸುತಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ದೇಶದಲ್ಲಿ ಯಾವುದೇ ಉದ್ಯಮಿ ಮಾಡಲಾಗದ ಸಾಧನೆ ಮತ್ತು ಸಂಪಾದನೆಯನ್ನು ಯಂಗ್ ಇಂಡಿಯಾ ಟ್ರಸ್ಟ್‌ನ ಮೂಲಕ ಸೋನಿಯಾ ಮತ್ತು ರಾಹುಲ್ ಮಾಡಿದ್ದಾರೆ. ಪಾರದರ್ಶಕ ತನಿಖೆ ನಡೆದ ಕಾರಣ ನ್ಯಾಷನಲ್ ಹೆರಾಲ್ಡ್ ಹಗರಣ ಬೆಳಕಿಗೆ ಬಂದಿದೆ. ಇದೇ ಕಾಂಗ್ರೆಸ್ ಪಕ್ಷದ ಅಭಿವೃದ್ಧಿಯ ಮಾದರಿ. ರಾಜ್ಯದಲ್ಲಿಯೂ ಕಾಂಗ್ರೆಸ್ ಆಡಳಿತದಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದು, ಮುಂಬರುವ ಚುನಾವಣೆಯಲ್ಲಿ ಬದಲಾವಣೆ ನಿಶ್ಚಿತ.

**- ಬಿ.ವೈ ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಸಿದ್ದರಾಮಯ್ಯ ಸಿಎಂ ಕುರ್ಚಿ ಉಳಿಸಿಕೊಳ್ಳಲು ಬೆಲೆ ಏರಿಕೆ ಮಾಡಿ ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ. ಇನ್ನು ಡಿ.ಕೆ. ಶಿವಕುಮಾರ್ ಸಿಎಂ ಕುರ್ಚಿ ಕಿತ್ತುಕೊಳ್ಳಲು ಎಟಿಎಂ ಆಗಿ ದೆಹಲಿಗೆ ಸಾವಿರಾರು ಕೋಟಿ ಹಣ ಕಳುಹಿಸುತ್ತಿದ್ದಾರೆ. ಇವರ ಕಳ್ಳಾಟವನ್ನು ಕೇಳುವವರು ಯಾರು? ರಾಜ್ಯದಲ್ಲಿ ಗೃಹ ಸಚಿವರು ಯಾರು ಎಂಬುದೇ ಗೊತ್ತಿಲ್ಲ. ಯಾವ ಸಚಿವರು ಪ್ರತಿ ತಿಂಗಳು ಕುಂದು ಕೊರತೆ ಮಾಡುತ್ತಿಲ್ಲ.

**-ಆರ್. ಅಶೋಕ್** ವಿಪಕ್ಷ ನಾಯಕ

# ಸರಕಾರ ಸುಭದ್ರಕ್ಕೆ ಜಾತಿಗಣತಿ ಅಸ್ತ್ರ

← ಮೊದಲಪುಟದಿಂದ

ಹಾಗಾದರೆ ಇದನ್ನು ಸರಕಾರ ಅನುಷ್ಠಾನ ಮಾಡುವುದು ದಿಟವೇ ಎಂದು ಕೇಳಿದರೆ, ಅದು ಕೂಡ ಸಾಧ್ಯವಿಲ್ಲ ಎನ್ನುತ್ತದೆ ಅಧಿಕೃತ ಮೂಲಗಳು. ವಾಸ್ತವದಲ್ಲಿ ಜಾತಿಗಣತಿ ವರದಿಯಲ್ಲಿ ಮಾಡಿರುವ ಶಿಫಾರಸುಗಳನ್ನು ಅನುಷ್ಠಾನ ಮಾಡಿದರೆ ಈಗಿರುವ ಮೀಸಲು ಪ್ರಮಾಣ ಶೇ.85 ಮೀರುತ್ತದೆ. ಇದಕ್ಕೆ ಕೇಂದ್ರ ಸರಕಾರ ಒಪ್ಪಿಗೆ ನೀಡುವುದು ದೂರದ ಮಾತು. ಅದರಲ್ಲೂ ಇದನ್ನು ಸಂಸತ್‌ನ ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು ಸದ್ಯಕ್ಕೆ ಕನಸಿನ ಮಾತು. ಈ ನಿಟ್ಟಿನಲ್ಲಿ ಬಿಹಾರ, ರಾಜಸ್ಥಾನ, ಮಹಾರಾಷ್ಟ್ರ ಸೇರಿದಂತೆ ಅನೇಕ ರಾಜ್ಯಗಳು ವಿಫಲ ಯತ್ನ ನಡೆಸಿವೆ. ಅಷ್ಟಕ್ಕೂ ಈ ಎಲ್ಲ ಪ್ರಯತ್ನಗಳನ್ನು ದೇಶದ ಸರ್ವೋಚ್ಚ ನ್ಯಾಯಾಲಯವೇ ತಿರಸ್ಕರಿಸಿದೆ. ಹೀಗಾಗಿ ರಾಜ್ಯದ ಜಾತಿಗಣತಿ ವರದಿ ಹೋರಾಟ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎನ್ನುವುದು ಕುತೂಹಲ ಕೆರಳಿಸಿದೆ.

**ಚೆಂಡು ಕೇಂದ್ರದ ಅಂಗಳಕ್ಕೆ?:** ಸಾಮಾನ್ಯವಾಗಿ ಸರಕಾರ ನೇಮಿಸಿದ ಯಾವುದೇ ಆಯೋಗದ ವರದಿಯನ್ನು ಯಾವುದೇ ಸರಕಾರ ಯಾವ ವಿರೋಧವನ್ನೂ ಎದುರಿಸದೆ ಅನುಷ್ಠಾನ ಮಾಡಿರುವ ಉದಾಹರಣೆಗಳಿಲ್ಲ. ಅಷ್ಟೇ ಏಕೆ? ಹಿಂದುಳಿದ ವರ್ಗಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲು ಕಲ್ಪಿಸಲು 1972ರಲ್ಲಿ ರಚಿಸಿದ್ದ ಎಲ್.ಜಿ.ಹಾವನೂರು ವರದಿಯನ್ನು ಇದೇ ಪ್ರಬಲ ಸಮುದಾಯಗಳೇ ವಿರೋಧಿಸಿದ್ದವು. ಆನಂತರ ರಚನೆಯಾದ ಚಿನ್ನಪ್ಪ ರೆಡ್ಡಿ ಆಯೋಗ ಹಿಂದಿನ ವರದಿಗಳೂ ಸೇರಿದಂತೆ ಎಲ್ಲ ಮಾಹಿತಿಗಳನ್ನು ಅಧ್ಯಯನ ಮಾಡಿ ಪ್ರಬಲ ಜಾತಿಗಳನ್ನು ಸಮಾಧಾನ ಪಡಿಸಿದ್ದ ನಂತರ ವರದಿ ಜಾರಿಯಾಗಿತ್ತು. ಇದೇ ರೀತಿ ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯನ್ನು ಪರಿಶಿಷ್ಟರೇ ವಿರೋಧಿಸಿದ್ದರು. ಇದನ್ನು ಸರಿಪಡಿಸಲು ಸರಕಾರ ನ್ಯಾ.ನಾಗಮೋಹನ್ ದಾಸ್ ಅವರ ಸಮಿತಿ ರಚಿಸಿತ್ತು. ಆದಕ್ಕೂ ಕೆಲವು ಸಮಾಜದವರು ವಿರೋಧ ವ್ಯಕ್ತಪಡಿಸಿದ್ದರು. ಇದನ್ನು ಸರಿಪಡಿಸಲು ಸರಕಾರ ಒಂದಿಷ್ಟು ಕಾಲ ಸಮಿತಿ ಅವಧಿ ಮುಂದೂಡುವ ತಂತ್ರ ರೂಪಿಸಿದೆ.

ಹೀಗೆ ಜಾತಿಗಳ ವಿಚಾರ ಬಂದಾಗ ಯಾವುದೇ ಆಯೋಗದ ವರದಿಗಳು ವಿರೋಧದಿಂದ ಮುಕ್ತವಾಗಿಲ್ಲ. ಇನ್ನು ಯಾವುದೇ ಜಾತಿಗೂ ಸಂಬಂಧಿಸದ ದೇಶ, ಭಾಷೆ, ಅಭಿವೃದ್ಧಿಗೆ ಸಂಬಂಧಿಸಿದ ಡಾ.ಪಿ.ಬಿ.ಮಹಿಷಿ ವರದಿಗೇ ಅಪಾರ ವಿರೋಧ ವ್ಯಕ್ತವಾಗಿ ವರದಿಯ ಶಿಫಾರಸುಗಳನ್ನು (ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಮೀಸಲು) ಈತನಕ ಜಾರಿಗೊಳಿಸಲಾಗಿಲ್ಲ. ಹಾಗೆಯೇ ಪ್ರಾದೇಶಿಕ ಅಸಮಾನತೆ ತೊಡೆದು ಹಾಕುವ ಡಾ.ಡಿ.ಎಂ. ನಂಜುಂಡಪ್ಪ ವರದಿಗೂ ಈತನಕ ಮುಕ್ತಿ ಸಿಕ್ಕಿಲ್ಲ. ಆದ್ದರಿಂದ ಈಗಿನ ಜಾತಿಗಣತಿ ವರದಿಯಲ್ಲಿ ಲಿಂಗಾಯತರು 66.35 ಲಕ್ಷ, ವೀರಶೈವರು 10.49 ಲಕ್ಷ, ಒಕ್ಕಲಿಗರು 61.58 ಎನ್ನುವ ಮಾಹಿತಿ ಸೋರಿಕೆಯಾಗಿದ್ದು, ಈ ಪ್ರಮಾಣ ತೀರಾ ಕಡಿಮೆಯಾಗಿದೆ. ತಮ್ಮ ಜನಾಂಗದವರು ಹೆಚ್ಚಾಗಿದ್ದಾರೆ ಎಂದು ಆ ಸಮಾಜದ ಸಚಿವರು, ಶಾಸಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಸರಕಾರ ಸರಿಪಡಿಸಿ ಕೇಂದ್ರ ಸರಕಾರದ ಅನುಮೋದನೆಗೆ ಸಲ್ಲಿಸುವ ಸಾಧ್ಯತೆ ಹೆಚ್ಚಿದೆ. ಆದರೆ ಇದಕ್ಕೆ ಒಂದು ಸಚಿವ ಸಂಪುಟದ ಉಪಸಮಿತಿ ಅಥವಾ ಅಧಿಕಾರಿಗಳ ಸಮಿತಿ ಅಥವಾ ತಜ್ಞರ ಸಮಿತಿ ರಚಿಸಿ ಐದಾರು ತಿಂಗಳ ಸಮಯ ಪಡೆದು ಅಂತಿಮಗೊಳಿಸುವ ಸಾಧ್ಯತೆಯೂ ಇದೆ ಎಂದು ಹಿಂದುಳಿದ ವರ್ಗಗಳ ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

### ಮಿತಿ ಮೀರುವ ಹಗ್ಗಜಗ್ಗಾಟ

**ಸದ್ಯ ಚಾಲ್ತಿಯಲ್ಲಿರುವಂತೆ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪಂಗಡಕ್ಕೆ ಶೇ.24, ಹಿಂದುಳಿದ ವರ್ಗಗಳಿಗೆ ಶೇ.32 ಹಾಗೂ ಮೀಸಲಾತಿ ವ್ಯಾಪ್ತಿಯಲ್ಲಿ ಇಲ್ಲದ ಬಡವರು, ಹಿಂದುಳಿದವರಿಗೆ ಶೇ.10ರಷ್ಟು ಮೀಸಲು ಸೌಲಭ್ಯವಿದೆ. ಆದರೆ ಕಾಂತರಾಜು ವರದಿ ಶಿಫಾರಸು ಪ್ರಕಾರ, ಹಿಂದುಳಿದ ವರ್ಗದ ಮೀಸಲನ್ನು ಶೇ.32ರಿಂದ 51ಕ್ಕೆ ಏರಿಸಬೇಕಾಗುತ್ತದೆ. ಇದನ್ನು ರಾಜ್ಯ ಸರಕಾರ ಅನುಮೋದಿಸಿದರೆ ಒಟ್ಟಾರೆ ಮೀಸಲು ಪ್ರಮಾಣ ಶೇ.85ಕ್ಕೆ ಏರುತ್ತದೆ. ಇದಕ್ಕೆ ಕೇಂದ್ರ ಸರಕಾರ, ಸಂಸತ್ ಅನುಮೋದನೆ ಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಸಾಧುವಲ್ಲ, ಸಾಧ್ಯವೂ ಇಲ್ಲ ಎನ್ನುವುದು ಸರಕಾರಕ್ಕೆ ಹಾಗೂ ಪ್ರತಿಪಕ್ಷಗಳಿಗೆ ಗೊತ್ತಿದೆ. ಆದರೂ ಸರಕಾರ ಪಟ್ಟು ಬಿಡುತ್ತಿಲ್ಲ. ಹೀಗಾಗಿ ಅಹಿಂದಗೆ ಅನುಕೂಲವಾದ ಜಾತಿಗಣತಿಗೆ ಬಿಜೆಪಿ ಮತ್ತು ಜೆಡಿಎಸ್ ವಿರೋಧಿಸುತ್ತಿದೆ. ಕಾಂಗ್ರೆಸ್ ಪರವಾಗಿದೆ ಎನ್ನುವ ಸಂದೇಶ ರವಾನೆಗೆ ಎಲ್ಲ ಸಿದ್ಧತೆಗಳು ನಡೆಯುತ್ತಿವೆ. ಹೀಗಾಗಿ ಈ ವರದಿ ಜಾರಿಯಾಗುವುದಕ್ಕಿಂತ ರಾಜಕೀಯ ದಾಳವಾಗುವ ಸಾಧ್ಯತೆಯೇ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.**

# ಜಾತಿ ಗಣತಿ ಪರ ವಿರೋಧ ಚರ್ಚೆ

**ಹುಬ್ಬಳ್ಳಿ:** ಜಾತಿ ಗಣತಿ ಪರ ವಿರೋಧ ಚರ್ಚೆ ಸ್ವಾಭಾವಿಕ. ಯಾವುದೇ ವರದಿ ಬಂದಾಗ ನೂರಕ್ಕೆ ನೂರು ಒಪ್ಪಲ್ಲ. ಇಂದು ವಿಶೇಷ ಕ್ಯಾಬಿನೆಟ್ ಇದೆ. ತರಾತುರಿಯಲ್ಲಿ ಸರಕಾರ ಮಾಡಲ್ಲ ಸಾಧಕ ಬಾಧಕ ಚರ್ಚೆ ಮಾಡಿಯೇ ಸರಕಾರ ನಿರ್ಧಾರ ಕೈಗೊಳ್ಳುತ್ತದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದರ ಹಿಂದೆ ಯಾವುದೇ ರಾಜಕೀಯ ಲಾಭ ನಷ್ಟವಾಗಲ್ಲ. ಕೆಲವರು ಬಹಿರಂಗವಾಗಿ, ಕೆಲವರು ಗುಪ್ತವಾಗಿ ಸಭೆ ನಡೆಸುತ್ತಿದ್ದಾರೆ. ಈ ಬಗ್ಗೆ ಚರ್ಚೆ ಮಾಡಲು ವಿಶೇಷ ಸದನ ಕರೆದ್ರೆ ಒಳ್ಳೆಯದು. ಈ ಬಗ್ಗೆ ಬಹಿರಂಗ ಚರ್ಚೆಯಾಗೋದು ಒಳ್ಳೆಯದು ಎಂದರು.

# ಶಾಲಾ ಸೇರ್ಪಡೆ ವಯೋಮಿತಿ ಸಡಿಲ

← ಮೊದಲಪುಟದಿಂದ

ಶೇ.92ರಷ್ಟು ಮಕ್ಕಳು ಈಗಾಗಲೇ ಸಿಇಟಿ ಪರೀಕ್ಷೆಗೆ ತಯಾರಿ ನಡೆಸಿದ್ದಾರೆ. ಎರಡನೇ ಮತ್ತು ಮೂರನೇ ಪರೀಕ್ಷೆಯ ಮೂಲಕ ಉತ್ತೀರ್ಣರಾಗಲು ಅವಕಾಶವಿದೆ ಎಂದು ಸಚಿವರು ತಿಳಿಸಿದ್ದಾರೆ.

**ಆರು ವರ್ಷ ಕಡ್ಡಾಯಗೊಳಿಸಿ ವಿವಾದಕ್ಕೆ ಸಿಲುಕಿದ್ದ ಸರಕಾರ:** ಒಂದನೇ ತರಗತಿಯ ಪ್ರವೇಶ ಪಡೆಯಲು ಮಕ್ಕಳಿಗೆ 6 ವರ್ಷ ಆಗಿರಬೇಕು ಎಂದು ಕರ್ನಾಟಕ ಶಿಕ್ಷಣ ಇಲಾಖೆ 2022ರ ಜುಲೈನಲ್ಲಿ ಆದೇಶ ಹೊರಡಿಸಿತ್ತು. ಅದರಂತೆ 2023-24ನೇ ಸಾಲಿನಲ್ಲಿ ಹೊಸ ನಿಯಮ ಜಾರಿಗೆ ಬರಬೇಕಿತ್ತು. ಆದರೆ ಪೋಷಕರಿಂದ ವ್ಯಾಪಕ ಆಕ್ಷೇಪ ವ್ಯಕ್ತವಾದ ಕಾರಣ, ಹೊಸ ನಿಯಮದ ಜಾರಿಯನ್ನು ಸರಕಾರ ಮುಂದೂಡಿತ್ತು. ನಂತರ ನಿಯಮದಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಿ, 2025-26ನೇ ಸಾಲಿನಿಂದ ಜಾರಿಗೆ ಬರಲಿದೆ ಎಂದು ಪ್ರಕಟಿಸಿತ್ತು. ಅದರಂತೆ ಈ ಶೈಕ್ಷಣಿಕ ವರ್ಷದಿಂದ 6 ವರ್ಷ ಕಡ್ಡಾಯವಾಗಿದೆ. ಆದರೆ, ಪೋಷಕರಿಂದ ಇದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾದ ಕಾರಣ ಇದೀಗ ಸರಕಾರ ಪಟ್ಟು ಸಡಿಲಿಸಿದೆ.

### ನವಜಾತ ಶಿಶು ಮೃತದೇಹ ಪ್ರಕರಣ

# ತಾಯಿ ಪತ್ತೆ

**ಮಲ್ಪೆ:** ಮಲ್ಪೆಯ ಮಸೀದಿಯ ಶೌಚಾಲಯ ಒಂದರಲ್ಲಿ ನವಜಾತ ಶಿಶುವಿನ ಮೃತದೇಹ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಗುವಿನ ತಾಯಿಯನ್ನು ಪತ್ತೆ ಹಚ್ಚಲಾಗಿದ್ದು, ಆಕೆಯ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ. ಅವರು ತಿಳಿಸಿದ್ದಾರೆ. ಏ. 14ರಂದು ನವಜಾತ ಶಿಶುವಿನ ಮೃತದೇಹ ಪತ್ತೆಯಾಗಿತ್ತು. ಶೌಚಾಲಯದ ಒಳಗಿನ ಗೋಡೆಯ ಮೇಲೆ ರಕ್ತದ ಕಲೆಗಳು ಇರುವುದು ಕಂಡು ಬಂದಿತ್ತು. ಈ ಬಗ್ಗೆ ಮಸೀದಿಯ ವತಿಯಿಂದ ನೀಡಿದ ದೂರಿನಂತೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


ಕರ್ನಾಟಕ ಸರ್ಕಾರ
**ರಾಯಚೂರು ಮಹಾನಗರ ಪಾಲಿಕೆ**
Website:-www.raichurcity.gov.in E-mail:itstaff_ulb_raichura@yahoo.com
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ./ಆ.ಶಾ./192/2024-25 ದಿನಾಂಕ: 15-04-2025.

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).**

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity.mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

**1) ಅನುದಾನದ ವಿವರ:** ಎಸ್.ಬಿ.ಎಂ. 1.0 ಅನುದಾನ. **ಕಾಮಗಾರಿಗಳ ವಿವರ:** Purchasing of Proposed 50 TPD Trommel Machinery for SWM Site at Raichur City **Estimate Amount Rs. 117,00,000/-** ಇಂಡೆಂಟ್ ನಂಬರ: DMA/2024-25/PM/ WORK_INDENT35991/Call-2

ಸಹಿ/-ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ ರಾಯಚೂರು.
DIP/RCR/26/KSMCA/26/2025-26

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ಕಾರ್ಯಪಾಲಕ ಇಂಜಿನೀಯರ, ಕ.ನೀ.ನಿ.ನಿ.ರವರ ಕಛೇರಿ, ಕೆ.ಪಿ.ಸಿ. ವಿಭಾಗ ನಂ.2 ಭಾಲ್ಕಿ-585328**
NO: EE/KNNL/KPCD-2/Bhalki/PB/TND/2025-26/41 Date:11-04-2025

**ಕೆಪಿಪಿ ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಕರೆ-3**

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ-2 ಭಾಲ್ಕಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪ್ರೊಕ್ಯೂರಮೆಂಟ್‌ನಲ್ಲಿ ಶೇಕಡವಾರು ದ್ವಿ-ಲಕೋಟೆಯಲ್ಲಿ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ. ಈ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 1.15,00,000/- (ನೂರಹದಿನೈದು ಲಕ್ಷದ ವರೆಗೆ ಮಾತ್ರ ಇದ್ದು), ಇ.ಎಂ.ಡಿ. ಮೊತ್ತವು ಇ-ಪೋರ್ಟಲ್ ನಲ್ಲಿರುವಂತೆ. 1) ಕೆಪಿಪಿ ಪ್ರೊಕ್ಯೂರಮೆಂಟ್‌ನಲ್ಲಿ kppp.Karnataka.gov.in ಖಾಲಿ ಟೆಂಡರ ಫಾರ್ಮಗೆ work Indent no's are **2474-Call/3,** ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ-ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ ದಿನಾಂಕ: 15-04-2025 ರಿಂದ 29-04-2025ರ ಸಾ:04.30 ಘಂಟೆಯವರೆಗೆ.2) ದಿನಾಂಕ: 02-05-2025 ರಂದು ಸಾ:05.00 ಘಂಟೆಯ ನಂತರ ತೆರೆಯಲಾಗುವುದು. (ತಾಂತ್ರಿಕ ಬಿಡ್ಡು), ದಿನಾಂಕ: 04-05-2025 ರಂದು ಸಾ: 05:00 ಘಂಟೆಯ ನಂತರ ತೆರೆಯಲಾಗುವುದು. (ಆರ್ಥಿಕ ಬಿಡ್ಡು) ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ:-08484-262257

ಸಹಿ/- ಕಾರ್ಯಪಾಲಕ ಅಭಿಯಂತರರು
ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.2, ಭಾಲ್ಕಿ
ವಾ.ಸಾ.ಸಂ.ಇ/ಬೀದರ/17/ಕೆ.ಎಸ್.ಎಂ.ಸಿ.&ಎ/2025-26

**ನಗರಸಭಾ ಕಾರ್ಯಾಲಯ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ**
Email:itstaff_ulb_gouribidanur@yahoo.co.in, Website:www.gowribidanurtown.gov.in
ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್-1/2025-26 ದಿನಾಂಕ:09.04.2025

**ಟೆಂಡರ್ ಪ್ರಕಟಣೆ (ನಾಲ್ಕನೇ ಕರೆ)**

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅರ್ಹ ದರ್ಜೆಯ ಸಂಘ ಸಂಸ್ಥೆಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 03.05.2025ರ ಸಂಜೆ 5.15 ಗಂಟೆಯವರೆಗೆ.** (2) ಟೆಂಡರ್ ತೆರೆಯುವ **ದಿನಾಂಕ: 05.05.2025ರ ಸಂಜೆ 5.20ಗಂಟೆಗೆ.**

| ಕ್ರ ಸಂ | ಕಾಮಗಾರಿ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| | **ನಗರಸಭಾ ನಿಧಿ** | |
| 1 | ಗೌರಿಬಿದನೂರು ನಗರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡುವುದು. | 37.50 |

ಸಹಿ/- ಪೌರಾಯುಕ್ತರು ನಗರಸಭೆ, ಗೌರಿಬಿದನೂರು
ಸಹಿ/- ಅಧ್ಯಕ್ಷರು ನಗರಸಭೆ, ಗೌರಿಬಿದನೂರು
ಸಹಿ/- ಉಪಾಧ್ಯಕ್ಷರು ನಗರಸಭೆ, ಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:14/ಕೆಎಸ್‌ಎಂಸಿಎ/2025-26

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-07/148/2025-26 ದಿನಾಂಕ: 16.04.2025

**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಹಂಕ ಪಿನಾಕಿನಿ ಭವನದ ಆವರಣದಲ್ಲಿರುವ ಬಿಡಬ್ಲ್ಯೂಎಸ್‌ಎಸ್‌ಬಿ ಪಂಪಿಂಗ್ ಸ್ಟೇಷನ್‌ನಿಂದ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ನೀರು ಸರಬರಾಜು ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ. (2ನೇ ಕರೆ)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02.05.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು
DIPR/CP/235/Zen/2025-26

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ**
ಕ್ರಸಂ: ಪಿಬಿ/5054ಜಿಮುರ/4059/ಅಧಿಸೂಚನೆ: 2025-26/11 ದಿನಾಂಕ: 03.04.2025

**ಇ-ಟೆಂಡರ್ ಅಧಿಸೂಚನೆ IFT-KW-3/4 ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**
**(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ದತಿಯಲ್ಲಿ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ದತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. **ಒಟ್ಟು 4 ಕಾಮಗಾರಿಗಳು**

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ **ದಿನಾಂಕ: 21-04-2025 (16.00 ಗಂಟೆಗೆ)** (2) ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 22-04-2025 (16.00 ಗಂಟೆವರೆಗೆ)** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23-04-2025 (16.30 ಗಂಟೆವರೆಗೆ)** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 24-04-2025 (16.00 ಗಂಟೆವರೆಗೆ)**

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/KSMCA/35/25-26 dt.16.04.2025

**ಕೃಷಿ ಇಲಾಖೆ**
ಶೇಷಾದ್ರಿ ರಸ್ತೆ, ಬೆಂಗಳೂರು - 560 001.
ನಂ: JDA(E,T&e-Gov)/e-Proc/AIC/KSDA/Server with OS/01/2024-25 ದಿನಾಂಕ: 28.03.2025

**ಟೆಂಡರ್ ಪ್ರಕಟಣೆ**

ಕೃಷಿ ಇಲಾಖೆಯಲ್ಲಿನ ಕೃಷಿ ಮಾಹಿತಿ ಕೇಂದ್ರಕ್ಕೆ ಅವಶ್ಯವಿರುವ Server with OS ಘಟಕ ಸಂಗ್ರಹಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಸಕ್ತ ಸಂಸ್ಥೆಗಳಿಂದ (ಬಿಡ್‌ದಾರರಿಂದ) ಟೆಂಡರನ್ನು ಆಹ್ವಾನಿಸಿದೆ.
ಬಿಡ್‌ದಾರರಿಗೆ ಸೂಚನೆಗಳು, ಅರ್ಹತೆಯ ಮಾನದಂಡಗಳು, ಮೌಲ್ಯಮಾಪನದ ಮಾನದಂಡಗಳು ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುವ ಬಿಡ್ ಡಾಕ್ಯೂಮೆಂಟ್‌ನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು https://kppp.karnataka.gov.in ಮತ್ತು ಟೆಂಡರ್ ಡಾಕ್ಯೂಮೆಂಟ್ ನ ಕರಾರುಗಳಿಗೆ ಅನುಗುಣವಾಗಿ ಟೆಂಡರ್‌ನ್ನು ಸಲ್ಲಿಸತಕ್ಕದ್ದು.
ಪ್ರಮುಖ ಅಂಶಗಳು: ಬಿಡ್ ಪ್ರಾರಂಭದ ದಿನಾಂಕ: **29.03.2025.** ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: **27.04.2025.** ಬಿಡ್ಡನ್ನು ತೆರೆಯುವ ದಿನಾಂಕ: **02.05.2025.** **ಇ.ಎಂ.ಡಿ ರೂ. 30,000/-** (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) **ಬಿಡ್ ಭದ್ರತಾ ಮೌಲ್ಯ: ರೂ.75,000/-** (ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ).
**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ಶ್ರೀ ಮಾರ್ಥಂಡ, ಸಹಾಯಕ ಕೃಷಿ ನಿರ್ದೇಶಕರು (ಕೃಷಿ ವಾರ್ತೆ) ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560 001. ದೂರವಾಣಿ: +91-80-22074138. ಇ-ಮೇಲ್ ವಿಳಾಸ: digiagrigok@gmail.com
**ಕೃಷಿ ನಿರ್ದೇಶಕರು ಈ ಆಹ್ವಾನವನ್ನು ಯಾವುದೇ ಹೊಣೆಯನ್ನು ಅಥವಾ ಬಾಧ್ಯತೆಯನ್ನು ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ರದ್ದು ಮಾಡುವ ಹಾಗೂ / ಆಥವಾ ಈ ಆಹ್ವಾನಕ್ಕೆ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿ ಇಲ್ಲದೆ ಹೊಸ ಪ್ರಸ್ತಾವನೆಗಳನ್ನು ಆಹ್ವಾನಿಸುವ ಹಕ್ಕನ್ನು ಹೊಂದಿರುತ್ತಾರೆಂದು ತಿಳಿಯತಕ್ಕದ್ದು.

ಸಹಿ/-
ಕೃಷಿ ನಿರ್ದೇಶಕರು ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು
ವಾಸಾಸಂಇ/ವಾ.ಪ್ರ/239/ಎಂಎಎ/2025-26

**ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ,**
ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 02/2025-26 ದಿನಾಂಕ:15.04.2025

**ಟೆಂಡರ್ ಪ್ರಕಟಣೆ (KPP PORTAL ಮುಖಾಂತರ)**

ಶಿವಮೊಗ್ಗ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಏಕ/ದ್ವಿ - ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. KPP PORTAL ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.
1) ಗುತ್ತಿಗೆದಾರರ ದರ್ಜೆ:ಕ್ರಮ ಸಂಖ್ಯೆ 1ರ ಕಾಮಗಾರಿಗೆ- Class 4 and above,ಉಳಿದ ಕಾಮಗಾರಿಗಳಿಗೆ-Class 3 and above 2) ಕಾಮಗಾರಿಗಳ ಕ್ರಮ ಸಂಖ್ಯೆ 1 ರಿಂದ 03 ರವರೆಗೆ KPP PORTALಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:22.04.2025 (ಸಂಜೆ:4.00 ಗಂಟೆಗೆ) (3) ಕಾಮಗಾರಿಗಳ ಕ್ರಮ ಸಂಖ್ಯೆ 1 ರಿಂದ 03 ರವರೆಗೆ KPP PORTAL ಮೂಲಕ ಟೆಂಡರ್ ತೆರೆಯುವ ದಿನಾಂಕ:23.04.2025 (ಸಂಜೆ 4.30 ಗಂಟೆಗೆ) 4) ಕಾಮಗಾರಿಗಳ ಕ್ರಮ ಸಂಖ್ಯೆ 2 ರಿಂದ 03 ರವರೆಗೆ KPP PORTAL ಮೂಲಕ ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:25.04.2025 (ಸಂಜೆ 4.30 ಗಂಟೆಗೆ)
**ಕ್ರ.ಸಂ. 01. ಇಂಡೆಂಟ್ ಸಂಖ್ಯೆ:** 38687 **ಕಾಮಗಾರಿಗಳ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.02ರ ಎಲ್.ಬಿ.ಎಸ್ ನಗರ 5 ನೇ ಅಡ್ಡ ರಸ್ತೆಯಿಂದ ಶ್ರೀ ರಾಮದಾಸ್ ರವರ ಮನೆಯ ಎದುರಿನ ವರೆಗೆ ಮಳೆ ನೀರು ಚರಂಡಿ ಹಾಗೂ ಸಿ.ಸಿ ಡೆಕ್ ನಿರ್ಮಾಣ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 19.65 **ಮೀಸಲಾತಿ:** ಇತರೆ **ಅನುದಾನ:** ಮಹಾನಗರ ಪಾಲಿಕೆ ಸಾಮಾನ್ಯ ನಿಧಿ
**ಕ್ರ.ಸಂ. 02. ಇಂಡೆಂಟ್ ಸಂಖ್ಯೆ:** 38814 **ಕಾಮಗಾರಿಗಳ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.06ರ ಕಾಶಿಪುರ ಕೆ.ಎಸ್.ಆರ್.ಟಿ.ಸಿ ಲೇಔಟ್ ನಲ್ಲಿ ಹೊಸದಾಗಿ ಒಳಚರಂಡಿ ಕೊಳಾಯಿ ಮಾರ್ಗವನ್ನು ಅಳವಡಿಸುವ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 33.50 **ಮೀಸಲಾತಿ:** ಇತರೆ **ಅನುದಾನ:** 2021-22 ನೇ ಸಾಲಿನ 15 ನೇ ಹಣಕಾಸು ಆಯೋಗದ MPC(Million Plus Challenge) ಉಳಿತಾಯ ಅನುದಾನ ಮತ್ತು ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಅನುದಾನ
**ಕ್ರ.ಸಂ. 03. ಇಂಡೆಂಟ್ ಸಂಖ್ಯೆ:** 37968 **ಕಾಮಗಾರಿಗಳ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ 30ರ ಸೀಗೆಹಟ್ಟಿ, ಕುಂಬಾರ ಬೀದಿಯಲ್ಲಿ ಯು.ಜಿ.ಡಿ ದುರಸ್ತಿ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 25.10 **ಮೀಸಲಾತಿ:** ಇತರೆ **ಅನುದಾನ:** 2021-22 ನೇ ಸಾಲಿನ 15 ನೇ ಹಣಕಾಸು ಆಯೋಗದ MPC(Million Plus Challenge) ಉಳಿತಾಯ ಅನುದಾನ ಮತ್ತು ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಅನುದಾನ
**ಸೂಚನೆ:** ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
**ಸಹಿ/- ಕಾರ್ಯಪಾಲಕ ಅಭಿಯಂತರರು ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ**
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/74/04/72

ಕರ್ನಾಟಕ ಸರ್ಕಾರ
**ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ**
**ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.**
**ಎನ್.ಎ.ಪಿ. ಕ್ವಾಟ್ರಾಸ್ ಹಿಂಭಾಗ,**
**ಹಿಮವದ್ ಗೋಪಾಲಸ್ವಾಮಿ ಬಡಾವಣೆ, ಗುಂಡ್ಲುಪೇಟೆ ಟೌನ್**
Email: bcmgundlupet@gmail.com Ph: 08229-297091
ಸಂ:ಹಿಂವಕಇ/ಟೆಂಡರ್/ಸಿಆರ್-01/2025-26 ದಿನಾಂಕ:15.04.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಗುಂಡ್ಲುಪೇಟೆ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಆಡಳಿತ ಹಿತದೃಷ್ಟಿಯಿಂದ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸರಬರಾಜುದಾರರು ದಿನಾಂಕ: 15.04.2025 ರಿಂದ ದಿನಾಂಕ: 30.04.2025 ರ ಸಂಜೆ 5.30 ಗಂಟೆ ಒಳಗೆ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಎನ್.ಎ.ಪಿ. ಕ್ವಾಟ್ರಸ್ ಹಿಂಭಾಗ, ಹಿಮವದ್ ಗೋಪಾಲಸ್ವಾಮಿ ಬಡಾವಣೆ, ಡಿ.ದೇವರಾಜು ಅರಸು ಭವನ, ಗುಂಡ್ಲುಪೇಟೆ ಟೌನ್, ಇಲ್ಲಿ ಟೆಂಡರ್ ಅರ್ಜಿ ಶುಲ್ಕ ಪಾವತಿಸಿ ಪಡೆದುಕೊಳ್ಳಲು ತಿಳಿಸಿದೆ.
ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08229-297091 ಸಂಪರ್ಕಿಸಲು ಈ ಮೂಲಕ ತಿಳಿಸಿದೆ.

ಸಹಿ/-
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಗುಂಡ್ಲುಪೇಟೆ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.
ಸಂ.:/ವಾಸಾಸಂಇ/ಚಾನಗರ/19/2025-26

**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ**
"ಜ್ಞಾನ ಸಂಗಮ", ಬೆಳಗಾವಿ - 590018, ಕರ್ನಾಟಕ, ಭಾರತ
ಸಂಖ್ಯೆ: VTU/BGM/SAP/CW1/T-701,702,703/2025-26/300 ದಿನಾಂಕ: 16-04-2025

**ಟೆಂಡರ್ ಪ್ರಕಟಣೆ**

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

| ಕ್ರ ಸಂ | ಕೆಲಸದ ಹೆಸರು | ಟೆಂಡರಿಗಿಟ್ಟ ಮೊತ್ತ | ಮುಂಗಡ ಠೇವಣಿ |
|---|---|---|---|
| 1 | **T-701:** Tender for Printing and supply of Main Answer Booklets (UG) for forth coming examinations to VTU Examination Section, Belagavi. | Rs. 3,87,50,000/- | Rs. 5,81,500/- |
| 2 | **T-702:** Tender for Establishment of Center of Excellence in Artificial Intelligence Based Skilling and Assessment and Infrastructure for Digital Class Rooms and Digital Library at VTU Regional Centre, Kalaburagi under Kalyan Karnataka Regional Development Board (KKRDB) funds as Turnkey Project. | Rs. 11,95,00,000/- | Rs. 17,92,500/- |
| 3 | **T-703:** Tender for Procurement of Desktop Computers to Various Section / Centres of VTU Belagavi, Mysuru, Muddenahalli and Kalaburgi. | Rs. 3,44,85,500/- | Rs. 5,17,500/- |

ಟೆಂಡರ್ ಬಿಡ್ ಪೂರ್ವಭಾವಿ ಸಭೆ ದಿನಾಂಕ: **23-04-2025 ರಂದು ಬೆಳಿಗ್ಗೆ 11.00 ಗಂಟೆಗೆ ಆನ್‌ಲೈನ್ ಮೂಲಕ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15-05-2025 ರಂದು ಮಧ್ಯಾಹ್ನ 2.30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **16-05-2025 ರಂದು ಸಂಜೆ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ಸಹಿ/-
ಕುಲಸಚಿವರು
ವಾಸಾಸಂಇ/ಬೆಳಗಾವಿ/94/ಅಡ್ವರ್ಟೋರ್/2025-26

## ಟ್ವೀಟೂ-ಖಾರಾ

**ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಜಾತಿಗಣತಿಯ ಹೆಸರಿನಲ್ಲಿ ಗೊಂದಲಗಳನ್ನು ಸೃಷ್ಟಿಸಿ ಸಮಾಜವನ್ನು ಛಿದ್ರ ಮಾಡಲು ಹೊರಟಿರುವ ನಿಮಗೆ ಪ್ರಧಾನಿಗಳನ್ನು ಕುರಿತು ಟೀಕಿಸುವ ಯಾವುದೇ ನೈತಿಕ ಹಕ್ಕು ಇಲ್ಲ. ಕರ್ನಾಟಕದಲ್ಲಿ ಮುಸ್ಲಿಂ ಮೀಸಲಾತಿಯ ಹೆಸರಿನಲ್ಲಿ ಪರಿಶಿಷ್ಟರೂ ಸೇರಿದಂತೆ ಇತರ ಶೋಷಿತರು ಹಾಗೂ ಬಡವರ ಹಕ್ಕು ಕಸಿಯಲಾಗುತ್ತಿದೆ ಎಂದು ಪ್ರಧಾನಿಗಳು ಹೇಳಿದ್ದಾರೆ. ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟರಿಗೆ ಶೇ15 ರಿಂದ 17 ಕ್ಕೆ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ3 ರಿಂದ 7 ಕ್ಕೆ ಹೆಚ್ಚಿಸಿದ್ದು ನಮ್ಮ ಬಿಜೆಪಿ ಸರಕಾರದ ಆಡಳಿತ ಅವಧಿಯಲ್ಲಿಯೇ ಹೊರತು, ನಿಮ್ಮ ಆಡಳಿತ ಅವಧಿಯಲ್ಲಲ್ಲ ಎನ್ನುವುದು ನಿಮಗೆ ನೆನಪಿರಲಿ. ಜಾತಿ- ಜಾತಿಗಳ ನಡುವೆ, ಧರ್ಮ- ಧರ್ಮಗಳ ನಡುವೆ ಬಿರುಕು ಮೂಡಿಸುವ ಕೆಲಸವನ್ನು ಇನ್ನಾದರೂ ಕೈಬಿಡಿ.

**ಭೀಮಾ ಪ್ರಿಯಾ**

ನೀವು ಬ್ರಾಹ್ಮಣರ ತುಷ್ಟೀಕರಣ ಮಾಡಿಲ್ವಾ? ಅವರು ಹಾಗೇನೇ ಮುಸ್ಲಿಂರ ತುಷ್ಟೀಕರಣ ಮಾಡುತ್ತಿದ್ದಾರೆ. ಆದ್ರೆ ವ್ಯತ್ಯಾಸ ಇದೆ ನೀವು ಬ್ರಾಹ್ಮಣರ ಸಂಪೂರ್ಣ ತುಷ್ಟೀಕರಣ ಮಾಡುತ್ತಿದ್ದೀರಿ, ಅವರು ಸಾಧ್ಯವಾದಷ್ಟು ಮುಸ್ಲಿಂ ಜೊತೆ ಪರಿಶಿಷ್ಟ, ಹಿಂದುಳಿದ ವರ್ಗಗಳನ್ನು ಸಹ ತುಷ್ಟೀಕರಿಸುತ್ತಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
17.04.2025



ಗುರುವಾರದ ಅತಿಥಿ
ಶ್ರೀಮತಿ ರೂಪ ರಾವ್
ವಿಷಯ
ವಿಚ್ಛೇದನಗಳೇಕೆ ಹೆಚ್ಚುತ್ತಿವೆ ?

vishwavani.news

## ಸಮಾಚಾರ ಸಣ್ಣದಲ್ಲ

### ಸಚಿವೆ ಕಾರಿಗೆ ಡಿಕ್ಕಿ ಆರೋಪಿ ಬಂಧನ

**ಬೆಳಗಾವಿ:** ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕಾರು ಅಪಘಾತಕ್ಕೆ ಕಾರಣವಾಗಿದ್ದ ಚಾಲಕನ್ನು ಬಂಧಿಸಿ ಲಾರಿಯನ್ನು ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಕಳೆದ ಜನವರಿ 14 ರಂದು ಕಿತ್ತೂರು ಬಳಿ ಅಂಬಡಗಟ್ಟಿ ಕ್ರಾಸ್ ನಲ್ಲಿ ಸಂಭವಿಸಿದ್ದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ರಕ್ ಚಾಲಕ ಮಧುಕರ ಕೊಂಡಿ ರಾಮ ಸೋಮವಂಶಿ ಎಂಬಾತನ್ನು ಬಂಧಿಸಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಪ್ರಕರಣದ ಕುರಿತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರು ಚಾಲಕ ಕಿತ್ತೂರು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಫೋನ್ ಕರೆ ಹಾಗೂ ಸಿಸಿಟಿವಿಯಲ್ಲಿ ದಾಖಲಾದ ದೃಶ್ಯ ಸೇರಿದಂತೆ ಹಲವು ಸಾಕ್ಷಿಗಳ ಆಧಾರದ ಮೇಲೆ ಮಹಾರಾಷ್ಟ್ರ ದ ತಕ್ರಾರವಾಡಿ ಗ್ರಾಮದ ಚಾಲಕ ಹಾಗೂ ಲಾರಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೆದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸರಕಾರದಿಂದ ತಪ್ಪು ತಪ್ಪಾಗಿ ಜಾತಿ ಗಣತಿ

**ಶಿರಸಿ:** ಸಮರ್ಪಕ ಗಣತಿ ಮಾಡದೇ ಮನಸ್ಸಿಗೆ ಬಂದಂತೆ ರಾಜ್ಯ ಕಾಂಗ್ರೆಸ್ ಸರಕಾರ ತಪ್ಪು-ತಪ್ಪಾಗಿ ಜಾತಿ ಗಣತಿ ಮಾಡಿಸಿದೆ. ಜಾತಿ ಗಣತಿ ಮೂಲಕ ಸಿಎಂ ಅಧಿಕಾರದ ಕುರ್ಚಿ ಭದ್ರ ಪಡಿಸಲು ಹೊರಟಿದ್ದಾರೆ. ನೀರು ಕದಡಿ ಮೀನು ಹಿಡಿಯುವ ಕೆಲಸ ಸಿಎಂ ಮಾಡುತ್ತಿದ್ದಾರೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಕ್ಷೇಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಜಾತಿ-ಜಾತಿಗಳ ಮಧ್ಯೆ ವಿಷ ಬೀಜ ಬಿತ್ತಿದ್ದಾರೆ. ಇದು ದುರದೃಷ್ಟಕರವಾದ ಕಾಂಗ್ರೆಸ್ ಸರಕಾರದಲ್ಲಿನ ಮತ್ತೊಂದು ನಿರ್ಧಾರ. ತಪ್ಪು ಅಂಕಿ-ಸಂಖ್ಯೆ ಕೊಡುತ್ತ ಜನರಿಗೆ ಗೊಂದಲ ಸೃಷ್ಟಿಸಿಕೊಂಡಿದ್ದಾರೆ. ಆಗುವುದಿದ್ದರೆ ವೈಜ್ಞಾನಿಕ ಗಣತಿ ಆಗಲಿ ಎಂದ ಅವರು ಕಾಂಗ್ರೆಸ್ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದರು. ಸಿದ್ದರಾಮಯ್ಯ ಅವರು ನಿವೃತ್ತಿಯ ವಯಸ್ಸಿನಲ್ಲಿದ್ದಾರೆ. ಅವರು ಇನ್ನಾದರೂ ಎಚ್ಚೆತ್ತುಕೊಂಡು ಸಮಾಜ ಘಾತಕ ಕೆಲಸ ಮಾಡಬಾರದು. ಜತೆಗೆ ಗ್ಯಾರಂಟಿ ಮಾಡಿ ಬೆಲೆ ಏರಿಕೆ ಮಾಡುತ್ತಿದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಬೆಲೆ ಏರಿಕೆ ಮಾಡದ ವಸ್ತುಗಳೇ ಇಲ್ಲ ಎಂಬಾಂತಾಗಿದೆ ಎಂದು ಹೇಳಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕಲ್ಯಾಣ ಕರ್ನಾಟಕ ಉದ್ಯೋಗ ಮೇಳ | ನಿರುದ್ಯೋಗ ಸಮಸ್ಯೆ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ: ಸಿದ್ದರಾಮಯ್ಯ

# ಉದ್ಯೋಗ ನೀಡುವುದು ಕೇಂದ್ರ, ರಾಜ್ಯದ ಜವಾಬ್ದಾರಿ

**ವಿಶ್ವವಾಣಿ ಸುದ್ದಿಮನೆ** ಕಲಬುರಗಿ

ದೇಶದಲ್ಲಿ ನಿರುದ್ಯೋಗ ಬಹುದೊಡ್ಡ ಸಮಸ್ಯೆಯಾಗಿದೆ. ನಿರುದ್ಯೋಗ ಸಮಸ್ಯೆ ಬಗೆಹರಿಸುವುದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜವಾಬ್ದಾರಿಯಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಅವರು ಅಭಿಪ್ರಾಯ ಪಟ್ಟರು.

ಜಿಲ್ಲಾಡಳಿತ, ಜಿಪಂ, ಮತ್ತು ಮಹಾನಗರ ಪಾಲಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಇವರ ಸಂಯುಕ್ತಾಶ್ರಯದಲ್ಲಿ ಕಲಬುರಗಿಯ ಕೆಸಿಟಿ ಕಾಲೇಜು ಆವರಣದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉದ್ಯೋಗ ಮೇಳ (ಯುವ ಸಮೃದ್ಧಿ ಸಮ್ಮೇಳನ) ಉದ್ಘಾಟನೆ ನೆರವೇರಿಸಿ ಮಾತನಾಡಿ, ಕೇಂದ್ರ ಸರಕಾರ, ಹಾಗೂ ರಾಜ್ಯ ಸರಕಾರಗಳು ಹೆಚ್ಚು ಬಂಡವಾಳ ಹಾಕಿ ದೊಡ್ಡ ಕಾರ್ಖಾನೆಗಳು ಬರುವಂತೆ ಮಾಡಬೇಕು. ಜತೆಗೆ ಕೌಶಲ ಆಧಾರಿತ ತರಬೇತಿ ಪಡೆದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದರೆ ಐದು ಗ್ಯಾರಂಟಿ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದೆವು. ಯುವನಿಧಿ ಯೋಜನೆಯಡಿಯಲ್ಲಿ ಪದವಿ ನಿರುದ್ಯೋಗಿ ಯುವಕರಿಗೆ 2000 ರು. ಹಾಗೂ ಡಿಪ್ಲೊಮಾ ಪಾಸ್ ಆದವರಿಗೆ 1500 ರು. ಗೌರವಧನ (ಪ್ರತಿ ತಿಂಗಳು) ಎರಡು ವರ್ಷದ ಅವಧಿಯವರೆಗೆ ಕೊಡುತ್ತಿದ್ದೇವೆ. ರಾಜ್ಯ ಸರಕಾರ ಕೌಶಲ್ಯ ತರಬೇತಿ ನೀಡಲು ಕೌಶಲ್ಯ ಅಭಿವೃದ್ಧಿ ಇಲಾಖೆ ತೆಗದು ಅದರಡಿಯಲ್ಲಿ ಮಾರುಕಟ್ಟೆಯ ಬೇಡಿಕೆ ಅನ್ವಯ ತರಬೇತಿ ನೀಡಲಾಗುತ್ತಿದೆ. ಉದ್ಯೋಗ ಮೇಳದಲ್ಲಿ ಉದ್ಯೋಗ ಸಿಗದಿರುವವರು ನಿರಾಸೆರಾಗಬೇಡಿ ನಿಮಗೆ ಮುಂದೊಂದು ದಿನ ಉದ್ಯೋಗ ಕೊಡಿಸುತ್ತೇವೆ ಎಂದು ಭರವಸೆ ನೀಡಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಉದ್ಯೋಗ ಮೇಳದಂತಹ ಕಾರ್ಯಕ್ರಮಗಳು ದೇಶ ಹಾಗೂ ರಾಜ್ಯಗಳಿಗೆ ಅನಿವಾರ್ಯಗಿದೆ. ಇಂದಿನ ಯುವಕರಿಗೆ ಕೌಶಲ್ಯದ ಅವಶ್ಯಕತೆವಿದೆ. ಕೇಂದ್ರದಲ್ಲಿ ಕೌಶಲ್ಯಾಭಿವೃದ್ಧಿ ಸಚಿವರಾಗಿದ್ದಾಗ ಕರ್ನಾಟಕದಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಜರ್ಮನ್ ಸಹಯೋಗದಲ್ಲಿ ತೆರಯಲು ಜರ್ಮನ್ ಚಾನ್ಸಲರ್ ಮಾರ್ಕಲ್ ಅವರೊಂದಿಗೆ ಚರ್ಚೆ ನಡೆಸಿದ್ದೆ. ಅದಕ್ಕೆ ಅವರು ಒಪ್ಪಿದ್ದರಿಂದ ಒಂದು ಬೆಂಗಳೂರಿನಲ್ಲಿ ಮತ್ತೊಂದು ಕಲಬುರಗಿ ಯಲ್ಲಿ ಸ್ಥಾಪಿಸಲಾಗಿತ್ತು. ಅಲ್ಲಿ ತರಬೇತಿ ಪಡೆದವರಲ್ಲಿ ಸಾವಿರಾರು ಜನರು ಉದ್ಯೋಗ ಪಡೆದಿದ್ದಾರೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಿ, ಉದ್ಯೋಗ ಪಡೆಯುವುದಷ್ಟೇ ಅಲ್ಲ, ಉದ್ಯೋಗ ಸೃಷ್ಟಿಸುವುದು ನಿಮ್ಮ ಜೀವನದ ಗುರಿಯಾಗಲಿ. ನಿಮ್ಮ ಜೀವನ ನಡೆಯಲು ನಿಮಗೆ ಉದ್ಯೋಗ ಬೇಕು. ಆದರೆ, ನೀವು ಉದ್ಯೋಗ ಮಾಡುವುದಕ್ಕಿಂತ ನೀವೇ ಹತ್ತಾರು ಜನರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆಯುವತ್ತ ಗಮನಹರಿಸಿ. ಆಗ ಮಾತ್ರ ನೀವು ಯಶಸ್ವಿಯಾಗಲು ಸಾಧ್ಯ. ಉದ್ಯೋಗ ಸಿಗಲಿಲ್ಲ ಎಂದು ನೀವು ಎಂದಿಗೂ ಎದೆಗುಂದಬೇಡಿ. ಜೀವನದಲ್ಲಿ ಒಂದಲ್ಲಾ ಒಂದು ಅವಕಾಶ ಸಿಕ್ಕೇ ಸಿಗುತ್ತದೆ. ಸಿಕ್ಕ ಅವಕಾಶ ಸರಿಯಾಗಿ ಬಳಸಿಕೊಳ್ಳಿ ಎಂದು ಕಿವಿ ಮಾತು ಹೇಳಿದರು.

ಸಚಿವ ಡಾ. ಶರಣಪ್ರಕಾಶ ಪಾಟೀಲ ಮಾತನಾಡಿ, ಉದ್ಯೋಗ ಮೇಳದಲ್ಲಿ 27 ಸಾವಿರ ಜನ ಉದ್ಯೋಗ ಅರಸಿ ಬಂದಿದ್ದಾರೆ. ಯುವ ಸಮೋಹವೇ ಹರಿದು ಬಂದಿದ್ದೆ. ಸರಕಾರ ರಾಜ್ಯದ ಜನರಿಗೆ ಐದು ಗ್ಯಾರಂಟಿ ನೀಡಿದೆ. ಯುವನಿಧಿಯು ಒಂದಾಗಿದೆ. 2.85 ಲಕ್ಷ ಯುವಕರು ಯುವನಿಧಿಯಲ್ಲಿ ನೋಂದಣಿ ಆಗಿದ್ದಾರೆ. ರಾಜ್ಯದ ಯುವಕರ ಭವಿಷ್ಯ ನಿರ್ಮಾಣಕ್ಕೆ ಸರಕಾರ ಬದ್ಧವಾಗಿದೆ. ಮುಂಬರುವ ಒಂದು ವರ್ಷದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಉದ್ಯೋಗ ಒದಗಿಸುವ ನಿರಂತರ ಪ್ರಯತ್ನ ಸರಕಾರ ಮಾಡಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಚಿವರಾದ ರಾಮಲಿಂಗಾ ರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪೂರ, ಎಂ.ಸಿ ಸುಧಾಕರ್, ಸಂಸದ ರಾಧಾಕೃಷ್ಣ ದೊಡ್ಡಮನಿ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ ಧರ್ಮಸಿಂಗ್, ಎಂ.ವೈ. ಪಾಟೀಲ, ಬಿ.ಆರ್. ಪಾಟೀಲ, ಅಲ್ಲಮಪ್ರಭು ಪಾಟೀಲ್, ವೇಣುಗೋಪಾಲ್ ನಾಯಕ್, ನಿಜಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಚಂದ್ರಶೇಖರ ಪಾಟೀಲ್ ಇದ್ದರು.

ಕಲಬುರಗಿಯ ಕೆಸಿಟಿ ಕಾಲೇಜು ಆವರಣದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉದ್ಯೋಗ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ರಾಮಲಿಂಗಾ ರೆಡ್ಡಿ, ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪುರ, ಎಂ.ಸಿ ಸುಧಾಕರ್, ಸಂಸದ ರಾಧಾಕೃಷ್ಣ ದೊಡ್ಡಮನಿ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ ಧರ್ಮಸಿಂಗ್ ಉದ್ಘಾಟಿಸಿದರು.

### ಸಾಂಕೇತಿಕ ಆದೇಶ ಪತ್ರ ವಿತರಣೆ

ಕಲಬುರಗಿಯ ನಗರದ ಕೆಸಿಟಿ ಕಾಲೇಜಿನಲ್ಲಿ ನಡೆದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಸಂಯುಕ್ತಾಶ್ರಯದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉದ್ಯೋಗ ಮೇಳ, ಯುವ ಸಮೃದ್ಧಿ ಸಮ್ಮೇಳನದಲ್ಲಿ ಉದ್ಯೋಗ ಪಡೆದ ಭಾಗ್ಯಶ್ರೀ, ರೇಣುಕಾ, ನಿಚೀಕೇತ್, ಚೇತನ್, ಚಂದ್ರಶೇಖರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಂಕೇತಿಕವಾಗಿ ಆದೇಶ ಪತ್ರ ವಿತರಣೆ ಮಾಡಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಯುಪಿಎ ಅವಧಿಯಲ್ಲಿ ಕಾರ್ಮಿಕ ಸಚಿವರಾಗಿದ್ದರು. ದೇಶದಲ್ಲಿ ಅನೇಕ ಕಾರ್ಮಿಕ ಸಚಿವರು ಬಂದು ಹೋಗಿದ್ದಾರೆ. ಆಸ್ಕರ್ ಫರ್ನಾಂಡೀಸ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಕೈಗೊಂಡ ತೀರ್ಮಾನ ಬೇರೆ ಯಾರೂ ಕೈಗೊಂಡಿಲ್ಲ. ಕಲಬುರಗಿಯಲ್ಲಿ ಇಎಸ್‌ಐ ಆಸ್ಪತ್ರೆ ಇದಕ್ಕೆ ಸಾಕ್ಷಿಯಾಗಿದೆ. ಬಡ ಕಾರ್ಮಿಕರ ಮಕ್ಕಳ ಆರೋಗ್ಯಕ್ಕೆ ನೆರವಾಗಿದ್ದಾರೆ. 371 (ಜೆ) ಮೂಲಕ ಈ ಭಾಗದ ಮಕ್ಕಳಿಗೆ ಉದ್ಯೋಗ ಹಾಗೂ ಶೈಕ್ಷಣಿಕವಾಗಿ ಉತ್ತೇಜನ ನೀಡಿದ್ದಾರೆ.

**- ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ**

ಪ್ರಧಾನಿ ನರೇಂದ್ರ ಮೋದಿ ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ನೀಡುತ್ತೇವೆ ಎಂದು ವಾಗ್ದಾನ ಮಾಡಿದ್ದರು. ಈ ಹತ್ತು ವರ್ಷಗಳ ಅವರ ಅಧಿಕಾವಾಧಿಯಲ್ಲಿ ಇಪ್ಪತ್ತು ಲಕ್ಷ ಉದ್ಯೋಗ ಕೊಡುವುದು ಅವರಿಗೆ ಆಗಿಲ್ಲ. ಇದು ಅವರೇ ಹೇಳಿದ ಮಾತಿದು. ಆದರೆ ಉದ್ಯೋಗ ನೀಡದೆ ಸುಳ್ಳು ಹೇಳಿದ್ದಾರೆ.

**- ಸಿದ್ದರಾಮಯ್ಯ, ಮುಖ್ಯಮಂತ್ರಿ**

### ಕಲ್ಯಾಣದಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಬದ್ಧ

Periodic Labour Force Survey ಪ್ರಕಾರ ದೇಶದಲ್ಲಿ ಡಿಗ್ರಿ ಪಾಸಾದವರಲ್ಲಿ 18.9% ಹಾಗೂ ಡಿಪ್ಲೊಮಾ ಪಾಸಾದವರಲ್ಲಿ 17.1 ನಿರುದ್ಯೋಗ ಇದೆ. ನಮ್ಮ ರಾಜ್ಯದಲ್ಲಿ 2.5% ನಿರುದ್ಯೋಗ ಇದೆ. ಇದು ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಇದು ಕಡಿಮೆ. ಇದಕ್ಕೆ ರಾಜ್ಯ ಸರಕಾರ ಉದ್ಯೋಗ ಒದಗಿಸಯವಲ್ಲಿ ಕೈಗೊಂಡ ಕ್ರಮಗಳೇ ಸಾಕ್ಷಿ.ಊಊಆ ಹೆಚ್ಚು ಹೆಚ್ಚು ಆದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತವೆ. ಕೆಕೆ ಭಾಗದ ಕೈಗಾರಿಕೆಗಳು ಬರಬೇಕೆಂದರೆ ಹೆಚ್ಚುವರಿ 60% 60% incentive ಕೊಡಬೇಕು ಎಂದು ಖರ್ಗೆ ಅವರು ಹೇಳಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ ಪರಿಶೀಲನೆ ಮಾಡಿ ಈ ಭಾಗದಲ್ಲಿ ಕೈಗಾರಿಕೆ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಕ್ರಮ ವಹಿಸುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.



ಕೆಸಿಟಿ ಕಾಲೇಜು ಆವರಣದಲ್ಲಿ ನಡೆದ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ವಿಶ್ವವಾಣಿ ಪತ್ರಿಕೆ ಓದುತ್ತಿರುವುದು.

## ಮಣ್ಣು ಕುಸಿದು ಇಬ್ಬರು ಕಾರ್ಮಿಕರು ಸಾವು

**ಬೆಳಗಾವಿ:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಮೃತ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ಒಳ ಚರಂಡಿ ಕಾಮಗಾರಿ ವೇಳೆ ಮಣ್ಣು ಕುಸಿದು ಇಬ್ಬರು ಕಾರ್ಮಿಕರು ಮೃತಪಟ್ಟ ಘಟನೆ ಗಾಂಧಿ ನಗರದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಬುಧವಾರ ಬೆಳಗ್ಗೆ ಸಂಭವಿಸಿದೆ.

ಮೂಡಲಗಿ ತಾಲೂಕಿನ ಪಟಗುಂದಿ ಗ್ರಾಮದ ಶಿವಲಿಂಗ ಮಾರುತಿ ಸರವೆ (20) ಹಾಗೂ ಬಸವರಾಜ ಸರವೆ (38) ಮೃತ ದುರ್ದೈವಿಗಳು. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು ಇಪ್ಪತ್ತು ಅಡಿ ಆಳದಲ್ಲಿ ಒಳ ಚರಂಡಿ ಪೈಪ್ ಲೈನ್ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಮಣ್ಣು ಕುಸಿದಿದೆ. ಮಣ್ಣಿನಲ್ಲಿ ಸಿಲುಕಿದ್ದ ಇಬ್ಬರು ಕಾರ್ಮಿಕರನ್ನು ಜೆಸಿಬಿ ಸಹಾಯದಿಂದ ಹೊರ ತಗೆದರು ಬದುಕಿಸಲು ಸಾಧ್ಯವಾಗಲಿಲ್ಲ. 15 ಅಡಿಯಷ್ಟು ಮಣ್ಣು ಬಿದ್ದ ಕಾರಣ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹಗಳನ್ನು ಜಿಲ್ಲಾಸ್ಪತ್ರೆಗೆ ರವಾನಿಸಲಾಯಿತು. ಬಿಮ್ಸ್ ಆಸ್ಪತ್ರೆಯಲ್ಲಿ ಮೃತ ಕಾರ್ಮಿಕರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಮಾಳಮಾರುತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸ್ವಪಕ್ಷ ಸಚಿವರ ವಿರುದ್ಧ ಬಸವರಾಜ ಶಿವಗಂಗಾ ಕಿಡಿ

## ಗಣತಿ ವಿರುದ್ಧ ದನಿ ಎತ್ತದ ಲಿಂಗಾಯತ ಸಚಿವರು

**ದಾವಣಗೆರೆ:** ಡಿಸಿಎಂ ಡಿ.ಕೆ. ಶಿವಕುಮಾರ್ ತಮ್ಮ ಸಮಾಜಕ್ಕೆ ಅನ್ಯಾಯವಾಗುತ್ತದೆ ಎಂದ ತಕ್ಷಣ ಸಮುದಾಯದ ಸಭೆ ನಡೆಸಿದರು. ಆದರೆ, ನಮ್ಮ ಸಮಾಜದ ಸಚಿವರು ಸ್ವಾರ್ಥ ರಾಜಕಾರಣ ಮಾಡುತ್ತಿದ್ದಾರೆ. ಜಾತಿ ಗಣತಿ ವಿರುದ್ಧ ದನಿ ಎತ್ತದ ಇಂತಹವರು ಈ ಕೂಡಲೇ ತಮ್ಮಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬರಲಿ ಎಂದು ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಇಷ್ಟವಾಗುವುದು ಇದೇ ಕಾರಣಕ್ಕೆ. ಸಮಾಜಕ್ಕೆ ಅನ್ಯಾಯವಾಗುತ್ತದೆ ಎನ್ನುವ ತಕ್ಷಣವೇ ಸಭೆ ಕರೆದರು. ಆದರೆ, ನಮ್ಮ ಲಿಂಗಾಯತ ಸಮಾಜದ ಏಳು ಜನ ಸಚಿವರಿದ್ದರೂ ಒಬ್ಬರೂ ಈವರೆಗೆ ದನಿ ಎತ್ತಿಲ್ಲ. ನಾನು ಈ ಬಗ್ಗೆ ಚರ್ಚೆ ಮಾಡಲು ಫೋನ್ ಮಾಡಿದರೆ ಸಚಿವರು ಫೋನ್ ರಿಸೀವ್ ಮಾಡೋಲ್ಲ. ಏಳು ಜನ ಸಚಿವರೂ ಅಸಮರ್ಥರು ಎಂದರು. ಈ ಕುರಿತು ಸಚಿವ ಈಶ್ವರ ಖಂಡ್ರೆ ಅವರಿಗೆ ಕಾಲ್ ಮಾಡಿದರೆ ರಿಸೀವ್ ಮಾಡುತ್ತಿಲ್ಲ. ಲಿಂಗಾಯತ ಸಮುದಾಯದ ಯಾವೊಬ್ಬ ಸಚಿವರು ಜಾತಿಗಣತಿ ವರದಿ ಕುರಿತು ಚರ್ಚೆ ಮಾಡುತ್ತಿಲ್ಲ ಎಂದು ಸ್ವಪಕ್ಷದ ಸಚಿವರ ವಿರುದ್ಧ ಆಕ್ರೋಶ ಹೊರ ಹಾಕಿದರು.

ಜಾತಿ ಗಣತಿ ನಮ್ಮ ಸಚಿವರಿಗೆ ಅವಶ್ಯಕತೆ ಇಲ್ಲ. ಯಾವ ಸಮುದಾಯಕ್ಕೆ ಅನ್ಯಾಯ ಆಗಿದೆ. ಅವರೆಲ್ಲ ಸಭೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮತ್ತೆ ಜಾತಿಗಣತಿ ಸಮೀಕ್ಷೆ ಪ್ರಾರಂಭ ಮಾಡಬೇಕು. ನಾನು ಕೂಡ ನಮ್ಮ ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸುತ್ತಿದ್ದೇನೆ. ಇನ್ನೆರಡು, ಮೂರು ದಿನಗಳಲ್ಲಿ ವರದಿ ನೀಡುತ್ತೇನೆ. ಒಕ್ಕಲಿಗರು, ಲಿಂಗಾಯತರು ಅಷ್ಟೇ ಅಲ್ಲ, ಅನ್ಯಾಯಕ್ಕೆ ಒಳಗಾದ ಎಲ್ಲ ಸಮಾಜಗಳು ಸೇರಿ ಹೋರಾಟ ಮಾಡುತ್ತೇವೆ.

**-ಬಸವರಾಜ ವಿ.ಶಿವಗಂಗಾ, ಸಚಿವ**

ಸರಕಾರದ ವಿರುದ್ಧ ಡಾ. ಸಿದ್ದರಾಮ ಶ್ರೀ ಅಸಮಾಧಾನ

## ಜಾತಿಗಣತಿ ವರದಿಯಿಂದ ಲಿಂಗಾಯತರಿಗೆ ಅನ್ಯಾಯ

**ಗದಗ:** ಜಾತಿಗಣತಿ ದೋಷಪೂರಿತ ವರದಿಯಾಗಿದೆ. ವರದಿಯಲ್ಲಿ ಲಿಂಗಾಯತರಿಗೆ ಅನ್ಯಾಯವಾಗಿದೆ ಎಂದು ಗದಗದ ತೋಂಟದಾರ್ಯ ಮಠದ ಪೀಠಾಧಿಪತಿ ಡಾ. ಸಿದ್ದರಾಮ ಶ್ರೀಗಳು ಅಸಮಾಧಾನ ಹೊರಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರ ಇನ್ನೊಮ್ಮೆ ಸಮೀಕ್ಷೆ ನಡೆಸಬೇಕು. ಮತ್ತೊಮ್ಮೆ ಜಾತಿಗಣತಿ ವರದಿ ಸಿದ್ದಪಡಿಸಬೇಕು ಎಂದು ಸ್ವಾಮೀಜಿ ಒತ್ತಾಯಿಸಿದರು. ಜಾತಿಗಣತಿಯ ವರದಿ ಸಾರ್ವಜನಿಕರಲ್ಲಿ ಸಂಶಯ ಹುಟ್ಟುಹಾಕಿದೆ. ಸುಮಾರು ಏಳೆಂಟು ವರ್ಷಗಳ ಹಿಂದೆ ಜಾತಿಗಣತಿ ಸಿದ್ಧಪಡಿಸಿದ್ದಾರೆ. ಆ ಜಾತಿ ಜನಗಣತಿ ವರದಿ ಸಮರ್ಪಕವಾಗಿ ಇಲ್ಲ. ಆ ವರದಿಯನ್ನ ಸಿದ್ಧಪ ಡಿಸಿದ ವ್ಯಕ್ತಿಗಳು ಕರ್ನಾಟಕ ಪ್ರತಿಯೊಬ್ಬ ವ್ಯಕ್ತಿಯನ್ನು ಸಂಪರ್ಕಿಸಿಲ್ಲವೆಂಬ ಆರೋಪವಿದೆ ಎಂದು ತಿಳಿಸಿದರು.

ಜಾತಿಗಣತಿ ಮಾಡಿರುವ ಉದ್ದೇಶ ಸ್ಪಷ್ಟವಾಗಿಲ್ಲ. ಒಳಗಡೆ ಯಾವುದೋ ಒಂದು ಉದ್ದೇಶ ಇಟ್ಟಕೊಂಡು ಮಾಡಿರಬಹುದು. ಜಾತಿಗಣತಿ ವರದಿ ಬಹುತೇಕ ಲಿಂಗಾಯತರ ವಿರೋಧವಿದೆ. ಸಚಿವ ಸಂಪುಟದಲ್ಲಿರುವಂತಹ ಕಾಂಗ್ರೆಸ್ ಕೆಲವು ಮಂತ್ರಿಗಳ ವಿರೋಧವಿದೆ. ಸಮಾಜದ ಪ್ರಮುಖರು, ಗಣ್ಯ ವ್ಯಕ್ತಿಗಳು, ಮಠಾಧೀಶರು ಸಮಾಲೋಚನೆ ಮಾಡಿ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ. ತೋಂಟದಾರ್ಯ ಮಠದ ನಿಲುವು ಯಾವ ಜಾತಿಗೂ ಅನ್ಯಾಯ ಆಗಬಾರದು ಎಂಬುದು ನಮ್ಮ ಉದ್ದೇಶ ಎಂದರು.

ಸರಕಾರ ಸ್ವೀಕಾರ ಮಾಡಿರುವ ವರದಿ ಸಮರ್ಪಕವಾಗಿಲ್ಲ. ಲಿಂಗಾಯತರು ಜನಸಂಖ್ಯೆ ಅಂದಾಜಿನ ಪ್ರಕಾರ ಒಂದೂವರೆ ಕೋಟಿ ಇದ್ದಾರೆ. ಆದರೆ, ಲಿಂಗಾಯತ ಸಂಖ್ಯೆ ವರದಿಯಲ್ಲಿ 72 ಲಕ್ಷಕ್ಕೆ ಇಳಿಸಿದ್ದು ಅತ್ಯಂತ ಆಘಾತಕಾರಿಯಾಗಿದೆ. ಬೇರೆ ಬೇರೆ ಜಾತಿಯವರು ಮುನ್ನೆಲೆಗೆ ಬಂದಿದ್ದಾರೆ. ಸರಕಾರ ಇನ್ನೊಮ್ಮೆ ಪರಿಶೀಲನೆ ಮಾಡಿ ನೈಜ ವರದಿ ಬಿಡುಗಡೆ ಮಾಡಬೇಕು.

**-ಡಾ. ಸಿದ್ದರಾಮ ಶ್ರೀಗಳು, ತೋಂಟದಾರ್ಯ ಮಠದ ಪೀಠಾಧಿಪತಿ**

## ಶಾಮನೂರು ಹೇಳಿಕೆ ಸರಿಯಲ್ಲ

**ಹೊಸದುರ್ಗ:** ಜಾತಿಗಣತಿ ವಿಚಾರವನ್ನು ವಿರೋಧಿ ಸುತ್ತಿರುವ ಶಾಮನೂರು ಶಿವಶಂಕರಪ್ಪ ಅವರು ರಾಜ್ಯದಲ್ಲಿ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯವಷ್ಟೇ ಇರುವಂತೆ ಮಾತಾಡ್ತಿದ್ದೀರಿ. ಈ ನಿಮ್ಮ ಹೇಳಿಕೆ ಸರಿಯಲ್ಲ ಎಂದು ಹೊಸದುರ್ಗ ತಾಲೂಕು ಕನಕಗುರುಪೀಠ ಶಾಖಾಮಠದ ಶ್ರೀಈಶ್ವರಾನಂದಪುರಿ ಸ್ವಾಮೀಜಿ ಅವರು ಆಕ್ಷೇಪಿಸಿದ್ದಾರೆ. ಒಬ್ಬ ಜನಪ್ರತಿನಿಧಿ ಸಾರ್ವಜನಿಕ ಚುನಾವಣೆಗಳಲ್ಲಿ ಒಂದು ಜಾತಿಯಿಂದ ಆರಿಸಿ ಬರಲು ಸಾಧ್ಯವಿಲ್ಲ. ಕಳೆದ ವರ್ಷದ ಚುನಾವಣೆಯಲ್ಲಿ ತಾವು ಮತ್ತು ನಿಮ್ಮ ಮಗ ಮಲ್ಲಿಕಾರ್ಜುನ್, ಸೊಸೆ ಪ್ರಭಾಮಲ್ಲಿ ಕಾರ್ಜುನ್ ನಿಮ್ಮ ಜಾತಿಯ ವೋಟುಗಳಿಂದಲೇ ಗೆದ್ದು ಬಂದಿದ್ದೀರಾ? ಇಲ್ಲಾ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಬೆಂಬಲವಿಲ್ಲದೆ ಗೆದ್ದು ಬಂದಿ ದ್ದೀರಾ? ಎನ್ನುವುದನ್ನು ಬಹಿರಂಗವಾಗಿ ಸ್ಪಷ್ಟಪಡಿಸಬೇಕು. ಒಂದು ಸರಕಾರ ನಡೆಯೋದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತ ಇರುವ ಪಕ್ಷಕ್ಕೆ ಹೊರತು, ಕೇವಲ ಎರಡು ಸಮುದಾ ಯಗಳಿಂದಲ್ಲ ಎನ್ನುವುದನ್ನ ತಾವು ತಿಳಿದುಕೊ ಳ್ಳಬೇಕು ಎಂದು ಸ್ವಾಮೀಜಿ ಹೇಳೀದರು.

## ಯತ್ನಾಳ್ ಆಕ್ರೋಶ ಶಮನಕ್ಕೆ ಬಿಜೆಪಿ ಯಾತ್ರೆ

**ಕಲಬುರಗಿ:** ರಾಜ್ಯದಲ್ಲಿ ಯಾವ ಜನಾಕ್ರೋಶವೂ ಇಲ್ಲ. ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಆಕ್ರೋಶ ಶಮನ ಮಾಡಲು ಬಿಜೆಪಿ ಜನಾಕ್ರೋಶ ಯಾತ್ರೆ ನಡೆಸುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಗರು ಬೆಲೆ ಏರಿಕೆ ಮಾಡಿದರೆ ದೇಶದ ಹಿತಕ್ಕಾಗಿ, ನಾವು ಮಾಡಿದರೆ ಜನಾಕ್ರೋಶ ಎಲ್ಲಿದೆ ಜನಾಕ್ರೋಶ ಎಂದು ಪ್ರಶ್ನಿಸಿದರು. ಇವರ ಹೋರಾಟವೆಲ್ಲಾ ಇಂಟರ್‌ನಲ್ಲೇ. ಯತ್ನಾಳ್ ಆಕ್ರೋಶವನ್ನು ಶಮನ ಮಾಡಲು ಜನಾಕ್ರೋಶ ಯಾತ್ರೆ ನಡೆಸುತ್ತಿದೆಯೇ ಹೊರತು ರಾಜ್ಯದಲ್ಲಿ ಸರಕಾರದ ಬಗ್ಗೆ ಯಾವ ಆಕ್ರೋಶವೂ ಇಲ್ಲ ಎಂದರು. ಕಾಂಗ್ರೆಸ್ ಅಲ್ಪಸಂ ಖ್ಯಾತರ ಓಲೈಕೆ ಮಾಡಲು ಹೊರಟಿದೆ ಎಂಬ ಬಿಜೆಪಿ ಮುಖಂಡ ಸಿ.ಟಿ.ರವಿ ಅವರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ಅಲ್ಪಸಂಖ್ಯಾತರ ಓಲೈಕೆ ಹೇಗಾಗುತ್ತದೆ? ಸಿ.ಟಿ.ರವಿ ಅವರು ಹತಾಷರಾಗಿ ಈ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಇದು ಅವಿವೇ ಕತನದ ಪರಮಾವಧಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಚ್.ಕಾಂತರಾಜ ಅವರ ಆಯೋಗವು ರಾಜ್ಯದ ಸಾಮಾಜಿಕ, ಆರ್ಥಿಕ ಸಮೀಕ್ಷೆ ವರದಿ ಸಲ್ಲಿಸಿದ್ದು, ಇದು ಜಾತಿಗಣತಿ ಅಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದರು.

## ಸಿಎಂರಿಂದ ಜಾತಿ ಒಡೆಯುವ ಕೆಲಸ

**ದಾವಣಗೆರೆ:** ಅವೈಜ್ಞಾನಿಕ ಜಾತಿ ಜನಗಣತಿ ವರದಿಗೆ ನಮ್ಮ ಸಂಪೂರ್ಣ ವಿರೋಧವಿದೆ ಎಂದು ಬಿಜೆಪಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವತಃ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಯಾರ ಮನೆಗೂ ಹೋಗಿ ಸಮೀಕ್ಷೆ ಮಾಡಿಲ್ಲ. ಆದರೂ, ಜಾತಿ ಜನಗಣತಿ ವರದಿ ಬಿಡುಗಡೆಗೆ ಸಿದ್ದರಾಮಯ್ಯ ಮುಂದಾಗಿದ್ದಾರೆ. ಅಧಿಕಾರ ಹಂಚಿಕೆ ಭಯದಿಂದ ಜಾತಿ ಜನಗಣತಿ ಬ್ರಹ್ಮಾಸ್ತ್ರವನ್ನು ಬಿಡುತ್ತಿದ್ದಾರೆ ಎಂದು ದೂರಿದರು. ಜಾತಿ ಜನಗಣತಿ ವರದಿಯನ್ನು ನಾವು ವಿರೋಧಿಸುತ್ತೇವೆ. ಜಾತಿ ಜನಗಣತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲ ಜಾತಿ, ಸಮುದಾಯಗಳ ಅವೈಜ್ಞಾನಿಕ ಮಾಹಿತಿ ಇದೆ. ನೂರಾರು ಕೋಟಿ ಖರ್ಚು ಮಾಡಿ, ಅವೈಜ್ಞಾನಿಕ ಜಾತಿ ಜನಗಣತಿ ವರದಿ ಮಾಡಲಾಗಿದೆ. ವೀರಶೈವ ಲಿಂಗಾಯತ, ಒಕ್ಕಲಿಗ ಸೇರಿದಂತೆ ಎಲ್ಲ ಜಾತಿಗಳ ಒಡೆಯುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದರು.

ಶವಾಗಾರದಲ್ಲಿ ಅನಾಥವಾಗಿ ಬಿದ್ದಿರುವ ಹಂತಕನ ಶವ

## ಕೊಲೆ ಕೇಸ್: ಆರೋಪಿ ಫೋಟೊ ರಿಲೀಸ್

**ಹುಬ್ಬಳ್ಳಿ:** ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಗುಂಡೇಟಿಗೆ ಬಲಿಯಾದ ಹಂತಕನ ಫೋಟೊವನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ.



ಎನ್‌ಕೌಂಟರ್‌ಗೆ ಬಲಿಯಾದ ರಿತೇಶ್ ಕುಮಾರ್ (35) ಭಾವ ಚಿತ್ರವನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ. ಹುಬ್ಬಳ್ಳಿಯ ಕಿಮ್ಸ್ ಶವಗಾರದಲ್ಲಿ ಹಂತಕನ ಶವ ಅನಾಥವಾಗಿ ಬಿದ್ದಿದೆ. ಕುಟುಂಬಸ್ಥರ ಪತ್ತೆಗೆ ಹುಬ್ಬಳ್ಳಿಯ ಅಶೋಕನಗರ ಪೊಲೀಸ್ ಠಾಣೆಯು ಭಾವಚಿತ್ರ ಸಹಿತ ಪ್ರಕಟಣೆ ಹೊರಡಿಸಿದೆ. ಈತ ಗೋದಿ ಮೈಬಣ್ಣ, ತೆಳ್ಳನೆಯ ಮೈಕಟ್ಟು, ಕೋಲು ಮುಖ, 5.3 ಎತ್ತರ, ಅಗಲ ಹಣೆ ಹೊಂದಿದ್ದಾನೆ. ಅಲ್ಲದೇ, ಈತನ ಬಲಗೈಯಲ್ಲಿ ಹಿಂದಿ ಅಕ್ಷರದಲ್ಲಿ 'ಓಂ ನಮಃ ಶಿವಾಯ ಜಯ ಸಂಜಯ' ಎಂಬ ಟ್ಯಾಟು ಗುರುತು ಸಹ ಇದೆ. ಈತನ ಗುರುತು ಪರಿಚಯ ಇದ್ದವರು ಕೂಡಲೇ 0836-2233490 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಲಾಗಿದೆ.

### ಆರೋಪಿಯ ಮಾಹಿತಿ ಪರಿಶೀಲನೆ

ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಮಗುವಿನ ಹತ್ಯೆ ಆಗಿತ್ತು. ಆರೋಪಿ ತಪ್ಪಿಸಿಕೊಳ್ಳುವ ವೇಳೆ ಗುಂಡು ತಗುಲಿ ಆಸ್ಪತ್ರೆಯಲ್ಲಿ ಸಾವಾಗಿತ್ತು. ಇಂತಹ ಪ್ರಕರಣದಲ್ಲಿ ಏನೆಲ್ಲ ಕ್ರಮ ಕೈಗೊಳ್ಳಬೇಕು ಅಂತ ಸುಪ್ರೀಂಕೋರ್ಟ್ ಸೂಚನೆ ಇದೆ ಅದರಂತೆ ನಡೆದಿದೆ. ಈಗ ಮರಣೋತ್ತರ ಪರೀಕ್ಷೆ ಮುಂದುವರಿದಿದೆ. ನ್ಯಾಯಾಂಗ ತನಿಖೆ ಮಾಡಬೇಕು ಅಂತ ಇತ್ತು ಅದು ಕೂಡ ಆಗುತ್ತಿದೆ ಎಂದು ಹು-ಧಾ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರೋಪಿಯ ಮಾಹಿತಿ ಪರಿಶೀಲನೆ ಮಾಡಲಾಗುತ್ತಿದೆ. ಆತ ಇದ್ದಲ್ಲಿ ಹಾಗೂ ಆತ ಸಂಚರಿಸಿದ ಎಲ್ಲ ಕಡೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಪೋಸ್ಟ್ ಮಾರ್ಟಂ ಆದ ಮೇಲೆ ಅವರಿಗೆ ಸಂಬಂಧ ಪಟ್ಟವರನ್ನ ಹುಡುಕುವ ಕೆಲಸ ಮಾಡುತ್ತಾ ಇದ್ದೀವಿ. ಎಲ್ಲಾ ಭಾಷೆಗಳಲ್ಲಿ ಆರೋಪಿಯ ವಿವರಗಳನ್ನು ಬೇರೆ ಬೇರೆ ಕಡೆ ಕಳಿಸಲಾಗಿದೆ. ಆತ ಬಿಹಾರದ ಪಟ್ನಾದವನಾಗಿದ್ದಾನೆ ಎಂಬ ಮಾಹಿತಿ ಇದೆ. ಪತ್ತೆ ಆಗದೇ ಹೋದರೆ ಅಂತ್ಯಕ್ರಿಯೆ ಮಣ್ಣು ಮಾಡಲಾಗುತ್ತೆ ಎಂದರು.

ಸ್ಥಗಿತಗೊಂಡಿದ್ದ ವಿಮಾನ ಹಾರಾಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

## ಬೀದರ್-ಬೆಂಗಳೂರು ವಿಮಾನ ಸೇವೆ ಆರಂಭ

**ಬೀದರ್:** ಸುಮಾರು ಒಂದೂವರೆ ವರ್ಷದ ಹಿಂದೆ ಸ್ಥಗಿತಗೊಂಡಿದ್ದ ಬೀದರ್ - ಬೆಂಗಳೂರು ವಿಮಾನ ಸೇವೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಮರು ಚಾಲನೆ ನೀಡಿದ್ದಾರೆ.

ಬೀದರ್ ವಿಮಾನ ನಿಲ್ದಾಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕೇಕ್ ಕತ್ತರಿಸಿ, ಬೋರ್ಡಿಂಗ್ ಪಾಸ್ ನೀಡವ ಮೂಲಕ ಬೀದರ್ - ಬೆಂಗಳೂರು ವಿಮಾನ ಸೇವೆಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಬಿ. ಖಂಡ್ರೆ ಅವರು, ಕೇಂದ್ರ ಸರಕಾರ ಉಡಾನ್ ಸಬ್ಸಿಡಿ ನಿಲ್ಲಿಸಿತು. ಈ ಹಿಂದೆ ಡಬಲ್ ಎಂಜಿನ್ ಸರಕಾರ ಇದ್ದರೂ ಏನೂ ಮಾಡಲಿಲ್ಲ. ನಮ್ಮ ಸರಕಾರ ಸ್ಥಗಿತಗೊಂಡಿದ್ದ ಬೀದರ್- ಬೆಂಗಳೂರು ನಾಗರಿಕ ವಿಮಾನಯಾನ ಪುನಾರಂಭಿಸಿದೆ. ಇದಕ್ಕಾಗಿ ಕೆಕೆಆರ್‌ಡಿಬಿಯಿಂದ ಈ ವರ್ಷ 14 ಕೋಟಿ ರು. ಮೀಸಲಿಡಲಾಗಿದೆ ಎಂದರು. ಕೇಂದ್ರದ ಉಡಾನ್ ಯೋಜನೆಗೆ ಮೈಸೂರು, ಬಳ್ಳಾರಿ, ಬೀದರ್ ವಿಮಾನ ನಿಲ್ದಾಣಗಳು ಸೇರ್ಪಡೆ. ಇಂದಿನಿಂದ ಬೀದರ್ - ಬೆಂಗಳೂರು ನಡುವೆ ಸ್ಟಾರ್ ಏರ್‌ಲೈನ್ಸ್ ವಿಮಾನ ಹಾರಾಟ ನಡೆಸಲಿದೆ. ಒಂದು ತಿಂಗಳ ಹಿಂದಿ ನಿಂದಲೇ ಸ್ಟಾರ್ ಏರ್‌ಲೈನ್ಸ್ ಆನ್‌ಲೈನ್‌ನಲ್ಲಿ ವಿಮಾನದ ಟಿಕೆಟ್ ಬುಕ್ಕಿಂಗ್ ಕೂಡ ಆರಂಭಿಸಿತ್ತು.




ಬೀದರ್ ವಿಮಾನ ನಿಲ್ದಾಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಬೋರ್ಡಿಂಗ್ ಪಾಸ್ ನೀಡವ ಮೂಲಕ ಬೀದರ್ - ಬೆಂಗಳೂರು ವಿಮಾನ ಸೇವೆಗೆ ಚಾಲನೆ ನೀಡಿದರು.

### ಪ್ರತಿ ದಿನ ಬೆಳಗ್ಗೆ 7:30ಕ್ಕೆ ಸಂಚಾರ

ಸ್ಟಾರ್ ಏರ್‌ಲೈನ್ಸ್ ವಿಮಾನ ಪ್ರತಿ ದಿನ ಬೆಳಗ್ಗೆ 7.30ಕ್ಕೆ ಬೆಂಗಳೂರಿನಿಂದ ಬೀದರ್ ಕಡೆಗೆ ಸಂಚರಿಸಲಿದೆ. ಅದೇ ದಿನ ಬೆಳಗ್ಗೆ 9.10ಕ್ಕೆ ಬೀದರ್‌ನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದೆ. ವಿಮಾನದ ಟಿಕೆಟ್ ಬುಕ್ಕಿಂಗ್ ಆರಂಭಗೊಂಡು ವಿಮಾನ ಹಾರಾಟ ನಡೆಸುತ್ತಿರುವುದಕ್ಕೆ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದ್ದಾರೆ.

## ವಿಶ್ವವಾಣಿ

### ಸಂಪಾದಕೀಯ

## ಜಾತಿ ಸಮೀಕ್ಷೆ ನೈಜ ಉದ್ದೇಶಕ್ಕೆ ಬಳಕೆ ಆಗಲಿ

ಜಾತಿ ಗಣತಿ ವರದಿ ನಿರ್ಣಾಯಕ ಘಟ್ಟ ತಲುಪಿದೆ. ಇಂದು (ಏಪ್ರಿಲ್ 17, 2025) ನಡೆಯುವ ವಿಶೇಷ ಸಚಿವ ಸಂಪುಟ ಸಭೆ ಜಾತಿಗಣತಿಯ ಭವಿಷ್ಯವನ್ನು ನಿರ್ಧರಿಸುವ ನಿರೀಕ್ಷೆ ಇದೆ. ಸಂವಿಧಾನದ 340 ನೇ ವಿಧಿಯ ಪ್ರಕಾರ ಸರಕಾರ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪರಿಸ್ಥಿತಿಯನ್ನು ತಿಳಿಯಲು ಕೇಂದ್ರ ಸರಕಾರ ಆಯೋಗವನ್ನು ನೇಮಿಸಬಹುದು. ಆದರೆ ರಾಜ್ಯ ಸರಕಾರಕ್ಕೂ ಗಣತಿ ನಡೆಸಲು ಅಧಿಕಾರವಿದೆಯೇ ಎಂಬ ಬಗ್ಗೆ ಗೊಂದಲವಿದೆ. ಈ ಕಾರಣಕ್ಕಾಗಿಯೇ ಕರ್ನಾಟಕ ಸರಕಾರ ಈ ಪ್ರಕ್ರಿಯೆಯನ್ನು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಎಂದು ಕರೆದುಕೊಂಡಿದೆ. ಏನೇ ಆದರೂ ಇದರ ಉದ್ದೇಶ ಜಾತಿವಾರು ಜನಸಂಖ್ಯಾ ಪ್ರಮಾಣವನ್ನು ತಿಳಿಯುವುದು ಎನ್ನುವುದು ಸ್ಪಷ್ಟ. ಸಮೀಕ್ಷೆಯಲ್ಲಿ ಲಭ್ಯವಾದ ದತ್ತಾಂಶಗಳನ್ನು ಬಳಸಿಕೊಂಡು ಸರಕಾರ ಅತ್ಯಂತ ಹಿಂದುಳಿದ ಜಾತಿ, ಸಮುದಾಯದ ಅಭಿವೃದ್ಧಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದರೆ ಯಾರ ಆಕ್ಷೇಪವೂ ಇರುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಈ ಸಮೀಕ್ಷೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ಮಾನದಂಡವಾಗಿ ಬಳಕೆ ಆಗಬಹುದೆನ್ನುವುದು ಕೆಲವರ ಆತಂಕ. ಸದ್ಯ ಜಾತಿ ಬಾಹುಳ್ಯದ ಬಗ್ಗೆ ಚರ್ಚೆ ಆರಂಭವಾಗಿದೆ. ಸೋರಿಕೆಯಾದ ವರದಿಗಳ ಪ್ರಕಾರ, ಆಯೋಗವು 1,351 ಜಾತಿಗಳು ಮತ್ತು ಉಪಜಾತಿಗಳನ್ನು ಗುರುತಿಸಿದೆ. ಲಿಂಗಾಯತರು ರಾಜ್ಯದ ಜನಸಂಖ್ಯೆಯ ಸುಮಾರು 11% ಮತ್ತು ಒಕ್ಕಲಿಗರು 10.3% ರಷ್ಟಿದ್ದಾರೆ ಎಂದು ಹೇಳಲಾಗಿದೆ. ಆದರೆ ಈ ಸಮುದಾಯಗಳ ಮುಖಂಡರು ತಮ್ಮ ಜನಸಂಖ್ಯೆಯು ಈ ಅಂಕಿ ಅಂಶಗಳಿಗಿಂತ ಹೆಚ್ಚಾಗಿದೆ ಎಂದು ವಾದಿಸುತ್ತಿದ್ದಾರೆ. ಕೆಲವರು ಹೊಸದಾಗಿ ಸಮೀಕ್ಷೆ ನಡೆಸುವಂತೆ ಒತ್ತಾಯಿಸಿದ್ದಾರೆ. ವರದಿಯಲ್ಲಿ ಮುಸ್ಲಿಂ ಜನಸಂಖ್ಯೆಯನ್ನು ಸುಮಾರು 12.9% ಎಂದು ತೋರಿಸಲಾಗಿದೆ. ಇವರ ಮೀಸಲಾತಿಯನ್ನು ಶೇ.4 ರಿಂದ 8ಕ್ಕೆ ಹೆಚ್ಚಿಸಲು, ಒಬಿಸಿ ಮೀಸಲಾತಿಯನ್ನು ಶೇ. 32ರಿಂದ ರಿಂದ ಶೇ.51ಕ್ಕೆ ಹೆಚ್ಚಿಸಲು ಶಿಫಾರಸು ಮಾಡಲಾಗಿದೆ. ವರದಿಯ ಶಿಫಾರಸುಗಳನ್ನು ಜಾರಿಗೊಳಿಸಿದರೆ, ರಾಜ್ಯದಲ್ಲಿ ಒಟ್ಟು ಮೀಸ ಲಾತಿ 70%ಕ್ಕಿಂತ ಹೆಚ್ಚಾಗಬಹುದು. ಇದು ಕಾನೂನು ತೊಡಕುಗಳನ್ನು ಉಂಟುಮಾಡಬಹುದು. ಸದ್ಯಕ್ಕೆ ಈ ಸಮೀಕ್ಷಾ ವರದಿ ರಾಜಕೀಯ ದಾಳವಾಗಿ ಬಳಕೆಯಾಗಬಹುದೇ ಹೊರತು ನೈಜ ಉದ್ದೇಶವನ್ನು ಸಾಧಿಸುವ ಸಾಧ್ಯತೆ ಕಡಿಮೆ.

### ಸೊಂಪಾದಕೀಯ

## ಹುಂಜ ಜಾ..ಜಾ..

ಮೈನೆ ಪ್ಯಾರ್ ಕಿಯಾ ಚಿತ್ರದ ಹಿಟ್ ಹಾಡು ಕಬೂತರ್ ಜಾ ಜಾ ಸಿನಿರಸಿಕರಿಗೆ ಇಷ್ಟ ಆಗಿದ್ರೆ, ಇಲ್ಲೊಬ್ಬ ವೃದ್ಧರು ಪಾರಿವಾಳದ ಬದಲು ಹುಂಜ ಜಾ..ಜಾ.. ಎನ್ನುತ್ತಿದ್ದಾರೆ. ಪಾಪ ಹೇಳಿ ಕೇಳಿ ಬೆಳಗ್ಗೆದ್ದು ಕೂಗೋದು, ಜನರನ್ನು ಎಚ್ಚರಿಸೋದು ಹುಂಜದ ಕೆಲಸ. ಆದರೆ ಅದನ್ನು ನಿಯತ್ತಾಗಿ ಮಾಡಿದ್ದಕ್ಕೆ ಈಗ ವಿಷಯ ಕೋಳಿಯ ಕುತ್ತಿಗೆಗೆ ಬಂದಿದೆ. ಲೋಕದಾ ಡೊಂಕ ನೀವೇಕೆ ತಿದ್ದುವಿರಿ. ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ಎನ್ನುವಂತೆ, ಎಲ್ಲರನ್ನೂ ಎಚ್ಚರಿಸೋದು ಬ್ಯಾಡ, ನಿನ್ ಕೆಲಸ ನೀನು ನೋಡ್ಕೋ ಅಂತ ಹುಂಜದ ಮೇಲೆ ಗರಂ ಆಗಿದ್ದಾರೆ ಈ ಸೀನಿಯರ್ ಸಿಟಿಜನ್. ಈ ಹುಂಜ ತೀರಾ ಬೆಳಗಿನ ಜಾವದಲ್ಲಿ ಕೂಗಿ ಎಲ್ಲರನ್ನೂ ಎಚ್ಚರಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲವೇನೋ. ತೀರಾ ಮೂರು ಗಂಟೆಯ ನಸುಕಿನಲ್ಲೇ ಎದ್ದು ಕೂಗಿದರೆ ಪಾಪ ಡಿಸ್ಟರ್ಬ್ ಆಗದೇ ಇರುತ್ತದೆಯೇ? ಈ ಹುಂಜ ಪ್ರತಿದಿನ 3ಕ್ಕೆ ಎದ್ದು ವರಾತ ತೆಗೆಯುತ್ತದೆ. ಇದು ಅಷ್ಟು ಬೆಳಗ್ಗೆ ಎದ್ದು ಕೂಗೋದ್ರಿಂದ ನನಗೆ ನಿದ್ದೆ ಬರುತ್ತಿಲ್ಲ, ಅದರ ವಿರುದ್ಧ ಕ್ರಮ ಕೈಗೊಳ್ಳಿ ಅಂತ ಕೇರಳದ ಪತ್ತನಂತಿಟ್ಟ ಜಿಲ್ಲೆಯ ಪಳ್ಳಿಕಲ್ ಗ್ರಾಮದ ಹುಂಜ ಸಂತ್ರಸ್ತ ರಾಧಾಕೃಷ್ಣ ಕುರುಪ್ ಅವರು ಅಡೂರು ಕಂದಾಯ ವಿಭಾಗೀಯ ಕಚೇರಿಯಲ್ಲಿ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳಲು ಆಗ್ರಹ ಮಾಡಿದ್ದಾರೆ. ನೆರೆಮನೆ ನಿವಾಸಿ ಅನಿಲ್ ಕುಮಾರ್ ಅವರಿಗೆ ಈಗ ಅಧಿಕಾರಿಗಳು ಹುಂಜವನ್ನು ಹದ್ದುಬಸ್ತಿನಲ್ಲಿಡಲು ಆದೇಶ ಮಾಡಿದ್ದಾರೆ. ಅದು ಆಗದಿದ್ದರೆ ಅವರ ಪೌಲ್ಟ್ರಿ ಫಾರ್ಮ್ ಅನ್ನು ಬೇರೆ ಕಡೆ ಸ್ಥಳಾಂತರ ಮಾಡಲು ಹೇಳಿದ್ದಾರೆ. ಒಟ್ಟಿನಲ್ಲಿ ಲೋಕದ ಜನರನ್ನು ಎಚ್ಚರಿಸುವ ಕೆಲಸ ಮಾಡಿದರೆ ನಿಮಗೆ ಕುತ್ತು ಬಂದು ಅದು ನಿಮ್ಮ ಕುತ್ತಿಗೆಗೇ ಬರುತ್ತದೆ ಅನ್ನೋ ಮಾತು ಮತ್ತೆ ಪ್ರೂವ್ ಆಗಿದೆ.

### ಸಂಪಾದಕರ ಸದ್ಯಶೋಧನೆ

## ಅತಿ ಕೆಲಸ ತರುವ ಕುತ್ತು

ಇತ್ತೀಚೆಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಶ್ನೆಯೊಂದಕ್ಕೆ, 'ನಮ್ಮ ದೇಶದಲ್ಲಿ ಕರೋಶಿ ಪದ್ಧತಿಯನ್ನು ಜಾರಿಗೆ ತರುವುದಿಲ್ಲ. ಯಾರು, ಎಷ್ಟು ಹೊತ್ತು ಕೆಲಸ ಮಾಡಬೇಕು ಎಂಬುದು ಕಂಪನಿಗೆ ಅಥವಾ ಉದ್ಯೋಗಿಗೆ ಸಂಬಂಧಪಟ್ಟದ್ದು' ಎಂದು ಉತ್ತರಿಸಿಬಿಟ್ಟರು. 'ಕರೋಶಿ' ಪದದ ಅರ್ಥ ಪತ್ರಿಕಾಗೋಷ್ಠಿಯಲ್ಲಿದ್ದ ಎಲ್ಲರಿಗೂ ಅರ್ಥವಾಯಿತಾ, ಇಲ್ಲವಾ ಗೊತ್ತಾಗಲಿಲ್ಲ. ನಾನೂ ಆ ಪದವನ್ನು ಕೇಳಿರಲಿಲ್ಲ. ನಂತರ ಇದು ಮೂಲತಃ ಜಪಾನಿ ಮೂಲದ್ದು ಎಂದು ಗೊತ್ತಾದ ಬಳಿಕ, ಜಪಾನಿನಲ್ಲಿರುವ ನನ್ನ ಸ್ನೇಹಿತರೊಬ್ಬರನ್ನು ಕೇಳಿದೆ. ಅವರು ಆ ಪದದ ಅರ್ಥ ಹೇಳಿದಾಗಲೇ, ಅದೊಂದು ಜಾಗತಿಕ ಪಿಡುಗು ಎಂದು ಗೊತ್ತಾಗಿದ್ದು. 'ಕರೋಶಿ' ಅಂದ್ರೆ' ಅತಿಯಾದ ಕೆಲಸ ಮಾಡಿ ಸಾಯುವುದು' ಎಂದರ್ಥ. 1970ರ ದಶಕದಲ್ಲಿ ಈ ಪದ ಜನಪ್ರಿಯವಾಯಿತು, ಆದರೆ 1980ರ ನಂತರದಿಂದ ಇದು ಜಪಾನಿನಲ್ಲಿ ಬಹಳ ಗಂಭೀರ ಸಾಮಾಜಿಕ ಸಮಸ್ಯೆಯಾಗಿ ಬೆಳೆಯತೊಡಗಿತು. ಕೆಲವು ಉದ್ಯೋಗಿಗಳು ಆರೋಗ್ಯ ಸಮಸ್ಯೆಗೊಳಗಾಗಿ ಅಥವಾ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ ನಂತರ, ಈ ಪದವನ್ನು ಹೆಚ್ಚು ವ್ಯಾಪಕವಾಗಿ ಬಳಸಲಾಯಿತು. ಈ ಶತಮಾನದ ಆರಂಭದಲ್ಲಿ ಅಮೆರಿಕದಲ್ಲಿಯೂ ಅತಿಯಾದ ಕೆಲಸದ ಒತ್ತಡದಿಂದ ಸಾಯಲಾರಂಭಿಸಿದ ಪ್ರಕರಣಗಳು ಜರುಗಿದಾಗ ಈ ಪದ ಮತ್ತಷ್ಟು ಮುನ್ನೆಲೆಗೆ ಬಂದಿತು. ಜಪಾನಿ ಮೂಲದ ಈ ಪದವನ್ನು ಇಂಗ್ಲಿಷಿನಲ್ಲೂ ಬಳಸಲಾರಂಭಿಸಿದರು. 1991ರಲ್ಲಿ ಮಾತ್ಸುಶಿತಾ ಕಂಪನಿಯ ಯುವ ಉದ್ಯೋಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಳು. 24 ವರ್ಷದ ಯುವತಿ, ಆತ್ಮಹತ್ಯೆಗೆ ಶರಣಾದಾಗ, ಆಕೆ ವಾರದಲ್ಲಿ 90 ಗಂಟೆಗಳಷ್ಟು ಕೆಲಸ ಮಾಡುತ್ತಿರುವುದೇ ಕಾರಣ ಎಂಬುದು ಗೊತ್ತಾಯಿತು. ಇದಾದ ಬಳಿಕ ಅತಿಯಾದ ಕೆಲಸದ ಒತ್ತಡ ಒಂದು ರಾಷ್ಟ್ರೀಯ ಸಮಸ್ಯೆ ಎಂಬಂತೆ ಬಿಂಬಿತವಾಯಿತು. ಈ ಘಟನೆ ಬಳಿಕ ಜಪಾನಿನಲ್ಲಿ ಪ್ರತಿ ಎರಡು ತಿಂಗಳಿಗೆ ಈ ಕಾರಣ ನೀಡಿ ಒಂದಾದರೂ ಆತ್ಮಹತ್ಯೆ ಪ್ರಸಂಗ ಬೆಳಕಿಗೆ ಬರುತ್ತಿರುವುದು ಇದರ ಗಂಭೀರ ಸ್ವರೂಪವನ್ನು ಬಹಿರಂಗಪಡಿಸುತ್ತಲೇ ಇದೆ. ಹತ್ತು ವರ್ಷಗಳ ಹಿಂದೆ ಸಹ (2015ರಲ್ಲಿ) ಜಪಾನಿನ ದೊಡ್ಡ ಜಾಹೀರಾತು ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವ ಉದ್ಯೋಗಿಯೊಬ್ಬ ಆತ್ಮಹತ್ಯೆಗೆ ಶರಣಾದ. ಆತ ತಿಂಗಳಿಗೆ 100 ಗಂಟೆಗಳಿಗೂ ಅಧಿಕ ಓವರ್‌ಟೈಮ್ ಕೆಲಸ ಮಾಡಿ ಆತ್ಮಹತ್ಯೆ ಮಾಡಿಕೊಂಡ. ಆತ್ಮಹತ್ಯೆಗೂ ಮುನ್ನ ಕರೋಶಿಯ ಸ್ಥಿತಿಯನ್ನು ಜನರ ಗಮನಕ್ಕೆ ತಂದ. ದೊಡ್ಡ ದೊಡ್ಡ ಕಂಪನಿಗಳಲ್ಲಿ ಜನರನ್ನು ಜೀತದಾಳುಗಳಿಗಿಂತ ಕಡೆಯಾಗಿ ಕೆಲಸ ಮಾಡಿಸಿಕೊಳ್ಳುತ್ತಿರುವ ದಾರುಣ ಸ್ಥಿತಿಯ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲಿದ. ಜಪಾನಿನ ಉದ್ಯೋಗಿಗಳು ವಾರಕ್ಕೆ ಸರಾಸರಿ 70 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುತ್ತಾರೆ. ಕೆಲವೊಮ್ಮೆ ಕೆಲಸದ ಸಮಯ ಮಧ್ಯರಾತ್ರಿಯವರೆಗೂ ಹೋಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಕಚೇರಿಯಲ್ಲಿಯೇ ಕಾಲ ಕಳೆಯುವುದು, ಅಲ್ಲಿಯೇ ಮಲಗುವುದು ಸಾಮಾನ್ಯ. ಜನರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗಲೇ ಕರೋಶಿಗೆ ಅನುಮತಿ ಪಡೆಯುವುದು ವಾಡಿಕೆ. ಜಪಾನಿನಲ್ಲಿ ಜನ ಉದ್ಯೋಗವನ್ನು ಕಳೆದುಕೊಳ್ಳುವ ಭಯದಿಂದ ಅಥವಾ ಕಂಪನಿಗೆ ನಿಷ್ಠೆ ತೋರಲು ಕೆಲಸದ ಒತ್ತಡವನ್ನು ಸಹಿಸಿಕೊಂಡು ಅವುಡುಗಚ್ಚಿ ಕೆಲಸ ಮಾಡುತ್ತಾರೆ. ಇದಕ್ಕೆ ಜಪಾನಿನಲ್ಲಿ 'ಗಾಂಬಾರೆ' ಮನೋಭಾವನೆ ಅಂತಾರೆ. 'ಗಾಂಬಾರೆ' ಅಂದ್ರೆ 'ಪ್ರಯತ್ನಿಸು, ಬಿಡಬೇಡ' ಎಂದರ್ಥ. ಅಂದರೆ ನಿನಗಿಂತ ನಿನ್ನ ಕೆಲಸವೇ ಹೆಚ್ಚು, ನಿನ್ನ ಸಂಸ್ಥೆಯೇ ಹೆಚ್ಚು ಎಂಬ ಭಾವನೆಯನ್ನು ಸಿಬ್ಬಂದಿಯಲ್ಲಿ ಬಿತ್ತುವುದು. ಇದು ಕೆಲವೊಮ್ಮೆ ಅತಿಯಾದ ನಿರೀಕ್ಷೆ ಮತ್ತು ಒತ್ತಡವನ್ನು ಹೆಚ್ಚಿಸುತ್ತದೆ. ಅಲ್ಲಿ ಕೆಲಸ ಬಿಡುವುದು ಅಪಮಾನವೆಂದು ಪರಿಗಣಿಸುವ ಮನೋಭಾವ ಇದೆ. ಹೀಗಾಗಿ ಅಲ್ಲಿನ ಸಿಬ್ಬಂದಿ ಅವಮಾನ, ಒತ್ತಡಗಳನ್ನು ನುಂಗಿಕೊಂಡು ಕೆಲಸ ಮಾಡುವುದು ಸಾಮಾನ್ಯ. ದೀರ್ಘಾವಧಿಯ ಒತ್ತಡ, ನಿದ್ರಾಹೀನತೆ, ಆಹಾರ ವ್ಯತ್ಯಾಸದಿಂದ ಹೃದಯಾಘಾತ, ಮಿದುಳಿಗೆ ಸಂಬಂಧಿಸಿದ ಸಮಸ್ಯೆಗಳು, ಕಿಡ್ನಿ ವೈಫಲ್ಯ ಉಂಟಾಗಬಹುದು. ನಿತ್ಯ ಒತ್ತಡದ ಕೆಲಸದಿಂದಾಗಿ ಅನೇಕರು ಆತ್ಮಹತ್ಯೆ ಮಾಡುವುದರಲ್ಲಿಯೂ ಕರೋಶಿಯ ಪಾತ್ರವಿದೆ. ಕುಟುಂಬ ದೊಂದಿಗೆ ಸಮಯ ಕಳೆಯಲಾಗದ ಕಾರಣ, ವೈವಾಹಿಕ ಜೀವನ, ಮಕ್ಕಳೊಂದಿಗೆ ಸಂಬಂಧಗಳು ಹಾಳಾಗುತ್ತವೆ. ಅಲ್ಲಿನ ಸರಕಾರ ಈ ಸಮಸ್ಯೆಗೆ ಸುಮ್ಮನೆ ಕುಳಿತಿಲ್ಲ. 'ಕಾರ್ಯ ವಿಧಾನ ಸುಧಾರಣೆ' (Work Style Reform) ಎಂಬ ಹೆಸರಿನಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ಪ್ರತಿನಿತ್ಯ ಕೆಲಸದ ಗಂಟೆಗಳ ಮೇಲಿನ ನಿಯಂತ್ರಣ, ವಾರದಲ್ಲಿ ಕಡ್ಡಾಯವಾಗಿ ವಿಶ್ರಾಂತಿ ದಿನ, ಓವರ್‌ಟೈಮ್ ಮಿತಿ ಸೇರಿವೆ. ಆದರೂ ಕರೋಶಿ ಬೇರೆ ಆಯಾಮಗಳಲ್ಲಿ ತನ್ನ ಕರಾಳ ಮುಖವನ್ನು ತೋರುತ್ತಲೇ ಬರುತ್ತಿದೆ.

# ನಮ್ಮಂತೆ ಅವರೂ ದ್ವೀಪ ನಿರ್ಮಿಸುತ್ತಿದ್ದಾರೆ, ಆದರೆ ಎಷ್ಟು ವ್ಯತ್ಯಾಸ?

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

Dubai will never settle for anything less than first place.'

ಹೀಗೆಂದು ಹೇಳಿದವರು ಅಲ್ಲಿನ ರೂಲರ್, ಶೇಕ್ ಮಹಮದ್ ಬಿನ್ ರಶೀದ್ ಅಲ್ ಮಕ್ತೋಮ್. ದುಬೈಯಲ್ಲಿ ಕಾಣುವ ಪ್ರತಿ ಅಚ್ಚರಿಯ ಹಿಂದೆಯೂ ಈ ವಾಕ್ಯವಿದೆ ಮತ್ತು ಮಕ್ತೋಮ್ ಇದ್ದಾರೆ. ಏನೇ ಮಾಡಿದರೂ ಅದನ್ನು ಇಡೀ ಜಗತ್ತೇ ಮೂಗಿನ ಮೇಲೆ ಬೆರಳಿಟ್ಟು ನೋಡಬೇಕು, ಇಲ್ಲದಿದ್ದರೆ ಏನನ್ನೂ ಮಾಡದೇ ಸುಮ್ಮನಿರುವುದೇ ಲೇಸು ಎಂಬುದು ಅವರ ಸಿದ್ಧಾಂತ. ಅಲ್ಲಿ ಅಸಾಧ್ಯ ಎಂಬ ಮಾತನ್ನು ಕೇಳಲು ಸಾಧ್ಯವೇ ಇಲ್ಲ. ಯಾರಾದರೂ 'ಇದು ನಿಮ್ಮಿಂದ ಸಾಧ್ಯವಾಗದು' ಎಂದು ಮಕ್ತೋಮ್ ಮುಂದೆ ಹೇಳಿದರೆ, ಅದನ್ನು ಅವರು ಸಾಧ್ಯ ಮಾಡುವ ತನಕ ವಿರಮಿಸುವುದಿಲ್ಲ, ಇದನ್ನು ಒಂದಲ್ಲ, ನೂರಕ್ಕೂ ಹೆಚ್ಚು ಸಲ ಅವರು ಮಾಡಿ ತೋರಿಸಿದ್ದಾರೆ. 'ಕನಸನ್ನು ಕಾಣಲೂ ಗುಂಡಿಗೆ ಬೇಕು' ಎಂಬುದನ್ನು ಅವರು ಸಾಬೀತು ಮಾಡಿದ್ದಾರೆ. There is no problem that Dubai can't solve ಎಂಬುದು ಅವರ ಪರಮ ಧ್ಯೇಯ ವಾಕ್ಯ. ಜಗತ್ತಿನ ಇತರ ದೇಶಗಳ ನಾಯಕರು ಇಲ್ಲದ ಉಸಾಬರಿಯಲ್ಲಿ ತಲೆ ಕೆಡಿಸಿಕೊಂಡಿದ್ದರೆ, ಮಕ್ತೋಮ್ ಮಾತ್ರ ದುಬೈಯನ್ನು ಮತ್ತಷ್ಟು ಅಭಿವೃದ್ಧಿ ಮಾಡುವುದು ಹೇಗೆ, ದುಬೈ ಮಟ್ಟವನ್ನು ಇನ್ನಷ್ಟು ಎತ್ತರಿಸುವುದು ಹೇಗೆ, ಅಲ್ಲಿ ಮತ್ತಷ್ಟು ಅಚ್ಚರಿಗಳನ್ನು ಬಿತ್ತುವುದು ಹೇಗೆ ಎಂಬ ಬಗ್ಗೆ ತಲೆ ಕೆಡಿಸಿಕೊಂಡಿರುತ್ತಾರೆ.

ದುಬೈಗೆ ಒಂದು ವರ್ಷವಲ್ಲ, ಒಂದು ತಿಂಗಳು ಬಿಟ್ಟು ಹೋಗಿ, ಅಲ್ಲೊಂದು ಗಗನಚುಂಬಿ ಕಟ್ಟಡ ತಲೆಯೆತ್ತಿ ನಿಂತಿರುತ್ತದೆ, ವಿಚಿತ್ರ ಆಕಾರದ ಬಹುಮಹಡಿ ಕಟ್ಟಡ ಆಗಸಕ್ಕೆ ಕತ್ತು ಚಾಚಿರುತ್ತದೆ, ಇಲ್ಲವೇ ಇನ್ನೊಂದು ವಿಸ್ಮಯ ಅರಳಿರುತ್ತದೆ. In Dubai ambition is the only currency that never loses value ಎಂಬ ಮಾತು ನೂರಕ್ಕೆ ನೂರು ಸತ್ಯ. ದುಬೈ ಹಣವಂತರ ದೇಶ ಎನ್ನುವುದು ಸುಳ್ಳು. ಅದು ಕನಸು ಕಾಣುವವರ, ಕನಸು ನನಸಾಗಿಸುವವರ, ಸಾಧನೆಯ ಮೂಲಕ ಮಾತಾಡುವವರ, ಪಾಸಿಟಿವ್ ಮನೋಭಾವವೊಂದೇ ಗೆಲ್ಲುತ್ತದೆಂದು ನಂಬಿದವರ ದೇಶ. ಬೆಂಗಳೂರಿನಲ್ಲಿ ಹಣವಂತರಿಗೇನೂ ಕೊರತೆಯಿಲ್ಲ. ಆದರೆ ಬೆಂಗಳೂರು ದುಬೈ ಆಗಿಲ್ಲ, ಅದು ಆಗುವುದೂ ಇಲ್ಲ. ಕಾರಣ ಹಣವೊಂದನ್ನೇ ಇಟ್ಟುಕೊಂಡು ಹೊಸತೇನನ್ನೂ, ಅದ್ಭುತವಾದುದೇನನ್ನೂ ಸಾಧಿಸಲು ಸಾಧ್ಯವಿಲ್ಲ. ನಮಗಿನ್ನೂ ಹಳ್ಳ-ಗುಂಡಿಗಳಿಲ್ಲದ, ಉಬ್ಬು-ತಗ್ಗುಗಳಿಲ್ಲದ ಎರಡು ಕಿಮೀ ಉದ್ದದ ರಸ್ತೆಯನ್ನೇ ನೆಟ್ಟಗೆ ನಿರ್ಮಿಸಲು ಸಾಧ್ಯವಾಗಿಲ್ಲ. ಅಷ್ಟಕ್ಕೂ ದುಬೈಗೂ-ಬೆಂಗಳೂರಿಗೂ ಹೋಲಿಕೆಯೇ ಸರಿ ಅಲ್ಲ, ಬಿಡಿ.

ನಾನು ಕಳೆದ ಇಪ್ಪತ್ತು ವರ್ಷಗಳಲ್ಲಿ ದುಬೈಗೆ ಏನಿಲ್ಲವೆಂದರೂ ಐವತ್ತು ಸಲ ಹೋಗಿರಬಹುದು. (ಆದರೂ ರನ್ಯಾ ರಾವ್ ದಾಖಲೆ ಮುರಿಯಲು ಸಾಧ್ಯವಾಗಿಲ್ಲ, ಅದು ಬೇರೆ ಮಾತು) ಪ್ರತಿ ಭೇಟಿಯೂ ನನಗೆ ಹೊಸತು ಎಂಬಂಥ ಅಚ್ಚರಿಯನ್ನು ನೀಡಿರುವುದು ಸುಳ್ಳಲ್ಲ. ಕೆಲವು ಸಲ ನಾನು ದುಬೈನಲ್ಲಿ ಏನೂ ಮಾಡದೇ, ರೈಲು ಹಳಿ ಪಕ್ಕದಲ್ಲಿ ಕುಳಿತ ಕಪ್ಪೆಯಂತೆ, ಸುಮ್ಮನೆ ಅಲ್ಲಿನ ವಾಹನ, ಜನ, ಕಟ್ಟಡಗಳನ್ನು ನೋಡಿ ಎದ್ದು ಬಂದಿದ್ದೇನೆ. ಹಾಗೆ ಬರುವಾಗ, ನನಗೂ ಆ ಕಪ್ಪೆಗೂ ಹೆಚ್ಚಿನ ವ್ಯತ್ಯಾಸವಿಲ್ಲ ಎಂದು ಅನಿಸಿದೆ. ಆದರೆ ಪ್ರತಿ ಸಲವೂ ಮನುಷ್ಯ ಪ್ರಯತ್ನದ ಅಸಾಧಾರಣ ಸಾಧ್ಯತೆ, ಆ ಸಾಧ್ಯತೆ ಹೊತ್ತು ತರುವ ಆಶ್ಚರ್ಯಗಳು ನನ್ನನ್ನು ತಬ್ಬಿಬ್ಬುಗೊಳಿಸಿದ್ದು ಸುಳ್ಳಲ್ಲ. ದುಬೈಯಲ್ಲಿ ಈ ವರ್ಷಕ್ಕೂ, ಹಿಂದಿನ ವರ್ಷಕ್ಕೂ ವ್ಯತ್ಯಾಸವೇನು ಎಂದು ಯಾರಾದರೂ ಕೇಳಿದರೆ ಅದಕ್ಕೆ ಉತ್ತರ - ಕನಿಷ್ಠ ನೂರು ಬಹುಮಹಡಿ ಕಟ್ಟಡಗಳು! ಹಾಗಂತ ನನಗೆ ಅಲ್ಲಿನ ಕಟ್ಟಡ, ದುಬಾರಿ ವಾಹನ, ಶ್ರೀಮಂತಿಕೆ, ಐಷಾರಾಮಿ ಜೀವನ ಎಂದೂ ಆಕರ್ಷಿಸಿಲ್ಲ, ಆದರೆ ಮನುಷ್ಯ ಪ್ರಯತ್ನಕ್ಕೆ ಎಂದೂ ಸೋಲಿಲ್ಲ ಎಂಬ ಮಾತು ಪ್ರತಿ ಬಾರಿಯೂ ಅಲ್ಲಿ ಗೆಲ್ಲುತ್ತಿರುವುದು ಮಾತ್ರ ವಿಶೇಷವಾಗಿ ಕಂಡಿದೆ.

ಕೆಲ ದಿನಗಳ ಹಿಂದೆ ದುಬೈಗೆ ಹೋದಾಗ, ನನ್ನ ಆತ್ಮೀಯ ಸ್ನೇಹಿತರಾದ ಶಶಿಧರ ನಾಗರಾಜಪ್ಪ ಮತ್ತು ನಿಲೇಶ್ ಅವರು, ದುಬೈ ಸಮುದ್ರ ಕಿನಾರೆಯಿಂದ ತುಸು ದೂರದಲ್ಲಿ The World Islands ತಲೆ ಎತ್ತುತ್ತಿರುವ ಬಗ್ಗೆ ಪ್ರಸ್ತಾಪಿಸಿದ್ದರು. ಇದನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಸುಮಾರು ಮುನ್ನೂರು ಮಾನವ ನಿರ್ಮಿತ ಕೃತಕ ದ್ವೀಪಗಳನ್ನು ದುಬೈ ಸಮುದ್ರದಲ್ಲಿ ನಿರ್ಮಿಸುವುದು. ಆ ಹೊತ್ತಿಗೆ ದುಬೈ ಹೊರವಲಯದಲ್ಲಿ ತಾಳೆ ಮರದ ಗರಿಯ ಆಕಾರದಲ್ಲಿ 'ಪಾಮ್ ಜುಮೇರಾ' ಸಮೂಹ ವಸತಿಗೃಹಗಳನ್ನು ನಿರ್ಮಿಸಿ, ಮಕ್ತೋಮ್ ಜಗತ್ತಿನ ಮುಂದೆ ಹೊಸ ಅಚ್ಚರಿಯ ಮರಿ ಮಾಡಿ ಇಟ್ಟಿದ್ದರು. ಇಂದಿಗೂ ಪಾಮ್ ಜುಮೇರಾ ಒಂದು ಸೊಗಸಾದ ನನಸಾದ ಕನಸು! ಆದರೂ ಸಮುದ್ರದಲ್ಲಿ ಮುನ್ನೂರು ದ್ವೀಪಗಳನ್ನು ನಿರ್ಮಿಸುತ್ತೇವೆ ಎಂದು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ದುಬೈ ಸರಕಾರ ಘೋಷಿಸಿದಾಗ, ಅನೇಕರು ಅಚ್ಚರಿಯ ಜತೆಗೆ ನಕಾರಾತ್ಮಕವಾಗಿ ರಾಗ ಎಳೆದಿದ್ದರು. 'ಅವೆಲ್ಲ ಆಗು-ಹೋಗುವ ವಿಚಾರವೇನ್ರೀ?' ಎಂದು ಸೊಲ್ಲೆತ್ತಿದ್ದರು.

ಆದರೆ ಈಗ ಆ ಯೋಜನೆ ಒಂದೊಂದಾಗಿ ಸಾಕಾರವಾಗುತ್ತಿದೆ. ಇದು ಮಾನವ ಸೃಷ್ಟಿಯ ಭವ್ಯ ದ್ವೀಪ ಸಮೂಹ ಎಂಬುದರಲ್ಲಿ ಎರಡು ಮಾತಿಲ್ಲ. 'ದಿ ವರ್ಲ್ಡ್ ಐಲ್ಯಾಂಡ್ಸ್' ಪ್ರವಾಸೋದ್ಯಮ, ರಿಯಲ್ ಎಸ್ಟೇಟ್ ಹಾಗೂ ವಿಶ್ವಮಟ್ಟದ ಆಧುನಿಕ ವಾಸ್ತು ವಿಜ್ಞಾನದ ಅದ್ಭುತ ತಂತ್ರಗಾರಿಕೆಯ ಪ್ರತಿರೂಪವಾಗಿದೆ. 'ದಿ ವರ್ಲ್ಡ್ ಐಲ್ಯಾಂಡ್ಸ್'ನ್ನು ನಿಖರವಾಗಿ ಭೂಮಿಯ ನಕ್ಷೆಯಂತೆ ರೂಪಿಸಲಾಗಿದೆ. ಪ್ರತಿ ದ್ವೀಪವು ಭೂಗೋಳದ ವಿಭಿನ್ನ ರಾಷ್ಟ್ರ ಅಥವಾ ಖಂಡವನ್ನು ಪ್ರತಿನಿಧಿಸುತ್ತದೆ. ಇವು ದುಬೈದ ಕರಾವಳಿಯಿಂದ ಸುಮಾರು ಹತ್ತು ಕಿಮೀ ದೂರದಲ್ಲಿದೆ. ದ್ವೀಪಗಳು ಪರ್ಸಿಯನ್ ಕೊಲ್ಲಿಯ ದಡದಿಂದ ಸುತ್ತಲೂ ಆವರಿಸಿದೆ. ಈ ಪ್ರದೇಶ ಒಂಬತ್ತು ಕಿಮೀ ಉದ್ದ ಹಾಗೂ ಆರು ಕಿಮೀ ಅಗಲವಿದೆ. ಇದು ಒಟ್ಟು 55 ಚದರ ಕಿ.ಮೀ ಪ್ರದೇಶವನ್ನು ವ್ಯಾಪಿಸಿದೆ. ದ್ವೀಪಗಳ ನಿರ್ಮಾಣಕ್ಕಾಗಿ land reclamation (ಭೂಪ್ರಾಪ್ತಿಕರಣ) ವಿಧಾನವನ್ನು ಬಳಸಲಾಗಿದೆ.

ಸುಮಾರು 3.3 ಶತಕೋಟಿ ಘನ ಅಡಿಗಳ ಮರಳನ್ನು ಸಮುದ್ರದಿಂದ ತೆಗೆದು ಈ ದ್ವೀಪಗಳನ್ನು ರೂಪಿಸಲು ಬಳಸಲಾಗಿದೆ. ಪ್ರತಿ ದ್ವೀಪದ ಅಳತೆ ಸುಮಾರು 14,000 42,000 ಚದರ ಮೀಟರುಗಳಷ್ಟಿದೆ. ಒಂದು ದ್ವೀಪದಿಂದ ಇನ್ನೊಂದು ದ್ವೀಪ ಸುಮಾರು ನೂರು ಮೀಟರ್ ದೂರದಲ್ಲಿವೆ.

ಈ ದ್ವೀಪಗಳಿಗೆ ಹೋಗಲು ಬೋಟುಗಳು ಅಥವಾ ಹೆಲಿಕಾಪ್ಟರ್ ವ್ಯವಸ್ಥೆ ಒದಗಿಸಲಾಗಿದೆ. ರಸ್ತೆ ಅಥವಾ ಸೇತುವೆಗಳ ಮೂಲಕ ಪ್ರವೇಶವಿಲ್ಲ. ಇದು ಇದರ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅಲ್ಲಿನ ನಿವಾಸಿಗಳ ಹೊರತಾಗಿ ಬೇರೆ ಯಾರಿಗೂ ಅಲ್ಲಿ ಪ್ರವೇಶವಿಲ್ಲ. ಸಮುದ್ರದ ಜೈವಿಕ ಪರಿಸರವನ್ನು ಕಾಪಾಡಲು ಮತ್ತು ನೈಸರ್ಗಿಕ ಭಾಗಗಳನ್ನು ಸಂರಕ್ಷಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸಮುದ್ರದಲ್ಲಿ ಬಲವಾದ ಬಂಡೆಗಳನ್ನು ಗೋಡೆಯಂತೆ ನಿಲ್ಲಿಸಿ ಕಡಲ ಅಲೆಗಳ ಬಿರುಸನ್ನು ನಿಯಂತ್ರಿಸಲಾಗಿದೆ. ಈ ತಡೆಗೋಡೆಗಳು ಸುನಾಮಿ ಅಲೆಗಳ ಪರಿಣಾಮವನ್ನು ಕ್ಷೀಣಗೊಳಿಸಬಲ್ಲುದು. ಕೃತಕ ಕೋರಲ್ ರೀಫ್ಸ್ ನಿರ್ಮಾಣದಿಂದ ಜೀವವೈವಿಧ್ಯವನ್ನು ಉತ್ತೇಜಿಸಲಾಗಿದೆ. ಪ್ರತಿಯೊಂದು ದ್ವೀಪವನ್ನು ಅತ್ಯಂತ ಅಚ್ಚುಕಟ್ಟಾಗಿ, ಕರಾರುವಾಕ್ಕಾಗಿ ವಿಂಗಡಿಸಲಾಗಿದೆ. ವಾಸದ ದ್ವೀಪ, ಕೆಲವೊಂದು ರೆಸಾರ್ಟ್, ಇನ್ನು ಕೆಲವು ಹೋಟೆಲ್ ಮತ್ತು ಇನ್ನು ಕೆಲವು ವಾಣಿಜ್ಯ ಉದ್ದೇಶ (ಮಾಲ್, ಅಂಗಡಿ, ಮಲ್ಟಿಪ್ಲೆಕ್ಸ್ ಇತ್ಯಾದಿ) ಗಳಿಗೆ ಬಳಸಲಾಗುತ್ತವೆ. ಪ್ರತಿ ದ್ವೀಪವನ್ನು ಮತ್ತು ಅಲ್ಲಿ ಕಟ್ಟಿದ ಮನೆಗಳನ್ನು ಯಾರು ಬೇಕಾದರೂ ಖರೀದಿಸಬಹುದು. ಕೆಲವು ಖಾಸಗಿ ದ್ವೀಪಗಳು ಈಗಾಗಲೇ ಪ್ರಸಿದ್ಧ ಸೆಲೆಬ್ರಿಟಿಗಳಿಗೆ, ಗಣ್ಯರಿಗೆ ಮಾರಾಟವಾಗಿವೆ.

2003ರಲ್ಲಿ ಘೋಷಿತವಾದ ಈ ಮಹತ್ವಾಕಾಂಕ್ಷೆ ಯೋಜನೆಯ ಕಾಮಗಾರಿ ಗುತ್ತಿಗೆಯನ್ನು ನಕೀಲ್ ಪ್ರಾಪರ್ಟೀಸ್ ಎಂಬ ಸಂಸ್ಥೆ ಕೈಗೊಂಡಿದ್ದು, ಇದು ದುಬೈ ಸರಕಾರದ ಅಂಗಸಂಸ್ಥೆಯಾಗಿದೆ. 2003 ರಿಂದ 2008 ರವರೆಗೆ ಪ್ರಮುಖವಾಗಿ ಭೂ ನಿರ್ಮಾಣದ ಪ್ರಕ್ರಿಯೆ ನಡೆಯಿತು. 2008ರ ಆರ್ಥಿಕ ಹಿನ್ನಡೆಯಿಂದಾಗಿ ಕಾಮಗಾರಿ ವಿಳಂಬವಾಯಿತು. ಅನೇಕ ಖರೀದಿದಾರರು ಹಿಂತಿರುಗಿದರೂ, ಯಾವ ಕಾರಣಕ್ಕೂ ಯೋಜನೆಯನ್ನು ಸ್ಥಗಿತಗೊಳಿಸದಿರಲು ದುಬೈ ಸರಕಾರ ನಿರ್ಧರಿಸಿತು. ಬಹುಪಾಲು ದ್ವೀಪಗಳು ಇನ್ನೂ ಸಂಪೂರ್ಣ ಅಭಿವೃದ್ಧಿಯಾಗಿಲ್ಲ. ಕೆಲವೊಂದು ದ್ವೀಪಗಳಲ್ಲಿ ಪ್ರಸ್ತುತ ರೆಸಾರ್ಟ್‌ಗಳು ಹಾಗೂ ವಿಶ್ರಾಂತಿ ಗೃಹಗಳು ಕಾರ್ಯನಿರ್ವಹಿಸುತ್ತಿವೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಸೇವೆಗಳು, ರೆಸ್ಟೋರೆಂಟ್‌ಗಳು, ವಿಲ್ಲಾಗಳು ಕಾರ್ಯಾರಂಭ ಮಾಡಿವೆ.

The Heart of Europe ಎಂಬ ಹೆಸರಿನ ದ್ವೀಪದ ಕಾಮಗಾರಿ ಸಂಪೂರ್ಣ ಮುಗಿದಿದ್ದು ಆ ದ್ವೀಪ ಈಗ ಗಿಜಗುಡುತ್ತಿದೆ. The Heart of Europe ಎಂದರೆ ಯುರೋಪಿನ ಶೈಲಿಯ ನಕ್ಷತ್ರ ದ್ವೀಪಗಳ ಸಮೂಹ. ಅಲ್ಲಿ ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರಿಯಾ, ಸ್ವೀಡನ್, ಮೊನಾಕೋ, ಜರ್ಮನಿ ಮತ್ತು ಫ್ರಾನ್ಸ್ ಗಳ ಪ್ರಾಕೃತಿಕ ಹಿನ್ನೆಲೆಯಲ್ಲಿ ಪ್ರತ್ಯೇಕ ದ್ವೀಪಗಳು ತಲೆ ಎತ್ತಿವೆ. ಇಲ್ಲಿ ತಾಪಮಾನ ನಿಯಂತ್ರಿತ ಬೀಚ್‌ಗಳು, ಹಿಮದ ಅನುಭವ ನೀಡುವ ವಾತಾವರಣವನ್ನು ಸೃಷ್ಟಿಸಲಾಗಿದೆ. ಯುರೋಪಿಯನ್ ಸಂಸ್ಕೃತಿಯ ಪ್ರತಿಬಿಂಬಿತ ಶೈಲಿಯನ್ನು ಅಲ್ಲಿ ನಿರ್ಮಿಸಲಾಗಿದೆ. The Heart of Europe ನಲ್ಲಿ ಒಂದೆಡೆ ಮಳೆ ಬೀಳುವ ರಸ್ತೆ (ರೈನಿಂಗ್ ಸ್ಟ್ರೀಟ್) ಯನ್ನು ನಿರ್ಮಿಸಲಾಗಿದೆ. ಅಲ್ಲಿ ಆಗಾಗ ಮಳೆ ಸುರಿಯುತ್ತಿರುತ್ತದೆ. ಹಾಗೆಯೇ ಹಿಮ ಸುರಿಯುವ ಬೀದಿಗಳನ್ನೂ ನಿರ್ಮಿಸಲಾಗಿದೆ. ತಾಪಮಾನ ನಿಯಂತ್ರಿತ ವಾತಾವರಣದಿಂದ ದುಬೈ ಬಿಸಿಲು ಪ್ರಭಾವ ಅಲ್ಲಿ ಗಣನೀಯವಾಗಿ ಕಡಿಮೆ. ಮಧುಚಂದ್ರ ದಂಪತಿಗಳಿಗೆ ಮತ್ತು ಐಷಾರಾಮಿ ಪ್ರವಾಸಿಗರಿಗೆಂದೇ ಪ್ರತ್ಯೇಕ ದ್ವೀಪವನ್ನು ಸೃಷ್ಟಿಸಲಾಗಿದೆ. ಶಾಪಿಂಗ್ ಗೆಂದೇ ಮೂರು ದ್ವೀಪವನ್ನು ನಿರ್ಮಿಸಲಾಗಿದೆ. ಉಳಿದ ಮುನ್ನೂರು ದ್ವೀಪಗಳಲ್ಲಿರುವ ವಾಸಿಗಳು ಆ ದ್ವೀಪಗಳಿಗೆ ಶಾಪಿಂಗ್ ಗೆಂದೇ ಹೋಗಬಹುದು.

ಇಲ್ಲಿನ ಹೋಟೆಲುಗಳಲ್ಲಿರುವ ರೂಮುಗಳಿಂದ ಹಿಡಿದು, ದ್ವೀಪಗಳಲ್ಲಿರುವ ವಿಲ್ಲಾಗಳು ಮತ್ತು ಮ್ಯಾನ್ಷನ್ ಗಳು ಮಾರಾಟಕ್ಕಿವೆ. ಐದು ಕೋಟಿ ರುಪಾಯಿಯಿಂದ ಮುನ್ನೂರು ಕೋಟಿ ರುಪಾಯಿವರೆಗೆ ಬೇರೆ ಬೇರೆ ವಿಧ-ವೈಖರಿ-ವಿಸ್ತೀರ್ಣ-ಸೌಲಭ್ಯಗಳ ಮನೆಗಳಿವೆ. ಜಗತ್ತಿನ ಪ್ರತಿಷ್ಠಿತ ವ್ಯಕ್ತಿಗಳು, ಶ್ರೀಮಂತರು, ಪ್ರಭಾವಿ ವ್ಯಕ್ತಿಗಳು, ಅತಿ ಗಣ್ಯರು, ಅನೇಕ ದೇಶಗಳ ನಾಯಕರು, ಬಾಲಿವುಡ್-ಹಾಲಿವುಡ್ ಸಿನಿಮಾ ನಟ-ನಟಿಯರು, ಶ್ರೀಮಂತ ಉದ್ಯಮಿಗಳು ಈಗಾಗಲೇ ಈ ದ್ವೀಪಗಳಲ್ಲಿ ಮನೆಗಳನ್ನು ಖರೀದಿಸಿದ್ದಾರೆ. ಇನ್ನು ಕೆಲವರು ಮುಂಗಡ ಹಣ ಕೊಟ್ಟು ತಮ್ಮ ಕನಸಿನ ಮನೆಗಳನ್ನು ಕಾಯ್ದಿರಿಸಿದ್ದಾರೆ. ಅಂದರೆ ಈ ಮೂಲಕ ದುಬೈಯನ್ನು ಜಗತ್ತಿನ ಶ್ರೇಷ್ಠರ ವಾಸಸ್ಥಾನವನ್ನಾಗಿ ಪರಿವರ್ತಿಸುವುದು ಉದ್ದೇಶ. ಈ ಜಗತ್ತಿನ ಮೇಲೆ ಪ್ರಭಾವ ಬೀರುವ ವ್ಯಕ್ತಿಗಳನ್ನು ಒಂದಿಲ್ಲೊಂದು ರೀತಿಯಲ್ಲಿ ದುಬೈಗೆ ಬೆಸೆಯಬೇಕೆಂಬುದು ಮುಖ್ಯ ಆಶಯ. ಜತೆಗೆ ದೊಡ್ಡ ಪ್ರಮಾಣದ ಬಂಡವಾಳವನ್ನು ಆಕರ್ಷಿಸಿ, ಆ ಹಣದಲ್ಲಿ ತಮ್ಮ ದೇಶವನ್ನು ಅಭಿವೃದ್ಧಿಪಡಿಸುವುದು ಉದ್ದೇಶ.

ಅಂಬಾನಿ, ಅದಾನಿ, ರಿಚರ್ಡ್ ಬ್ರಾನ್ಸನ್, ವಾರನ್ ಬಫೆಟ್, ಬಿಲ್ ಗೇಟ್ಸ್, ಜೆಫ್ ಬೆಜೋಸ್, ಮಾರ್ಕ್ ಜುಕರ್ ಬರ್ಗ್, ಸುಂದರ ಪಿಚಾಯ್, ಟಿಮ್ ಕುಕ್, ಶಹರುಖ್ ಖಾನ್, ಜೂನಿಯರ್ ಟ್ರಂಪ್... ಮುಂತಾದವರು ಒಂದೆಡೆ ನೆಲೆಸುವಂತಾದರೆ ಹೇಗಿದ್ದೀತು? ಜಗತ್ತಿನ ಐನೂರು ಶ್ರೀಮಂತರೆಲ್ಲ ಒಂದು ದ್ವೀಪ ಸಮೂಹದಲ್ಲಿ ವಾಸಿಸುವಂತಾದರೆ ಹೇಗಾದೀತು? ಒಂದು ಕ್ಷಣ ಯೋಚಿಸಿ.. ಇವರನ್ನೆಲ್ಲ ಒಂದೆಡೆ ಸೇರಿಸಬೇಕೆಂದರೆ ಸಮುದ್ರದಲ್ಲಿ ಕೃತಕ ದ್ವೀಪವನ್ನು ನಿರ್ಮಿಸಿ, ಅಲ್ಲಿ ಎಲ್ಲೂ ಸಿಗದ ಮೋಜು-ಮಸ್ತಿ-ಮಜಕೂರು, ಸೌಲಭ್ಯಗಳನ್ನು ಒದಗಿಸಬೇಕು. ಅವರೆಲ್ಲ ಈ ತನಕ ನೋಡದ ಚಮಕ್ ನ್ನು ತೋರಿಸಬೇಕು. ಅಲ್ಲಿಯೇ ಅವರು ಬಿಡಾರ ಹೂಡಬೇಕು. ಅದಕ್ಕೆ ಬೇಕಾದ ಎಲ್ಲ ಆಕರ್ಷಣೆಗಳನ್ನು ಅವರ ಕಾಲಬುಡದಲ್ಲಿಡಬೇಕು.

ದುಬೈ ಸರಕಾರ ಈಗ ಅದನ್ನೇ ಮಾಡುತ್ತಿದೆ. ಕೆಲವು ಮನೆಗಳನ್ನು ಸಮುದ್ರದ ಮೇಲೆಯೇ (ತೇಲು ಮನೆಗಳು) ನಿರ್ಮಿಸಲಾಗಿದೆ. ಆ ಮನೆಗಳಲ್ಲಿ ಬೆಡ್ ರೂಮ್ ನೀರಿನೊಳಗಿರುವುದು ವಿಶೇಷ. ಅಲ್ಲಿ ಮಲಗಿದರೆ ಜಲಚರಗಳನ್ನು ನೋಡಬಹುದು. ಭೂಮಿಯ ಮೇಲೆ ನಿರ್ಮಿಸಲಾಗದ ಮನೆಗಳನ್ನು ನೀರಿನೊಳಗೆ ನಿರ್ಮಿಸಿರುವುದು ಸೋಜಿಗವೇ. ಈ ಮನೆಗಳಿಗೆ ನೂರು ವರ್ಷ ಆಯಸ್ಸು. ಸಮುದ್ರದ ಮೇಲೆಯೇ ಅಲ್ಲಲ್ಲಿ ಸ್ಮಾರ್ಟ್ ಪೊಲೀಸ್ ಸ್ಟೇಷನ್ ಗಳು. ಫೋನ್ ಮಾಡಿದ ಕ್ಷಣಾರ್ಧದಲ್ಲಿ ಪೊಲೀಸರು ಹಾಜರ್!

ನಾವು ಇಲ್ಲಿ ಜಾತಿ ಗಣತಿ, ಹನಿಟ್ರ್ಯಾಪ್ ಬಗ್ಗೆ ತಲೆ ಕೆಡಿಸಿಕೊಂಡಿದ್ದೇವೆ. ಯಾವ ಜಾತಿಯವರು ಎಷ್ಟು ಜನರಿದ್ದಾರೆ ಎಂದು ಲೆಕ್ಕ ಹಾಕುತ್ತಾ ಕುಳಿತಿದ್ದೇವೆ. ಒಂದು ಧರ್ಮವನ್ನು ಸಾವಿರಾರು ಜಾತಿಗಳಾಗಿ ಒಡೆದು, ವ್ಯಕ್ತಿ-ವ್ಯಕ್ತಿಗಳ ನಡುವೆ ದ್ವೀಪ ನಿರ್ಮಿಸುತ್ತಿದ್ದೇವೆ. ಅವರು ಇಡೀ ಜಗತ್ತಿನ ಅತ್ಯುತ್ತಮ ತಲೆ (best brain) ಗಳನ್ನೆಲ್ಲ ಒಂದೇ ದ್ವೀಪ ಸಮೂಹದಲ್ಲಿ ಸೇರಿಸುತ್ತಿದ್ದಾರೆ. ಅವರನ್ನೆಲ್ಲ ಒಂದೆಡೆ ಸೇರಿಸಿ, ಹಣ ಮಾಡಿ, ತಮ್ಮ ದೇಶವನ್ನು ವಿಶ್ವದ ನಂಬರ್ ಒನ್ ಮಾಡುವುದು ಹೇಗೆ ಎಂದು ಯೋಚಿಸುತ್ತಿದ್ದಾರೆ. ಆಧುನಿಕ, ಉತ್ತಮ ಜೀವನಕ್ಕೆ ಏನು ಬೇಕು ಎಂಬುದನ್ನು ಅವರು ಕಂಡುಕೊಂಡಿದ್ದಾರೆ. ನಾವು ಜಾತಿ ಹೆಸರಿನಲ್ಲಿ ಶುದ್ಧ ಕಚಡಾಗಳಂತೆ ಇನ್ನೂ ಕಚ್ಚಾಡುತ್ತಿದ್ದೇವೆ. ಇದರಿಂದ ಇನ್ನಷ್ಟು ಇನ್ನಷ್ಟು ಹಿಂದಕ್ಕೆ ಹೋಗಲು ಸಾಧ್ಯವೇ ಹೊರತು, ಮುಂದಕ್ಕೆ ಹೋಗುವ ಲಕ್ಷಣವಲ್ಲ. ವ್ಯಕ್ತಿಗಳ ನಡುವೆ ದ್ವೀಪ ನಿರ್ಮಿಸುವುದಕ್ಕಿಂತ ವಿಶ್ವವನ್ನೇ ಒಂದು ಸಣ್ಣ ದ್ವೀಪವನ್ನಾಗಿ ಮಾಡುವ ಆಲೋಚನೆಯೇ ಅದ್ಭುತ!

# ಚೀನಾ ವಿರುದ್ಧ ಟ್ರಂಪ್ ಕಾರ್ಡ್ ಕೆಲಸ ಮಾಡುವುದೇ?

**ರಷ್ಯಾವನ್ನು ಹೊರತುಪಡಿಸಿ ಇನ್ನಾವ ಪ್ರಮುಖ ದೇಶಗಳೂ ಬಹಿರಂಗವಾಗಿ ಚೀನಾವನ್ನು ಬೆಂಬಲಿಸುವುದಿಲ್ಲ. ಇನ್ನುಳಿದ ಇಡೀ ಜಗತ್ತನ್ನು ತನ್ನ ಜೊತೆಗೆ ಇರಿಸಿಕೊಂಡು ಟ್ರಂಪ್ ಆರ್ಥಿಕ ಸಮರವನ್ನು ಮುನ್ನಡೆಸಿದರೆ ಚೀನಾ ಅಕ್ಷರಶಃ ಕಣ್ಣೀರು ಹಾಕಬೇಕಾಗುತ್ತದೆ. ಯಾವುದೇ ದೇಶಕ್ಕಾದರೂ ಅಮೆರಿಕವನ್ನು ಎದುರು ಹಾಕಿಕೊಳ್ಳುವುದು ಕಷ್ಟ.**

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಅಮೆರಿಕ ಫಸ್ಟ್ ಎಂದು ಘೋಷಣೆ ಮಾಡಿ, ಅಧಿಕಾರಕ್ಕೆ ಬಂದ ಬಳಿಕ ಅದನ್ನೇ ಕಾಯಾ ವಾಚಾ ಮನಸಾ ಅಳವಡಿಸಿಕೊಂಡು ಒಂದಾದ ಮೇಲೊಂದು ನಿರ್ಧಾರಗಳನ್ನು ತಾಪ್ಡತೋಪ್ಡ್ ಕೈಗೊಳ್ಳುತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ಜಗತ್ತಿನಲ್ಲಿ ಆರ್ಥಿಕ ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸಿದ್ದಾರೆ. ಆದರೆ, ಅವರು ಕೈಗೊಳ್ಳುತ್ತಿರುವ ನಿರ್ಧಾರಗಳನ್ನು ನೋಡಿದಾಗ ಉತ್ತರಕ್ಕಿಂತ ಹೆಚ್ಚು ಪ್ರಶ್ನೆಗಳೇ ಏಳುತ್ತವೆ. ಮೊದಲಿಗೆ ಅವರು 60 ದೇಶಗಳ ಮೇಲೆ ದುಬಾರಿ ತೆರಿಗೆ ವಿಧಿಸಿದರು. ಅಂದರೆ, ಆ 60 ದೇಶಗಳು ಅಮೆರಿಕಕ್ಕೆ ರಫ್ತು ಮಾಡುವ ವಸ್ತುಗಳಿಗೆ ಅಮೆರಿಕದಲ್ಲಿ ಭಾರೀ ಪ್ರಮಾಣದ ಸುಂಕ ಹೇರುವುದಾಗಿ ಪ್ರಕಟಿಸಿದರು. ನಂತರ ಆ ನಿರ್ಧಾರಕ್ಕೆ ತಾವೇ 90 ದಿನಗಳ ಕಾಲ ತಡೆ ನೀಡಿದರು.

ಇದೇಕೆ? ಅಮೆರಿಕ ಮತ್ತು ಜಾಗತಿಕ ಮಾರುಕಟ್ಟೆಯ ಒತ್ತಡ ಹಾಗೂ ಅಮೆರಿಕದಲ್ಲಿ ಅವರ ವಿರುದ್ಧ ಆರಂಭವಾದ ಪ್ರತಿಭಟನೆಗಳಿಗೆ ಟ್ರಂಪ್ ಬೆಚ್ಚಿದರೆ? ಅಥವಾ ಚೀನಾದ ವಿರುದ್ಧ ವ್ಯಾಪಾರ ಸಮರ ನಡೆಸಲು ಅವರಿಗೆ ಯುರೋಪ್ ನಂತಹ ಹಳೆಯ ಸ್ನೇಹಿತರ ಬೆಂಬಲ ಅಗತ್ಯವಿದೆಯೆ? ಟ್ರಂಪ್ ಉರುಳಿಸಿದ ದಾಳಕ್ಕೆ ಪತರುಗುಟ್ಟಿ ಚೀನಾ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆಯೆ? ಸದ್ಯಕ್ಕೆ ಅಮೆರಿಕದ ವಿದ್ಯಮಾನಗಳನ್ನು ಗಮನಿಸಿದರೆ ಇನ್ನೂ ಸಾಕಷ್ಟು ಪ್ರಶ್ನೆಗಳು ಮನಸ್ಸಿನಲ್ಲಿ ಏಳುತ್ತವೆ. ಆದರೆ ಅವುಗಳಿಗೆ ಉತ್ತರ ಮಾತ್ರ ಸಿಗುವುದಿಲ್ಲ. ಇಷ್ಟಕ್ಕೂ ಟ್ರಂಪ್ ಕೈಗೊಳ್ಳುತ್ತಿರುವ ನಿರ್ಧಾರಗಳು ತುಂಬಾ ಚೆನ್ನಾಗಿ ಯೋಚನೆ ಮಾಡಿ ಜಾರಿಗೊಳಿಸುತ್ತಿರುವ ವ್ಯೂಹಾತ್ಮಕ ತಂತ್ರಗಳೇ ಆಗಿದ್ದರೆ ಅವು ನಿಜಕ್ಕೂ ಎಷ್ಟರಮಟ್ಟಿಗೆ ಯಶಸ್ಸು ಕಾಣುತ್ತವೆ? ಇದೂ ಕೂಡ ಮಹತ್ವದ ಪ್ರಶ್ನೆ.

ಟ್ರಂಪ್ ಹೇರಿದ ಸುಂಕಕ್ಕೆ ಹೆದರಿ ಎಲ್ಲಾ 60 ದೇಶಗಳೂ ಏನಾದರೊಂದು ಪರಿಹಾರ ಕಂಡುಕೊಳ್ಳಲು ಹೆಣಗಾಟ ಆರಂಭಿಸಿದ್ದವು. ಅದರ ಬೆನ್ನಲ್ಲೇ ಅವರು ಚೀನಾವೊಂದನ್ನು ಹೊರತುಪಡಿಸಿ ಇನ್ನೆಲ್ಲಾ ದೇಶಗಳಿಗೂ 90 ದಿನಗಳ ಕಾಲ ಹೆಚ್ಚುವರಿ ತೆರಿಗೆಯಿಂದ ವಿನಾಯಿತಿ ಘೋಷಿಸಿದರು. ಈಗಲೂ ಶೇ.10ರ ಟ್ರಂಪ್ ಟ್ಯಾರಿಫ್ ಜಾರಿಯಲ್ಲೇ ಇದೆ. ಆದರೆ ಇದೇನೂ ಅಷ್ಟೊಂದು ದೊಡ್ಡ ಮೊತ್ತದ ಹೊರೆಯಲ್ಲ. ಈ ತೆರಿಗೆಯನ್ನು ತಾಳಿಕೊಳ್ಳುವ ಶಕ್ತಿ ಎಲ್ಲಾ ದೇಶಗಳಿಗೂ ಇದೆ. ನಿಜವಾಗಿಯೂ ವಿವಿಧ ದೇಶಗಳಿಗೆ ಕಳವಳ ಸೃಷ್ಟಿಸಿರುವ ಸಂಗತಿ ಏನೆಂದರೆ, ಟ್ರಂಪ್ ಮನಸ್ಸಿನಲ್ಲಿ ಏನಿದೆ ಎಂಬ ಪ್ರಶ್ನೆ. ಅವರು ಇನ್ನೂ ಏನೇನು ಕ್ರಮಗಳನ್ನು ಕೈಗೊಳ್ಳುವವರಿದ್ದಾರೆ? ಅವರ ಮುಂದಿನ ದೊಡ್ಡ ಹೆಜ್ಜೆ ಏನಾಗಿರಲಿದೆ? ಇದನ್ನು ಅರ್ಥ ಮಾಡಿಕೊಳ್ಳಬೇಕು ಅಂದರೆ, ಚೀನಾಕ್ಕೆ ಶೇ.20ರಷ್ಟು ಇದ್ದ ತೆರಿಗೆಯನ್ನು ಶೇ.145ಕ್ಕೆ ಏರಿಸಿದ ಮೇಲೆ ಅದನ್ನು ಟ್ರಂಪ್ ಏಕೆ ಇಳಿಕೆ ಮಾಡಲಿಲ್ಲ ಅಥವಾ ಏಕೆ ಅದಕ್ಕೆ ತಡೆ ನೀಡಲಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಟ್ರಂಪ್ ಕೈಗೊಂಡ ಕ್ರಮಕ್ಕೆ ಪ್ರತಿಯಾಗಿ ಚೀನಾ ಕೂಡ ಅಮೆರಿಕದ ವಸ್ತುಗಳಿಗೆ ತನ್ನ ದೇಶದಲ್ಲಿ ಶೇ.125ರಷ್ಟು ತೆರಿಗೆ ವಿಧಿಸುವ ಮೂಲಕ ಸೇಡಿನ ಕ್ರಮವನ್ನೇ ಕೈಗೊಂಡಿದೆ. ಅದರೊಂದಿಗೆ ಜಗತ್ತಿನ ಎರಡು ಪ್ರಬಲ ರಾಷ್ಟ್ರಗಳ ನಡುವೆ ಅಧಿಕೃತವಾಗಿ ವ್ಯಾಪಾರ ಸಮರ ಆರಂಭಗೊಂಡಿದೆ. ಈ ಯುದ್ಧವನ್ನು ಇಲ್ಲಿಗೇ ನಿಲ್ಲಿಸುವುದಿಲ್ಲ, ಕೊನೆಯವರೆಗೂ ಹೋರಾಡುತ್ತೇವೆ ಎಂದು ಚೀನಾ ಬಹಿರಂಗವಾಗಿ ಘೋಷಣೆ ಮಾಡಿದೆ. ಅಮೆರಿಕದ ಗೊಡ್ಡು ಬೆದರಿಕೆಗಳಿಗೆ ಮಣಿಯುವ ದೇಶ ನಮ್ಮದಲ್ಲ ಎಂದು ಚೀನಾ ದಿಟ್ಟ ಉತ್ತರ ನೀಡಿದೆ.

ಚೀನಾದ ನಿರೀಕ್ಷೆ ಏನು ಗೊತ್ತಾ? ಅಮೆರಿಕದ ನಿರ್ಧಾರಗಳಿಂದ ಹೊಡೆತ ತಿಂದ ದೇಶಗಳು ಈ ಸಮರದಲ್ಲಿ ತನ್ನ ಜೊತೆಗೆ ಕೈಜೋಡಿಸುತ್ತವೆ ಎಂಬ ಲೆಕ್ಕಾಚಾರದಲ್ಲಿ ಅಲ್ಲಿನ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಇದ್ದಾರೆ. ಕೊನೆಯ ಪಕ್ಷ ಆ ದೇಶಗಳು ತಮ್ಮನ್ನು ನೇರವಾಗಿ ಬೆಂಬಲಿಸದಿದ್ದರೂ ತಟಸ್ಥವಾಗಿ ಉಳಿಯಲಿವೆ ಎಂದು ಅವರು ಭಾವಿಸಿದ್ದಾರೆ. ಹೀಗಾಗಿಯೇ ಜಿನ್‌ಪಿಂಗ್ ಯುರೋಪಿಯನ್ ಒಕ್ಕೂಟಕ್ಕೆ ಬಹಿರಂಗವಾಗಿ ಈ ಬಗ್ಗೆ ಕರೆ ನೀಡಿ, ಅಮೆರಿಕದ ಏಕಪಕ್ಷೀಯ ನಿರ್ಧಾರಗಳನ್ನು ವಿರೋಧಿಸಲು ಎಲ್ಲರೂ ಒಗ್ಗಟ್ಟಾಗಬೇಕು ಎಂದು ಹೇಳಿದ್ದಾರೆ. ಆದರೆ, ಚೀನಾ ತನ್ನ ಮುಂದಿನ ಹೆಜ್ಜೆ ಇರಿಸುವುದಕ್ಕೂ ಮೊದಲೇ ಬೇರೆ ದೇಶಗಳಿಗೆ ವಿಧಿಸಿದ್ದ ದುಬಾರಿ ತೆರಿಗೆಗೆ 90 ದಿನಗಳ ಕಾಲ ತಡೆ ನೀಡುವ ಮೂಲಕ ಟ್ರಂಪ್ ಚೀನಾದ ಕನಸಿಗೆ ತಣ್ಣೀರು ಎರಚಿಬಿಟ್ಟಿದ್ದಾರೆ.

ಕುತೂಹಲಕರ ಸಂಗತಿಯೆಂದರೆ ದುಬಾರಿ ಸುಂಕ ವಿಧಿಸುವುದಕ್ಕೂ ಮೊದಲು ಟ್ರಂಪ್ ಅಮೆರಿಕದ ಸ್ನೇಹಿತ ರಾಷ್ಟ್ರಗಳು ಎಂದು ಗುರುತಿಸಿಕೊಳ್ಳುವ ದೇಶಗಳನ್ನೇ 'ಲೂಟಿಕೋರರು ಎಂದು ಕರೆದು ಆ ದೇಶಗಳ ಮೇಲೆ ಭಾವನಾತ್ಮಕ ಒತ್ತಡ ಹೇರುವ ಪ್ರಯತ್ನ ಮಾಡಿದ್ದರು. ಆದರೆ ವಾಣಿಜ್ಯ ವ್ಯವಹಾರಗಳಲ್ಲಿ ಭಾಷೆ ಅಷ್ಟೊಂದು ಮುಖ್ಯವಲ್ಲ. ಅಲ್ಲಿ ಲಾಭ ಮತ್ತು ಅನುಕೂಲಗಳೇ ಎಲ್ಲಕ್ಕಿಂತ ಮುಖ್ಯ. ಹೀಗಾಗಿ ಟ್ರಂಪ್ ತಮ್ಮನ್ನು ಲೂಟಿಕೋರರು ಎಂದು ಕರೆದಿದ್ದರೂ, ಅವರು ಒಂದಷ್ಟು ಅನುಕೂಲ ಮಾಡಿಕೊಟ್ಟರೆ ಈ ದೇಶಗಳು ಅಮೆರಿಕದ ಸ್ನೇಹಿತರಾಗಿಯೇ ಉಳಿಯುವ ಸಾಧ್ಯತೆಗಳು ಹೆಚ್ಚಿವೆ. ಏಕೆಂದರೆ ಯಾವುದೇ ರೀತಿಯಲ್ಲೂ ಜಗತ್ತಿನ ಬಹುತೇಕ ದೇಶಗಳಿಗೆ ಚೀನಾ ವಿಶ್ವಾಸಾರ್ಹ ಪಾಲುದಾರ ಅಲ್ಲ. ಚೀನಾವನ್ನು ಯಾರೂ ಅಷ್ಟು ಸುಲಭಕ್ಕೆ ನಂಬುವುದಿಲ್ಲ.

ಹಾಗಿದ್ದರೆ ಈ ಪರಿಸ್ಥಿತಿಯಲ್ಲಿ ಚೀನಾದ ಕತೆ ಏನಾಗುತ್ತದೆ? ಜಗತ್ತಿನ ಎರಡನೇ ಅತಿದೊಡ್ಡ ಆರ್ಥಿಕ ಸೂಪರ್ ಪವರ್ ದೇಶವಾಗಿದ್ದರೂ ಚೀನಾದ ಆಂತರಿಕ ಆರ್ಥಿಕ ಪರಿಸ್ಥಿತಿ ಈಗಲೂ ಸ್ಥಿರವಾಗಿಲ್ಲ. ಚೀನಾದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಲ್ಲಿನ ರಿಯಲ್ ಎಸ್ಟೇಟ್ ಕ್ಷೇತ್ರ ಬಹಳ ಕಷ್ಟದಲ್ಲಿದೆ. ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಇಂತಹ ದುಸ್ಥಿತಿಯಲ್ಲಿ ರಫ್ತು ಕೂಡ ಕಡಿಮೆಯಾದರೆ ಚೀನಾದಲ್ಲಿ ನೂರಾರು ಕಾರ್ಖಾನೆಗಳು ಬಾಗಿಲು ಮುಚ್ಚುತ್ತವೆ. ಆಗ ಆಂತರಿಕ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಳ್ಳುತ್ತವೆ. ಅಮೆರಿಕವೊಂದಕ್ಕೇ ಚೀನಾ ದೇಶದ ಉದ್ದಿಮೆಗಳು ವರ್ಷಕ್ಕೆ ಅಂದಾಜು 440 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡುತ್ತವೆ. ಆ ವಸ್ತುಗಳಿಗೆ ಶೇ.145ರಷ್ಟು ತೆರಿಗೆ ವಿಧಿಸಿದರೆ ಅಮೆರಿಕದಲ್ಲಿ ಅವುಗಳನ್ನು ಯಾರೂ ಖರೀದಿಸುವುದಿಲ್ಲ. ಮೂಲ ಬೆಲೆಯನ್ನೇ ಇಳಿಕೆ ಮಾಡಿದರೆ ಚೀನಾದ ಕಂಪನಿಗಳಿಗೆ ಲಾಭವೇ ಉಳಿಯುವುದಿಲ್ಲ. ಹೀಗಾಗಿ ಬೇರೆ ದೇಶಗಳ ಮೂಲಕ ಅಮೆರಿಕಕ್ಕೆ ವಸ್ತುಗಳನ್ನು ರಫ್ತು ಮಾಡಿ ದುಬಾರಿ ತೆರಿಗೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಎಂದು ಚೀನಾ ಪ್ರಯತ್ನಿಸಿತು. ಆದರೆ ಅದೂ ಫಲ ನೀಡಲಿಲ್ಲ. ಏಕೆಂದರೆ, ಇಂತಹ ಕ್ರಮಗಳನ್ನು ತಾನು ಹದ್ದಿನಗಣ್ಣಿನಿಂದ ಗಮನಿಸುತ್ತೇನೆ ಎಂದು ಟ್ರಂಪ್ ಅವರೇ ಹೇಳಿದ್ದಾರೆ.

ಆದರೆ ಅಮೆರಿಕ ಕೂಡ ಈ ಎಲ್ಲ ಕ್ರಮಗಳಿಂದ ಸಮಸ್ಯೆಗೆ ಸಿಲುಕಲಿದೆ. ಅದರ ಬಗ್ಗೆ ಅನುಮಾನವೇ ಬೇಡ. ಅಮೆರಿಕದಲ್ಲಿ ಹಣದುಬ್ಬರ ಏರಿಕೆಯಾಗಲಿದೆ. ಆದರೆ ಒಂದು ಸಂಗತಿಯನ್ನು ನೆನಪಿಟ್ಟುಕೊಳ್ಳಿ. ಅಮೆರಿಕ ಶ್ರೀಮಂತ ದೇಶ. ಟ್ರಂಪ್ ಕೂಡ ಇದನ್ನು ಈಗಾಗಲೇ ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಇದರರ್ಥ ಇಷ್ಟೆ. ಏನೇ ಕಷ್ಟಗಳು ಎದುರಾದರೂ ಅದನ್ನು ಎದುರಿಸಲು ಅಮೆರಿಕ ಸಿದ್ಧವಿದೆ. ಟ್ರಂಪ್ ಅದಕ್ಕೆ ಸಿದ್ಧತೆ ಮಾಡಿಕೊಂಡೇ ತೆರಿಗೆ ಹೆಚ್ಚಳದ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಹೀಗಾಗಿ ಅಮೆರಿಕಕ್ಕೆ ತೊಂದರೆ ನೀಡಬೇಕು ಅಂತಾದರೆ ಚೀನಾ ಬೇರೆ ದಾರಿಗಳನ್ನು ಹುಡುಕಬೇಕು. ಸದ್ಯ ತಾಮ್ರ ಮತ್ತು ಲೀಥಿಯಂನಂತಹ ಲೋಹಗಳ ಸಂಸ್ಕರಣೆಯಲ್ಲಿ ಜಗತ್ತಿನಲ್ಲೇ ಚೀನಾ ಅಗ್ರಸ್ಥಾನದಲ್ಲಿದೆ. ಈ ಉತ್ಪನ್ನಗಳಿಗಾಗಿ ಚೀನಾವನ್ನೇ ಅಮೆರಿಕ ಅವಲಂಬಿಸಿದೆ. ಹೀಗಾಗಿ ಇಂತಹ ಸಂಪನ್ಮೂಲಗಳು ಅಮೆರಿಕಕ್ಕೆ ಬೇರೆಲ್ಲೂ ಸಿಗದಂತೆ ಚೀನಾ ನೋಡಿಕೊಳ್ಳಬಹುದು. ಅಮೆರಿಕದ ಮಿಲಿಟರಿಗೆ ಥರ್ಮಲ್ ಇಮೇಜಿಂಗ್‌ಗಾಗಿ ದೊಡ್ಡ ಪ್ರಮಾಣದಲ್ಲಿ ಗ್ಯಾಲಿಯಂ ಮತ್ತು ಜೆರ್ಮೇನಿಯಂನಂತಹ ಲೋಹಗಳು ಬೇಕು. ಅಮೆರಿಕದಲ್ಲಿ ಇವುಗಳ ಅಭಾವ ಸೃಷ್ಟಿಸಲು ಚೀನಾ ಈಗಾಗಲೇ ಪ್ರಯತ್ನಗಳನ್ನು ಆರಂಭಿಸಿದೆ. ಇದಕ್ಕೆ ಪ್ರತಿಯಾಗಿ ಅಮೆರಿಕದ ಮಿಲಿಟರಿ ಕೂಡ ಚೀನಾದ ಉದ್ದಿಮೆಗಳಿಗೆ ಅಗತ್ಯವಿರುವ ಪ್ರಮುಖ ಉತ್ಪನ್ನಗಳ ಅಭಾವ ಸೃಷ್ಟಿಸಲು ಪ್ರಯತ್ನಿಸಲಿದೆ. ಸುಧಾರಿತ ಮೈಕ್ರೋಚಿಪ್‌ಗಳು ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಉಪಕರಣಗಳಿಗೆ ಬೇಕಾಗುತ್ತವೆ. ಇವುಗಳಿಗಾಗಿ ಅಮೆರಿಕವನ್ನು ಚೀನಾ ಅವಲಂಬಿಸಿದೆ.

ಚೀನಾದ ಬಹುದೊಡ್ಡ ಸಮಸ್ಯೆಯೇನೆಂದರೆ, ರಷ್ಯಾವನ್ನು ಹೊರತುಪಡಿಸಿ ಇನ್ನಾವ ಪ್ರಮುಖ ದೇಶಗಳೂ ಬಹಿರಂಗವಾಗಿ ಚೀನಾವನ್ನು ಬೆಂಬಲಿಸುವುದಿಲ್ಲ. ಇನ್ನುಳಿದ ಇಡೀ ಜಗತ್ತನ್ನು ತನ್ನ ಜೊತೆಗೆ ಇರಿಸಿಕೊಂಡು ಟ್ರಂಪ್ ಆರ್ಥಿಕ ಸಮರವನ್ನು ಮುನ್ನಡೆಸಿದರೆ ಚೀನಾ ಅಕ್ಷರಶಃ ಕಣ್ಣೀರು ಹಾಕಬೇಕಾಗುತ್ತದೆ. ಯಾವುದೇ ದೇಶಕ್ಕಾದರೂ ಅಮೆರಿಕವನ್ನು ಎದುರು ಹಾಕಿಕೊಳ್ಳುವುದು ಕಷ್ಟ. ಹಾಗಿರುವಾಗ ರಷ್ಯಾ ಮತ್ತು ಇನ್ನುಳಿದ ಕೆಲ ಚಿಲ್ಲರೆ ದೇಶಗಳನ್ನು ಹೊರತುಪಡಿಸಿ ಇನ್ನೆಲ್ಲಾ ದೇಶಗಳನ್ನೂ ಟ್ರಂಪ್ ತನ್ನೊಂದಿಗೆ ಇರಿಸಿಕೊಂಡರೆ ಚೀನಾ ಅಯ್ಯೋ ಎನ್ನಲೇಬೇಕು.

ಏನೇ ಹೇಳಿ, ಟ್ರಂಪ್‌ಗೆ ಟ್ರಂಪ್ ಅವರೇ ಸರಿಸಾಟಿ. ಅವರ ದೃಷ್ಟಿಯಲ್ಲಿ ತಾನು ಇರಿಸುವ ಎಲ್ಲಾ ಹೆಜ್ಜೆಗಳೂ 'ಟ್ರಂಪ್ ಕಾರ್ಡ್'. ಅವರು ಎಸೆಯುವ ಮುಂದಿನ ಕಾರ್ಡ್ ಯಾವುದು ಎಂಬುದು ಯಾರಿಗೆ ಗೊತ್ತು!

ಆರಜೂ ಕಾಜ್ಮಿಗೊಂದು ದೊಡ್ಡ ಸೆಲ್ಯೂಟ್!

ಪಾಕಿಸ್ತಾನದ ನಿರ್ಭೀತ ಪತ್ರಕರ್ತೆ ಆರಜೂ ಕಾಜ್ಮಿ ಬಗ್ಗೆ ಅಂಕಣದ ಕೊನೆಯಲ್ಲಾದರೂ ಮೆಚ್ಚುಗೆಯ ಮಾತು ಹೇಳಲೇಬೇಕು. 1947ರಲ್ಲಿ ದೇಶ ವಿಭಜನೆಯಾದಾಗ ತನ್ನ ಪೂರ್ವಜರು ಭಾರತವನ್ನು ಬಿಟ್ಟು ಪಾಕಿಸ್ತಾನಕ್ಕೆ ವಲಸೆ ಬಂದ ಬಗ್ಗೆ ಆಕೆ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾಳೆ. ಆರಜೂ ಇಸ್ಲಾಮಾಬಾದ್‌ನಲ್ಲಿ ನೆಲೆಸಿರುವ ಪತ್ರಕರ್ತೆ. ಪಾಕಿಸ್ತಾನದ ರಾಜಧಾನಿಯ ಹೃದಯದಲ್ಲಿ ಇದ್ದುಕೊಂಡೇ ಆಕೆ ಪಾಕಿಸ್ತಾನದ ಸರಕಾರ, ಗುಪ್ತಚರ ಸಂಸ್ಥೆಗಳು ಮತ್ತು ಮಿಲಿಟರಿ ಮುಖ್ಯಸ್ಥರು ಮಾಡುತ್ತಿರುವ ಎಡವಟ್ಟುಗಳನ್ನು ಧೈರ್ಯವಾಗಿ ಬಹಿರಂಗಪಡಿಸುತ್ತಿದ್ದಾಳೆ. ಅದೇ ವೇಳೆ, ಭಾರತದ ಅಭಿವೃದ್ಧಿಯನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತಿದ್ದಾಳೆ. ಪಾಕಿಸ್ತಾನ ಅಧೋಗತಿಗೆ ತಲುಪಲು ಯಾರು ಕಾರಣ ಎಂಬುದನ್ನು ಧೈರ್ಯವಾಗಿ ಹೇಳಿ ತರಾಟೆ ತೆಗೆದುಕೊಳ್ಳುತ್ತಿದ್ದಾಳೆ. ಹಲವು ವರ್ಷಗಳಿಂದ ಆಕೆ ನಿರ್ಭೀತ ಪತ್ರಿಕೋದ್ಯಮದ ಧ್ವಜ ಹಿಡಿದು ಓಡಾಡುತ್ತಿದ್ದಾಳೆ. ಈಗ ಆಕೆಯ ಜೀವಕ್ಕೆ ಅಪಾಯ ಎದುರಾಗಿದೆ. ಅವಳ ಬ್ಯಾಂಕ್ ಖಾತೆಗಳು, ಕಾರ್ಡ್‌ಗಳು, ಪಾಸ್‌ಪೋರ್ಟ್ ಮತ್ತು ಇನ್ನಿತರ ಪ್ರಮುಖ ದಾಖಲೆಗಳನ್ನು ಪಾಕಿಸ್ತಾನದ ಸರಕಾರ ಜಪ್ತಿ ಮಾಡಿದೆ. ಅವಳೀಗ ಅಕ್ಷರಶಃ ಅತಂತ್ರ ಸ್ಥಿತಿಯಲ್ಲಿ ಸಿಲುಕಿದ್ದಾಳೆ. ಇದರ ಬಗ್ಗೆ ವಿಡಿಯೋ ಬಿಡುಗಡೆ ಮಾಡಿರುವ ಅವಳು, ಯಾವುದೇ ಕಾರಣಕ್ಕೂ ತಾನು ತಲೆಬಾಗುವುದಿಲ್ಲ ಎಂದು ಜಗತ್ತಿಗೆ ಸಾರಿ ಹೇಳಿದ್ದಾಳೆ.

ನಿನ್ನ ಧೈರ್ಯಕ್ಕೊಂದು ಸೆಲ್ಯೂಟ್, ಆರಜೂ! ನಿನ್ನ ಸುರಕ್ಷತೆಗಾಗಿ ನಾವು ಪ್ರಾರ್ಥಿಸುತ್ತೇವೆ.

## ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೆ, ಭವಿಷ್ಯ ಹೇಳುವವರಿಗೂ, ಭವಿಷ್ಯ ರೂಪಿಸುವವರಿಗೂ ವ್ಯತ್ಯಾಸವೇನು?
– **ಒಬ್ಬರು ಸುಳ್ಳು ಹೇಳುತ್ತಾರೆ, ಇನ್ನೊಬ್ಬರು ಸತ್ಯ ಹೇಳುತ್ತಾರೆ, ಅಷ್ಟೇ!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಕಾಮನ್ ಸೆನ್ಸ್ ಗೂ, ಕಾಮನ್ ಸೆಕ್ಸ್ ಗೂ ಏನು ವ್ಯತ್ಯಾಸ?
– **ಮೊದಲನೆಯದು ಇಲ್ಲದವರು, ಎರಡನೆಯದನ್ನು ಮಾಡ್ತಾರೆ!**

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ಮೊಯಿಲಿಯವರನ್ನು 'ಅತಿಥಿ ಸಂಪಾದಕರ'ನ್ನಾಗಿ ಕರೆದರೆ?
– **'ತಿಥಿ ಸಂಪಾದಕರ'ನ್ನಾಗಿ ಕರೆಯಬಹುದು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ರಾಹುಲ್ ಗಾಂಧಿ ಪಾದಯಾತ್ರೆ ಮಾಡಿದರೆ ಹೊಟ್ಟೆ ತುಂಬಲ್ಲ ಅಂತಾನಲ್ಲ?
– **ಅಂಬಾನಿ ಪಾದಯಾತ್ರೆ ಮಾಡಿದರೆ ಹೊಟ್ಟೆ ಇಳಿಯುತ್ತೆ ಅಂತ ಹೇಳಬೇಕಿತ್ತು!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ಕಾಂಗ್ರೆಸ್ ನಾಯಕರ ಪ್ರಕಾರ ಕರ್ನಾಟಕ ವಿಶ್ವಕ್ಕೇ ಮಾದರಿಯಾಗಿ ಅಮೆರಿಕವನ್ನೂ ಹಿಂದೆ ಹಾಕಿಸುವುದಂತೆ?
– **ತೆರಿಗೆ ಏರಿಸುವ ವಿಷಯದಲ್ಲಾ?!**

- **ಎಸ್.ಎಸ್. ಶೆಟ್ಟಿ, ಕಲಬುರ್ಗಿ**
ಭಟ್ರೇ, 'ಬಡೇ ಬಡೇ ದೇಶ್ ಮೇ ಛೋಟೆ ಛೋಟೆ ಬಾತೆ ಹೋತೇ ರೆಹತೇ ಹೈ' ಅನ್ನೋದನ್ನು ಡಾ.ಪರಮೇಶ್ವರ್ ತಪ್ಪಾಗಿ ತಿಳಿದುಕೊಂಡರಾ?
– **ದೊಡ್ಡ ದೊಡ್ಡ ನಗರಗಳಲ್ಲಿ ಸಣ್ಣ ಸಣ್ಣ ಅತ್ಯಾಚಾರ ಆಗ್ತಾ ಇರ್ತವೆ ಅಂತ (ತಪ್ಪಾಗಿ) ಅನುವಾದ ಮಾಡಿಕೊಂಡರಂತೆ ಅಷ್ಟೇ!**

- **ಧನಂಜಯ ಭಟ್, ಕುಮಟಾ**
ಭಟ್ರೇ, ಒಂದು ಕಿವಿಯಿಂದ ಹೋಗಿ ಅನೇಕ ಬಾಯಿಗಳಲ್ಲಿ ಹೊರಬೀಳುತ್ತೆ, ಅದೇನು?
– **ರೂಮರ್!**

- **ಫಕೀರಪ್ಪ ಬಡಿಗೇರ, ಧಾರವಾಡ**
ಭಟ್ರೇ, ವಿಸ್ಕಿ ಹಾಕಿಯೂ ಅಡುಗೆ ಮಾಡ್ತಾರಂತೆ, ಹೌದಾ?
– **'ವಿಸ್ಕಿ ಹಾಕಿದ ಮೇಲೆ ಅಡುಗೆ ಮಾಡ್ತಾರಾ' ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!**

# ದೈವ ಭೂತಗಳೂ ಯಕ್ಷ ಗಂಧರ್ವರೂ

**ಕಾಡುದಾರಿ**
**ಹರೀಶ್ ಕೇರ**
vveditoped@gmail.com

ತಂದೆ ಮಗುವನ್ನು ಬೆನ್ನಲ್ಲಿ ಹೊತ್ತು ನಡೆದಿದ್ದರು. ಮನೆಯಿಂದ ಕೆಲವು ಮೈಲು ದೂರದಲ್ಲಿರುವ ಮರಗಳ ನಡುವಿನ ತಾಣ. ಆಗಿನ್ನೂ ಇರುಳು ಇಳಿಯುತ್ತಿತ್ತು. ಇವರು ಹೋದಾಗ ಊರಿನ ಜನ ಸೇರುತ್ತಿದ್ದರು. ಇವರೂ ಸದ್ದಿಲ್ಲದೆ ಕುಳಿತರು. ಒಂದು ಮೂಲೆಯಲ್ಲಿ ಗುಡಿಯ ಎದುರು ದೀಪ ಬೆಳಗಿಸಿ ಇರಿಸಲಾಗಿತ್ತು. ಜೊತೆಗೆ ಅರಳು, ಎಳನೀರು, ಬತ್ತ, ತಂಗಿನಕಾಯಿ, ಅಡಿಕೆ ಹೂವಿನ ಸಿಂಗಾರ ಇತ್ಯಾದಿ. ಒಂದು ಮೂಲೆಯಲ್ಲಿ ವಯಸ್ಸಾದವರೊಬ್ಬರು ಕುಳಿತು ಮುಖಕ್ಕೆ ಬಣ್ಣ ಬಳಿದುಕೊಳ್ಳುತ್ತಿದ್ದರು. ಒಂದು ಹಂತದ ಬಣ್ಣ ಮುಗಿಸಿ ಗೆಜ್ಜೆಯಂತೆ ಸದ್ದು ಮಾಡುವ ಕಡಗಗಳನ್ನು ಕಾಲಿಗೆ ಕಟ್ಟಿಕೊಂಡರು. ಅದರ ಹೆಸರು ಗಗ್ಗರ ಎಂಬುದು ಆಮೇಲೆ ಗೊತ್ತಾಯಿತು. ತೆಂಗಿನ ಎಳೆಗರಿಗಳನ್ನು ಸಿಗಿದು ಮಾಡಿದ ಸೊಂಟದ ಸುತ್ತುಡುಗೆ ಧರಿಸಿಕೊಂಡರು. ಪಾತ್ರಿಗಳು ಬಂದು ಆ ಕಲಾವಿದರಿಗೆ ಏನೋ ನಿರ್ದೇಶನ ಕೊಟ್ಟರು. ಮುಖವರ್ಣಿಕೆ ಮುಗಿಸಿ, ತಮ್ಮ ಹಿಂದೆ ಕುಳಿತವರು ಹೇಳುತ್ತಿದ್ದ ಸಂದಿಯ ಹಾಡಿಗೆ ತಲೆ ಕುಣಿಸುತ್ತಿದ್ದ ಆ ಕಲಾವಿದರು ಧಿಗ್ಗನೆ ಎದ್ದು ನಿಂತರು. ಮೈ ಯಾರೋ ಹಿಡಿದು ಅಲುಗಿಸಿದಂತೆ ಕಂಪಿಸುತ್ತಿತ್ತು. ಕಣ್ಣುಗಳು ಕೆಂಡದುಂಡೆಗಳಾಗಿದ್ದವು. ಹಿಂದಿದ್ದ ವಾಲಗದವರ ತಾಸೆ ತೆಂಬರೆ ಲಯವಾದ್ಯಗಳ ನುಡಿತ ಜೋರಾಯಿತು. ಸೇರಿದ್ದ ಊರ ಜನ ಮೈಯೆಲ್ಲ ಕಣ್ಣಾಗಿ, ಕಿವಿಯಾಗಿದ್ದರು. ಆ ಕಲಾವಿದರ ಕುಣಿತ, ಆವೇಶ, ಮೈಮಣಿತ, ನುಡಿ– ಎಲ್ಲವೂ ಸಣ್ಣ ಮಗುವಿನ ಮೈಯಲ್ಲಿ ರೋಮಾಂಚನ ಉಂಟುಮಾಡುತ್ತಿದ್ದವು. ಮುಂದೆ ಜೀವನದಲ್ಲಿ ಎಂದೂ ಮರೆಯದ ಅನುಭವವಾಗಿತ್ತು ಅದು.

ಇದು ತುಳುನಾಡಿನ, ಅಂದರೆ ಕರ್ನಾಟಕದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಹುಟ್ಟಿದ ಯಾವುದೇ ಮಗುವಿನ ಅನುಭವವೂ ಇರಬಹುದು. ಮಾರ್ಚ್, ಏಪ್ರಿಲ್, ಮೇ– ಈ ಮೂರು ತಿಂಗಳುಗಳು ಕರ್ನಾಟಕದ ಕರಾವಳಿಗೆ, ಅದರಲ್ಲೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ನೀವು ಹೋದರೆ ಬೇರೆಯದೇ ಲೋಕವೊಂದನ್ನು ಹೊಕ್ಕಂತಾಗುತ್ತದೆ. ಇಲ್ಲಿ ಯಾವ ಊರಿಗೆ ಹೋದರೂ ಅಲೌಕಿಕದ ಕರೆಯೊಂದು ನಿಮ್ಮನ್ನು ಆವರಿಸದೇ ಬಿಡದು. ಹಗಲು ಮದುವೆ, ದೇವಸ್ಥಾನದ ಜಾತ್ರೆ ಮುಂತಾದ ಸಮಾರಂಭಗಳು, ಮಂಗಲ ವಾದ್ಯಗಳ ರವ. ರಾತ್ರಿಯಾದರೆ ಸಾಕು ಯಾವುದೋ ದಿಕ್ಕಿನಿಂದ ಕೇಳಿಬರುವ ಯಕ್ಷಗಾನದ ಹಾಡುಗಳ, ಚೆಂಡೆ ಮದ್ದಲೆಗಳ, ಭೂತಕೋಲದ ಡೋಲು ತಾಸೆಗಳ ಸದ್ದು. ಮೈ ಬೀಸಿ ಕುಣಿವ ಭೂತದ ಗಗ್ಗರದ ಧ್ವನಿ. ಭೂತದ ಮುಂದೆ ಹೇಳಿಕೊಳ್ಳುವ 'ಮದಿಪು ಪಾರಿ'ಗಳು. ಹಿನ್ನೆಲೆಯಲ್ಲಿ ಹಾಡುವವರ ಪಾಡ್ದನ, ಸಂದಿಗಳು. ಸುತ್ತ ಹರಡಿಕೊಂಡಿರುವ ಜಾತ್ರೆಯ ನಾನಾ ನೋಟ ಮಾಟಗಳು. ಕೋಲ, ನೇಮ, ಬಲಿ, ಅಗೆಲು, ತಂಬಿಲ, ಬಂಡಿ ಮೊದಲಾದ ಹೆಸರುಗಳಿಂದ ಕರೆಯಲಾಗುವ ನಾನಾ ಬಗೆ ಉತ್ಸವ ಸೇವೆಗಳಿಗೆಲ್ಲ ಈ ನಡುಬೇಸಿಗೆಯ ರಾತ್ರಿಗಳೇ ಮುಹೂರ್ತ. ಅದು 'ಜೋಗ ಬಿಟ್ಟು ಮಾಯ ಸೇರಿದ' ಭೂತಗಳೆಲ್ಲ ಮತ್ತೆ ಧರೆಗಿಳಿದು ಬರುವ ಸಮಯ.

ಜೋಗ ಮತ್ತು ಮಾಯ ಎಂಬ ಸ್ಥಿತಿಗಳ ಕಲ್ಪನೆ ಇಲ್ಲುಂಟು. ಜೊತೆಗೆ ಕಾಯ ಎಂಬುದು ಕೂಡ. ಕಾಯವೆಂದರೆ ದೇಹ, ಜೋಗ ಎಂದರೆ ಲೌಕಿಕ, ಮಾಯ ಎಂದರೆ ಅಲೌಕಿಕ. ಈ ಭೂಮಿಯ ಬದುಕಿಗೆ ಈ ಮೂರು ಮುಖಗಳು. ದೇಹವಿಲ್ಲದೆ ಮನುಷ್ಯನಿಲ್ಲ. ಹಾಗೇ ಅವನಿಗೆ ನೆಮ್ಮದಿಯ ಬದುಕು ಬೇಕೆಂದಿದ್ದರೆ ಜೋಗ ಹಾಗೂ ಮಾಯಗಳೆರಡೂ ಬೇಕು. ವರ್ಷವಿಡೀ 'ಮಾಯ'ದಲ್ಲಿರುವ ಭೂತಗಳು ಇದೀಗ ನಮ್ಮ ನಿಮ್ಮ ನಡುವೆ ಬರುವ ಸಮಯ. ಹಾಂ, ಭೂತ ಎಂದರೆ ಪಾಶ್ಚಾತ್ಯರಂತೆ 'ಡೆವಿಲ್' ಎಂದು ಅರ್ಥಮಾಡಿಕೊಳ್ಳಬೇಡಿ. ಭೂತಗಳು ಅಥವಾ ದೈವಗಳು– ಡೆವಿಲ್‌ಗಳಲ್ಲ. ಭೂತಾರಾಧನೆಯ ಆರಂಭಿಕ ಅಧ್ಯಯನಕಾರರು ಬರೆದುಕೊಂಡಂತೆ ಇದು ಡೆವಿಲ್ ವರ್ಷಿಪ್ ಕೂಡ ಅಲ್ಲ. ಈ ದೈವಗಳು ತಮ್ಮ ಹಿಂದಿನ ಜನ್ಮದಲ್ಲಿ ಮನುಷ್ಯರೇ. ವಿಧಿಯ ಆಕಸ್ಮಿಕದಲ್ಲಿ ಇವರೆಲ್ಲ ಜೀವ ತೊರೆದು ದೈವವಾದವರು. ಈ ದೈವಗಳಿಗೆ ಒಂದು ಅಲೌಕಿಕ ಕರ್ತವ್ಯ ಇದೆ. ಅದೇನೆಂದರೆ, ತಮ್ಮನ್ನು ಆರಾಧಿಸುವವರನ್ನು ಕಾಯುವುದು. ನಿಗ್ರಹ– ಅನುಗ್ರಹ ಶಕ್ತಿಗಳೆರಡನ್ನೂ ಹೊಂದಿರುವ ಈ ದೈವಗಳನ್ನು ಈಗ ನುಡಿ ಕೊಟ್ಟು ನಮ್ಮ ನಡುವೆ ಕರೆಸಿ ಮಾತನಾಡಿಸುವ ಹೊತ್ತು. ಹಾಗೆ ಭೂತದ ಪಾತ್ರಿಯ ಮೇಲೆ ದೈವ ಆವಾಹನೆಯಾಗುವುದೂ 'ಮುಕ್ಕಾಲು ಮೂರು ಗಳಿಗೆ' ಮಾತ್ರ. ದೈವವು ಜೋಗಕ್ಕೆ ಬರಲು ಅಷ್ಟು ಮಾತ್ರದ ಕಟ್ಟುಕಟ್ಟಳೆಯುಂಟು. ಉಳಿದ ವಿಸ್ಮಯಗಳನ್ನೆಲ್ಲ ಅದು ಮಾಯದಲ್ಲಿಯೇ ನೋಡಿಕೊಳ್ಳುತ್ತದೆ.

ಮನುಷ್ಯ ಮೂಲತಃ ಪ್ರಕೃತಿ ಆರಾಧಕ ಮತ್ತು ಪಿತೃ ಆರಾಧಕ. ದೇವರು ಎಂಬ ಕಲ್ಪನೆ ಮತ್ತೆ ಬಂತು. ಪ್ರಕೃತಿ ಹಾಗೂ ಪಿತೃಗಳೆರಡೂ ಸೇರಿಕೊಂಡು ದೈವ ಭೂತಗಳಾದರು. ಮನುಷ್ಯನೇ ದೈವವಾಗಿ ಆರಾಧನೆ ಪಡೆಯುವುದರ ಹಿಂದೆ ನಾನಾ ಚೋದ್ಯಗಳುಂಟು. ನ್ಯಾಯ ನೀತಿ ನಿಷ್ಠೆಗಳಿಂದ ಬದುಕಿ ಬಾಳಿದ ಅಂದರೆ 'ಕಾಯ'ದಲ್ಲಿದ್ದ ಮನುಷ್ಯ ಹೋರಾಟದಲ್ಲಿ, ದುಷ್ಟರ ಸಂಚಿನಿಂದ, ಶ್ರೀಮಂತರ ತುಳಿತದಿಂದ ಈ ಕಾಯವನ್ನು ಬಿಡಬೇಕಾಗಿ ಬಂದಾಗ, ಮುಂದೆ ತಾನು ದೈವವಾಗಿ ಬಂದು ತನ್ನನ್ನು ನಂಬಿದವರನ್ನು ರಕ್ಷಿಸುವೆ ಎಂದು ಭರವಸೆ ನೀಡಿಯೇ ತೆರಳುವುದು. ಸಾಮಾನ್ಯವಾಗಿ ಇವರು ವೀರರು/ ದಿಟ್ಟೆಯರು. ಅಪ್ರಾಕೃತಿಕವಾಗಿ ಜೀವ ತೊರೆಯಲು ಕಾರಣ ಸಾಮಾನ್ಯವಾಗಿ ಜಾತಿ ಶ್ರೇಷ್ಠರಿಂದ ಆಗುವ ಅನ್ಯಾಯ. ಇದೆಲ್ಲವನ್ನೂ ಕರಾವಳಿಯ ತುಂಬ ಇರುವ ಸಹಸ್ರಾರು ಭೂತಗಳ ಸಂದಿ– ಪಾಡ್ದನಗಳಿಂದ ಅರ್ಥ ಮಾಡಿಕೊಳ್ಳಬಹುದು. ಸಂದಿಗಳೆಂದರೆ ಭೂತಗಳ ಕತೆ ಹೇಳುವ ಹಾಡುಗಳು. ಆನಂದವಾಗಿ ಬದುಕಿ ನೆಮ್ಮದಿಯಾಗಿ ತೀರಿಕೊಂಡವರು ದೈವ ಆಗುವ ಉದಾಹರಣೆ ವಿರಳ. ಹಾಗೇ ಈ ದೈವಗಳ ವೇಷ ಕಟ್ಟುವವರು, ಕುಣಿಯುವವರು, ಹಾಡುವವರು ಸಮಾಜದ ತೀರಾ ಅಂಚಿನಲ್ಲಿರುವ ಜಾತಿ ಜನಾಂಗದವರು. ಆ ಒಂದು ರಾತ್ರಿ ಆ ಪಾತ್ರಿಯೇ ಊರ ಕಾಯುವ ದೈವ. ಅಂದು ಊರಿನ ಎಲ್ಲ 'ಜಾತಿ ಶ್ರೇಷ್ಠ'ರೂ ಅವರ ಮುಂದೆ ಕೈಕಟ್ಟಿ ನಿಲ್ಲಬೇಕು. ದೈವಾರಾಧನೆಯ ಅಗತ್ಯ–ಸ್ವರೂಪ ವಿನ್ಯಾಸವನ್ನು ಇದರಲ್ಲಿಯೇ ಅರ್ಥ ಮಾಡಿಕೊಳ್ಳಬಹುದು.

ಕರಾವಳಿಯ ಬೇಸಿಗೆಯ ರಾತ್ರಿಗಳೆಂದರೆ ಯಕ್ಷಗಾನದ ಅಬ್ಬರದ ಸಮಯ ಕೂಡ. ಭೂತ ದೈವಗಳ ಹಾಗೆಯೇ ಇದು ಯಕ್ಷ ಗಂಧರ್ವರೂ ತಿರುಗಾಡುವ ಕಾಲ ಮತ್ತು ತಾಣ. ಹಿನ್ನೆಲೆಯ ಕಪ್ಪು ತೆರೆಯನ್ನು ಸರಿಸಿ ಮುಖದೋರಿ ಅಬ್ಬರಿಸುವ ರಾವಣ ಮೈರಾವಣ ಶುಂಭನಿಶುಂಭರು; ಭಾಗವತರ ಹಾಡುಗಾರಿಕೆ ಮನೋಧರ್ಮಕ್ಕೆ ತಕ್ಕಂತೆ ನರ್ತಿಸುವ ರಾಮ ಕೃಷ್ಣ ಸೀತೆ ಶೂರ್ಪನಖಿಯರು; ಹೊಕ್ಕು ಹರಿಯದ ವಾಗ್ಜಾಲದಲ್ಲಿ ನಿಮ್ಮನ್ನು ಮುಳುಗಲೀಯದೆ ತೇಲಿಸುವ ಕರ್ಣ ಅರ್ಜುನ ಕೃಷ್ಣ ಕೌರವರು; ಸೂಟೆಗೆ ರಾಳ ಎರಚಿ ಬೆಂಕಿ ಧಗ್ಗನ್ನಿಸಿ ಎದೆ ಝಲ್ಲೆನ್ನುವಂತೆ ಹೂಂಕರಿಸಿ ಬರುವ ಮಹಿಷಾಸುರ ಭಸ್ಮಾಸುರರು; ಬೇರೊಂದು ಲೋಕಕ್ಕೆ ನಿಮ್ಮನ್ನು ಒಯ್ಯುವ ಮಣಿ ಕುಂಡಲ ಮಕುಟ ಕವಚಗಳು. ಭೂತಾರಾಧನೆಯ ಕಣಗಳು ಮನರಂಜನೆಯ ಜೊತೆಗೆ ಆಸ್ತಿಕತೆಯೂ ಸಂಗಮಿಸಿದ ತಾಣ. ಆದರೆ ಯಕ್ಷಗಾನದ ವೇದಿಕೆ ಶುದ್ಧಾಂಗ ಮನರಂಜನೆಯ ನೆಲೆ. ಅದು ಕೂಡ ಹಿಂದೊಮ್ಮೆ ಆರಾಧನೆಯೇ ಆಗಿತ್ತು ಎಂದು ಹೇಳುವವರುಂಟು. ಆದರೆ ಆರಾಧನೆಯ ಚೌಕಟ್ಟನ್ನು ದಾಟಿ ಯಕ್ಷಗಾನ ಮನುಷ್ಯ ಭಾವನೆಯ ಹಲವು ಸೀಮೆಗಳನ್ನು ಮುಟ್ಟಿಬಿಟ್ಟಿದೆ.

ಕರಾವಳಿಯ ಬೇಸಗೆಯ ರಾತ್ರಿಗಳೇನೂ ತಂಪಾಗಿ ನಿಮ್ಮನ್ನು ಪೊರೆಯುವುದಿಲ್ಲ. ಸೆಕೆ ಸುರಿಯುತ್ತಿರುತ್ತದೆ. ಮೈ ಬೆವರಿ ಅಂಟುತ್ತಿರುತ್ತದೆ. ಹಗಲು ಉರಿವ ಬಿಸಿಲಿನಲ್ಲಿ ಒಬ್ಬರಿಗೊಬ್ಬರು ಅಂಟಿಕೊಂಡೇ ಬೆವರು ಸುರಿಸಿಕೊಂಡೇ ಜನ ಜಾತ್ರೆ ನೇಮ ಮದುವೆಗಳಲ್ಲಿ ಗುಂಪು ಸೇರುತ್ತಾರೆ. ರಾತ್ರಿಯೂ ಅಷ್ಟೇ, ಆದರೆ ಆ ಸೆಕೆಯೆಲ್ಲ ಕಣ್ಣೆದುರು ನಡೆಯುತ್ತಿರುವ ಲೌಕಿಕ ಅಲೌಕಿಕಗಳ ಈ ಸಂಗಮಜಲದಲ್ಲಿ ಮುಳುಗಿರುತ್ತದೆ. ಮಾತುಗಳು ಸಾಮಾನ್ಯವಾಗಿ ನಿನ್ನೆ ಎಲ್ಲಿ ಕೋಲವಿತ್ತು, ನಾಳೆ ಎಲ್ಲಿ ಆಟ ಇದೆ ಎಂಬಂತಿರುತ್ತದೆ. ಆಟ ಎಂದರೆ ಯಕ್ಷಗಾನ. ಅದರ ಸಹೋದರ ತಾಳಮದ್ದಲೆ. ಹಾಗೆಂದರೆ ವೇಷದ ಗೋಜಿಲ್ಲದೆ ಯಕ್ಷಗಾನ ಪ್ರಸಂಗ ಪದ್ಯಗಳನ್ನು ಹಾಡುವ, ಅದಕ್ಕೆ ಆಯಾ ಪಾತ್ರ ವಹಿಸಿದವರು ಅರ್ಥ ಹೇಳುವ ಕಲೆ. ಅದು ಪುರಾಣದ ಜೊತೆಗೆ ಅರ್ವಾಚೀನವೂ ಸಂಗಮಿಸುವ ವಿಸ್ಮಯಕಾರಿ ರಂಗ. ನಾಟಕದಂತೆ ಪೂರ್ವನಿಶ್ಚಿತ ರಂಗಪಠ್ಯವಿಲ್ಲದೆ, ಆ ಕ್ಷಣಕ್ಕೆ ತೋಚಿದ್ದನ್ನು ಕತೆಯ ಚೌಕಟ್ಟು ಕೆಡದಂತೆ ಆಡುವ, ಅದರೊಳಗೇ ಸಮಕಾಲೀನ ತಾತ್ವಿಕ ಲೌಕಿಕ ಸಂಗತಿಗಳ ಮಿಂಚನ್ನು ಮಿಂಚಿಸುವ ಸಂವಾದ ಕಲೆ.

ಮೇ ತಿಂಗಳು ಮುಗಿಯುತ್ತ ಬಂದಂತೆ ಪಶ್ಚಿಮದ ಆಗಸದಲ್ಲಿ ಮೋಡಗಳು ಗೂಡು ಕಟ್ಟಿಕೊಳ್ಳತೊಡಗುತ್ತವೆ. ಅದೀಗ ದೈವ ಭೂತಗಳೂ ಯಕ್ಷಗಾನದ ಮೇಳಗಳೂ ಗೂಡು ಸೇರಿಕೊಳ್ಳುವ ಸಮಯ. ಒಂದೆರಡು ಮಳೆ ಬಿದ್ದ ಬಳಿಕ ಹೊಲ ತೋಟಗಳ ಕೆಲಸಗಳು ಶುರುವಾಗುತ್ತವೆ. ಅದಕ್ಕೂ ಮುನ್ನ ಯಕ್ಷಗಾನದ ವೇಷಗಳನ್ನು ತೊಳೆದು ಒಣಗಿಸಬೇಕು. ಯಕ್ಷಗಾನದ ಪಾತ್ರಗಳು ಆಯಾ ಕಲಾವಿದರಲ್ಲೂ ನೋಡುಗರಲ್ಲೂ ನೆಲೆಗೊಂಡು ಮಳೆಗಾಲದ ಪ್ರದರ್ಶನಗಳಿಗೆ ಅಣಿಯಾಗುತ್ತವೆ. ಭೂತ ದೈವಗಳ ಅಣಿ, ಕಡ್ಸಲೆ, ಮೊಗವಾಡ, ಗಗ್ಗರ, ಜೀಟಿಗೆಗಳೆಲ್ಲ ಮಣೆಮಂಚವನ್ನು ಸೇರಿಕೊಳ್ಳುತ್ತವೆ. ದೈವಗಳು ಜೋಗ ತೊರೆದು ಮಾಯದಲ್ಲಿ ನೆಲೆಯಾಗುತ್ತವೆ. ಯಕ್ಷಗಾನಕ್ಕಾದರೋ ಮಳೆಗಾಲದಲ್ಲೂ ಪ್ರದರ್ಶನಗಳುಂಟು, ಆದರೆ ಭೂತಾರಾಧನೆ ಆ ನಿರ್ದಿಷ್ಟ ಕಾಲ– ಜಾಗ– ಸಂದರ್ಭಗಳನ್ನು ಮೀರಿ ಬೇರೆಲ್ಲೂ ಕಾಣಿಸುವಂತಿಲ್ಲ. ಅದು ಫೇಸ್‌ಬುಕ್ ಲೈವ್‌ನಂತಲ್ಲ. ಆ ಕ್ಷಣದಲ್ಲಿ ನಮಗೆ ಅದರ ಝಲಕ್ ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ.

ಬದುಕಿನ ಘಟನೆಗಳು ಬೇಸಿಗೆಯ ನಡುರಾತ್ರಿಯ ಕನಸಿನಂತೆ (ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್) ಎಂದು ಹೇಳುತ್ತಾನೆ ಶೇಕ್ಸ್‌ಪಿಯರ್. ಸ್ವತಃ ನಾಟಕ ಕಲಾವಿದನಾದ ಅವನಿಗೆ ಬದುಕಿನ ನಡುವಿನ ರಂಗವು ಬೇಸಿಗೆಯ ರಾತ್ರಿ ಉಂಟುಮಾಡುವ ಸ್ವಪ್ನ ಸದೃಶ ಸ್ಥಿತಿಯ ಅನುಭವ ಆಗಿರಲಿಕ್ಕೇ ಬೇಕು. ಅದಕ್ಕಾಗಿಯೇ ನಿದ್ದೆ ಎಚ್ಚರಗಳು ಮಿಶ್ರವಾದಂತಿರುವ, ಸಂಗತ ಅಸಂಗತಗಳು ಬೆರೆತಂತಿರುವ ಸನ್ನಿವೇಶಗಳನ್ನು ಅದೇ ಹೆಸರಿನ ನಾಟಕದಲ್ಲಿ ಸೃಷ್ಟಿಸುತ್ತಾನೆ. ಕರಾವಳಿಯ ಬೇಸಿಗೆಯ ರಾತ್ರಿಗಳು ಇಂಥ ಸ್ವಪ್ನಸದೃಶ ಇರುಳುಗಳು. ಒಮ್ಮೆ ಹೊಕ್ಕು ಹೊರಡದೇ ಅದರ ಜಾದೂ ಅರ್ಥವಾಗುವಂಥದಲ್ಲ. ಅಲ್ಲೇ ಹುಟ್ಟಿ ಬೆಳೆದು ಇರುವವರಿಗೂ ಅದು ಮತ್ತೆ ಮತ್ತೆ ಬೇಕೆನ್ನಿಸುವ ಮಾಯೆ, ಮರುಳು. ಪುರಾಣದ ಪಾತ್ರಗಳು ಭೂತ ದೈವಗಳು ನಿಮ್ಮ ಹೆಗಲಿಗೆ ಕೈಹಾಕಿ ನಡೆಯುವ ರಾತ್ರಿಯೊಂದು ಜೀವನದಲ್ಲಿ ನಿಮಗೆ ಬೇಡವೇ?

## ಕೃಷಿ ಕಥನ
**ಮಿರ್ಲೆ ಚಂದ್ರಶೇಖರ**

# ಸ್ವಾವಲಂಬಿ ಆಗುವುದು ಹೇಗೆ?

ಅನ್ನದಾತನು ವೃತ್ತಿಯಲ್ಲಿ ದೇಶ ಕಾಯುವ ಸೈನಿಕನಿಗಿಂತಲೂ ಉತ್ತಮನು, ರೈತ ಸ್ವಾವಲಂಬಿ. ಯಾರ ಮುಲಾಜಿಗೂ ಒಳಗಾಗದಿರುವ ಸ್ವತಂತ್ರನು. ರೈತ ಬೆವರು ಸುರಿಸಿ ಬೆಳೆದು ಕೊಡುವ ಅನ್ನವನ್ನು ತಿಂದು ವಿಶ್ವವೇ ಬದುಕುತ್ತಿರುವುದು. ಆದರೂ ಈ ಸ್ವಾವಲಂಬಿಯು ಕೃಷಿಯನ್ನು ಮಾಡುವುದು ಬೇಡ, ನಮ್ಮ ತಲೆಗೇ ಸಾಕು ಎನ್ನುವ ಮಟ್ಟಕ್ಕೆ ವ್ಯವಸ್ಥೆಯು ತಂದು ನಿಲ್ಲಿಸಿದೆ. ಅಡೆತಡೆಗಳು ಇದ್ದಾಗ್ಯೂ ಕೃಷಿಯಲ್ಲಿ ತನ್ನ ಸುಖ ಹಾಗೂ ಬದುಕು ಕಟ್ಟಿಕೊಂಡಿರುವ ಜಾನ್ ಜಂಡೈ ಎಂಬ ಸ್ವಾವಲಂಬಿಯ ಸಾಧನೆಯನ್ನು ತಿಳಿಯುವುದರಿಂದ ಆತನಂತೆ ನಾವೂ ಕೂಡ ಜೀವಿಸುವುದಕ್ಕೆ ಪ್ರಯತ್ನಿಸಲು ಪ್ರೇರಣೆ ಆಗಬಹುದು.

ಸ್ವಾವಲಂಬಿ ಆಗುವುದನ್ನು ಜಾನ್ ಜಂಡೈಗೆ ಯಾರೂ ಹೇಳಿಕೊಡಲಿಲ್ಲ, ಸ್ವಾವಲಂಬಿ ಆಗುವುದು ಹೇಗೆ ಎಂಬುದನ್ನು ಕಂಡುಕೊಂಡ ಜಾಣನಿವನು. ಎಲ್ಲದಕ್ಕೂ ಅನ್ಯರನ್ನು ಆಶ್ರಯಿಸದೆ ತಾನೇ ಉತ್ಪತ್ತಿ ಮಾಡಿಕೊಳ್ಳುವುದನ್ನು ಸ್ವತಃ ಕಲಿತು, ಬೇರೆಯವರಿಗೂ ಪ್ರೇರಣೆಯಾಗಿರುವ ಸಾಧಕ. ತನ್ನ ಆಹಾರವನ್ನು ತಾನೇ ಬೆಳೆಯುವುದು, ತನ್ನ ಆಹಾರವನ್ನು ತಾನೇ ಬೇಯಿಸಿಕೊಳ್ಳುವುದು, ತನ್ನ ಮನೆಯನ್ನು ತಾನೇ ನಿರ್ಮಿಸಿಕೊಳ್ಳುವುದು ಜೊತೆಗೆ ಪರಿಸರ ಹಾಗೂ ಹಸಿರುಸ್ನೇಹಿಯಾಗಿ ಇರುವ ಹಾಗೆ ಕಟ್ಟಿಕೊಂಡಿರುವುದು ವಿಶೇಷ. ಸೋಪು, ಶಾಂಪು, ಸಾಸ್‌ಗಳನ್ನು ತಯಾರಿಸುವುದು ಹಾಗೂ ವೈದ್ಯರ ಬಳಿ ಹೋಗದಿರಲು ಹಲವು ಔಷಧಗಳನ್ನು ರೋಗಗಳಿಗೆ ಕಂಡುಕೊಂಡಿದ್ದಾನೆ. ಇವನ ಜೀವನಶೈಲಿಯು, ಪ್ರಾಣಿಗಳಿಂದ ಪ್ರಕೃತಿಗೆ ಯಾವುದೇ ವಿಧವಾದ ಹಾನಿ ಆಗುವುದಿಲ್ಲವೋ ಹಾಗೆ ಪೂರಕವಾಗಿದೆ. ಜಾನ್‌ನಂತೆ ಒಂದೊಂದೇ ಕಲಿತು ಅಳವಡಿಸಿಕೊಂಡ ಸ್ವಾವಲಂಬಿ ವಿದ್ಯೆಯಿಂದಾಗಿ ಬದುಕನ್ನು ಸಂತೋಷವಾಗಿ ಸಾಗಿಸಿಕೊಂಡು ಹೋಗುವುದು ಸುಲಭವೇನಲ್ಲ ಹಾಗೂ ಕಷ್ಟವೂ ಅಲ್ಲ, ಮನಸ್ಸು ಮಾಡಬೇಕಷ್ಟೆ.

ಜಾನ್ ಜಂಡೈಯವರು ಹುಟ್ಟಿದ್ದು ಬಡತನವನ್ನೇ ಹೊದ್ದಿದ್ದಂತಹ ಈಶಾನ್ಯ ಥಾಯ್ಲೆಂಡ್‌ನ ಒಂದು ಪುಟ್ಟ ಹಳ್ಳಿಯಲ್ಲಿ, ಅಷ್ಟಾಗಿ ಹಣಕಾಸು ವ್ಯವಹಾರಗಳಿಲ್ಲದ ಹಳ್ಳಿ ಅದು. ಜನರು ತಾವು ತಯಾರಿಸುತ್ತಿದ್ದ ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಅಗತ್ಯ ವಸ್ತುಗಳನ್ನು ಪಡೆದು ಜೀವನ ನಡೆಸುತ್ತಿದ್ದರು. ಹೆಚ್ಚು ವಸ್ತುಗಳನ್ನು ಉತ್ಪಾದಿಸುವುದು ಮತ್ತೊಬ್ಬರಿಗೆ ಕೊಡುವುದು ಅವರಿಂದ ಇವರಿಗೆ ಹೆಚ್ಚಾದುದ್ದನ್ನು ಕೊಟ್ಟು ಪಡೆಯುವ ಜೊತೆಗೆ ಉಳಿದವರಿಗೂ ಸಾಮರ್ಥ್ಯಕ್ಕೆ ಅನುಸಾರ ಸಹಾಯ ಮಾಡಿ ಸಂತೋಷ ಕಾಣುತ್ತಿದ್ದರು, ಒಟ್ಟಿನಲ್ಲಿ ಸಹಬಾಳ್ವೆ ಹಾಗೂ ನೆಮ್ಮದಿ ಇತ್ತು.

ಹಳ್ಳಿಯು ಕ್ರಮೇಣ ಅಭಿವೃದ್ಧಿಯನ್ನು ಕಾಣತೊಡಗಿತು, ಊರಿಗೆ ವಿದ್ಯುತ್ ಹಾಗೂ ಟಿವಿ ಬಂತು. ಟಿವಿ ಬಂದ ನಂತರ ಇತರೆ ಐಷಾರಾಮಿ ವಸ್ತುಗಳು ಬರದೆ ಇರುತ್ತದೆಯೇ, ಟಿವಿ, ಮೋಟಾರ್ ಸೈಕಲ್, ಫ್ರಿಡ್ಜು, ಸೋಫಾ, ಮಿಕ್ಸಿ ಮುಂತಾದವುಗಳನ್ನು ಕೊಳ್ಳಲು ಜಾಸ್ತಿ ದುಡಿಯಬೇಕು ಹಣ ಸಂಪಾದಿಸಬೇಕು. ಒಂದೊಂದೇ ಪದಾರ್ಥಗಳು ಮನೆಗೆ ಬಂದವು. ಇವುಗಳನ್ನು ಕೊಳ್ಳಲು ಸಾಲ ಕೊಡುವುದಕ್ಕೆ ಹಲವು ಕಂಪನಿಗಳು ಪೈಪೋಟಿಯಲ್ಲಿ ನಿಂತವು. ಸುಂದರ ಬದುಕು ಕಟ್ಟಿಕೊಳ್ಳುವ ಉದ್ದೇಶದಿಂದ ಸಾಲ ಮಾಡತೊಡಗಿದರು, ಸಾಲದ ಹೊರೆ ಹೆಚ್ಚಾಯಿತು. ಹೆಚ್ಚು ದುಡಿದರೂ ಸಾಲದ ಹೊರೆ ಕಮ್ಮಿ ಆಗದೆ ಬಡ್ಡಿಗೆ ಬಡ್ಡಿ ಸೇರಿ ಹೆಚ್ಚಾಗುತ್ತಲೇ ಇತ್ತು. ಸಾಲದ ಹೊರೆಯಿಂದ ಶ್ರೀಮಂತರಾಗಿರುವುದಕ್ಕಿಂತ ಸಾಲವಿಲ್ಲದೆ ಬಡವರಾಗಿ ಇದ್ದಾಗಿನ ನೆಮ್ಮದಿಯನ್ನು ಕಳೆದುಕೊಂಡರು. ಸ್ವಾಭಿಮಾನದ ಬದುಕಿಗೆ ಕೊಳ್ಳಿ ಇಟ್ಟ ಶ್ರೀಮಂತಿಕೆಯ ಬದುಕು ದೀರ್ಘಕಾಲದ ನೋವು ಹಳ್ಳಿಯ ಜನರಲ್ಲಿ ಮನೆಮಾಡಿತು.

ಬಡತನದಿಂದ ದೂರವಿರಲು ಶ್ರಮವಹಿಸಿ ದುಡಿದವರಲ್ಲಿ ಜಾನ್ ಜಂಡೈಯವರು ಒಬ್ಬರು. ನಗರಕ್ಕೆ ವಲಸೆ ಬಂದು ಹಲವು ವೃತ್ತಿಗಳನ್ನು ಕೈಗೊಂಡರೂ ಯಾವುದೂ ಯಶಸ್ವಿಯಾಗಲಿಲ್ಲ, ದುಡಿದರೂ ಉಳಿತಾಯವಿಲ್ಲ, ಚಿಂತಾಕ್ರಾಂತನಾಗಿ ವಿಫಲನಾಗಿಬಿಟ್ಟೆ ಎಂದು ಭಾವಿಸಿದ ಜಾನ್ ಜಂಡೈ, ಪ್ರತೀ ವಿಫಲತೆಗೂ ಒಂದು ಕಾರಣವಿರುತ್ತದೆ ಹಾಗೆಯೇ ಯಶಸ್ಸಿಗೆ ದಾರಿಯೂ ಇರುತ್ತದೆ ಎಂದು ನಂಬಿದ್ದ ಜಾನ್ ನಗರದ ಜೀವನದಿಂದ ನಿರಾಶೆಗೊಂಡು ಹಳ್ಳಿಗೆ ಹಿಂತಿರುಗಿದ. ಮನಸ್ಸಿನ ಮೂಲೆಯಲ್ಲಿ ನಂಬಿಕೆ ಇತ್ತು, ಬಡತನದ ಸಮಸ್ಯೆಯಿಂದ ಹೊರಬರುತ್ತೇನೆ, ನಕರಾತ್ಮಕ ಚಿಂತನೆಯನ್ನು ಮಾಡುವುದಿಲ್ಲವೆಂದು ತೀರ್ಮಾನಿಸಿ ಆತ್ಮವಿಶ್ವಾಸದಿಂದ ಕೃಷಿಕ್ಷೇತ್ರಕ್ಕೆ ಪ್ರವೇಶಿಸಿ ಯಶಸ್ವಿಯಾಗಿದ್ದು ವಿಸ್ಮಯವೇ ಸರಿ. ಸ್ನೇಹಿತರು ಹಾಗೂ ಕುಟುಂಬದವರೊಂದಿಗೆ ಪನ್‌ಪುನ್ ಎಂಬ ಸಮುದಾಯವನ್ನು ಸ್ಥಾಪಿಸಿದ, ಇದು ಸ್ವಾವಲಂಬನೆಯಿಂದ ಬದುಕುವ ಕಲಿಕಾ ಕೇಂದ್ರ, ಹಾಗೂ ಜಮೀನನ್ನು ಸುಸ್ಥಿರವಾಗಿ ಹೇಗೆ ವಿನ್ಯಾಸಗೊಳಿಸಬಹುದು ಎಂಬುದರ ಬಗ್ಗೆ ನಿರ್ಭಯವಾಗಿ ಆತ್ಮವಿಶ್ವಾಸದಿಂದ ಕೆಲಸ ಮಾಡಲಾರಂಭಿಸಿದ. ಪೂರ್ಣಪ್ರಮಾಣದಲ್ಲಿ ತನ್ನ ಜೀವನವನ್ನು ಜಮೀನನಲ್ಲಿ ಕಳೆಯಲಾರಂಭಿಸಿ ಆನಂದವನ್ನು ಕಂಡುಕೊಂಡ, ತಾನೊಬ್ಬನೇ ಆನಂದಿಸದೇ ಬೇರೆಯವರಿಗೂ ಆ ಖುಷಿಯನ್ನು ಕಂಡುಕೊಳ್ಳುವ ಮಾರ್ಗವನ್ನು ತಿಳಿಸತೊಡಗಿದ.

ಇವರ ಯೋಜನೆಯ ಮುಖ್ಯ ಉದ್ದೇಶವು ಪರಂಪರೆಯಿಂದ ಬಂದ ಬೀಜಗಳನ್ನು ಸಂರಕ್ಷಿಸುವುದು ಅವುಗಳನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯುವುದಾಗಿದೆ. ಈ ಕುರಿತಾಗಿ ಹಲವು ಕಾರ್ಯಾಗಾರಗಳನ್ನು ಮಾಡಿ ಆಸಕ್ತರಿಗೆ ಸ್ವಾವಂಬಿ ಆಗುವ ಕುರಿತು ತಿಳುವಳಿಕೆಯನ್ನು ನೀಡುತ್ತಾ ಬರುತ್ತಿದ್ದಾನೆ. ಜಾನ್ ಜಂಡಾಯಿಯವರ ಟ್ಯಾಗ್ ಲೈನ್ ತುಂಬಾ ಆಕರ್ಷಕ ಹಾಗೂ ಅರ್ಥಗರ್ಭಿತವಾಗಿದೆ. ''ಜೀವನ ಸುಲಭ, ನಾವೇಕೆ ಅದನ್ನು ಇಷ್ಟೊಂದು ಕಠಿಣಗೊಳಿಸುತ್ತೇವೆ? (Life is easy, Why do we make it so hard?)

ಜನರಿಗೆ ಬಾಹ್ಯ ಪ್ರಪಂಚದ ಸಂಪರ್ಕವನ್ನು ಕಡಿತಗೊಳಿಸಿಕೊಂಡು ಸ್ವತಂತ್ರರಾಗಿರಲು ಕಲಿಸಲಾಗುತ್ತಿದೆ. ನಾವು ಹಣವನ್ನು ಮಾತ್ರ ಅವಲಂಬಿಸಬಹುದು, ಅಲ್ಲಿ ಪರಸ್ಪರ ಅವಲಂಬನೆಯ ಸಹಬಾಳ್ವೆ ಇರುವುದಿಲ್ಲ. ಆದರೆ ಇವನ ಸೂತ್ರದ ಪರಿಣಾಮವಾಗಿ ಸಂತೋಷವಾಗಿರಲು ಜನರೊಟ್ಟಿಗೆ ಬೆರೆತು ಸಹಬಾಳ್ವೆ ಮಾಡುವುದನ್ನು ಕಾರ್ಯಾಗಾರಗಳನ್ನು ಏರ್ಪಡಿಸಿ ಮಣ್ಣನ್ನು ಫಲವತ್ತತೆಯನ್ನಾಗಿ ಮಾಡುವ ಬಗೆ, ವ್ಯವಸಾಯದ ಅರಿವು ಮುಂತಾದವುಗಳನ್ನು ಕುರಿತಾಗಿ ಕಲಿಸುತ್ತಿದ್ದಾನೆ. ಇವನ ಸ್ವಾವಲಂಬಿ ಬದುಕನ್ನು ಕಂಡ ಜನರು, ಸ್ವಾವಲಂಬಿ ಕೇಂದ್ರದ ಸ್ಥಾಪಕ ಜಾನ್ ಜಂಡೈಯನ್ನು ನೈಸರ್ಗಿಕ ಜೀವನದ ಗುರು ಎಂದು ಕರೆಯುತ್ತಿದ್ದಾರೆ.

ಜಾನ್ ಜಂಡೈರವರ ಭಾಷಣಗಳ ವಿಡಿಯೋಗಳನ್ನು ಲಕ್ಷಾಂತರ ಜನರು ನೋಡಿ ಪ್ರೇರಣೆಗೊಂಡಿದ್ದಾರೆ, ಪ್ರೇರಣೆ ನೀಡಬಲ್ಲ ಭಾಷಣಗಳ ಜೊತೆಗೆ ಅವರು ಬರೆದಿರುವ ಪುಸ್ತಕಗಳಲ್ಲಿ ಮಣ್ಣಿನೊಂದಿಗೆ ಜೀವಿಸುವ ಬದುಕು, ಬೇಸಾಯ ಹಾಗೂ ಮನೆಯ ನಿರ್ಮಾಣದಲ್ಲಿ ಪ್ರಾಚೀನ ವಿಧಾನವನ್ನು ನವೀಕೃತಗೊಳಿಸಿ ಸರಳವಾಗಿ ಜೀವಿಸುವುದನ್ನು ತಿಳಿಸಿಕೊಟ್ಟಿದ್ದಾರೆ. ಸಾಫ್ಟ್‌ವೇರ್ ಉದ್ಯೋಗದಲ್ಲಿ ದಿನವೆಲ್ಲಾ ವರ್ಷಪೂರಾ ದುಡಿದು ಹಣ ಗಳಿಸಿಯೂ ನೆಮ್ಮದಿಯಿಂದ ಇರಲಾಗದು. ಆದರೆ ಜಾನ್‌ರವರು ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಹಾಗೂ ದಿನದಲ್ಲಿ ಕೆಲವು ಗಂಟೆ ಮಾತ್ರ ಕೆಲಸ ಮಾಡಿ ಸ್ವಾವಲಂಬಿ ಹಾಗೂ ನೆಮ್ಮದಿಯಾಗಿ ಇದ್ದಾರೆ. ತಾವು ಮಾತ್ರ ಇರದೆ ಇತರರಿಗೂ ತರಬೇತಿ ನೀಡುತ್ತಿದ್ದಾರೆ. ಇವತ್ತಿನ ಯಾಂತ್ರಿಕ ಬದುಕಿನಲ್ಲಿ ಎಲ್ಲವೂ ಇದ್ದು ಏನನ್ನೂ ಅನುಭವಿಸಲು ಆಗದ ಅನಾರೋಗ್ಯ ಸ್ಥಿತಿಯಲ್ಲಿ ಇರುವ ಸಮಾಜಕ್ಕೆ ಜಾನ್ ಜಂಡೈರವರ ಸ್ವಾವಲಂಬಿ ಬದುಕು ಬೇಕಾಗಿದೆ, ಹೌದು ಪ್ರತಿಯೊಂದು ವಸ್ತುಗಳ ಬೆಲೆ ಹಾಗೂ ಸೇವೆಯ ಶುಲ್ಕಗಳು ತುಟ್ಟಿಯಾಗುತ್ತಿರುವ ಇವತ್ತಿನ ಸಂದಿಗ್ದ ಪರಿಸ್ಥಿತಿಯಲ್ಲಿ ತೀರಾ ಅಗತ್ಯವಾಗಿ ಬೇಕಾಗಿದೆ!.

# ರಾಷ್ಟ್ರೀಯ ಭದ್ರತೆಯೂ ರಾಜಕೀಯ ವಿಷಯವಾದಾಗ!

**ಕಾಲಚಕ್ರ, ಎಲ್ಲವನ್ನೂ ಒರೆಗೆ ಹಚ್ಚುತ್ತದೆ. ಸತ್ಯ ಶಾಶ್ವತವಾಗಿದ್ದು, ಮುಚ್ಚಿಡಲು ಸಾಧ್ಯವಿಲ್ಲ ಎಂಬ ಮಾತಿನಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ಮಾಡಿದ್ದ ಪಿತೂರಿ ಪಾಕಿಸ್ತಾನಕ್ಕಿಂತ ಏನು ಕಡಿಮೆಯಿರಲಿಲ್ಲ! ಈಗ, ಇನ್ನೊಬ್ಬ ದಾಳಿಕೋರ ರಾಣಾ ಎಂಬಾತನನ್ನು ಅಮೆರಿಕಾದ ಜೈಲಿನಿಂದ ಹೆಡೆಮುರಿ ಕಟ್ಟಿ ಭಾರತಕ್ಕೆ ತರಲಾಗಿದೆ. ಮುಂಬೈ ದಾಳಿಯ ಸತ್ಯಗಳು ಇನ್ನಷ್ಟು ಹೊರಬರಲಿವೆ.**

**ಗಂಟಾಘೋಷ**
**ಗುರುರಾಜ್ ಗಂಟಿಹೊಳೆ**
vveditoped@gmail.com

ದೇಶದಲ್ಲೇ ಅತ್ಯಂತ ಸುಸಜ್ಜಿತ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಶೀಘ್ರ ಸಾರಿಗೆಗೆ ಮೋನೋ–ಮೆಟ್ರೋ ರೈಲು ಸೌಲಭ್ಯಗಳ ಜೊತೆಗೆ, ಅಂತಾರಾಷ್ಟ್ರೀಯ ಮಟ್ಟದ ಹೆಸರು, ಆರ್ಥಿಕತೆ, ಸೇನೆ, ವ್ಯಾಪಾರ, ವಹಿವಾಟುಗಳ ವಿಚಾರದಲ್ಲಿ ಸದಾ ಮುಂದಿರುವ ಮುಂಬೈ ನಗರಕ್ಕೆ ಭಯೋತ್ಪಾದಕರ, ದೇಶದ್ರೋಹಿಗಳ ಕಣ್ಣು ಬಿದ್ದದ್ದು ಸಹಜ. ಹೀಗಾಗಿ ಭಯೋತ್ಪಾದಕರ ದಾಳಿಗೆ ಹೆಚ್ಚು ಬಾರಿ ಗುರಿಯಾದ ಭಾರತದ ನಗರ ಎಂಬ ಅಪಖ್ಯಾತಿ ಕೂಡ ಮುಂಬೈ ನಗರಕ್ಕಿತ್ತು.

ವಿವಿಧ ಉಗ್ರ ಸಂಘಟನೆಗಳು ಭಾರತದಲ್ಲಿ ದಾಳಿ ನಡೆಸಿದ್ದು ಅವುಗಳಲ್ಲಿ; 1993ರ ಮಾರ್ಚ್ 12ರಂದು ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ ಬರೋಬ್ಬರಿ 257 ಜನ ಆಹುತಿಯಾಗಿ, 700 ಜನ ಗಾಯಾಳುಗಳಾಗಿದ್ದರು. 2002ರ ಡಿಸೆಂಬರ್ 6ರಂದು ಘಾಟ್ಕೋಪರ್ ರೈಲು ನಿಲ್ದಾಣದಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಇಬ್ಬರು ಅಸುನೀಗಿ, ಸುಮಾರು 28 ಜನ ಗಾಯಗೊಂಡಿದ್ದರು.

2003ರ ಜನವರಿ 27ರಂದು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯೀಯವರು ಮುಂಬೈಗೆ ಭೇಟಿ ಕೊಡುವ ಮುನ್ನಾ ದಿನ ವಿಲೇ ಪಾರ್ಲೆ ರೈಲು ನಿಲ್ದಾಣದಲ್ಲಿ ಬೈಸಿಕಲ್ ಬಾಂಬ್ ಒಂದು ಸ್ಫೋಟವಾಗಿ ಓರ್ವ ವ್ಯಕ್ತಿ ಸತ್ತು, 25 ಜನ ಗಾಯಾಳುಗಳಾದರು. 2003ರ ಮಾರ್ಚ್ 13ರಂದು ಮುಂಬೈನ ಮುಲುಂಡ್ ರೈಲುನಿಲ್ದಾಣದ ಬಳಿ ಚಲಿಸುತ್ತಿರುವ ರೈಲಿನ ಒಂದು ಬೋಗಿಯಲ್ಲಿ ಬಾಂಬ್ ಸ್ಫೋಟವಾಗಿ 10 ಜನ ಸತ್ತು, ಸುಮಾರು 70 ಜನ ಗಾಯಾಳುಗಳಾಗುತ್ತಾರೆ. 2003ರ ಜುಲೈ 28ರಂದು ಮುಂಬೈ ನಗರ ಸಾರಿಗೆಗೆ ಸೇರಿದ ಬಸ್ ಒಂದು ಘಾಟ್ಕೋಪರ್ ಎಂಬಲ್ಲಿ ಚಲಿಸುತ್ತಿದ್ದಾಗ ಬಸ್ ಒಳಗೆ ಬಾಂಬ್ ಸ್ಫೋಟವಾಗಿ 4 ಜನ ಸತ್ತು, ಸುಮಾರು 32 ಜನ ಗಾಯಾಳುಗಳಾಗುತ್ತಾರೆ.

ಅದೇ ವರ್ಷದ ಆಗಸ್ಟ್ 25ರಂದು ದಕ್ಷಿಣ ಮುಂಬೈಯಲ್ಲಿ ಸುಪ್ರಸಿದ್ಧ ಗೇಟ್ ವೇ ಆಫ್ ಇಂಡಿಯಾ ಹತ್ತಿರ ಒಂದು ಸ್ಫೋಟ, ಮತ್ತೊಂದು ಜಾವೇರಿ ಬಜಾರ್ ಬಳಿ ಸ್ಫೋಟ ನಡೆದು, ಸುಮಾರು 44 ಜನಗಳನ್ನು ಬಲಿ ಪಡೆದು, 150 ಜನ ಗಾಯಗೊಳ್ಳುತ್ತಾರೆ. 2006ರ ಜುಲೈ11 ರಂದು ಬರೀ 11 ನಿಮಿಷಗಳ ಅಂತರದಲ್ಲಿ ಮುಂಬೈ ಸಬ್ ಅರ್ಬನ್ ರೈಲ್ವೆಯ ವಿವಿಧ ಸ್ಥಳಗಳಲ್ಲಿ ಏಳು ಬಾಂಬುಗಳನ್ನು ಸ್ಫೋಟಿಸಲಾಗಿದೆ. ಈ ಸ್ಫೋಟದಲ್ಲಿ ವಿದೇಶದ 22 ಜನರೂ ಸೇರಿ ಒಟ್ಟು 209 ಜನ ಮೃತಪಟ್ಟು, 700 ಜನರು ಗಾಯಗೊಂಡಿದ್ದರು. ಮುಂಬೈ ಪೊಲೀಸರ ತನಿಖಾ ಹೇಳಿಕೆ ಪ್ರಕಾರ ಲಷ್ಕರ್–ಎ–ತಯ್ಬಾ ಮತ್ತು ಭಾರತೀಯ ಇಸ್ಲಾಮಿಕ್ ವಿದ್ಯಾರ್ಥಿಗಳ ಚಳವಳಿ (ಸಿಮಿ) ಘಟನೆಗಳು ಬಾಂಬ್ ಸ್ಫೋಟಿಸಲು ಮುಂದಾಳತ್ವ ವಹಿಸಿದ್ದವು.

ಹಾಗೆಯೇ, ಏಕೆ ರೈಫಲ್ಸ್, ಆರ್‌ಡಿಎಕ್ಸ್ , ಕೈಬಾಂಬುಗಳಂತಹ ಶಸ್ತ್ರಾಸ್ತ್ರಗಳನ್ನು ಹೊತ್ತು 12 ಜನ ಪಾಕಿಸ್ತಾನದ ಲಷ್ಕರ್ ತಯ್ಬಾಗೆ ಸೇರಿದ ಉಗ್ರರು 'ಅಲ್ಫೋಸ್' ದೋಣಿಯ ಮೂಲಕ ಮೋಸದಿಂದ ಒಳನುಸುಳಿ, ಮುಂಬೈ ನಗರವನ್ನು ಮೂರು ದಿನಗಳ ಕಾಲ ಅಕ್ಷರಶಃ ಒತ್ತೆಯಾಗಿಟ್ಟುಕೊಂಡಿದ್ದರು. ನವೆಂಬರ್ 26 – 2008ರ ರಾತ್ರಿ 9:30ಕ್ಕೆ ಶುರುವಾದ ಉಗ್ರರ ದಾಳಿಯು ನವೆಂಬರ್ 29ರ ವರೆಗೂ ನಡೆಯಿತು. ನಗರದ ಲಿಯೊಪೋಲ್ಡ್ ಕೆಫೆ, ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ , ತಾಜ್ ಮಹಲ್ ಪ್ಯಾಲೇಸ್ ಹೋಟೆಲ್, ಒಬೆರಾಯ್ ಟ್ರೈಡೆಂಟ್, ನಾರಿಮನ್ ಪಾಯಿಂಟ್, ಕಾಮಾ ಆಸ್ಪತ್ರೆ, ನಾರಿಮನ್ ಹೌಸ್, ಮೆಟ್ರೋ ಸಿನಿಮಾ ಮತ್ತು ಸೈಂಟ್ ಕ್ಸೇವಿಯರ್ ಕಾಲೇಜ್ ನಂತಹ ಪ್ರಮುಖ ಜಾಗಗಳಲ್ಲಿ ದಾಳಿಗಳು ನಡೆದವು.

ದಾಳಿಯ ಫಲವಾಗಿ ಸರಕಾರಿ ಅಧಿಕಾರಿಗಳು, ಸಿಪಾಯಿಗಳು, ಸಾರ್ವಜನಿಕರೂ ಸೇರಿದಂತೆ 164 ಜನ ಪ್ರಾಣ ಕಳೆದುಕೊಂಡರು, 400ಕ್ಕೂ ಹೆಚ್ಚು ಮಂದಿ ಗಾಯಾಳುಗಳಾಗಿ ಚಿಕಿತ್ಸೆ ಪಡೆದರು. ಈ ಘಟನೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಆಂತರಿಕ ಭದ್ರತಾ ವ್ಯವಸ್ಥೆಯ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿತು. ಇಷ್ಟೆಲ್ಲದರ ನಡುವೆ, ಸೆಪ್ಟೆಂಬರ್ 11ರ ದಾಳಿಯನ್ನು ಲಷ್ಕರ್ ತಯ್ಬಾ ಆಯೋಜಿಸಿದ್ದು, ಇದರ ಮುಖ್ಯಸ್ಥ ಹಫೀಜ್ ಮಹಮ್ಮದ್ ಸಯೀದ್ ಆಗಿದ್ದಾನೆ. ಝೂಫರ್ ಇಕ್ಬಾಲ್ ಶಹಬಾಜ್, ಅಬ್ದುಲ್ ರೆಹಮಾನ್ ಮಕ್ಕಿ, ಝುಕಿಯರ್ ರೆಹಮಾನ್ ಲಖ್ವಿ ಸೇರಿದಂತೆ 17ಕ್ಕೂ ಹೆಚ್ಚು ಪ್ರಮುಖರು ಸೇರಿ ಲಷ್ಕರ್ ತಯ್ಬಾ ಮತ್ತು ಜಮಾತ್ ಉದ್ ದಾವಾ ಎಂಬ ಇತರೆ ಅನೇಕ ಸಂಘಟನೆಗಳನ್ನು ಹುಟ್ಟುಹಾಕಿದ್ದು, ಇವುಗಳ ಉದ್ದೇಶ ಜಿಹಾದ್ ಸಾರುವುದು ಮತ್ತು ಇದಕ್ಕೆ ಚೀನಾ, ಪಾಕಿಸ್ತಾನಗಳು ಎಲ್ಲ ರೀತಿಯ ನೆರವು ನೀಡುತ್ತಿದ್ದುದನ್ನು ತನಿಖಾ ಸಂಸ್ಥೆಗಳು ಬಹಿರಂಗಪಡಿಸಿವೆ.

ಜೈಶೆ ಮೊಹಮ್ಮದ್ , ಹಿಜ್ಬುಲ್ ಮುಜಾಹಿದ್ದೀನ್, ಹರ್ಕತ್–ಉಲ್–ಜಿಹಾದ್ ಅಲ್–ಇಸ್ಲಾಮಿ, ಹರ್ಕತ್–ಉಲ್–ಮುಜಾಹಿದ್ದೀನ್, ಅನ್ಸಾರ್ ಘುಜ್ವತ್–ಉಲ್–ಹಿಂದ್, ಅಲ್–ಬದ್ರ್, ಅಲ್–ಖೈದಾ, ಅಲ್ ರಶೀದ್ ಟ್ರಸ್ಟ್, ಇಂಡಿಯನ್ ಮುಜಾಹಿದ್ದೀನ್ ಮತ್ತು ಪೀಪಲ್ ಆಂಟಿ–ಫ್ಯಾಸಿಸ್ಟ್ ಫ್ರಂಟ್ ನಂತಹ ಅನೇಕ ಸಂಘಟನೆಗಳು ಕುಕೃತ್ಯದಲ್ಲಿ ತೊಡಗಿರುವ ಗುಂಪುಗಳಾಗಿವೆ ಎಂದು ಗುಪ್ತಚರ ಸಂಸ್ಥೆಗಳು ಹೇಳುತ್ತವೆ.

ಇವುಗಳು ಸೇರಿದಂತೆ ಇನ್ನೂ ನೂರಾರು ಸಂಘಟನೆಗಳು, ಪಾಕಿಸ್ತಾನ ಸೇನೆಗೆ ಸಂಬಂಧಿಸಿದ ಯುನೈಟೆಡ್ ಜಿಹಾದ್ ಕೌನ್ಸಿಲ್ ಅಥವಾ ಮುತ್ತಾಹಿದಾ ಜಿಹಾದ್ ಕೌನ್ಸಿಲ್ (ಎಂಜೆಸಿ) ಪಾಕ್ ಮಿಲಿಟರಿ ನೆರಳಲ್ಲಿದ್ದು, ಇದರ ಮೂಲಕವೇ ಉಗ್ರಕೃತ್ಯಗಳಿಗೆ ತರಬೇತಿ ನೀಡಿ, ಹಣದ ಸಹಾಯ ನೀಡುವ ಮೂಲಕ ದಾಳಿಗಳನ್ನು ಪೋಷಿಸುತ್ತ ಬರುತ್ತಿದೆ. ಉಗ್ರರಿಗೆ ತರಬೇತಿ ನೀಡುವ ಮತ್ತು ನಿರ್ವಹಿಸುವ ಮುಖ್ಯಸ್ಥನಾಗಿ ಸಯ್ಯದ್ ಸಲಾಹುದ್ದೀನ್ (ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆ ಮುಖ್ಯಸ್ಥ) ಕಾರ್ಯನಿರ್ವಹಿಸುತ್ತಿದ್ದಾನೆ.

ಇವರೆಲ್ಲರೂ ಜಾಗತಿಕ ಮಟ್ಟದಲ್ಲಿ ಮೋಸ್ಟ್ ವಾಂಟೆಡ್ ಟೆರರಿಸ್ಟ್‌ಗಳಾಗಿದ್ದಾರೆ. ಎಂಜೆಸಿಯಲ್ಲಿ ಇನ್ನೂ 14 ಗುಂಪುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳನ್ನು ಪಾಕ್ ಸೇನೆ ಮತ್ತು ಐಎಸ್ಐ ನಿಯಂತ್ರಣದಲ್ಲಿವೆ ಎನ್ನಲಾಗಿದೆ. ಇಷ್ಟೆಲ್ಲ ಉಗ್ರ ಸಂಘಟನೆಗಳ ಮಾಹಿತಿಗಳು ನಮ್ಮ ತನಿಖಾ ಏಜೆನ್ಸಿ ಬಳಿಯಿದ್ದರೂ, ಮುಂಬೈ ದಾಳಿ ನಡೆಯುತ್ತದೆ ಮತ್ತು ಬಹುದೊಡ್ಡ ಹಾನಿಯಾಗುತ್ತದೆ ಎಂಬ ಮಾಹಿತಿ ಅಮೆರಿಕ ಸಿಐಎಗೆ ಗೊತ್ತಿತ್ತು. ಈ ಸೂಕ್ಷ್ಮ ಮಾಹಿತಿಯನ್ನು ಭಾರತದ ಭದ್ರತಾ ಸಂಸ್ಥೆಗಳೊಂದಿಗೆ ಹಂಚಿಕೊಂಡಿರುವ ಸಂಭವವೂ ಹೆಚ್ಚು. ಹೀಗಿದ್ದರೂ, ದಾಳಿಯ ಕುರಿತು, ತೀವ್ರ ತನಿಖೆ ನಡೆಸಬೇಕಾದ ಸರಕಾರ ದೇಶದ ಭದ್ರತಾ ವಿಚಾರವನ್ನು ಅಂದಿನ ಆಡಳಿತ ಪಕ್ಷ ಕಾಂಗ್ರೆಸ್ ರಾಜಕೀಯಕ್ಕೆ ಬಳಸಿಕೊಂಡಿತು. ಹಿಂದೂ ಭಯೋತ್ಪಾದನೆಯ ಹೆಸರನ್ನು ಹುಟ್ಟುಹಾಕಿತಲ್ಲದೆ, ಬಿಜೆಪಿ ಮತ್ತು ಅದರ ಮಾತೃ ಸಂಘಟನೆ ಆರ್‌ಎಸ್‌ಎಸ್ ಸಂಸ್ಥೆಯ ತಲೆಗೆ ಕಟ್ಟಲು ನೋಡಿತು. ಹಿಂದೂಗಳನ್ನೇ ಉಗ್ರರೆಂದು ಬಿಂಬಿಸಲು ಯತ್ನಿಸಿತು.

ಮುಂಬೈ ದಾಳಿ ನಡೆಸಿದ ಬಹುತೇಕ ಉಗ್ರರು, ತಮ್ಮ ಕೈಗಳಿಗೆ ಕೇಸರಿ, ಕೆಂಪು ಬಣ್ಣದ ದಾರಗಳನ್ನು ಕಟ್ಟಿಕೊಂಡಿದ್ದು ಮತ್ತು ಕಾಂಗ್ರೆಸ್ ಪಕ್ಷದ ಸಂಚು ಹೊಂದಿಕೊಳ್ಳುತ್ತಿದ್ದುದನ್ನು ಗಮನಿಸಿದರೆ, ಕಾಂಗ್ರೆಸ್ – ಪಾಕ್ ಉಗ್ರರ ವಿಚಾರ ಒಂದೇ ಆಗಿತ್ತು ಎಂಬುದನ್ನು ಯಾರಾದರೂ ಊಹಿಸಬಹುದು. ರಾಜಕೀಯ ಕಾರಣಕ್ಕೆ ಪರಸ್ಪರರು ದೂರುವುದು, ದೂಷಿಸುವುದು, ನಿಯಮಬದ್ಧ ಹೋರಾಟ ಮಾಡುವುದು ಸರ್ವೇ ಸಾಮಾನ್ಯ. ಆದರೆ, ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು, ಷಡ್ಯಂತ್ರ ಮಾಡುತ್ತ ಎದುರಾಳಿಗಳನ್ನು ರಾಜಕೀಯವಾಗಿ ಎದುರಿಸದೆ, ನಾಶಮಾಡಲು ಯತ್ನಿಸುವುದು ಮಾತ್ರ ಅಕ್ಷಮ್ಯ.

ಹುತಾತ್ಮ, ಮಹಾರಾಷ್ಟ್ರದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ತುಕಾರಾಮ ಓಂಬ್ಳೆ ಎಂಬ ಮಾಜಿ ಸೈನಿಕ, ಒಬ್ಬ ಕಸಬ್‌ನನ್ನು ಹಿಡಿಯದಿದ್ದರೆ ಸಮಸ್ತ ಹಿಂದೂಗಳು, ಹಿಂದೂ ಅನುಯಾಯಿಗಳು, ರಾಷ್ಟ್ರಭಕ್ತರು, ರಾಷ್ಟ್ರೀಯ ಸ್ವಯಂ ಸೇವಕರು ಸೇರಿದಂತೆ ಬಹುಸಂಖ್ಯಾತ ಹಿಂದೂಗಳು, ತಮ್ಮದೇ ನೆಲದಲ್ಲಿ ತಾವೇ ದೇಶದ್ರೋಹಿಗಳಾಗಿ, ಉಗ್ರಗಾಮಿಗಳಾಗಿ ಜಗತ್ತಿನಾದ್ಯಂತ ತಲೆತಗ್ಗಿಸಿ, ಮಾಡದ ಅಪರಾಧವನ್ನು ಹೊತ್ತು ತಿರುಗಾಡಬೇಕಿತ್ತು. ಹಾಗಿತ್ತು, ಅಂದಿನ ಕಾಂಗ್ರೆಸ್ ಪಕ್ಷದ ಆಡಳಿತ ಸರಕಾರದಲ್ಲಿನ ದೊಡ್ಡ ದೊಡ್ಡ ವ್ಯಕ್ತಿಗಳು ಸೇರಿ ಮಾಡಿದ ಕುತಂತ್ರ!

ಇದರ ಭಾಗವಾಗಿ ಇಸ್ಲಾಂ ಜಿಮ್ಖಾನಾದಲ್ಲಿ ನಡೆದ ಗೋಷ್ಠಿಯಲ್ಲಿ ಅಜೀಜ್ ಎಂಬಾತ ಬರೆದ, ಆರ್‌ಎಸ್‌ಎಸ್ ಷಡ್ಯಂತ್ರ–9/11 ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಇಡೀ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಇನ್ನಿಲ್ಲದ ಪ್ರಯತ್ನ ನಡೆಸಿದ್ದು ಕಾಂಗ್ರೆಸ್ ಮುಖಂಡ ದಿಗ್ವಿಜಯಸಿಂಗ್. ಇದಕ್ಕೆ ಪೂರಕವಾಗಿ ನಿಂತಿದ್ದವರಲ್ಲಿ ಪಿ. ಚಿದಂಬರಂ, ಸುಶೀಲ್ ಕುಮಾರ್ ಪ್ರಮುಖರು. ತದನಂತರ, ಆ ಪುಸ್ತಕದ ಲೇಖಕ, ರಾಷ್ಟ್ರೀಯ ಸ್ವಯಂ ಸೇವಕ ಸಂಘಟನೆ ಬಗ್ಗೆ ತಪ್ಪಾಗಿ ಬರೆದಿದ್ದಕ್ಕೆ ಕ್ಷಮೆ ಕೋರಿದ್ದು, 2011ರ ಜನೇವರಿ 29ರಂದು ಇಂಡಿಯನ್ ಎಕ್ಸ್ ಪ್ರೆಸ್ ಸೇರಿದಂತೆ ಬಹುತೇಕ ಪತ್ರಿಕೆ, ಮಾಧ್ಯಮಗಳಲ್ಲಿ ಪ್ರಕಟವಾಯಿತು. ಈ ಮೂಲಕ, ವಿಶ್ವಮಟ್ಟದಲ್ಲಿ ಕಾಂಗ್ರೆಸ್ ತನ್ನ ಕೈ ಸುಟ್ಟುಕೊಂಡಿತು ಕೂಡ!

ಇಷ್ಟೆಲ್ಲ ಪಿತೂರಿ, ಹಿಂದೂ ಉಗ್ರವಾದಿತನ ಎಂಬ ಹೊಸ ಸಿದ್ಧಾಂತವನ್ನು ಹುಟ್ಟುಹಾಕಲು ಯತ್ನಿಸಿದ ಹಿರಿಯ ಕಾಂಗ್ರೆಸ್ ನಾಯಕರ ಎಲ್ಲ ಕುತಂತ್ರಗಳನ್ನು ಅಂದಿನ ಸರ್ಕಾರದ ಮುಖ್ಯಸ್ಥೆಯಾಗಿದ್ದ ಸೋನಿಯಾ ಗಾಂಧಿ, ಕಂಡೂ ಕಾಣದವರಂತೆ ಇದ್ದದ್ದು ಪರೋಕ್ಷ ಬೆಂಬಲವಲ್ಲದೇ ಮತ್ತೇನು ಎಂದು ಕಾಂಗ್ರೆಸ್ ಪಕ್ಷದಲ್ಲಿನ ದೇಶಭಕ್ತ ಕಾರ್ಯಕರ್ತರೂ ಸಹ ಪ್ರಶ್ನೆ ಮಾಡಿದ್ದನ್ನು ಯಾರೂ ಮರೆಯುವಂತಿಲ್ಲ! ಕಾಶ್ಮೀರದಲ್ಲಿ ಭದ್ರತಾಪಡೆಗಳು ಬುರ್ಹಾನ್ ವಾನಿ ಎಂಬ ಜಿಹಾದಿಯನ್ನು ಗುಂಡಿಕ್ಕಿ ಕೊಂದಾಗ, ಆತನ ಅಂತ್ಯಕ್ರಿಯೆಗೆ ಸೇರಿದ್ದ ಲಕ್ಷೋಪಲಕ್ಷ ಜನರನ್ನು ನೋಡಿ ಇಡೀ ದೇಶವೇ ಬೆಚ್ಚಿಬಿದ್ದಿತ್ತು. ದೇಶದ ಗುಪ್ತಚರ ಇಲಾಖೆಗಳು ಏನು ಮಾಡುತ್ತಿವೆ, ಇಷ್ಟೆಲ್ಲ ಯುವಕರು ಅದ್ಹೇಗೆ ದಾರಿತಪ್ಪಿ ಉಗ್ರರ ಹಿಡಿತಕ್ಕೆ ಸಿಕ್ಕುತ್ತಿದ್ದಾರೆ ಎಂಬುದನ್ನು ಗಂಭೀರವಾಗಿ ಆಲೋಚಿಸಬೇಕಿದ್ದ ಸರಕಾರವು , ಸೂಕ್ಷ್ಮ ಸಂವೇದನೆಯನ್ನು ಮರೆತು ರಾಷ್ಟ್ರೀಯ ಹಿತವನ್ನು ಬದಿಗಿಟ್ಟು ತನ್ನ ಅಧಿಕಾರವನ್ನು ಮುಗ್ಧ ಹಿಂದೂಗಳ ಮೇಲೆ, ರಾಜಕೀಯ ವ್ಯಕ್ತಿಗಳ ಮೇಲೆ, ರಾಜಕೀಯ ಪಕ್ಷಗಳ ಮೇಲೆ ಹೀನ ಕೃತ್ಯಕ್ಕೆ ಬಳಸಿಕೊಳ್ಳಲು ಯತ್ನಿಸಿದ್ದು ಮಾತ್ರ ಅತ್ಯಂತ ಅವಮಾನಕರ.

2014ರಲ್ಲಿ ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದ ಬಳಿಕ ಇಂತಹ ಒಂದೇ ಒಂದು ಉಗ್ರ ದಾಳಿ ನಡೆಯದಿರುವುದು, ಬಲಿಷ್ಠ ಭಾರತ ಮತ್ತು ಸಮರ್ಥ ನಾಯಕತ್ವದ ಸಾಮರ್ಥ್ಯವನ್ನು ತೋರಿಸುತ್ತದೆ. ಶಕ್ತಿಶಾಲಿ ಸೇನೆ, ಗುಪ್ತಚರ ಇಲಾಖೆಗಳು ಬಲಿಷ್ಠವಾಗಿ ಬೆಳೆದಿರುವ ಸೂಚನೆ ತೋರಿಸುತ್ತದೆ. ಹೆಜ್ಜೆಹೆಜ್ಜೆಗೂ ದೇಶದೊಳಗೆ ಭಯ ಸೃಷ್ಟಿಸುತ್ತಿದ್ದ ಪಾಕ್, ನಮ್ಮ ವೀರಯೋಧ ಅಭಿನಂದನ್ ಅವರನ್ನು ಬಿಡುಗಡೆಗೊಳಿಸುವಾಗ, ಇಡೀ ಪಾಕ್ ಸೇನೆ, ಪ್ರಧಾನಿಯ ಕಾಲುತೊಡೆಗಳು ಗಡಗಡ ನಡುಗುತ್ತಿದ್ದವೆಂಬುದನ್ನು ಆ ದೇಶದ ಸಂಸತ್ತಿನಲ್ಲೇ ಒಪ್ಪಿಕೊಳ್ಳುವ ಮೂಲಕ, ಗೌರವಯುತವಾಗಿ ಅಭಿನಂದನ್ ಅವರನ್ನು ಬಿಟ್ಟು ಕಳಿಸಿದ್ದು ಮೋದಿ ಸರಕಾರದ ತಾಕತ್ತು ತೋರಿಸುತ್ತದೆ.

ಇದೇ 2025ರ ಏಪ್ರೀಲ್ 4ರಂದು ಉಮೀದ್ (ವಕ್ಫ್) ಬಿಲ್ ಮಂಡನೆಯ ಸಂದರ್ಭದಲ್ಲಿ ಕೇಂದ್ರ ಗೃಹಮಂತ್ರಿಗಳಾದ ಅಮಿತ್ ಶಾ ಅವರು ಗಂಭೀರವಾಗಿಯೇ, ''ಪಾಕ್ ಪ್ರೇರಿತ ಉಗ್ರದಾಳಿಯನ್ನು ಆರೆಸ್ಸೆಸ್ ಮತ್ತು ಬಿಜೆಪಿಗೆ ಕಟ್ಟಲು ಏನೆಲ್ಲ ಮಾಡಬೇಕೋ ಅಷ್ಟೂ ಪ್ರಯತ್ನ ಮಾಡಿದ್ದೀರಿ ಮತ್ತು ವಿಫಲವಾಗಿದ್ದೀರಿ. ತಾಕತ್ತಿದ್ದರೆ, ಅದನ್ನು ಈ ಸದನದಲ್ಲೇ ಸಾಬೀತು ಮಾಡಿ'' ಎಂದು ದಿಗ್ವಿಜಯಸಿಂಗ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು ಸದನ ದಾಖಲೆಗಳಲ್ಲಿ ಸೇರುವ ಮೂಲಕ ಇತಿಹಾಸ ಸೃಷ್ಟಿಸಿತು. ಕಾಲಚಕ್ರ, ಎಲ್ಲವನ್ನೂ ಒರೆಗೆ ಹಚ್ಚುತ್ತದೆ. ಸತ್ಯ ಶಾಶ್ವತವಾಗಿದ್ದು, ಮುಚ್ಚಿಡಲು ಸಾಧ್ಯವಿಲ್ಲ ಎಂಬ ಮಾತಿನಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ಮಾಡಿದ್ದ ಪಿತೂರಿ ಪಾಕಿಸ್ತಾನಕ್ಕಿಂತ ಏನು ಕಡಿಮೆಯಿರಲಿಲ್ಲ! ಈಗ, ಇನ್ನೊಬ್ಬ ದಾಳಿಕೋರ ರಾಣಾ ಎಂಬಾತನನ್ನು ಅಮೆರಿಕಾದ ಜೈಲಿನಿಂದ ಹೆಡೆಮುರಿ ಕಟ್ಟಿ ಭಾರತಕ್ಕೆ ತರಲಾಗಿದೆ. ಮುಂಬೈ ದಾಳಿಯ ಸತ್ಯಗಳು ಇನ್ನಷ್ಟು ಹೊರಬರಲಿವೆ.

ಯಾವತ್ತೂ 'ರಾಷ್ಟ್ರ ಮೊದಲು' ಎನ್ನುತ್ತ ರಾಷ್ಟ್ರೀಯ ಹಿತವನ್ನೇ ಬಯಸುತ್ತ, ರಾಷ್ಟ್ರೀಯ ಭದ್ರತೆಯನ್ನು ಯಾವತ್ತೂ ರಾಜಕೀಯದಲ್ಲಿ ಬೆರೆಸದ ಪ್ರಧಾನಿ ಮೋದಿ, ಇಂದು ನಾಯಕರಾಗಿ ವಿಶ್ವಮಟ್ಟದಲ್ಲಿದ್ದರೆ, ದೇಶದ ಭದ್ರತೆಯಲ್ಲೂ ರಾಜಕೀಯ ಲಾಭ ಪಡೆಯಲು ವಾಮಮಾರ್ಗ ಅನುಸರಿಸಿದವರನ್ನು ಜನರು ಸಹ ಎಲ್ಲಿಡಬೇಕೋ ಅಲ್ಲಿಯೇ ಇಟ್ಟಿದ್ದಾರೆನಿಸದಿರದು!

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 343

## ಸಮಾಚಾರ ಸಣ್ಣದಲ್ಲ

### ದರ್ಗಾ ತೆರವು-ಹಿಂಸೆ, 21 ಪೊಲೀಸ್‌ಗೆ ಗಾಯ

**ನಾಸಿಕ್:** ಮಹಾರಾಷ್ಟ್ರದ ನಾಸಿಕ್‌ನಲ್ಲಿ ಅನಧಿಕೃತ ದರ್ಗಾ ತೆರವುಗೊಳಿಸಲು ಸ್ಥಳೀಯ ಆಡಳಿತ ಮುಂದಾದಾಗ ಮುಸ್ಲಿಮರ ಗುಂಪು ವಿರೋಧ ವ್ಯಕ್ತಪಡಿಸಿ ಸಂಘರ್ಷಕ್ಕಿಳಿದಿದೆ. 3 ಪೊಲೀಸ್ ವಾಹನಗಳಿಗೆ ಹಾನಿ ಮಾಡಿದೆ. ಭದ್ರತೆಗೆ ನಿಯೋಜನೆ ಗೊಂಡಿದ್ದ ಪೊಲೀಸರ ಮೇಲೆಯೇ ದಾಳಿ ನಡೆಸಿದೆ. ಪರಿಣಾಮ 21 ಪೊಲೀಸ್ ಸಿಬ್ಬಂದಿ ಗಾಯಗೊಂಡಿ ದ್ದಾರೆ. ಮಂಗಳವಾರ ತಡರಾತ್ರಿ ಘಟನೆ ನಡೆದಿದೆ. ಉದ್ರಿಕ್ತ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ-ಅಶ್ರುವಾಯು ಶೆಲ್ ಬಳಸಿದ್ದಾರೆ. ಹಲವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಹಿಂಸಾಚಾರ ನಡೆಸಿದ್ದವರನ್ನು ಬಂಧಿಸಲಾಗುತ್ತಿದೆ. ಈವರೆಗೆ 15 ಜನರನ್ನು ಬಂಧಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ ಎಂದು ನಾಶಿಕ್ ಪೊಲೀಸ್ ಆಯುಕ್ತ ಸಂದೀಪ್ ಕಾರ್ಣಿಕ್ ತಿಳಿಸಿದ್ದಾರೆ. ಬಾಂಬೆ ಹೈಕೋರ್ಟ್ ಆದೇಶದ ನಂತರ ನಾಸಿಕ್ ಮುನ್ಸಿಪಲ್ ಕಾರ್ಪೊರೇಷನ್ ಸಿಬ್ಬಂದಿ ನಗರದ ಕಟೆ ಗಲ್ಲಿ ಪ್ರದೇಶದಲ್ಲಿದ್ದ ಅನಧಿಕೃತ ಸತ್ಪೀರ್ ಬಾಬಾ ದರ್ಗಾವನ್ನು ತೆರವುಗೊಳಿಸಿದರು. ಬುಧವಾರ ಬೆಳಗ್ಗೆ 6 ಗಂಟೆಯಲ್ಲಿ ದರ್ಗಾ ತೆರವುಗೊಳಿಸಲಾಗಿದೆ.

### ಮುಂಬೈ ಎಕ್ಸ್‌ಪ್ರೆಸ್ ರೈಲಿನಲ್ಲಿ 'ಎಟಿಎಂ'!

**ಮುಂಬೈ:** ರೈಲು ಪ್ರಯಾಣಿಕರಿಗೆ ತುರ್ತಾಗಿ ನಗದು ಬೇಕಾದರೆ ನೆರವಾಗುವಂತೆ ಭಾರತೀಯ ರೈಲ್ವೆ ಮತ್ತು 'ಬ್ಯಾಂಕ್ ಆಫ್ ಮಹಾರಾಷ್ಟ್ರ' ಜತೆಗೂಡಿ 'ರೈಲಿನಲ್ಲಿ ಎಟಿಎಂ' ಅಳವಡಿಸಿವೆ.

ರೈಲಿನಲ್ಲಿ ಪ್ರಯಾಣಿಸುವಾಗಲೂ ಬ್ಯಾಂಕ್ ಖಾತೆದಾರರು ಎಟಿಎಂನಿಂದ ಹಣ ಡ್ರಾ ಮಾಡಬಹುದಾಗಿದೆ. ಮೊದಲಿಗೆ ಮುಂಬೈ-ಮನ್ಮಾಡ್ ಪಂಚವಟಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಎಟಿಎಂ ಅಳವಡಿ ಸಲಾಗಿದೆ. ಚೆಕ್ ಪುಸ್ತಕಕ್ಕೆ ಕೋರಿಕೆ, ಖಾತೆ ವಿವರ ಪಡೆಯುವ ಸೇವೆಗೂ ಎಟಿಎಂ ಬಳಸಬಹುದು. ಎಟಿಎಂ ಇಂಟರ್ನೆಟ್ ಸಂಪರ್ಕದೊಂದಿಗೆ ಪ್ರಯಾ ಣದ ಉದ್ದಕ್ಕೂ ಸುಗಮವಾಗಿ ಕಾರ್ಯನಿರ್ವ ಹಿಸಿತು. ಪ್ರಯೋಗ ಯಶಸ್ವಿಯಾಯಿತು ಎಂದು ರೈಲ್ವೆ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಆದರೆ, ಸುರಂಗ ಇರುವೆಡೆ ಮತ್ತು ಮೊಬೈಲ್ ಸಂಪರ್ಕದ ಕಳಪೆ ಸಿಗ್ನಲ್ ಇರುವಲ್ಲಿ, ಇಗತ್‌ಪುರಿ ಮತ್ತು ಕಸರಾ ನಡುವೆ ಅಲ್ಪಕಾಲ ನೆಟ್ ವರ್ಕ್ ಸಮಸ್ಯೆಗಳು ಕಂಡು ಬಂದಿವೆ ಎಂದು ವರದಿಯಾಗಿದೆ.

### ಅಮೆರಿಕ ಉಪಾಧ್ಯಕ್ಷ ವ್ಯಾನ್ಸ್ 21ಕ್ಕೆ ಭಾರತಕ್ಕೆ

**ವಾಷಿಂಗ್ಟನ್:** ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು ಪತ್ನಿ ಉಷಾ ಸಮೇತ ಏ.18ರಿಂದ 24ರವರೆಗೂ ಇಟಲಿ ಮತ್ತು ಭಾರತ ಪ್ರವಾಸ ಕೈಗೊಳ್ಳುತ್ತಿದ್ದಾರೆ.



ಮೊದಲಿಗೆ ಇಟಲಿಗೆ ತೆರಳುವ ದಂಪತಿ, ಏ.21ರಂದು ಭಾರತಕ್ಕೆ ಆಗಮಿಸಲಿದ್ದಾರೆ. ಏ.24ರವರೆಗೂ ಭಾರತದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅಮೆರಿಕ ಉಪಾಧ್ಯಕ್ಷರಾದ ಬಳಿಕ ಇದು ವ್ಯಾನ್ಸ್ ಅವರ ಮೊದಲ ಭಾರತ ಭೇಟಿಯಾಗಿದೆ. ದಂಪತಿ ಜತೆಗೆ ಅವರ ಮೂವರು ಮಕ್ಕಳೂ (ಇವಾನ್, ವಿವೇಕ್, ಮೀರಾಬೆಲ್) ಈ ಪ್ರವಾಸದಲ್ಲಿ ಜತೆಗೂಡಲಿದ್ದಾರೆ. ಉಷಾ ವ್ಯಾನ್ಸ್ ಭಾರತ ಮೂಲದವರು ಎಂಬುದು ಉಲ್ಲೇಖಾರ್ಹ. ವ್ಯಾನ್ಸ್ ದೆಹಲಿ ಭೇಟಿ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ವ್ಯಾನ್ಸ್ ಕುಟುಂಬಕ್ಕೆ ವಿಶೇಷ ಔತಣಕೂಟ ಆಯೋಜಿಸಿದ್ದಾರೆ ಎಂದು ತಿಳಿದುಬಂದಿದೆ.

### ಕೇಂದ್ರದ ಕೈಗೊಂಬೆ ಇ.ಡಿ ಮುಚ್ಚಬೇಕು

**ಭುವನೇಶ್ವರ:** ಜಾರಿ ನಿರ್ದೇಶನಾಲಯವನ್ನು ಕಾಂಗ್ರೆಸ್ ಆಡಳಿತ ಕಾಲದಲ್ಲಿಯೇ ರಚಿಸಲಾಯಿತು. ಈಗ ಅದೇ ಸಂಸ್ಥೆ ಕಾಂಗ್ರೆಸ್ ಮುಖಂಡರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸುವಂತಾಗಿದೆ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ, ಉತ್ತರ ಪ್ರದೇಶ ಮಾಜಿ ಸಿಎಂ ಅಖಿಲೇಶ್ ಯಾದವ್ ಬುಧವಾರ ಬೇಸರ ವ್ಯಕ್ತಪಡಿಸಿದ್ದಾರೆ.

ಇ.ಡಿ.ಯನ್ನು ಪ್ರತಿಪಕ್ಷಗಳ ನಾಯಕರಿಗೆ ಕಿರುಕುಳ ನೀಡಲು, ಅವರ ಧ್ವನಿ ಅಡಗಿಸಲು ಸಾಧನವಾಗಿ ಬಳಸಿಕೊಳ್ಳಲಾಗುತ್ತಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧವೇ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಕೇಂದ್ರ ಸರಕಾರದ ಕೈಗೊಂಬೆಯಾಗಿರುವ 'ಇ.ಡಿ'ಯನ್ನು ತಕ್ಷಣವೇ ಮುಚ್ಚಬೇಕಿದೆ ಎಂದೂ ಆಗ್ರಹಿಸಿದ್ದಾರೆ.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

**ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ವನ್ನು ಸೋಲಿಸುವುದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸಾಧ್ಯ. ಬಿಜೆಪಿ ಗುಜರಾತ್‌ನಲ್ಲಿನ ನಿರಂತರ ದುರಾಡಳಿತದಲ್ಲಿ ರಾಜ್ಯದ ಜನರ ವಿಶ್ವಾಸ ಕಳೆದುಕೊಂಡಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ಬರಲಿದೆ. ಬಿಜೆಪಿಯನ್ನು ಕಾಂಗ್ರೆಸ್ ಖಂಡಿತಾ ಸೋಲಿಸಲಿದೆ.**



ಹರಿಯಾಣ ಗುರುಗ್ರಾಮದ ಖಾಸಗಿ ಆಸ್ಪತ್ರೆಯಲ್ಲಿ ಆಘಾತಕಾರಿ ಘಟನೆ | ಆಸ್ಪತ್ರೆ ಸಿಬ್ಬಂದಿ ದುಷ್ಕೃತ್ಯ-ಗಗನಸಖಿ ಡಿಸ್ಚಾರ್ಜ್ ವೇಳೆ ಬಹಿರಂಗ

# ಐಸಿಯುನಲ್ಲಿ ವೆಂಟಿಲೇಟರ್‌ನಲ್ಲಿದ್ದ ಗಗನಸಖಿ ಮೇಲೆ ಅತ್ಯಾಚಾರ

**ಗುರುಗ್ರಾಮ:** ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಯಲ್ಲಿದ್ದ 46 ವರ್ಷದ ಗಗನಸಖಿಯೊಬ್ಬರನ್ನು ಹರಿಯಾಣದ ಗುರುಗ್ರಾಮದಲ್ಲಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗೆ ಏ.5ರಂದು ದಾಖಲಾಗಿಸಲಾಗಿತ್ತು. ಅಲ್ಲಿ ಐಸಿಯುನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಅಷ್ಟೇ ಅಲ್ಲದೇ, ಉಸಿರಾಟದ ತೊಂದರೆ ಇದ್ದುದರಿಂದ ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು. ದುರ್ದೈವವೆಂದರೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಗಗನಸಖಿ ಮೇಲೆ ಆಸ್ಪತ್ರೆ ಸಿಬ್ಬಂದಿಯೇ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ.

ಅತ್ಯಾಚಾರ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಕಾಮುಕರ ಪತ್ತೆಗಾಗಿ ಆಸ್ಪತ್ರೆಯಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀ ಲಿಸುತ್ತಿದ್ದಾರೆ. ಗಗನಸಖಿ ಸೇವಾವಧಿಯಲ್ಲಿ ಉಳಿದುಕೊಳ್ಳುತ್ತಿದ್ದ ಸ್ಟಾರ್ ಹೋಟೆಲ್‌ನಲ್ಲಿನ ಈಜುಕೊಳದಲ್ಲಿ ಈಜಾಟ ನಡೆಸಿದ ಬಳಿಕ ಏ.5ರಂದುಯ ತೀವ್ರ ಅಸ್ವಸ್ಥಗೊಂಡಿದ್ದರು. ಬಳಿಕ ಅವರನ್ನು ಗುರುಗ್ರಾಮದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಏ.6ರಂದು ಆಸ್ಪತ್ರೆಯ ಸಿಬ್ಬಂದಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಐಸಿಯುನಲ್ಲಿ ಇರಿಸಿದ್ದರಿಂದ ಕುಟುಂಬದವರಿಗೆ ತಕ್ಷಣಕ್ಕೆ ವಿಷಯ ಗೊತ್ತಾಗಿಲ್ಲ. ಕಳೆದ ಭಾನುವಾರ(ಏ.13) ಗಗನಸಖಿಯನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ.

ಆ ನಂತರ ಆಕೆ ತಮ್ಮ ಪತಿಗೆ ಆಸ್ಪತ್ರೆಯಲ್ಲಿ ತಮ್ಮ ಮೇಲಾಗಿರುವ ಲೈಂಗಿಕ ದೌರ್ಜನ್ಯದ ವಿಷಯವನ್ನು ತಿಳಿಸಿದ್ದಾರೆ. ನಂತರ ಪೊಲೀಸರನ್ನು ಸಂಪರ್ಕಿಸಿ ದೂರು ದಾಖಲಿಸಲಾಗಿದೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.



### ಮಕ್ಕಳನ್ನೂ ಬಿಡದ ಕಾಮುಕರು

- ಕರ್ನಾಟಕದ ಹುಬ್ಬಳ್ಳಿಯಲ್ಲಿ ನಾಲ್ಕು ದಿನಗಳ ಹಿಂದೆ 5 ವರ್ಷದ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಬಿಹಾರದ ಯುವಕ ಪೊಲೀಸ್ ಎನ್ ಕೌಂಟರ್‌ನಲ್ಲಿ ಹತನಾದ.
- ಅಸ್ಸಾಂನ ಕರೀಂಗಂಜ್ ಜಿಲ್ಲೆಯಲ್ಲಿ 3 ವರ್ಷದ ಹೆಣ್ಣು ಮಗುವಿನ ಮೇಲೆ ನೆರೆಮನೆಯ 15 ವರ್ಷದ ಬಾಲಕ ಭಾನುವಾರ ಸಂಜೆ ಅತ್ಯಾಚಾರಕ್ಕೆ ಯತ್ನಿಸಿ ಸಿಕ್ಕಿ ಬಿದ್ದಿದ್ದಾನೆ.
- ಬೆಂಗಳೂರಿನ ಹೊಯ್ಸಳ ನಗರದಲ್ಲಿ ಜ.14ರಂದು ಬಿಹಾರ ಮೂಲದ ಕಟ್ಟಡ ಕಾರ್ಮಿಕನೊಬ್ಬ 6 ವರ್ಷದ ಬಾಲಕಿಯನ್ನು ಅತ್ಯಾಚಾರ ನಡೆಸಿ ಬಳಿಕ ಕೊಂದುಹಾಕಿದ್ದ. ಪೋಕ್ಸೊ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿದರು.

### ಹ್ಯಾಂಗ್ ದ ರೇಪಿಸ್ಟ್: ಜನಾಂದೋಲನ

**ದೇಶಾದ್ಯಂತ ಲೈಂಗಿಕ ಕಿರುಕುಳ ಪ್ರಕರಣಗಳು ಹೆಚ್ಚಾಗುತ್ತಿವೆ. 2-3 ವರ್ಷದ ಶಿಶು, ಪುಟ್ಟ ಮಕ್ಕಳು, ವೃದ್ಧರು, ರೋಗಿಗಳೂ ಎಂಬುದನ್ನೂ ನೋಡದೇ ಪುರುಷ ಮೃಗಗಳು ಕಾಮತೃಷೆ ಈಡೇರಿಸಿಕೊಳ್ಳಲು ಅತ್ಯಾಚಾರ ನಡೆಸುತ್ತಲೇ ಇದ್ದಾರೆ. ಸರಕಾರ ಅತ್ಯಾಚಾರಿಗಳನ್ನು ಶಿಕ್ಷಿಸಲು ಇನ್ನಷ್ಟು ಕಠಿಣ ಕಾನೂನು(ಮರಣದಂಡನೆ) ತರಬೇಕಿದೆ. ದೇಶದಲ್ಲೂ 'ಹ್ಯಾಂಗ್ ದ ರೇಪಿಸ್ಟ್' ಅಭಿಯಾನ ಶುರುವಾಗಬೇಕಿದೆ ಎಂಬುದು ಜನರ ಆಗ್ರಹವಾಗಿದೆ.**

### ವಾರಾಣಸಿ 1 ವಾರದ ರೇಪ್ ಕೇಸ್: 14ನೇ ಆರೋಪಿ ಸೆರೆ

ವಾರಾಣಸಿ: ಉತ್ತರ ಪ್ರದೇಶದ ವಾರಾಣಸಿಯಲ್ಲಿ 18 ವರ್ಷದ ಕ್ರೀಡಾಪಟು ಯುವತಿಗೆ ಮಾದಕ ಪದಾರ್ಥ ಬೆರೆಸಿದ ಪಾನೀಯ ಕುಡಿಸಿ ಪ್ರಜ್ಞೆ ತಪ್ಪಿಸಿದ ಪರಿಚಿತ ಯುವಕರೇ ಅತ್ಯಾಚಾರ ನಡೆಸಿದ್ದಾರೆ. 1 ವಾರ(ಮಾ.29ರಿಂದ ಏ.4ರವರೆಗೆ) ಕಾಲ ಹೋಟೆಲ್ ಕೊಠಡಿಯಲ್ಲಿರಿಸಿ ಒಟ್ಟು 23 ಮಂದಿ ಸರಣಿಯೋಪಾದಿ ಅತ್ಯಾಚಾರ ನಡೆಸಿದ್ದಾರೆ. ಏ.5 ರಂದು ಪ್ರಕರಣ ಬಯಲಿಗೆ ಬಂದಿದ್ದು, ಪೊಲೀಸರು ಈವರೆಗೆ 14 ಜನರನ್ನು ಬಂಧಿಸಿದಂತಾಗಿದೆ. ಇನ್ನೂ 9 ಮಂದಿ ಕಾಮುಕರಿಗಾಗಿ ಶೋಧ ಮುಂದುವರಿದಿದೆ. ಲಾಲ್‌ಪುರ ಪಾಂಡೇಪುರ ಠಾಣೆ ಪೊಲೀಸರು ರಾಜ್ ಖಾನ್ ಎಂಬ ಮತ್ತೊಬ್ಬ ಆರೋಪಿಯನ್ನು ಮಂಗಳವಾರ ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಅದಕ್ಕೂ ಮುನ್ನ ಷಹಬಾಜ್ ಎಂಬವನನ್ನು ಸೋಮವಾರ ಸಂಜೆ ಬಂಧಿಸಿದ್ದರು. ಈ ಸಾಮೂಹಿಕ ಅತ್ಯಾಚಾರ ಪ್ರಕರಣ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರದಲ್ಲೇ ನಡೆದಿದೆ. ಇತ್ತೀಚೆಗೆ ವಾರಾಣಸಿಗೆ ಭೇಟಿ ನೀಡಿದಾಗ ಪ್ರಧಾನಿ ಮೋದಿ ಅವರು ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ನಗರ ಪೊಲೀಸ್ ಆಯುಕ್ತ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆಸಿಕೊಂಡು ಮಾಹಿತಿ ಪಡೆದಿದ್ದರು. ಅಪರಾಧಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆದೇಶಿಸಿದ್ದರು. ಹಾಗಾಗಿ, ಈ ಪ್ರಕರಣದ ತನಿಖಾ ತಂಡದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ(ಡಿಜಿಪಿ) ಕಚೇರಿಯಲ್ಲಿ ಡಿಸಿಪಿ ಆಗಿರುವ ಚಂದ್ರಕಾಂತ್ ಮೀನಾ ಅವರೇ ವಹಿಸಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ 70 ಅರ್ಜಿಗಳ ವಿಚಾರಣೆ | ಕಾಂಗ್ರೆಸ್, ಎಎಪಿ, ಎಐಎಂಐಎಂ, ಸಿಪಿಎಂ ಅರ್ಜಿ | ಹಿಂದೂ ಮಂಡಳಿಗಳಲ್ಲಿ ಮುಸ್ಲಿಮರಿಗೆ ಅವಕಾಶ ಇದೆಯೇ?

# ವಕ್ಫ್ ಕಾಯಿದೆ ಜಾರಿಗಿಲ್ಲ ಸುಪ್ರೀಂ ತಡೆ

**ದೆಹಲಿ:** ವಕ್ಫ್(ತಿದ್ದುಪಡಿ) ಕಾಯಿದೆ-2025ರ ಜಾರಿಗೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಕಾಯಿದೆ ಜಾರಿಗೆ ತಕ್ಷಣ ತಡೆಯಾಜ್ಞೆ ನೀಡಬೇಕೆಂಬ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದ ಪೀಠ, ಯಾವುದೇ ಮಧ್ಯಂತರ ಆದೇಶ ಹೊರಡಿಸಲು ಸಮ್ಮತಿಸಲಿಲ್ಲ. ಬದಲಾಗಿದೆ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದೆ.

ಲೋಕಸಭೆ, ರಾಜ್ಯಸಭೆಯ ಅಂಗೀಕಾರ ಪಡೆದು, ರಾಷ್ಟ್ರಪತಿಗಳ ಅಂಕಿತವನ್ನೂ ಪಡೆದು ದೇಶಾದ್ಯಂತ ಜಾರಿಗೆ ಬಂದಿರುವ ವಕ್ಫ್(ತಿದ್ದುಪಡಿ) ಕಾಯಿದೆ-2025 ವಿರೋಧಿಸಿ ಹಾಗೂ ಅದರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಕಾಂಗ್ರೆಸ್, ಎಎಪಿ, ಎಐಎಂಐಎಂ, ಸಿಪಿಎಂ, ವೈಎಸ್‌ಆರ್ ಕಾಂಗ್ರೆಸ್, ಆರ್‌ಜೆಡಿ ಹಾಗೂ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸೇರಿದಂತೆ 70ಕ್ಕೂ ಅಧಿಕ ಅರ್ಜಿಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿವೆ.

ಆದರೆ, ಬುಧವಾರ ಮೊದಲಿಗೆ 10 ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯ ಮೂರ್ತಿ ಸಂಜೀವ್ ಖನ್ನಾ, ನ್ಯಾ.ಸಂಜಯ್ ಕುಮಾರ್ ಹಾಗೂ ನ್ಯಾ. ಕೆ.ವಿ.ವಿಶ್ವನಾಥನ್ ಅವರ ತ್ರಿಸದಸ್ಯ ಪೀಠ ಬುಧವಾರ ವಿಚಾರಣೆ ನಡೆಸಿತು.

ಈ ಸಂದರ್ಭ ಕೆಲ ಅಂಶಗಳನ್ನು ಪೀಠ ಮುಖ್ಯವಾಗಿ ಪ್ರಸ್ತಾಪಿಸಿತು. ವಕ್ಫ್ ಮಂಡಳಿಯಲ್ಲಿ ಅನ್ಯಧರ್ಮೀಯರನ್ನು ಸದಸ್ಯರಾಗಿ ನೇಮಕ ಮಾಡಿರುವಂತೆಯೇ ಹಿಂದೂ ಮಂಡಳಿಗಳಲ್ಲಿ ಮುಸ್ಲಿಂಮರ ನೇಮಕಕ್ಕೆ ಅವಕಾಶ ಇದೆಯೇ? ಎಂದು ಪೀಠ ಕೇಂದ್ರ ಸರಕಾರವನ್ನು ಪ್ರಶ್ನೆ ಮಾಡಿತು. 'ವಕ್ಫ್ ಬೈ ಯೂಸರ್' ವಿಚಾರ ಪ್ರಸ್ತಾಪಿಸಿದ ಪೀಠ, (ವಕ್ಫ್ ಆಸ್ತಿ) ಎಂದು ಘೋಷಿಸಲಾಗುವ ಆಸ್ತಿಗಳನ್ನು ಡಿ-ನೋಟಿಫೈ ಮಾಡಲಾಗುವುದಿಲ್ಲ ಎಂದು ಆದೇಶಿಸುವ ಬಗ್ಗೆ ಪ್ರಸಾಪಿಸಿತು. ಆದರೆ ಪೀಠದ ಈ ಸಲಹೆಯನ್ನು ಕೇಂದ್ರ ಸರಕಾರ ಬಲವಾಗಿ ವಿರೋಧಿಸಿತು. ಅಂತಹ ನಿರ್ದೇಶನ ನೀಡುವುದಕ್ಕೂ ಮುನ್ನ ವಿಚಾರಣೆ ನಡೆಸುವಂತೆ, ಕೇಂದ್ರ ಸರಕಾರದ ವಾದವನ್ನೂ ಆಲಿಸುವಂತೆ ಕೇಂದ್ರ ಸರಕಾರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮನವಿ ಮಾಡಿದರು.

### ಮುಸ್ಲಿಂಗೆ ಅವಕಾಶವಿದೆಯೇ?

**ಮುಸ್ಲಿಮರನ್ನು ಹಿಂದೂ ಧಾರ್ಮಿಕ ಮಂಡಳಿಗಳ ಭಾಗವಾಗಲು ಅನುಮತಿ ನೀಡಲಾಗುತ್ತದೆಯೇ? ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರಕಾರವನ್ನು ಪ್ರಶ್ನಿಸಿದೆ. ಕೆಲವು ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ವಕ್ಫ್ ಮಂಡಳಿಯಲ್ಲಿ ಮುಸ್ಲಿಮೇತರರ ನೇಮಕಕ್ಕೆ ಅವಕಾಶ ನೀಡಿರುವುದು ಸಂವಿಧಾನದ 26ನೇ ವಿಧಿಯ ಉಲ್ಲಂಘನೆಯಾಗಿದೆ ಎಂದು ಪೀಠದ ಗಮನ ಸೆಳೆದರು. ಆಗ ನ್ಯಾಯಮೂರ್ತಿಗಳು, ಇನ್ನು ಮುಂದೆ ಮುಸ್ಲಿಮರನ್ನು ಹಿಂದೂ ದತ್ತಿ ಮಂಡಳಿಗಳ ಭಾಗವಾಗಲು ನೀವು ಅನುಮತಿಸುತ್ತೀರಾ? ಅನುಮತಿ ನೀಡುವುದಾದರೆ ಅದನ್ನು ಬಹಿರಂಗವಾಗಿ ಹೇಳಿ ಎಂದು ಕೇಂದ್ರ ಸರಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು.**

### ಹತ್ತಾರು ಅರ್ಜಿದಾರರು!

**ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ತ್ರಿಸದಸ್ಯ ಪೀಠ ಈವರೆಗೆ ಸಲ್ಲಿಕೆಯಾಗಿರುವ 70ಕ್ಕೂ ಅಧಿಕ ಅರ್ಜಿಗಳಲ್ಲಿ ವಕ್ಫ್ ಕಾಯಿದೆ ವಿಷಯವಾಗಿರುವ 10 ಅರ್ಜಿಗಳನ್ನು ಮೊದಲಿಗೆ ವಿಚಾರಣೆಗೆ ಪಟ್ಟಿ ಮಾಡಿದೆ. ಎಐಎಂಐಎಂ ಪಕ್ಷದ ಸಂಸದರ ಅಸಾದುದ್ದೀನ್ ಓವೈಸಿ ಅವರ ಅರ್ಜಿ ಜತೆಗೆ, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಅಮಾನತುಲ್ಲಾ ಖಾನ್, ನಾಗರಿಕ ಹಕ್ಕುಗಳ ರಕ್ಷಣಾ ಸಂಘ, ಅರ್ಷದ್ ಮದನಿ, ಸಮಸ್ತ ಕೇರಳ ಜಮಿಯತುಲ್ ಉಲೇಮಾ, ಅಂಜುಮ್ ಕದರಿ, ತೈಯಬ್ ಖಾನ್ ಸಲ್ಮಾನಿ, ಮೊಹಮ್ಮದ್ ಶಫಿ, ಮೊಹಮ್ಮದ್ ಫಜ್ಲುರ್ ರಹೀಮ್ ಮತ್ತು ಆರ್‌ಜೆಡಿ ನಾಯಕ ಮನೋಜ್ ಕುಮಾರ್ ಝಾ ಅವರು ಸಲ್ಲಿಸಿರುವ ಅರ್ಜಿಗಳನ್ನು ಬುಧವಾರದ ವಿಚಾರಣೆಗೆ ಸುಪ್ರೀಂ ಕೋರ್ಟ್ ಪಟ್ಟಿ ಮಾಡಿದೆ. ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಸಮಾಜವಾದಿ ಪಕ್ಷದ ಸಂಭಾಲ್ ಕ್ಷೇತ್ರ ಸಂಸದ ಜಿಯಾ-ಉರ್-ರೆಹಮಾನ್ ಬಾರ್ಕ್ ಸಲ್ಲಿಸಿದ ಅರ್ಜಿಗಳು ಸೇರಿದಂತೆ ಹಲವು ಹೊಸ ಅರ್ಜಿಗಳೂ ಸಲ್ಲಿಕೆಯಾಗಿವೆ. ಆಂಧ್ರ ಪ್ರದೇಶ ಮಾಜಿ ಸಿಎಂ ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್ ಆರ್ ಕಾಂಗ್ರೆಸ್, ಭಾರತೀಯ ಕಮ್ಯುನಿಸ್ಟ್ ಪಕ್ಷ (ಸಿಪಿಐ), ತಮಿಳಗ ವೆಟ್ರ ಕಳಗಂ(ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಜೋಸೆಫ್ ಕೂಡಾ ಅರ್ಜಿ ಸಲ್ಲಿಸಿದ್ದಾರೆ. ಇದಲ್ಲದೇ 'ವಕ್ಫ್' ಮಂಡಳಿಯ ಹಲವು ನಿಬಂಧನೆಗಳು ಮುಸ್ಲಿಮೇತರರ ಮೂಲಭೂತ ಹಕ್ಕುಗಳನ್ನು ಉಲ್ಲಂ ಘಿಸುತ್ತವೆ. ಹಾಗಾಗಿ ವಕ್ಫ್‌ನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ವಕೀಲ ಹರಿಶಂಕರ್ ಜೈನ್ ಮತ್ತು ಮಣಿ ಮುಂಜಾಲ್ ಎಂಬವರು ಅರ್ಜಿ ಸಲ್ಲಿಸಿದ್ದಾರೆ. ಕೇಂದ್ರ ಸರಕಾರ ಕೂಡಾ ಏ.8ರಂದು ಕೇವಿಯಟ್ ಅರ್ಜಿ ಸಲ್ಲಿಸಿದೆ.**

# ವಕ್ಫ್ ನೋಟಿಸ್‌ಗೆ ವೆಲ್ಲೂರಿನ 150 ಕುಟುಂಬಗಳ ಆಕ್ರೋಶ

**ವೆಲ್ಲೂರು:** ವಕ್ಫ್(ತಿದ್ದುಪಡಿ) ಕಾಯಿದೆ-2025 ದೇಶಾದ್ಯಂತ ಜಾರಿಗೊಂಡಿದ್ದರೂ, ವಕ್ಫ್ ಮಂಡಳಿಯಿಂದ ನೋಟಿಸ್ ಜಾರಿಯಾಗುವುದು ಕೊನೆಗೊಂಡಿಲ್ಲ. ತಮಿಳುನಾಡಿನ ವೆಲ್ಲೂರು ಜಿಲ್ಲೆಯ ತಿರುಚೆಂದುರೈ ಮತ್ತು ಕಟ್ಟುಕೊಳ್ಳೈ ಗ್ರಾಮಗಳಲ್ಲಿ ವಕ್ಫ್ ನೋಟಿಸ್‌ನಿಂದ ವಿವಾದ ಉಂಟಾಗಿದೆ.

ಎರಡೂ ಗ್ರಾಮಗಳ ಭೂಮಿಯು 'ವಕ್ಫ್ ಆಸ್ತಿ' ಎಂದು ಘೋಷಿಸಿ 150 ರೈತ ಕುಟುಂಬಗಳಿಗೆ ನೋಟಿಸ್ ನೀಡಲಾಗಿದೆ. ಆದರೆ, 150 ಕುಟುಂಬಗಳೂ ಪೂರ್ಣ ಕೃಷಿಯ ಮೇಲೆ ಅವಲಂಬಿಸಿವೆ. 4 ತಲೆಮಾರುಗಳಿಂದ ಈ ಭೂಮಿಯಲ್ಲೇ ವಾಸಿಸುತ್ತಿವೆ.

ಮೊದಲಿಗೆ ಫೆಬ್ರವರಿಯಲ್ಲಿ ಸೈಯದ್ ಅಲಿ ಸುಲ್ತಾನ್ ಶಾ ದರ್ಗಾ ಹೆಸರಲ್ಲಿ ಈ ಎರಡೂ ಗ್ರಾಮಗಳ ಜನರಿಗೆ ನೋಟಿಸ್ ನೀಡಲಾಗಿತ್ತು. ವಿವಾದಿತ ಭೂಮಿ ದರ್ಗಾಗೆ ಸೇರಿದ್ದು ಮತ್ತು ವಕ್ಫ್ ಮಂಡಳಿಯ ಒಡೆತನದಲ್ಲಿದೆ ಎಂದು ಹೇಳಲಾಗಿತ್ತು. ಈಗ ವಕ್ಫ್‌ನಿಂದಲೇ ನೋಟಿಸ್ ಬಂದಿದ್ದು, 'ತಕ್ಷಣ ಜಾಗ ಖಾಲಿ ಮಾಡಿ' ಎಂದು ಸೂಚನೆ ನೀಡಿರುವುದರಿಂದ 150 ಕುಟುಂಬಗಳೂ ಆಘಾತಕ್ಕೊಳಗಾಗಿವೆ. ಈಗಿರುವ ಜಾಗದಲ್ಲೇ ಮುಂದುವರಿಯಬೇಕಾದರೆ ಗ್ರಾಮಸ್ಥರು ವಕ್ಫ್ ಮಂಡಳಿ ಜತೆ ಔಪಚಾರಿಕ ಒಪ್ಪಂದ ಮಾಡಿಕೊಂಡು ದರ್ಗಾ ಆಡಳಿತ ಮಂಡಳಿಗೆ ಬಾಡಿಗೆ ಪಾವತಿಸುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ, ಭೂಮಿಯನ್ನು ಅತಿಕ್ರಮಿಸಿದ್ದಾರೆ ಎಂದು ಘೋಷಿಸಿ ವಕ್ಫ್ ಕಾನೂನುಗಳಡಿ ವಕ್ಫ್ ಮಂಡಳಿ ವಶಕ್ಕೆ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಇದರಿಂದ ಆಕ್ರೋಶಗೊಂಡಿರುವ ಗ್ರಾಮಸ್ಥರು ವೆಲ್ಲೂರು ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ, ರಾಜ್ಯ ಸರಕಾರ ತಕ್ಷಣ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿದ್ದಾರೆ.

ಹೆಸರು ಶಿಫಾರಸು ಮಾಡಿದ ಸಿಜೆಐ ಸಂಜೀವ್ ಖನ್ನಾ

# ಮೇ 14ಕ್ಕೆ 52ನೇ ಸಿಜೆಐ ಗವಾಯಿ ಪ್ರಮಾಣವಚನ

**ದೆಹಲಿ:** ಸುಪ್ರೀಂ ಕೋರ್ಟ್‌ನ ನ್ಯಾ. ಭೂಷಣ್ ರಾಮಕೃಷ್ಣ ಗವಾಯಿ ಅವರು ಜಸ್ಟೀಸ್ ಬಿ.ಆರ್.ಗವಾಯಿ ಎಂದೇ ನ್ಯಾಯಾಂಗ ವಲಯದಲ್ಲಿ ಗುರುತಾಗಿದ್ದಾರೆ. ಭಾರತದ 52ನೇ ಮುಖ್ಯ ನ್ಯಾಯಮೂರ್ತಿಯಾಗಿ ಮೇ 14ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ನ್ಯಾ.ಬಿ.ಆರ್.ಗವಾಯಿ ಅವರು ದೇಶದ ಮುಖ್ಯ ನ್ಯಾಯಮೂರ್ತಿ ಹುದ್ದೆ ಅಲಂಕರಿಸಿದ ದಲಿತ ಸಮುದಾಯದ ಎರಡನೇ ವ್ಯಕ್ತಿ ಎನಿಸಿಕೊಳ್ಳಲಿದ್ದಾರೆ. ಇದಕ್ಕೂ ಮುನ್ನ ನ್ಯಾ. ಕೆ.ಜಿ. ಬಾಲಕೃಷ್ಣನ್ ಅವರು 2007ರಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆಗೇರಿ ಮೊದಲಿಗರೆನಿಸಿಕೊಂಡಿದ್ದರು. 1960ರ ನ.24ರಂದು ಆಂಧ್ರಪ್ರದೇಶದ ಅಮರಾವತಿಯಲ್ಲಿ ಜನಿಸಿದ ಭೂಷಣ್ ರಾಮಕೃಷ್ಣ ಗವಾಯಿ, 1985ರ ಮಾರ್ಚ್ 16ರಂದು ವಕೀಲರಾಗಿ ವೃತ್ತಿ ಬದುಕು ಆರಂಭಿಸಿದರು.

ಆರಂಭದಲ್ಲಿ ಅವರು ಮಾಜಿ ಅಡ್ವೊಕೇಟ್ ಜನರಲ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಬಾರ್ ರಾಜಾ ಎಸ್.ಭೋಸಲೆ ಅವರ ಅಧೀನದಲ್ಲಿ 1987ರವರೆಗೆ ವಕೀಲರಾಗಿ ಸೇವೆ ಸಲ್ಲಿಸಿ ಅನುಭವ ಪಡೆದರು. ನಂತರ 1987-90ರ ಅವಧಿಯಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ನಡೆಸಿದರು. ನಂತರ, ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠದಲ್ಲಿ ಸಾಂವಿಧಾನಿಕ ಮತ್ತು ಆಡಳಿತಾತ್ಮಕ ಕಾನೂನು ವಿಷಯಗಳಲ್ಲಿ ಗಮನ ಕೇಂದ್ರೀಕರಿಸಿ ವಕೀಲ ವೃತ್ತಿ ನಡೆಸಿದರು. ನಾಗಪುರ ಮುನ್ಸಿಪಲ್ ಕಾರ್ಪೊರೇಷನ್, ಅಮರಾವತಿ ಮುನ್ಸಿಪಲ್ ಕಾರ್ಪೊರೇಷನ್ ಮತ್ತು ಅಮರಾವತಿ ವಿವಿಗೆ ಸ್ಥಾಯಿ ಸಲಹೆಗಾರರಾಗಿದ್ದರು. 2003ರ ನ.14 ರಂದು ಬಿ.ಆರ್.ಗವಾಯಿ ಅವರು ಮಹಾರಾಷ್ಟ್ರ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಾಧೀಶರಾಗಿ ನೇಮಿಸಲಾಯಿತು. ನಂತರ 2005ರ ನ.12ರಂದು ಬಾಂಬೆ ಹೈಕೋರ್ಟ್‌ಗೆ ಖಾಯಂ ನ್ಯಾಯಾಧೀಶರಾಗಿ ನೇಮಕಗೊಂಡರು. ನ್ಯಾ.ಬಿ.ಆರ್.ಗವಾಯಿ ಅವರ ಅಧಿಕಾರಾವಧಿಯಲ್ಲಿ ಮುಂಬೈನ ಪ್ರಧಾನ ಸ್ಥಾನದಲ್ಲಿ ಮತ್ತು ನಾಗಪುರ, ಔರಂಗಾಬಾದ್ ಮತ್ತು ಪಣಜಿಯ ಪೀಠಗಳಲ್ಲಿ ನ್ಯಾಯಮೂರ್ತಿಯಾದರು. 2019ರ ಮೇ 24ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಬಡ್ತಿ ನೀಡಲಾಯಿತು. ಈಗ ನಿವೃತ್ತಿಯಂಚಿನಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆ ಅವರನ್ನು ಅರಸಿ ಬಂದಿದೆ.



- **1960 ನ.24 ದಲಿತ ಕುಟುಂಬದಲ್ಲಿ ಜನನ**
- **1985 ಮಾ.16 ನ್ಯಾಯವಾದಿ ವೃತ್ತಿ ಶುರು**
- **1987 ಬಾಂಬೆ ಹೈಕೋರ್ಟ್ ಸ್ವತಂತ್ರ ವಕೀಲ**
- **2003 ನ.14 ಹೈ.ಹೆಚ್ಚುವರಿ ನ್ಯಾಯಾಧೀಶ**
- **2005 ನ.12 ಖಾಯಂ ನ್ಯಾಯಮೂರ್ತಿ**
- **2019 ಮೇ 24 ಸುಪ್ರೀಂಕೋರ್ಟ್‌ಗೆ ಬಡ್ತಿ**
- **2025 ಮೇ 14 ಮುಖ್ಯ ನ್ಯಾಯಮೂರ್ತಿ**

2008ರಲ್ಲಿ 7.50 ಕೋಟಿ ರು.ಗೆ ಖರೀದಿ: 2012ರಲ್ಲಿ 58 ಕೋಟಿ ರು.ಗೆ ಮಾರಾಟ

# ಭೂಮಿ ಮಾರಾಟ: ವಾದ್ರಾ 2ನೇ ದಿನ ಇ.ಡಿ ವಿಚಾರಣೆ

**ದೆಹಲಿ:** ಹರಿಯಾಣ ರಾಜ್ಯದಮಾನೇಸರ್-ಶಿಕೋಪುರ (ಈಗ ಸೆಕ್ಟರ್ 83)ದಲ್ಲಿ 2008ರಲ್ಲಿ ನಡೆದ ಭೂ ಅವ್ಯವಹಾರ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆಯಾಗಿರುವ ಆರೋಪದಡಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಅಳಿಯ ರಾಬರ್ಟ್ ವಾದ್ರಾ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಕೂಡ ವಿಚಾರಣೆಗೆ ಒಳಪಡಿಸಿದರು.

56 ವರ್ಷದ ರಾಬರ್ಟ್ ವಾದ್ರಾ ಅವರನ್ನು ಇ.ಡಿ ಅಧಿಕಾರಿಗಳು ಮಂಗಳವಾರ 5 ಗಂಟೆಗಳ ಕಾಲ ವಿಚಾರಣೆ ನಡೆಸಿದ್ದರು. ಹಣ ಅಕ್ರಮ ವರ್ಗಾವಣೆ ತಡೆ ಕಾಯಿದೆ(ಪಿಎಂಎಲ್‌ಎ) ಅನ್ವಯ ಎರಡು ದಿನವೂ ತನಿಖಾ ಸಂಸ್ಥೆ ವಾದ್ರಾ ಹೇಳಿಕೆ ದಾಖಲಿಸಿಕೊಂಡಿದೆ.

ಇ.ಡಿ ತನಿಖೆಗೆ ಸಹಕರಿಸುತ್ತಿರುವೆ. ಅಪಾರ ಪ್ರಮಾಣದ ದಾಖಲೆಗಳನ್ನು ಒದಗಿಸಿರುವೆ. 20 ವರ್ಷಗಳಷ್ಟು ಹಳೆಯದಾದ ಪ್ರಕರಣವನ್ನು ಮುಕ್ತಾಯಗೊಳಿಸುವ ಅಗತ್ಯವಿದೆ. ಆದರೆ, ಇ.ಡಿ ಅಧಿಕಾರಿಗಳ ಈ ಕ್ರಮ ರಾಜಕೀಯ ದ್ವೇಷದ ಪರಿಣಾಮವಾಗಿದೆ ಎಂದು ವಾದ್ರಾ ಟೀಕಿಸಿದ್ದಾರೆ. ವಯನಾಡು ಸಂಸದೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾದ ಪತ್ನಿ ಪ್ರಿಯಾಂಕಾ ಗಾಂಧಿ, ಪತಿಗೆ ಜತೆಯಾಗಿ ಬಂದಿದ್ದರು.

**ಹಗರಣ ಹಿನ್ನೆಲೆ:** ರಾಬರ್ಟ್ ವಾದ್ರಾ ಈ ಹಿಂದೆ ನಿರ್ದೇಶಕರಾಗಿದ್ದ 'ಸ್ಕೈಲೈಟ್ ಹಾಸ್ಪಿಟಾಲಿಟಿ ಪ್ರೈ.ಲಿ.' ಕಂಪನಿ 2008ರ ಫೆಬ್ರವರಿಯಲ್ಲಿ(ಆಗ ಕಾಂಗ್ರೆಸ್ ಸರಕಾರವಿತ್ತು) ಶಿಕೋಪುರದಲ್ಲಿ 3.5 ಎಕರೆಯನ್ನು ಓಂಕಾರೇಶ್ವರ ಪ್ರಾಪರ್ಟೀಸ್ ಎಂಬ ಸಂಸ್ಥೆಯಿಂದ 7.5 ಕೋಟಿ ರು.ಗೆ ಖರೀದಿಸಿ 2013ರ ಸೆಪ್ಟೆಂಬರ್‌ನಲ್ಲಿ ರಿಯಾಲ್ಟಿ ಕಂಪನಿ 'ಡಿಎಲ್‌ಎಫ್'ಗೆ 58 ಕೋಟಿ ರು.ಗೆ ಮಾರಾಟ ಮಾಡಿತ್ತು. 4 ವರ್ಷಗಳಲ್ಲಿ 7.50 ಕೋಟಿ ರು. ಹೂಡಿಕೆಗೆ 51.50 ಕೋಟಿ ರು. ಲಾಭವಾಗಿತ್ತು. 2012ರಲ್ಲಿ ಹರಿಯಾಣ ನೋಂದಣಿ ಇಲಾಖೆ ಮಹಾನಿರ್ದೇಶಕರಾಗಿದ್ದ ಐಎಎಸ್ ಅಧಿಕಾರಿ ಅಶೋಕ್ ಖೇಮ್ಕಾ, ವಾದ್ರಾ ಕಂಪನಿಯ ಈ ಭೂ ವ್ಯವಹಾರವನ್ನು 'ರಾಜ್ಯ ಕ್ರೋಢೀಕರಣ ಕಾಯಿದೆಯ ಉಲ್ಲಂಘನೆ' ಎಂದು ವರ್ಗೀಕರಿಸಿ ನೋಂದಣಿ ರದ್ದುಗೊಳಿಸಿದ ನಂತರ ಈ ಭೂ ವ್ಯವಹಾರ ವಿವಾದಕ್ಕೆ ಸಿಲುಕಿತು.

## ಇ.ಡಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

**ದೆಹಲಿ:** 'ನ್ಯಾಷನಲ್ ಹೆರಾಲ್ಡ್' ಪತ್ರಿಕಾ ಸಂಸ್ಥೆಯ ಆಸ್ತಿ ವರ್ಗಾವಣೆ ಪ್ರಕರಣದಲ್ಲಿ ಹಿರಿಯ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ವಿರುದ್ಧ ಜಾರಿ ನಿರ್ದೇಶನಾಲಯ(ಇ.ಡಿ) ನಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವುದಕ್ಕೆ ಆಕ್ರೋಶಗೊಂಡಿರುವ ಕಾಂಗ್ರೆಸ್ ಕಾರ್ಯಕರ್ತರು, ಬುಧವಾರ ದೆಹಲಿಯ ಅಕ್ಬರ್ ರಸ್ತೆಯಲ್ಲಿನ ಎಐಸಿಸಿ ಕಚೇರಿ ಬಳಿ ಬೃಹತ್ ಪ್ರತಿಭಟನೆ ನಡೆಸಿ ದರು.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ರಾಜಕೀಯ ಸೇಡಿನ ಕ್ರಮವಾಗಿ 'ಇ.ಡಿ' ಮೂಲಕ ಇಂಥ ಸೇಡಿನ ಕಾನೂನು ಕ್ರಮ ಜರುಗಿಸುತ್ತಿದೆ ಎಂದು ಪ್ರತಿಭಟನಾಕಾರರು ಖಂಡಿಸಿದರು. ಬಿಜೆಪಿ ಮತ್ತು ಇ.ಡಿ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನಾಥೆ, ಕೇಂದ್ರ ಸರಕಾರದ ನಡೆಯನ್ನು ಖಂಡಿಸಿದರು. ಇದು ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ಗುರಿಯಾಗಿಸಿ ಕೈಗೊಳ್ಳಲಾಗಿರುವ ಸೇಡಿನ ಕ್ರಮ ಎಂದರು. ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ(ಪಿಎಂಎಲ್‌ಎ) ಸೆಕ್ಷನ್ 3 ಮತ್ತು 4ರಡಿ ದೋಷಾರೋಪ ಹೊರಿಸಲಾಗಿದೆ.

ಕಮಾಂಡರ್ ಹಲ್ದಾರ್, ಪ್ರದೇಶ ಸಮಿತಿ ಸದಸ್ಯ ರಾಮೆ ಮೃತರು

## 13 ಲಕ್ಷ ರು.ಇನಾಮಿದ್ದ 2 ನಕ್ಸಲರು ಹತ

**ರಾಯಪುರ:** ಛತ್ತೀಸ್‌ಗಢ ಪೊಲೀಸರಿಗೆ ಬೇಕಾಗಿದ್ದ, ತಲೆಗೆ 13 ಲಕ್ಷ ರು. ಇನಾಮು ಘೋಷಣೆಯಾಗಿದ್ದ ಇಬ್ಬರು ನಕ್ಸಲರನ್ನು ಜಂಟಿ ಭದ್ರತಾ ಪಡೆ ಸಿಬ್ಬಂದಿ ಬಸ್ತಾರ್ ಜಿಲ್ಲೆಯಲ್ಲಿ ಬುಧವಾರ ನಸುಕಿನಲ್ಲಿ ಗುಂಡಿಕ್ಕಿ ಕೊಂದಿದ್ದಾರೆ.

ಬಸ್ತಾರ್ ಜಿಲ್ಲೆಯ ಕೊಂಡಗಾಂವ್ ಮತ್ತು ನಾರಾಯಣಪುರ ಜಿಲ್ಲೆಗಳ ಗಡಿ ಭಾಗದಲ್ಲಿರುವ ಕಿಲಾಮ್-ಬರ್ಗಮ್ ಗ್ರಾಮಗಳ ಸಮೀಪದ ಅರಣ್ಯದಲ್ಲಿ ಜಿಲ್ಲಾ ಮೀಸಲು ಪೊಲೀಸ್ ಪಡೆ(ಡಿಎಆರ್) ಮತ್ತು ಬಸ್ತಾರ್ ಫೈಟರ್ಸ್ ತಂಡಗಳ ಸಿಬ್ಬಂದಿ ಮಂಗಳವಾರ ರಾತ್ರಿ ನಕ್ಸಲ್ ಧಮನ ಕಾರ್ಯಾಚರಣೆ ನಡೆಸಿದ್ದಾಗ ನಕ್ಸಲರ ತಂಡದ ಜತೆ ಗುಂಡಿನ ಚಕಮಕಿ ಶುರುವಾಗಿದೆ. ಬಳಿಕ ಬುಧವಾರ ನಸುಕಿನಲ್ಲಿ ಇಬ್ಬರು ಮೋಸ್ಟ್ ವಾಂಟೆಡ್ ನಕ್ಸಲರನ್ನು ಹೊಡೆದುರುಳಿಸಲಾಗಿದೆ ಎಂದು ಬಸ್ತಾರ್ ವಲಯ ಐಜಿಪಿ ಪಿ. ಸುಂದರರಾಜ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಪೂರ್ವ ಬಸ್ತಾರ್ ವಿಭಾಗದ ಮಾವೋವಾದಿ ಕಮಾಂಡರ್ ಹಲ್ದಾರ್ ಮತ್ತು ಪ್ರದೇಶ ಸಮಿತಿ ಸದಸ್ಯ ರಾಮೆ ಮೃತರು. ಹಲ್ದಾರ್ ತಲೆಗೆ 8 ಲಕ್ಷ ಮತ್ತು ರಾಮೆ ತಲೆಗೆ 5 ಲಕ್ಷ ರು. ಇನಾಮು ಘೋಷಿಸಲಾಗಿತ್ತು. ನಕ್ಸಲರ ಮೃತದೇಹಗಳ ಬಳಿ ಒಂದು ಎಕೆ-47 ರೈಫಲ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರದೇಶದಲ್ಲಿ ಅಡಗಿ ರಬಹುದಾದ ನಕ್ಸಲರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಐಜಿಪಿ ವಿವರಿಸಿದ್ದಾರೆ.

### ಈವರೆಗೆ 140 ನಕ್ಸಲರ ನಾಶ

**2025ನೇ ಸಾಲಿನಲ್ಲಿ ಈವರೆಗೆ ರಾಜ್ಯದಲ್ಲಿ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಒಟ್ಟು 140 ನಕ್ಸಲರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ನಾರಾ ಯಣಪುರ ಮತ್ತು ಕೊಂಡಗಾಂವ್ ಸೇರಿ 7 ಜಿಲ್ಲೆಗಳ ಬಸ್ತಾರ್ ವಿಭಾಗದಲ್ಲಿಯೇ 123 ನಕ್ಸಲರ ಧಮನವಾಗಿದೆ ಎಂದು ಐಜಿಪಿ ಪಿ.ಸುಂದರರಾಜ್ ವಿವರಿಸಿದ್ದಾರೆ.**

## ಭಾರತೀಯ ವಿದ್ಯಾರ್ಥಿ ಗಡೀಪಾರಿಗೆ ತಡೆ

**ನ್ಯೂಯಾರ್ಕ್:** 'ವಿದ್ಯಾರ್ಥಿ ವೀಸಾ' ರದ್ದುಗೊಂಡಿರುವ 21 ವರ್ಷದ ಭಾರತ ಮೂಲದ ಪದವಿ ವಿದ್ಯಾರ್ಥಿ ಕ್ರಿಶ್ ಲಾಲ್ ಇಸರ್ ದಾಸಾನಿಯನ್ನು ಗಡೀಪಾರು ಮಾಡುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರಕಾರದ ಆದೇಶಕ್ಕೆ ಫೆಡರಲ್ ಕೋರ್ಟ್ ತಾತ್ಕಾಲಿಕ ತಡೆ ನೀಡಿದೆ.

ಕ್ರಿಶ್‌ಲಾಲ್ 2021ರಿಂದ ಎಫ್-1 ವಿದ್ಯಾರ್ಥಿ ವೀಸಾದಲ್ಲಿ ವಿಸ್ಕಾನ್ಸಿನ್-ಮ್ಯಾಡಿಸನ್ ವಿವಿಯಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದ ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ಈಗ ಅಂತಿಮ ಸೆಮಿಸ್ಟರ್‌ನಲ್ಲಿದ್ದು ಮೇ 10 ರಂದು ಪದವಿ ಪಡೆಯಲಿದ್ದಾರೆ. ವಿಸ್ಕಾನ್ಸಿನ್ ವೆಸ್ಟ್ ಡಿಸ್ಟ್ರಿಕ್ಟ್ ನ್ಯಾಯಾಲಯದಲ್ಲಿನ ಪ್ರಕರಣದ ಪ್ರಕಾರ, ಕ್ರಿಶ್‌ಲಾಲ್ 2024ರ ನ.22ರಂದು ಬಾರ್‌ನಿಂದ ತಡರಾತ್ರಿ ಮನೆಗೆ ನಡೆದು ಹೋಗು ವಾಗ ಒಂದು ಗುಂಪಿನೊಂದಿಗೆ ಮಾತಿನ ಚಕಮಕಿ ನಡೆಸಿದ್ದರು. ಆಗ ಅವರನ್ನು ಪೊಲೀಸರು ಅನುಚಿತ ವರ್ತನೆ ಆರೋಪದಡಿ ಬಂಧಿಸಿದ್ದರು. ಆದರೆ, ಪ್ರಕರಣ ಪರಿಶೀಲಿಸಿದ ಜಿಲ್ಲಾ ವಕೀಲರು ಆರೋಪ ಮುಂದುವರಿಸಲು ನಿರಾಕರಿಸಿದ್ದರು. ಆದರೆ, ಇದೇ ಏ.4ರಂದು ವಿಸ್ಕಾನ್ಸಿನ್-ಮ್ಯಾಡಿಸನ್ ವಿವಿ ಅಂತಾರಾಷ್ಟ್ರೀಯ ವಿದ್ಯಾರ್ಥಿ ಸೇವೆಗಳ ಕಚೇರಿ ಕ್ರಿಶ್ ಲಾಲ್ ಅವರ ವಿದ್ಯಾರ್ಥಿ ವಿನಿ ಮಯ ಸಂದರ್ಶಕ ವ್ಯವಸ್ಥೆ ದಾಖಲೆ ಕೊನೆಗೊಳಿಸಿದೆ.

## ಸಮಾಚಾರ ಸಣ್ಣದಲ್ಲ

### ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ:** ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಗರಿಷ್ಠ 10 ದಿನಗಳು ಜೂಟ್ ಬ್ಯಾಗ್ ತಯಾರಿಕೆ, 30 ದಿನ ಮೋಬೈಲ್ ರಿಪೇರಿ ಮತ್ತು ಸರ್ವಿಸ್ ತರಬೇತಿ, 30 ದಿನಗಳ ಮೋಟಾರ್ ರಿವೈಂಡಿಂಗ್ ಮತ್ತು ಪಂಪ ಸೆಟ್ ರಿಪೇರಿ ತರಬೇತಿಗೆ ಏಪ್ರಿಲ್ 21 ರಂದು ಸಂದರ್ಶನ ನಡೆಯಲಿದೆ. ಏ.22 ರಿಂದ ತರಬೇತಿ ಆರಂಭವಾಗಲಿವೆ. ಆಸಕ್ತರು ಮೊ.ಸಂ: 08539231038, 9483618178, 7259073827, 9538096796 9481085217 ಗೆ ಸಂಪರ್ಕಿಸಬಹುದಾಗಿದೆ. ಸ್ವಯಂ ಉದ್ಯೋಗ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಉಚಿತವಾಗಿ ನೀಡಲಾಗುವುದು ಎಂದು ಕೊಪ್ಪಳ ಎಸ್‌ಬಿಐ ಆರ್‌ಸಿಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ವಾಗೀಶ ತೀರ್ಥರ ಪೂರ್ವಾರಾಧನೆ ಸಂಪನ್ನ

**ಗಂಗಾವತಿ:** ತಾಲೂಕಿನ ಆನೆಗೊಂದಿ ಸಮೀಪ ತುಂಗಭದ್ರ ನದಿಯ ನಡುಗಡ್ಡೆಯಲ್ಲಿನ ನವಬೃಂದಾವನದಲ್ಲಿ ಮಂತ್ರಾಲಯದ ರಾಯರ ಮಠದಿಂದ ವಾಗೀಶ ತೀರ್ಥರ ಪೂರ್ವಾರಾಧನೆ ಮಂಗಳವಾರ ಆಚರಿಸಲಾಯಿತು. ಮಂತ್ರಾಲಯ ಮಠದ ಪೀಠಾಧಿಪತಿ ಸುಬುದೇಂದ್ರ ತೀರ್ಥ ಶ್ರೀಗಳ ಆದೇಶದಂತೆ ಸ್ಥಳೀಯ ಭಕ್ತರ ಸಮ್ಮುಖದಲ್ಲಿ ವಾಗೀಶ ತೀರ್ಥರ ಪೂರ್ವಾರಾಧನೆಯನ್ನು ನೆರವೇರಿಸಲಾಯಿತು. ಪೂರ್ವಾರಾಧನೆಯ ಅಂಗವಾಗಿ ವಾಗೀಶ್‌ತೀರ್ಥರ ಮೂಲ ಬೃಂದಾವನಕ್ಕೆ ನಿರ್ಮಾಲ್ಯ ವಿಸರ್ಜನೆ, ವಿಶೇಷ ಫಲ ಪಂಚಾಮೃತ ಅಭಿಷೇಕ, ಬೃಂದಾವನಕ್ಕೆ ರಜತ ಕವಚ ಅಲಂಕಾರ, ರೇಷ್ಮೆ ವಸ್ತ್ರ ಅಲಂಕಾರ, ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಜರುಗಿದವು. ನಂತರ ಹಸ್ತೋದಕ ತೀರ್ಥಪ್ರಸಾದ, ಅಷ್ಟೋತ್ತರ ಪಾರಾಯಣ ನಡೆಸಲಾಯಿತು. ಹೊಸಪೇಟೆ ರಾಯರ ಮಠದ ಮಠಾಧಿಪತಿ ಪವನ ಆಚಾರ್ಯ, ಗಂಗಾವತಿ ಮಠದ ಮಠಾಧಿಪತಿಗಳಾದ ಸುಷೇಲೇಂದ್ರ ಆಚಾರ್, ಆನೆಗೊಂದಿ ಶಾಖಾ ಮಠದ ವ್ಯವಸ್ಥಾಪಕ ಸುಮಂತ ಕುಲಕರ್ಣಿ ಪ್ರಮುಖರಾದ ಸಂಜೀವ್ ಕುಲಕರ್ಣಿ, ವಿಜಯದೇಸಾಯಿ, ಸಮವೇದ್ ಗುರುರಾಜ ಆಚಾರ್, ಶ್ರೀನಿವಾಸ್ ಆಚಾರ್ ಹಾಗೂ ಇತರರು ಇದ್ದರು.

### ಜಾತಿ ಗಣತಿ ಸಮೀಕ್ಷೆ ಜಾರಿ ಅಸಾಧ್ಯ: ಅನ್ವರಿ

**ಮಸ್ಕಿ:** ದಶಕಗಳ ಹಿಂದೆ ನಡೆಸಿರುವ ಜಾತಿ ಗಣತಿ ಸಮೀಕ್ಷೆ ಜಾರಿ ಅಸಾಧ್ಯ ಎಂದು ಕೇಂದ್ರದ ಮಾಜಿ ಮಂತ್ರಿ ಬಸವರಾಜ ಪಾಟೀಲ್ ಅನ್ವರಿ ಅಭಿಪ್ರಾಯ ಪಟ್ಟರು.ಪಟ್ಟಣದಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಗಣತಿ ಸಮೀಕ್ಷೆ ಬಗ್ಗೆ ಹಾವು ಸಾಯಬಾರದು ಕೋಲು ಮುರಿಯ ಬಾರದು ಎಂಬ ನಿಲುವು ತಾಳಿದ್ದಾರೆ ಎಂದರು. ಮುಖ್ಯ ಮಂತ್ರಿ ಸಿದ್ದ ರಾಮಯ್ಯ ಅವರು ಚಾಣಾಕ್ಷ ರಾಜಕಾರಣಿಯಾಗಿದ್ದಾರೆ ಜಾತಿ ಗಣತಿ ಸಮೀಕ್ಷೆ ಬಗ್ಗೆ ಸಾರ್ವಜನಿಕರಿಂದ ಯಾವ ರೀತಿ ಪ್ರತಿಕ್ರಿಯೆ ಬರಬಹುದು ಎಂದು ಮಾಹಿತಿ ಪಡೆಯಲು ಈ ರೀತಿ ಸುದ್ದಿ ಹರಿ ಬಿಡುತ್ತಾರೆ ಎಂದು ಅನ್ವರಿ ಹೇಳಿದರು. ಜಾತಿ ಗಣತಿ ವರದಿ ಜಾರಿ ಕುರಿತು ಮೊದಲಿಗೆ ಸರಕಾರ ತನ್ನ ನಿಲುವು ಸ್ಪಷ್ಟ ಪಡಿಸಬೇಕು ಎಂದು ಅನ್ವರಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮಹಾದೇವಪ್ಪ ಗೌಡ, ಸಿದ್ದಲಿಂಗಯ್ಯ ಗಚ್ಚೀನ ಮಠ, ಅಪ್ಪಾಜಿ ಗೌಡ, ಅಭಿಜಿತ್ ಸಿಂಗ್ ಮಾಲಿ ಪಾಟೀಲ್, ಪಂಪಣ್ಣ ಗುಂಡಳ್ಳಿ, ಸೂಗಣ್ಣ ಬಾಳೇ ಕಾಯಿ ಇನ್ನಿತರ ಮುಖಂಡರಿದ್ದರು.

### ಗಾಳಿ ಆವಾಂತರ ಮನೆ ಕುಸಿತ ; ವ್ಯಕ್ತಿ ಸಾವು

**ಕುಷ್ಟಗಿ :** ಬಿರುಗಾಳಿ ಮಳೆಗೆ ಮನೆಗೋಡೆ ಕುಸಿದುಬಿದ್ದು ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತಾಲೂಕಿನ ಹಿರೇಬನ್ನಿಗೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕನಂದಿಹಾಳ ಗ್ರಾಮದ ಹೊರವಲಯ ದಮೀನಿನಲ್ಲಿ ಬುಧವಾರ ಸಂಜೆ ನಡೆದಿದೆ. ಗ್ರಾಮದ ಶರಣಪ್ಪ ಭಾವಿಕಟ್ಟಿ ಮೃತ ದುರ್ದೈವಿ ಎಂದು ಗುರುತಿಸಲಾಗಿದೆ. ಚಿಕ್ಕನಂದಿಹಾಳ ಗ್ರಾಮದಿಂದ ಹಿರೇಬನ್ನಿಗೋಳ ಗ್ರಾಮಕ್ಕೆ ತೆರಳುವ ರಸ್ತೆಗೆ ಹೊಂದಿಕೊಂಡಿರುವ ತಮ್ಮ ಜಮೀನಿನಲ್ಲಿರುವ ಆಶ್ರಯ ಮನೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಇಂದು ಸಂಜೆ ಐದುಗಂಟೆ ಸುಮಾರಿಗೆ ಬಿರುಗಾಳಿ ಮಳೆ ಆರಂಭವಾಗಿದ್ದು, ಜಮೀನಿನಲ್ಲಿ ಕೆಲಸಮಾಡುತಿದ್ದ ವ್ಯಕ್ತಿ ರಕ್ಷಣೆಗಾಗಿ ಮನೆಯೊಳಗೆ ಹೋದ ಸಂದರ್ಭದಲ್ಲಿ ಮನೆಯ ಗೋಡೆ ಕುಸಿದುಬಿದ್ದ ಪರಿಣಾಮ ವ್ಯಕ್ತಿ ಸ್ಥಳದಲ್ಲಿ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಕುಷ್ಟಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದ್ದು, ಘಟನಾ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಬಿ.ವೈ. ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ
ಮುಖ್ಯಮಂತ್ರಿಗಳ ಬಳಿ ಶಾಸಕರು ಹೋಗಿ ಅನುದಾನ ಕೇಳಿದರೆ ಗ್ಯಾರಂಟಿ ಯೋಜನೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇಡೀ ದೇಶದಲ್ಲೆ ಅಧಿಕಾರಕ್ಕೆ ಬಂದ ಕೇವಲ 20 ತಿಂಗಳಲ್ಲಿಯೇ ಜನಪ್ರಿಯತೆ ಕಳೆದುಕೊಂಡ ಏಕೈಕ ಸರಕಾರ ಅದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ.

ನೀರಿಗಾಗಿ ಕಿಲೋಮೀಟರ್ ಗಟ್ಟಲೆ ಅಲೆದಾಟ | ಸಮಸ್ಯೆ ಎದುರಿಸಲು ಬೇಸಿಗೆ ಆರಂಭದಲ್ಲಿಯೇ ಸಿಂಧನೂರು ತಾಲೂಕು ಆಡಳಿತ ಮುಂಜಾಗ್ರತಾ ಕ್ರಮ

# ಅನೇಕ ಹಳ್ಳಿಗಳಲ್ಲಿ ನೀರಿಗಾಗಿ ಹಾಹಾಕಾರ

ರಮೇಶ ನಾಯಕ ಗೋನವಾರ ಸಿಂಧನೂರು

ಸಿಂಧನೂರು ನಗರಕ್ಕೆ ಬಿಸಿಲೂರು, ನೀರಾವರಿ ತಾಲೂಕು, ಅಭಿವೃದ್ಧಿಯ ತಾಲೂಕು ಎಂದು ಅನೇಕ ಹೆಸರಗಳು ಇವೆ ಆದರೂ ಸಹ ತಾಲ್ಲೂಕಿನಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುತ್ತದೆ. ಈ ಬಾರಿ ಬೇಸಿಗೆಯ ಆರಂಭದಲ್ಲಿಯೇ ತಾಲ್ಲೂಕಾಡಳಿತ ಸಮಸ್ಯೆ ಎದುರಿಸಲು ಸಿದ್ಧವಾಗಿ ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಾಗದಂತೆ ಮುಂಜಾಗ್ರತೆಯ ಕ್ರಮವಾಗಿ ಸಂಬಂದ ಪಟ್ಟ ತಾಲೂಕಿನ ಎಲ್ಲಾ ಅಧಿಕಾರಿಗಳ ಸಭೆ ನಡೆಸಿದ್ದೆನೆ. ಕುಡಿಯವ ನೀರಿನ ಸಮಸ್ಯೆ ಈ ಸಲ ಆಗುವುದಿಲ್ಲ ತಾಲೂಕಿನ ಎಲ್ಲಾ ಕೆರೆಗಳು ತುಂಬಿಸಿದ್ದೆವೆ ಬೋರವೆಲ್ ಮೇಲೆ ಅವಲಭಿಂತವಾಗಿರುವ ಹಳ್ಳಿಗಳಿಗೆ ಟ್ಯಾಂಕರ್ ಮುಖಾಂತರ ನೀರಿನ ವ್ಯವಸ್ಥೆ ಮಾಡಲಾಗುವುದು. ನಮ್ಮ ಅಧಿಕಾರಿಗಳ ತಂಡ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾರೆ ಏನು ಸಮಸ್ಯೆಯಾಗುವುದಿಲ್ಲ.
-ಹಂಪನಗೌಡ ಬಾದರ್ಲಿ, ಶಾಸಕ

ಬೇಸಿಗೆ ಆರಂಭವಾಗಿದ್ದು ನೆತ್ತಿಯ ಮೇಲೆ ಸೂರ್ಯ ತಾಂಡವವಾಡುತ್ತಿದ್ದು, ಪ್ರತೀ ವರ್ಷದಂತೆ ಈ ಸಲವೂ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಇನ್ನೂ ಅನೇಕ ಹಳ್ಳಿಗಳಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಿದ್ದು, ಇನ್ನೂ ಅನೇಕ ಹಳ್ಳಿಗಳಲ್ಲಿ ನೀರಿಗಾಗಿ ಕಿಲೋಮೀಟರ್ ಗಟ್ಟಲೆ ಸಂಚರಿಸಿ ಹರಸಾಹಸ ಪಡುವ ಸ್ಥಿತಿ ಇನ್ನೂ ಬದಲಾಗಿಲ್ಲ.

ತಾಲೂಕಿನಲ್ಲಿ ತುಂಗಭದ್ರಾ ನದಿ ಹರಿಯುವ ಕಾರಣ ನೀರಾವರಿಯ ಪ್ರದೇಶ ಎಂದು ಸಿಂಧನೂರಿಗೆ ಮತ್ತೊಂದು ಹೆಸರಿದೆ. ಆದರೆ ಇಂದಿಗೂ ಕುಡಿಯುವ ನೀರಿನ ಸಮಸ್ಯೆ ಶಾಶ್ವತ ಪರಿಹಾರ ಸಿಕ್ಕಿಲ್ಲ ಎನ್ನುವುದು ಸತ್ಯ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತಷ್ಟು ಉದ್ಭವಿಸುತ್ತಿದ್ದು ಅನೇಕ ಗ್ರಾಮಗಳಲ್ಲಿ ಪರದಾಡುವಂತಾಗಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಜಲಜೀವನ್ ಮಿಷನ್, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, 24/7 ಕುಡಿಯುವ ನೀರಿನ ಯೋಜನೆ ಸೇರಿ ಅನೇಕ ಯೋಜನೆಗಳಿದ್ದರೂ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ನದಿಗಳ ಮೂಲಕ ಪೈಪ್ ಲೈನ್ ಸಂಪರ್ಕ ಕಲ್ಪಿಸಿ ಮನೆಮನೆಗೆ ನಳದ ಮೂಲಕ 24 ತಾಸು ಕುಡಿಯುವ ನೀರು ಪೂರೈಸಲು ಮುಂಬೈ ಮೂಲದ ಗುತ್ತಿಗೆ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು . ಆದರೆ ಅನೇಕ ವರ್ಷಗಳಾದರೂ ಶೇಕಡಾ ಅರ್ಧದಷ್ಟು ಕಾಮಗಾರಿ ಮಾಡದೇ ಮಕಾಡೆ ಮಲಗಿದೆ. ಅನೇಕ ಗ್ರಾಮಗಳಲ್ಲಿ ಹಾಗೂ ತಾಲೂಕು ಕೇಂದ್ರದಲ್ಲಿ ಮನೆಮನೆಗೆ ನಳ ಅದಕ್ಕೆ ಮೀಟರ್ ಅಳವಡಿಸಿ ತುಕ್ಕು ಹಿಡಿದರೂ ಇದುವರೆಗೆ ಹನಿ ನೀರು ಹರಿದಿಲ್ಲ ಎನ್ನುವುದು ನಾಗರಿಕರ ಅಳಲಾಗಿದೆ.

ಅರ್ಧ ಕ್ಕೆ ನಿಂತ ಪೈಪ್‌ಲೈನ್ ಕಾಮಗಾರಿ.

ನಾನು ಶಾಸಕ ನಾಗಿದ್ದಾಗ ತಾಲೂಕಿನಲ್ಲಿ ನೀರಿನ ಸಮಸ್ಯೆಯಾದಂತೆ ಎಲ್ಲಾ ಕ್ರಮ ಕೈಗೊಂಡಿದ್ದೆ ಹಾಗೂ ಕುಡಿಯು ವ ನೀರಿನ ಭವಣೆ ಹೋಗಲಾಡಿಸಲು ನಾನು ನನ್ನ ಸ್ವಂತದ ಆಸ್ತಿಯನ್ನು ತಾಲೂಕಿನ ಜನರಿಗೆ 30 ಎಕರೆ ಕೆರೆಯನ್ನು ತೊಡಿಸಿ ನೀರಿನ ಭವಣೆ ತಿರುಸಿದ್ದೆನೆ.
-ವೆಂಕಟರಾವ ನಾಡಗೌಡ, ಮಾಜಿ ಶಾಸಕ

ನಿರ್ಲಕ್ಷ್ಯ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಈ ಹಿಂದೆ ಅನೇಕ ಬಾರಿ ಮನವಿ ಮಾಡಿದರೂ, ಯಾವುದೇ ಕ್ರಮ ಕೈಗೊಳ್ಳದೆ ಮೂಕ ಪ್ರೇಕ್ಷಕನಂತೆ ಪಂಚಾಯತ್ ಆಡಳಿತ ಮಂಡಳಿ ಕೈ ಕಟ್ಟಿ ಕುಳಿತಿದೆ ಎಂದು ಸ್ಥಳೀಯರು ಗಂಭೀರವಾಗಿ ಆರೋಪಿಸಿದ್ದಾರೆ..
-ಎಂ. ಬಸವರಾಜಗೌಡ ಆಯನೂರು, ಯುವ ಮುಖಂಡ

ನಮ್ಮ ಕೇಂದ್ರ ಸರಕಾರದ ಕುಡಿಯವ ನೀರಿನ ಸಲುವಾಗಿ ಅನೇಕ ಕಾರ್ಯಕ್ರಮಗಳು ತಂದಿದೆ ಅದರಲ್ಲಿ ಜೆಜೆಎಂ,34/7 ಕುಡಿಯುವ ನೀರಿನ ಯೋಜನೆ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆ ತಂದಿದೆ ಅಂದರೆ ಸ್ಥಳೀಯ ರಾಜ ಕಾರಣದಿಂದ ಕಳಪೆ ಮಟ್ಟದಿಂದ ಕೆಲಸ ಮಾಡಿ ಸರಕಾರದ ಹಣ ಪೋಲು ಮಾಡಿದ್ದಾರೆ ಕಾಂಗ್ರೇಸ್ ಕಾರ್ಯಕರ್ತರಿಗೆ ತಮ್ಮ ಸ್ವಂತ ರೀತಿಯಾಗಿ ಕೆಲಸ ಮಾಡಲು ಕೊಟ್ಟಿದ್ದಾರೆ. ಇನ್ನೂ ವರೆಗೂ ಒಂದೇ ಒಂದು ಊರಿನಲ್ಲಿ ಜೆಜೆಎಂ ನಿಂದ ನೀರು ಕೊಡಲು ಆಗುತ್ತಿಲ್ಲ ಶಾಸಕರಿಗೆ ಇದು ದೃರಷ್ಟಕರದ ಸಂಗತಿ ಯಾಗಿದೆ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆ ಉದ್ಬವಾದರೆ ಅದಕ್ಕೆ ನೇರ ಹೊಣೆ ಶಾಸಕರೇ.
- ಕೆ. ಕರಿಯಪ್ಪ, ಬಿಜೆಪಿ ಮುಖಂಡರು

ಕುಡಿಯುವ ನೀರಿಗೆ ಹಾಹಾಕಾರ-ಕಣ್ಮುಚ್ಚಿ ಕುಳಿತ ಗ್ರಾ.ಪಂ ಆಡಳಿತ: ಜಿಲ್ಲೆಯ ಸಿಂಧನೂರು ತಾಲೂಕಿನ ಮಣಿಕೇರಿ ಕ್ಯಾಂಪ ರಾಘವೇಂದ್ರ ಕ್ಯಾಂಪ್ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಹನಿ ನೀರಿಗಾಗಿ ಮಹಿಳೆಯರು, ಮಕ್ಕಳು ಎಲ್ಲ ಕೆಲಸ ಬಿಟ್ಟು ನಳದ ಮುಂದೆ ಬಿಂದಿಗೆ ಹಿಡಿದು ದೂರದ ಕೆರೆಯ ನೀರಿಗೆ ಹೋಗುತ್ತಾರೆ.

ಪಾಪರಾವ್ ಕ್ಯಾಂಪ್, ವಿಘ್ನೇಶ್ವರ ಕ್ಯಾಂಪ್, ಗೋನವಾರದ ವಾಲ್ಮೀಕಿ ನಗರದಲ್ಲಿ ಸುಮಾರು 200ಕ್ಕೂ ಹೆಚ್ಚು ಜನವಸತಿ ಪ್ರದೇಶಗಳಿದ್ದು, ನಿವಾಸಿಗಳು ನಿತ್ಯ ಕುಡಿಯುವ ನೀರಿಗಾಗಿ ಸುಮಾರು 02 ಕಿ.ಮೀ.ದೂರ ನೀರಿನ ಟ್ಯಾಂಕ ಹತ್ತಿರ ತೆರಳಿ ಕುಡಿಯವ ನೀರು ತಂದುಕೊಳ್ಳಬೇಕಾದಂತಹ ಅವ್ಯವಸ್ಥೆ ಇದೆ. ದ್ವಿಚಕ್ರ ವಾಹನಗಳು ಇದ್ದರೆ ಮಾತ್ರ ಕುಡಿಯುವ ನೀರು ಸಿಗುತ್ತವೆ. ಇಲ್ಲದಿದ್ದರೆ ಹನಿ ನೀರಿಗೂ ಪರದಾಡಬೇಕಾದ ದುಸ್ಥಿತಿಯಿದೆ ಎಂಬುದು ಅವೇದನಯಾಗಿದೆ.

## ರೋಜಗಾರ್ ದಿವಸ್‌ಗೆ ಕಾಮಗಾರಿ

**ಲಿಂಗಸೂಗೂರು:** ತಾಲೂಕಿನ ಕಾಳಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾಳಾಪುರ ಗ್ರಾಮದಲ್ಲಿ ನಾಲ ಉಳೆತ್ತುವ ಕಾಮಗಾರಿ ಮಾಡುವ ಮೂಲಕ ರೋಜಾಗಾರ ದಿವಸ ಆಚರಣೆ ಮಾಡಲಾಯಿತು. ಗೂಳೆ ಹೋಗದೇ ಇದ್ದೂರಲ್ಲೇ ಸತತ ಮೂರು ತಿಂಗಳುಗಳ ಕಾಲ ನಿರಂತರವಾಗಿ ನರೇಗಾ ಯೋಜನೆಯಡಿ ಕೆಲಸ ಮಾಡುವಂತೆ ಕೂಲಿಕಾರರಿಗೆ ತಾಲೂಕ ಐಇಸಿ ಸಂಯೋಜಕ ಬಾಲಪ್ಪ ಹೇಳಿದರು.

ಗ್ರಾಮದಲ್ಲಿ ಈಗಾಗಲೇ ಏ.1 ರಿಂದ ನರೇಗಾ ಕೂಲಿ ಮೊತ್ತ 349 ರಿಂದ ರು. 370 ಕ್ಕೆ ಹೆಚ್ಚಿಸಲಾಗಿದ್ದು, ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಸಿಬ್ಬಂದಿಗಳು ತಮಗೆ ನೀಡಿದ ಅಳತೆಗನು ಸಾರವಾಗಿ ಕೆಲಸ ನಿರ್ವಹಿಸಿ ಪೂರ್ಣ ಪ್ರಮಾಣದ ಕೂಲಿಯನ್ನು ಪಡೆಯಬೇಕು. ಸ್ಥಳದಲ್ಲಿ ಹಾಜರಿರುವವರಿಗೆ ಮಾತ್ರ ಹಾಜರಿ ಹಾಕಬೇಕು ಎಂದು ಕಟ್ಟುನಿಟ್ಟಾಗಿ ಸಿಬ್ಬಂದಿಗೆ ಸೂಚಿಸಿದರು.ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ ಈ ಎರಡು ಇನ್ಸೂರೆನ್ಸ್ ಗಳನ್ನು ಮಾಡಿಕೊಳ್ಳಲು ತಿಳಿಸಲಾಯಿತು. ನರೇಗಾ ಯೋಜನೆ ಅಡಿಯಲ್ಲಿ ಏಪ್ರಿಲ್ ಹಾಗೂ ಮೇ.2025 -26 ರಲ್ಲಿ ಕೆಲಸದಲ್ಲಿ 30% ರಿಯಾಯಿತಿ ನೀಡಲಾಗಿದೆ, ಸದರಿ ರಿಯಾಯಿತಿ ಸದುಪಯೋಗಪಡಿಸಿ ಕೊಳ್ಳಿ, ಕೂಲಿಕಾರರಿಗೆ ನಿರಂತರವಾಗಿ ಕೆಲಸ ನೀಡಲಾಗುವುದು. ಜೊತೆಗೆ ಕಡ್ಡಾಯವಾಗಿ ಎನ್.ಎಂ.ಆರ್ ನಲ್ಲಿ ಇರುವ ಕೂಲಿಕಾರರೇ ಕೆಲಸಕ್ಕೆ ಹಾಜರಾಗಬೇಕು. ಜೊತೆಗೆ ಸಣ್ಣ ಮಕ್ಕಳನ್ನು ಕೆಲಸದ ಸ್ಥಳಕ್ಕೆ ಕರೆ ತರದೇ ಮನೆಯಲ್ಲಿ ಬಿಡಬೇಕು.

ಸಮುದಾಯ ಕಾಮಗಾರಿ ಜೊತೆಗೆ ವಯಕ್ತಿಕ ಕಾಮಗಾರಿ ಮಾಡಿಕೊಂಡು ಜೀವಿಯ ಅವಧಿಯಲ್ಲಿ 5 ಲಕ್ಷ ದ ವರೆಗೆ ಲಾಭ ಪಡೆಯಬಹುದು ಎಂದು ತಿಳಿಸಿದರು ಈ ಸಂದರ್ಭದಲ್ಲಿ ಕಾರ್ಯದರ್ಶಿ ಬಸವರಾಜ್, ಗ್ರಾ.ಪಂ ಸದಸ್ಯಮೌನೇಶ, ಆದಮ್ಮ ಗ್ರಾಮ ಮಿತ್ರರು, ಮೇಟ್ಸ್ ಹಾಗೂ ಕೂಲಿಕರಾರು ಹಾಜರಿದ್ದರು.

ಕಾಮಗಾರಿ ಮೂಲಕ ರೋಜಾಗಾರ ದಿವಸ ಆಚರಣೆ ಮಾಡಲಾಯಿತು.

## ಮಳೆಯ ಆರ್ಭಟಕ್ಕೆ ರೈತರು ಕಂಗಾಲು

**ಯಲಬುರ್ಗಾ:** ಪಟ್ಟಣ ಸೇರಿ ತಾಲೂಕಿನ ನಾನಾ ಕಡೆ ಬುಧವಾರ ಗುಡುಗು- ಸಿಡಿಲು ಸಮೇತ ಗಾಳಿಮಳೆ ಆಗಿದ್ದು, ಬಿಸಿಲಿನ ತಾಪಕ್ಕೆ ಕಾದು ಕೆಂಡವಾಗಿದ್ದ ಇಳೆ ಮಳೆ ಆಗಮನದಿಂದ ತಂಪಾಗಿದೆ. ಮತ್ತೊಂದೆಡೆ ವರುಣರಾಯ ಸಾಕಷ್ಟು ಅವಾಂತರ ಸೃಷ್ಟಿಸಿದ್ದಾನೆ.

ಪೂರ್ವ ಮುಂಗಾರು ಆರ್ಭಟಕ್ಕೆ ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಗಾಳಿಗೆ ಅಲ್ಲಲ್ಲಿ ವಿದ್ಯುತ್ ತಂತಿ ಹರಿದು ಬಿದ್ದಿದ್ದು, ವಿದ್ಯುತ್ ಪೂರೈಕೆ ಕಡಿತಗೊಳಿಸಲಾಗಿದೆ. ಅಲ್ಲಲ್ಲಿ ವಿದ್ಯುತ ಕಂಭ ನೆಲಕ್ಕೆ ಉರುಳಿವೆ. ವಿವಿಧ ಕಡೆ ರೈತರ ಜಮೀನಲ್ಲಿ ಗಿಡ ಮರಗಳ ರೆಂಬೆ ಕೊಂಬೆ ಮುರಿದು ಬಿದ್ದಿವೆ. ಜಾನುವಾರುಗಳಿಗೆ ಸಂಗ್ರಹಿಸಿದ್ದ ಮೇವು ನೀರು ಪಾಲಾಗಿದೆ.

ತಾಲೂಕಿನ ತುಮ್ಮರಗುದ್ದಿ ಗ್ರಾಮದಲ್ಲಿ ರೈತ ಶಂಕ್ರಪ್ಪ ಚನಪನಹಳ್ಳಿ ಅವರಿಗೆ ಸೇರಿದ ಎರಡು ಹಸು ಸಿಡಿಲು ಬಡಿದು ಮೃತಪಟ್ಟಿವೆ. ಚಿಕ್ಕವಂಕಲಕುಂಟಾ ಗ್ರಾಮದ ರೈತ ನಾಗಪ್ಪ ಚಿಣಗಿ ಆಕಳು ಸಿಡಿಲಿಗೆ ಬಲಿಯಾಗಿದೆ. ಹೈನುಗಾರಿಕೆಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದ ರೈತರಿಗೆ ಆಕಳು ಸಾವಿನಿಂದ ಕಂಗಾಲಾಗಿದ್ದಾರೆ. ಸರಕಾರ ಕೂಡಲೇ ನೆರವಿಗೆ ಬರಬೇಕು ಎಂದು ಅಳಲು ತೋಡಿಕೊಂಡಿದ್ದಾರೆ. ಹೊಲದ ಶೆಡ್‌ನಲ್ಲಿ ಕಟ್ಟಿ ಹಾಕಲಾಗಿದ್ದ ಹಸುಗಳಿಗೆ ಸಿಡಿಲು ಬಡಿದಿದೆ.

ಮಳೆಗೂ ಮೊದಲೇ ಬೀಸಿದ ಭಾರಿ ಗಾಳಿಗೆ ಸೀಟ್ ಮತ್ತು ತಗಡಿನ ಮನೆಯ ಮೇಲ್ಚಾವಣಿ ಹಾರಿ ಹೋಗಿವೆ. ತಾಲೂಕಿನ ಗುಳೆ ಗ್ರಾಮದಲ್ಲಿ ಹನುಮಂತಪ್ಪ ಸಣ್ಣಯಲ್ಲಪ್ಪ ಕಂದಕೂರು, ತಿಪ್ಪಣ್ಣ ನರಸಪ್ಪ ಬಡಗಿ ಎಂಬುವರ ಮನೆಯ ಮೇಲ್ಚಾವಣಿಯ ತಗಡು-ಶೀಟ್ ಗಳು ಹಾರಿ ಹೋಗಿವೆ. ಇದರಿಂದ ಮಳೆ ನೀರು ಮನೆಯಲ್ಲೇ ಬಿದ್ದಿದ್ದರಿಂದ ಬದುಕಿಗೆ ಇದ್ದ ದವಸ ಧಾನ್ಯ ನೀರು ಪಾಲಾಗಿವೆ.

ಕಲಭಾವಿ ಗ್ರಾಮದ ಹನುಮಂತಪ್ಪ ಹುಣಸಿಹಾಳ ಎಂಬುವರಿಗೆ ಸೇರಿದ ಸುಮಾರು 5 ಎಕರೆ ಪಪ್ಪಾಯ ಬೆಳೆ ಹಾನಿಗೆ ಒಳಗಾಗಿದೆ. ಬಿರುಗಾಳಿ ಹೊಡೆತಕ್ಕೆ ಶೇ.50ರಷ್ಟು ಗಿಡ ನೆಲಕ್ಕೆ ಉರುಳಿವೆ. ಬೋರ್‌ವೆಲ್ ನೀರಿನಿಂದ ತೋಟಗಾರಿಕೆ ಮಾಡಿಕೊಂಡಿದ್ದ ಸಾಕಷ್ಟು ರೈತರ ಬೆಳೆ ಹಾನಿಗೆ ಒಳಗಾದ ಬಗ್ಗೆ ವರದಿಯಾಗಿದೆ. ಲಕ್ಷಾಂತರ ರು. ಖರ್ಚು ಮಾಡಿ ಬೆಳೆದಿದ್ದ ತೋಟಗಾರಿಕೆ ರೈತರು ಕಂಗಾಲಾಗಿದ್ದಾರೆ.

ಯಲಬುರ್ಗಾ ತಾಲೂಕು ಕಲಭಾವಿ ಗ್ರಾಮದಲ್ಲಿ ಪಪ್ಪಾಯ ಬೆಳೆ ಹಾನಿಗೆ ಒಳಗಾಗಿರುವುದು.

## ಬೆಂಬಲ ಬೆಲೆಗೆ ಭತ್ತ, ಜೋಳ ಖರೀದಿ: ಡಿಸಿ

**ರಾಯಚೂರು:** ಇಲ್ಲಿನ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2024-25ನೇ ಸಾಲಿನ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ರೈತರಿಂದ ಭತ್ತ ಮತ್ತು ಜೋಳವನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರಾದ ನಿತೀಶ್ ಕೆ. ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ. ರಾಜ್ಯ ಸರಕಾರದ ಆದೇಶದಂತೆ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಉತ್ಪಾದನೆಗೆ ಅನುಗುಣವಾಗಿ ಪ್ರತಿ ಎಕರೆಗೆ 20 ಕ್ವಿಂಟಾಲ್ ನಂತೆ ಅಂತೆ ಗರಿಷ್ಟ 150 ಕ್ವಿಂಟಾಲ್ ಬಿಳಿಜೋಳವನ್ನು ಮತ್ತು ಪ್ರತಿ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್ ನಂತೆ ಗರಿಷ್ಟ 50 ಕ್ವಿಂಟಾಲ್ ಭತ್ತವನ್ನು ರೈತರು ಹೊಂದಿರುವ ಜಮೀನಿಗೆ ಅನುಗುಣವಾಗಿ ಎಫ್‌ಐಡಿ ಪ್ರಕಾರ ಬಿಳಿಜೋಳ-ಹೈಬ್ರಿಡ್ ಪ್ರತಿ ಕ್ವಿಂಟಾಲ್‌ಗೆ 3,371 ರು. ಮತ್ತು ಬಿಳಿಜೋಳ-ಮಾಲ್ದಂಡಿ ಪ್ರತಿ ಕ್ವಿಂಟಾಲ್‌ಗೆ 3,421 ರು. ಗಳಂತೆ ಹಾಗೂ ಸಾಮಾನ್ಯ ಭತ್ತ ಪ್ರತಿ ಕ್ವಿಂಟಾಲ್‌ಗೆ 2,300 ರು. ಮತ್ತು ಗ್ರೇಡ್-ಎ ಭತ್ತ ಪ್ರತಿ ಕ್ವಿಂಟಾಲ್‌ಗೆ 2,320 ರು. ಗಳಂತೆ ಖರೀದಿಸಲು ಆದೇಶಿಸಲಾಗಿದೆ.

ಈ ಯೋಜನೆಯಡಿ ಭತ್ತವನ್ನು ನೀಡುವ ರೈತ ಭಾಂದವರು ತಮ್ಮ ಹತ್ತಿರದ ನೋಂದಣಿ ಕೇಂದ್ರಕ್ಕೆ ಭೇಟಿ ನೀಡಿ ಏಪ್ರಿಲ್ 25 ರೊಳಗೆ ಹಾಗೂ ಜೋಳವನ್ನು ನೀಡುವ ರೈತರು ಮೇ.31ರೊಳಗಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ ರೈತರಿಂದ ಖರೀದಿ ಪ್ರಕ್ರಿಯೆಯನ್ನು ಮೇ.31ರವರೆಗೂ ಕೈಗೊಳ್ಳಲಾಗುವುದು. ಕೃಷಿ ಇಲಾಖೆಯವರು ಸಿದ್ದಪಡಿಸಿದ ಫ್ರೂಟ್ಸ್ ಎಂಬ ತಂತ್ರಾಂಶದಲ್ಲಿ ನಮೂದಿಸಿರುವ ಬೆಳೆಯ ಆಧಾರದ ಮೇಲೆ ರೈತರ ಹೆಸರನ್ನು ನೋಂದಾಯಿಸಿಕೊಳ್ಳಲಾಗುವುದು. ಒಂದು ವೇಳೆ ಫ್ರೂಟ್ಸ್ ತಂತ್ರಾಂಶದಲ್ಲಿ ತೊಂದರೆಯಿದ್ದಲ್ಲಿ ಹತ್ತಿರವಿರುವ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ತಂತ್ರಾಂಶದಲ್ಲಿ ಸರಿಪಡಿಸಿಕೊಂಡು ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಪಂಚ ಗ್ಯಾರಂಟಿ ಯಶೋಗಾಥೆ ಕಿರುಹೊತ್ತಿಗೆ ಪ್ರಕಟ

**ರಾಯಚೂರು:** ರಾಜ್ಯ ಸರಕಾರದ ಮಹಾತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಯಶೋಗಾಥೆ ಕುರಿತು ರಾಯಚೂರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಎಡೆದೊರೆ ನಾಡಲ್ಲಿ ಪಂಚ ಗ್ಯಾರಂಟಿ ಯಶೋಗಾಥೆ ನುಡಿದಂತೆ ನಡೆದಿದ್ದೇವೆ ಕಿರು ಹೊತ್ತಿಗೆಯನ್ನು ಪ್ರಕಟಿಸಲಾಗಿದೆ.

ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಶಕ್ತಿ ಹಾಗೂ ಯುವನಿಧಿ ಯೋಜನೆಗಳು ಜಾರಿಯಾದ ಹಿನ್ನೆಲೆ, ಆಯಾ ಯೋಜನೆಗಳ ಆಶಯ, ಯೋಜನೆಗಳ ಉದ್ದೇಶ ಮತ್ತು ರಾಯಚೂರ ಜಿಲ್ಲೆಯಲ್ಲಿ ಆಯಾ ಯೋಜನೆಗಳ ಪ್ರಗತಿಯ ಅಂಕಿ ಅಂಶಗಳು ಮತ್ತು ಯೋಜನೆಗಳ ಅನುಕೂಲತೆಗಳನ್ನು ಪಡೆದುಕೊಂಡ ಕೆಲವು ಫಲಾನುಭವಿಗಳ ಅನಿಸಿಕೆಗಳು ಈ ಕಿರು ಹೊತ್ತಿಗೆಯಲ್ಲಿ ಪ್ರಕಟವಾಗಿವೆ.

ಮಾನ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮತ್ತು ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ಪಾಟೀಲ ಅವರ ಸಂದೇಶಗಳು ಈ ಕಿರು ಹೊತ್ತಿಗೆಯಲ್ಲಿ ಪ್ರಕಟವಾಗಿವೆ.

ಸಚಿವರಿಂದ ಬಿಡುಗಡೆ: ಎಡೆದೊರೆ ನಾಡಲ್ಲಿ ಪಂಚ ಗ್ಯಾರಂಟಿ ಯಶೋಗಾಥೆ ನುಡಿದಂತೆ ನಡೆದಿದ್ದೇವೆ ಎಂಬ ರಾಯಚೂರ ಜಿಲ್ಲೆಯ ಕಿರುಹೊತ್ತಿಗೆಯನ್ನು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಬಿಡುಗಡೆಗೊಳಿಸಿದರು.

ಈ ವೇಳೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್ .ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್. ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರ ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ವಿಧಾನ ಪರಿಷತ್ ಶಾಸಕರಾದ ಎ. ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ, ಅಪರ ಜಿಲ್ಲಾಧಿಕಾರಿ ಶಿವಾನಂದ, ಆಯುಕ್ತ ಗಜಾನನ ಬಾಳೆ, ಬಸವಣೆಪ್ಪಾ ಕಲಶೆಟ್ಟಿ ಸೇರಿದಂತೆ ಇತರರು ಇದ್ದರು.

ಪಂಚ ಗ್ಯಾರಂಟಿ ಯಶೋಗಾಥೆ ನುಡಿದಂತೆ ನಡೆದಿದ್ದೇವೆ ಕಿರು ಹೊತ್ತಿಗೆಯನ್ನು ಪ್ರಕಟಿಸಲಾಗಿದೆ.

## ಭತ್ತ ಕಟಾವು ಯಂತ್ರ ಬಾಡಿಗೆ ದರ ನಿಗದಿ

**ಕೊಪ್ಪಳ:** ಜಿಲ್ಲೆಯಲ್ಲಿ ಭತ್ತ ಕಟಾವು ಯಂತ್ರಗಳ ಬಾಡಿಗೆ ದರ ನಿಗದಿಪಡಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಆದೇಶ ಹೊರಡಿಸಿದ್ದಾರೆ.ಖಾಸಗಿ ಭತ್ತ ಕಟಾವು ಯಂತ್ರ ಮಾಲೀಕರು ರೈತರಿಂದ ಪ್ರತಿ ಗಂಟೆಗೆ 2.5 ದಿಂದ 3 ಸಾವಿರ ರು. ವರೆಗೆ ಬಾಡಿಗೆ ವಸೂಲಿ ಮಾಡುತ್ತಿರುವ ಬಗ್ಗೆ ರೈತರಿಂದ ದೂರು ಬಂದಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿರುತ್ತಾರೆ. ಈ ಬಗ್ಗೆ ಕೃಷಿ ಇಲಾಖೆಯ ಅಧಿಕಾರಿಗಳು, ರೈತ ಮುಖಂಡರು ಹಾಗೂ ಭತ್ತ ಕಟಾವು ಯಂತ್ರ ಮಾಲೀಕರೊಂದಿಗೆ ಸಭೆ ನಡೆಸಲಾಗಿ ಅಂದಾಜು ರೂ 2400, ನಿಗಧಿಪಡಿಸಲು ಗಂಗಾವತಿ ಸಹಾಯಕ ಕೃಷಿ ನಿರ್ದೇಶಕರು ವರದಿ ಸಲ್ಲಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಬೆಳೆದ ಭತ್ತಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲದ ಕಾರಣ ಹಾಗೂ ಆಕಾಲಿಕ ಅಲಿಕಲ್ಲು ಮಳೆಯಿಂದ ರೈತರು ಸಂಕಷ್ಟದಲ್ಲಿರುವ ಪ್ರಯುಕ್ತ ಜಿಲ್ಲೆಯಲ್ಲಿ ಭತ್ತ ಬೆಳೆದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಆದಕಾರಣ ಭತ್ತ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ ರು. 2400 ಮೀರದಂತೆ ಬಾಡಿಗೆ ನಿಗದಿಪಡಿಸಲಾಗಿದೆ. ಜಿಲ್ಲೆಯಲ್ಲಿರುವ ಭತ್ತ ಕಟಾವು ಯಂತ್ರದ ಮಾಲೀಕರು ಈ ದರಕ್ಕೆ ಮೀರದಂತೆ ಭತ್ತ ಕಟಾವು ಕೈಗೊಳ್ಳಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಭತ್ತ ಕಟಾವು ಯಂತ್ರದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ವಿಜೃಂಭಣೆಯಿಂದ ದುರ್ಗಾ ಜಾತ್ರೆ

**ಯಲಬುರ್ಗಾ:** ತಾಲೂಕಿನ ತಾಳಕೇರಿ ಗ್ರಾಮದಲ್ಲಿ ಆದಿಶಕ್ತಿ ಶ್ರೀದುರ್ಗಾದೇವಿ ಜಾತ್ರಾ ಮಹೋತ್ಸವ ಬುಧವಾರ ವಿಜೃಂಭಣೆಯಿಂದ ಜರುಗಿತು. ಜಾತ್ರೆ ಹಿನ್ನೆಲೆ ಮಂಗಳವಾರ ಬೆಳಗ್ಗೆ ದುರ್ಗಾದೇವಿ ವಿಗ್ರಹಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ದೇವಸ್ಥಾನದಲ್ಲಿ ನಾನಾ ಧಾರ್ಮಿಕ ಕೈಂಕರ್ಯ ನೆರವೇರಿದವು. ಭಕ್ತರು ಕಾಯಿ ಕರ್ಪೂರ ನೈವೇದ್ಯ ಸಮರ್ಪಿಸಿದರು. ಭಕ್ತರು ಹರಕೆ ತೀರಿಸುವ ನಾನಾ ಧಾರ್ಮಿಕ ಕಾರ್ಯಕ್ರಮದ ಜರುಗಿದವು. ಬುಧವಾರ ಬೆಳಗಿನ ಜಾವ ಕುಂಡಕ್ಕೆ ಅಗ್ನಿಸ್ಪರ್ಶದ ನಂತರ ದ ಎಲ್ಲ ದೇವರಿಗೆ ಕಾಯಿ ಒಡೆಸಲಾಯಿತು. ನಂತರ ಗಂಗೆ ಸ್ಥಳಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ, ದೇವಾಲಯಕ್ಕೆ ಆಗಮಿಸಿದ ಪೂಜಾರಿಗಳು ಅಕ್ಕಿ ಪಾಯಸ, ಕಾಯಿ ಪವಾಡ ಮತ್ತು ಅಗ್ನಿಕುಂಡ ಪ್ರವೇಶ ಮಾಡಿದರು. ನಂತರ ಸಂಪ್ರದಾಯದಂತೆ ಪೂಜಾರಿಗಳಾದ ಶಂಕ್ರಪ್ಪ, ಚನ್ನಪ್ಪ, ನಿಂಗಪ್ಪ, ರೇಣುಕರಾಜ ಅವರನ್ನು ಗ್ರಾಮದಲ್ಲಿ ಡೊಳ್ಳು ಕುಣಿತ, ಸಲಕ ವಾದ್ಯ, ಮೇಳದೊಂದಿಗೆ ಮೆರವಣಿಗೆ ಮಾಡಲಾಯಿತು.

ಗ್ರಾಮದ ನೂರಾರು ಭಕ್ತರು ಪಾಲ್ಗೊಂಡಿದ್ದರು. ಜಾತ್ರೆ ನಿಮಿತ್ತ ಮುಂಗೈ ಕುಸ್ತಿ ಪಂದ್ಯ ನಡೆದವು. ಜಾತ್ರೆಗೆ ಆಗಮಿಸಿದ್ದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ಲಘು ರಥೋತ್ಸವದಲ್ಲಿ ದುರ್ಗಾ ದೇವಿಯ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ, ರಥ ಎಳೆಯಲಾಯಿತು. ಭಕ್ತರು ಲಘು ರಥೋತ್ಸವಕ್ಕೆ ಉತ್ತತ್ತಿ, ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.

## ಕೆರೆಗಳ ತುಂಬಿಸಿ, ಟ್ಯಾಂಕರ್‌ನಿಂದ ನೀರು ಪೂರೈಸಿ: ಶಾಸಕ

**ಮಾನ್ವಿ:** ಪಟ್ಟಣದ ತಾಲೂಕು ಪಂಚಾಯಿತಿ ಭವನದಲ್ಲಿ ಬೇಸಿಗೆ ಕಾಲದಲ್ಲಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಪರಿಹಾರೋಪಾಯಗಳು, ಮೇವಿನ ಲಭ್ಯತೆ ಹಾಗೂ ಪೂರ್ವ ಮುಂಗಾರಿನಲ್ಲಿ ಆದ ಭತ್ತದ ಬೆಳೆಹಾನಿ ಕುರಿತು ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ಶಾಸಕ ಹಂಪಯ್ಯ ನಾಯಕ ಅವರ ಅಧ್ಯಕ್ಷತೆ ನಡೆಯಿತು.

ಮಾನ್ವಿ ತಾಲೂಕಿನಲ್ಲಿ ಇರುವ 98 ಗ್ರಾಮಗಳಲ್ಲಿ 49 ಗ್ರಾಮಗಳಿಗೆ ಕೆರೆಯ ಮೂಲಕ ನೀರನ್ನು ಪೂರೈಸಲಾಗುತ್ತಿದೆ 57 ಗ್ರಾಮಗಳಿಗೆ ಕೊಳವೇ ಬಾವಿಯ ಮೂಲಕ ನೀರು ಪೂರೈಸಲಾಗುತ್ತಿದೆ. 18 ಕೆರೆಗಳಿದ್ದು ಅವುಗಳಲ್ಲಿ 11 ಕೆರೆಗಳನ್ನು ತುಂಬಿಸಲಾಗಿದೆ ನೀರಿನ ಕೋರತೆ ಹೆಚ್ಚಾಗಿರುವ ಗ್ರಾಮಗಳಲ್ಲಿ ಕೋಳವೆ ಬಾವಿಗಳನ್ನು ಬಾಡಿಗೆ ಅದಾರದಲ್ಲಿ ಪಡೆದು ನೀರನ್ನು ಪೂರೈಸಲಾಗುವುದು.
-ಖಾಲೀದ್ ಅಹಮ್ಮದ್, ಇ.ಓ.

ಸಭೆಯಲ್ಲಿ ಮಾತನಾಡಿದ ಶಾಸಕ ತಾಲೂಕಿನ ಎಲ್ಲಾ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ತೀವ್ರ ನೀರಿನ ತೊಂದರೆ ಇರುವ ಗ್ರಾಮಗಳಲ್ಲಿ ರೈತರಿಂದ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಳ್ಳಬೇಕು. ಅಗತ್ಯವಿದಲ್ಲಿ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಸುವುದಕ್ಕೆ ಕ್ರಮ ಕೈಗೊಳ್ಳಬೇಕು.ಇತ್ತೀಚಿಗೆ ಅಕಾಲಿಕ ಮಳೆಯಿಂದ ಹಾನಿಯಾಗಿರುವ ಭತ್ತದ ಬೆಳೆ ನಷ್ಟ ಕುರಿತು ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯಿಂದ ಜಂಟಿ ಸರ್ವೆ ಮಾಡಲಾಗುತ್ತಿದ್ದು ಕೂಡಲೇ ವರದಿ ಸಲ್ಲಿಸುವಂತೆ ಸೂಚಿಸಿದರು. ಮಾನ್ವಿ ಪಟ್ಟಣದಲ್ಲಿನ 27 ವಾರ್ಡಗಳಿಗೆ ಕೆರೆ ಮತ್ತು ನದಿಯ ನೀರನ್ನು ಬಳಸಿಕೊಂಡು. ಕುಡಿಯುವ ನೀರನ್ನು ಸರಬರಾಜು ಮಾಡಬೇಕು. ತೀವ್ರ ತೊಂದರೆ ಇರುವ ವಾರ್ಡಗಳಿಗೆ ಟ್ಯಾಂಕರ್ ಮೂಲಕ ನೀರನ್ನು ಪೂರೈಕೆ ಮಾಡಬೇಕು. ತಾಲೂಕಿನ ಎಲ್ಲಾ ಇಲಾಖೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಾನ್ವಿ ತಹಸೀಲ್ದಾರ್ ರಾಜು ಪಿರಂಗಿ, ಸಿರವಾರ ತಹಸೀಲ್ದಾರ್ ರವಿ ಅಂಗಡಿ, ಪಿ.ಎಸ್.ಐ.ವೀರನಗೌಡ, ಮಾನ್ವಿ ಪುರಸಭೆ ಜೆ.ಇ.ಚೇತನ, ಸಿರವಾರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ತಿಮ್ಮಪ್ಪ ಜಗ್ಗಿ, ಕವಿತಾಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಜಗನ್ನಾಥ ,ತಾಲೂಕು ಪಶು ಇಲಾಖೆಯ ಸಹಾಯಕ ನಿರ್ದೇಶಕರಾದ ಬಸವರಾಜ,ಸಿರವಾರ ಪಶು ಇಲಾಖೆಯ ತಾ. ಸಹಾಯಕ ನಿರ್ದೇಶಕರಾದ ರಾಜು ಕಂಬಾಳೆ, ಸೇರಿದಂತೆ ಮಾನ್ವಿ ,ಸಿರವಾರ ತಾಲೂಕಿನ ಗ್ರಾಮ ಪಂಚಾಯಿತಿ ಅಭಿವೃದ್ಧಿ ಆಧಿಕಾರಿಗಳು, ಕುಡಿಯುವ ನೀರು ಪೂರೈಕೆ ಇಲಾಖೆಯ ಸೇರಿದಂತೆ ಇತರರು ಇದ್ದರು.


ತಾಲೂಕಿನ ಇಲಾಖೆಗಳ ಅಧಿಕಾರಿಗಳ ಸಭೆ ಶಾಸಕ ಹಂಪಯ್ಯ ನಾಯಕ ಅವರ ಅಧ್ಯಕ್ಷತೆ ನಡೆಯಿತು.

ಸಿರವಾರ ತಾಲೂಕಿನಲ್ಲಿ 44 ಕುಡಿಯುವ ನೀರಿನ ಕೆರೆಗಳಿದ್ದು ಅವುಗಳನ್ನು ತುಂಬಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ತಾಲೂಕಿನ 11 ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
-ಶಶೀಧರ ಸ್ವಾಮಿ, ತಾ.ಪಂ.ಇ.ಓ.

ಸಿರವಾರ ,ಕವಿತಾಳ ಪಟ್ಟಣಗಳು ಸೇರಿದಂತೆ ಮಾನ್ವಿ ಸಿರವಾರ ತಾಲೂಕುಗಳಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿನ ಜನರಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಅಧಿಕಾರಿಗಳು ಅಗತ್ಯವಾದ ಮುಂಜಾಗ್ರತೆ ವಹಿಸಬೇಕು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಕಾಣಿಸಿಕೊಂಡಲ್ಲಿ ಸಂಬಂದಿಸಿದ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳನ್ನೆ ಹೊಣೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
-ಹಂಪಯ್ಯನಾಯಕ ಮಾನ್ವಿ, ಶಾಸಕ

# 88ನೇ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ

## ಕನ್ನಡದ ತೇರು ಎಳೆಯಲು ಸಿದ್ಧರಾಗೋಣ: ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ

**ಬಳ್ಳಾರಿ:** ಬರುವ ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದ್ದು, ಕನ್ನಡದ ನಾಡು-ನುಡಿ, ಭಾಷಾಭಿಮಾನ, ಕನ್ನಡದ ಅಸ್ಮಿತೆಯನ್ನು ಇನ್ನಷ್ಟು ಬೆಳೆಸುವ ನಿಟ್ಟಿನಲ್ಲಿ ಕನ್ನಡದ ತೇರನ್ನು ಎಳೆಯಲು ನಾವೆಲ್ಲರೂ ಸಿದ್ಧರಾಗೋಣ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡೀಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಯ ಕುರಿತು ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡಿಗರಿಗೆ ಮತ್ತು ಸಾಹಿತ್ಯ ಪ್ರೇಮಿಗಳಿಗೆ ಹಬ್ಬ. ಕನ್ನಡದ ಇತಿಹಾಸವನ್ನು ಪ್ರಚರಪಡಿಸುವುದು ಮತ್ತು ಭಾಷೆಯನ್ನು ಬೆಳೆಸುವುದು ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಮುಖ್ಯವಾಗಿ ಸಮ್ಮೇಳನಗಳಲ್ಲಿ ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ, ಭಾಷೆ ಬೆಳವಣಿಗೆ, ಗಡಿ ಭಾಗದ ಶಾಲಾ ವಿಚಾರಗಳ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ತೆಗೆದುಕೊಂಡು ಸರಕಾರದ ಮುಂದಿಡಲಾಗುತ್ತದೆ ಎಂದು ತಿಳಿಸಿದರು.

ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ 5 ಸಾಹಿತ್ಯ ಸಮ್ಮೇಳನಗಳು ನಡೆದಿವೆ. ಈ ಹಿಂದೆ 1920 ರಲ್ಲಿ ಮೊದಲ ಬಾರಿಗೆ ಅಖಂಡ ಜಿಲ್ಲೆಯ ಹೊಸಪೇಟೆಯಲ್ಲಿ ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ 6 ನೇ ಸಮ್ಮೇಳನ ನಡೆಯಿತು. ಎರಡನೇ ಬಾರಿಗೆ 1926 ರ ಮೇ 22 ರಿಂದ 24 ರ ವರೆಗೆ ಮೂರು ದಿನಗಳ ಕಾಲ 12 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿ ನಗರದಲ್ಲಿ ನಡೆದಿತ್ತು. ಇದರ ಅಧ್ಯಕ್ಷತೆಯನ್ನು ವಚನ ಪಿತಾಮಹ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ (ಫ.ಗು.ಹಳಕಟ್ಟಿ)ವಹಿಸಿದ್ದರು.

ನಂತರದ 12 ವರ್ಷಗಳ ನಂತರ ಮೂರನೇ ಬಾರಿಗೆ 1938 ರ ಡಿ.29 ರಿಂದ 31 ರ ವರೆಗೆ 23 ನೇ ಕನ್ನಡ ಸಾಹಿತ್ಯ ಸಮ್ಮೇಳನ ರಂಗನಾಥ್ ದಿವಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆದಿತ್ತು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡೀಯೋ ಕಾನ್ಫರೆನ್ಸ್ ಹಾಲ್‌ನಲ್ಲಿ 88ನೇ ಸಮ್ಮೇಳನ ಸಭೆ ನಡೆಯಿತು.

> ಜಿಲ್ಲೆಯಲ್ಲಿ ಆಯೋಜಿಸಲಾಗುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಮತ್ತು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.
> -ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

> ಬಳ್ಳಾರಿಯಲ್ಲಿ ಡಿಸೆಂಬರ್ ತಿಂಗಳಲ್ಲಿ ಆಯೋಜಿಸಲಾಗುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳ್ಳಾರಿ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸರ್ ಥಾಮಸ್ ಮುನ್ರೋ ಅವರ ಕುಟುಂಬಸ್ಥರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗುವುದು.
> -ನಾಡೋಜ ಡಾ.ಮಹೇಶ್ ಜೋಶಿ, ಕಸಾಪ ರಾಜ್ಯಾಧ್ಯಕ್ಷ

ನಾಲ್ಕನೇ ಬಾರಿಗೆ ಹರಪನಹಳ್ಳಿಯಲ್ಲಿ 1947 ರಲ್ಲಿ ಸಿ.ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಳಿಕ 11 ವರ್ಷಗಳ ನಂತರ 1958 ರ ಜ. 18 ರಿಂದ 20 ರ ವರೆಗೆ ವಿನಾಯಕ್ ಕೃಷ್ಣ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ 5 ನೇ ಬಾರಿಗೆ ನಡೆಯಿತು. ಈಗ 67 ವರ್ಷದ ಬಳಿಕ ಮರಳಿ ಸಾಹಿತ್ಯ ಸಮ್ಮೇಳನದ ಆತಿಥ್ಯ ದೊರೆತಿದೆ. 2025 ರ ಡಿ. ಮಾಹೆಯಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ತಿಳಿಸಿದರು.

ಇಂದಿನ ಪೀಳಿಗೆಗೆ ಮತ್ತು ಯುವಸಮುದಾಯಕ್ಕೆ ಕನ್ನಡ ಸಾಹಿತ್ಯ ಬಗೆಗಿನ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯ ಸರಕಾರ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾಡಳಿತ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರುಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ ಮಾಹೆಯಲ್ಲಿ ಬಳ್ಳಾರಿಯಲ್ಲಿ ಅದ್ದೂರಿಯಾಗಿ ಆಯೋಜಿಸಲಾಗುತ್ತಿದೆ ಎಂದರು.

ಡಿಸೆಂಬರ್ ತಿಂಗಳಲ್ಲಿ ವಾತಾವರಣ ಮತ್ತು ಹವಮಾನವು ಚೆನ್ನಾಗಿರುವುದರಿಂದ ಆಯೋಜನೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯದಂತೆ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ವಿಶ್ವ-ವಿದ್ಯಾಲಯಗಳ ವಿದ್ಯಾರ್ಥಿಗಳು, ಶಾಲಾ-ಕಾಲೇಜು, ವಸತಿ ನಿಲಯಗಳ ಮಕ್ಕಳು ಸೇರಿದಂತೆ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ ಶೋಭಾರಾಣಿ, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಪಟೇಲ್ ಪಾಂಡು, ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಾದಕ ವಸ್ತು ಯುವಜನಕ್ಕೆ ಮಾರಕ

**ಹೊಸಪೇಟೆ:** ಮಾದಕ ವಸ್ತುಗಳ ಬಳಕೆ ವೈರಸ್ ಇದ್ದಂತೆ, ಒಂದು ಬಾರಿ ಸೋಂಕಿತರಾದರೇ ಗುಣಮುಖರಾಗುವುದು ಕಷ್ಟ. ಯುವಜನತೆ ಇವುಗಳಿಂದ ದೂರುವಿದ್ದರೇ ಉಜ್ವಲ ಭವಿಷ್ಯ ನಿಮ್ಮದಾಗಲಿದೆ ಎಂದು ಜಿಲ್ಲಾ ನ್ಯಾಯಧೀಶರಾದ ಅಬ್ದುಲ್ ರಹೀಮಾನ್ ಎ.ನಂದಗಡಿ ಹೇಳಿದರು.

ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ ತಾಲೂಕು ಕಾನೂನುಗಳ ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ ಮತ್ತು ನಿರ್ವಹಣೆ ಹಾಗೂ ಎನ್‌ಡಿಪಿಎಸ್ ಕಾಯ್ದೆ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಯುವಜನತೆಯಲ್ಲಿ ಮಾದಕ ವಸ್ತುಗಳ ವ್ಯಾಮೋಹ ಹೆಚ್ಚಾಗಿದ್ದು, ಅದರ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಸಾಮಾಜಿಕ ಜವಾಬ್ದಾರಿಯಿಂದ ಇಂತಹ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿ ಜೀವನದಲ್ಲಿ ಓದು, ಜ್ಞಾನ ಸಂಪಾದನೆ, ನಿಗಧಿತ ಗುರಿ ಸಾಧನೆಗೆ ಕಠಿಣ ಪರಿಶ್ರಮ ನೀಡಬೇಕು. ಹಾಗಾದರೆ ನಿಮ್ಮ ಪೋಷಕರ ಕನಸುಗಳನ್ನು ನನಸು ಮಾಡಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷರಾದ ಮೆಟ್ರಿ ಮಲ್ಲಿಕಾರ್ಜುನ, ಹಿರಿಯ ನ್ಯಾಯಾಧೀಶರಾದ ಹೇಮಲತಾ.ಬಿ.ಹುಲ್ಲೂರು, ಬಿ.ಎನ್.ರಮೇಶ್‌ಬಾಬು ಜೆ.ಚೈತ್ರ, ಶೃತಿ ತೇಲಿ, ವಕೀಲರ ಸಂಘದ ಅಧ್ಯಕ್ಷ ಪ್ರಹ್ಲಾದ್, ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ವಿಜಯನಗರ ಮಹಾವಿದ್ಯಾಲಯ ಆಡಳಿತ ಮಂಡಳಿಯ ಸದಸ್ಯರಾದ ಗುಡೇಕೋಟೆ ನಾಗರಾಜ, ನಟರಾಜ ಅಕ್ಕಿ, ಪ್ರಾಚಾರ್ಯರಾದ ಪ್ರಭುಗೌಡ ಸೇರಿದಂತೆ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ ಮತ್ತು ನಿರ್ವಹಣೆ, ಎನ್‌ಡಿಪಿಎಸ್ ಕಾಯ್ದೆ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

> ವಿದ್ಯಾರ್ಥಿ ಜೀವನದಲ್ಲಿ ಅನುಕರಣೆ ಮತ್ತು ವ್ಯಾಮೋಹ ಮನಸ್ಥಿತಿ ಹೆಚ್ಚಾಗಿರುತ್ತದೆ. ಒಳ್ಳೆಯದಕ್ಕಿಂತ ಕೆಟ್ಟದರ ಆಕರ್ಷಣೆ ಹೆಚ್ಚಾಗಿರಲಿದೆ. ಹಾಗಾಗಿ ಮಾದಕ ವಸ್ತುಗಳ ದುರ್ಬಳಕೆಗೆ ಹೆಚ್ಚು ಬಲಿಯಾಗುತ್ತಿರುವರಲ್ಲಿ ಯುವ ಸಮೂಹವೇ ಹೆಚ್ಚಾಗಿರುವ ಹಿನ್ನಲೆಯಲ್ಲಿ ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ಸಂಘ, ಸಂಸ್ಥೆಗಳ ಹೊಣೆಗಾರಿಕೆಯಾಗಿದೆ. ಉಜ್ವಲ ಭವಿಷ್ಯ ಕಟ್ಟಿಕೊಳ್ಳಲು ಮಾದಕ ವಸ್ತುಗಳ ದುಷ್ಪರಿಣಾಮಗಳನ್ನು ಅರಿವು ಪಡೆದುಕೊಳ್ಳಬೇಕಿದೆ.
> -ಪ್ರಶಾಂತ್ ನಾಗಲಾಪುರ, ನ್ಯಾಯಾಧೀಶರು

> ಯುವಕರು ಯಾವುದೇ ರೀತಿಯ ಮಾದಕ ವಸ್ತುಗಳನ್ನು ಬಳಸಬಾರದು ಹಾಗೂ ಮಾದಕ ವಸ್ತುಗಳಿಂದ ಆಗುವ ದುಷ್ಪರಿಣಾಮದ ಬಗ್ಗೆ ತಿಳಿದಿರಬೇಕು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಹೆಚ್ಚಿನ ಸಮಯವನ್ನು ಮಿಸಲಿಡಬೇಕು. ವಿದ್ಯಾಭ್ಯಾಸ ಹಾಗೂ ಒಳ್ಳೆಯ ಉದ್ದೇಶಕ್ಕೆ ಮೊಬೈಲ್‌ಗಳನ್ನು ಬಳಸಬೇಕು.
> -ಬಿ.ಎಲ್.ಶ್ರೀ ಹರಿಬಾಬು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

# ಇಂದು ವಿಶೇಷ ಆಯ್ಕೆ ಶಿಬಿರ

**ಬಳ್ಳಾರಿ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2025-26ನೇ ಸಾಲಿನ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿಯುಸಿ ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾ, ವಿಭಾಗ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಆಯ್ಕೆ ಶಿಬಿರಗಳಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲು ಬಳ್ಳಾರಿ ಜಿಲ್ಲೆಯಲ್ಲಿ ಫುಟ್ಬಾಲ್ ಕ್ರೀಡೆಗೆ ಏ.17 ರಂದು ನಗರದ ಬಿಡಿಎಎ ಫುಟ್‌ಬಾಲ್ ಮೈದಾನದಲ್ಲಿ ವಿಶೇಷ ಆಯ್ಕೆ ಶಿಬಿರ ಆಯೋಜಿಸಲಾಗುವುದು.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳ ದೈಹಿಕ ಪರೀಕ್ಷೆಯನ್ನು ನಡೆಸಲಾಗುವುದು.

ಭಾಗವಹಿಸುವ ಕ್ರೀಡಾ ಪಟುಗಳು 7ನೇ ತರಗತಿ, 10 ತರಗತಿ ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು.

8 ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಪ್ರಸ್ತುತ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, 8 ನೇ ತರಗತಿ ಪ್ರವೇಶಕ್ಕೆ ಜೂನ್ 2025 ಕ್ಕೆ ಅನ್ವಯವಾಗುವಂತೆ 14 ವರ್ಷ ವಯಸ್ಸು ಹೊಂದಿರಬೇಕು.

ಪ್ರಥಮ ಪಿಯುಸಿ ಪ್ರವೇಶ ಬಯಸುವ ಅಭ್ಯರ್ಥಿಗಳ ವಯಸ್ಸು ಜೂನ್ 2025 ಕ್ಕೆ ಅನ್ವಯವಾಗುವಂತೆ 18 ವರ್ಷ ವಯಸ್ಸು ಹೊಂದಿರಬೇಕು. ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇಲಾಖೆಯಿಂದ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಅಥವಾ ಹಾಕಿ ತರಬೇತುದಾರರಾದ ಎಂ.ಜಾಕೀರ್ (ಮೊ.9036335986) ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.30ರಂದು ಅದ್ದೂರಿ ಬಸವ ಜಯಂತಿ: ಎಡಿಸಿ

**ಬಳ್ಳಾರಿ:** ಸಮಾಜಕ್ಕೆ ತಮ್ಮ ಆಚಾರ-ವಿಚಾರ ಸಂದೇಶಗಳನ್ನು ತಲುಪಿಸಿದ ಬಸವಣ್ಣನವರ ಕೊಡುಗೆ ಅಪಾರ. ಅಂತಹ ಭಕ್ತಿ ಭಂಡಾ ರಿ ಬಸವಣ್ಣನವರ ಜಯಂತಿಯನ್ನು ಏ. 30 ರಂದು ಜಿಲ್ಲಾ ಕೇಂದ್ರ ದಲ್ಲಿ ಅರ್ಥಪೂರ್ಣವಾಗಿ ಅದ್ದೂರಿಯಾಗಿ ಆಚರಿಸಲಾಗು ವುದು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬಸವಣ್ಣನವರ ಜಯಂತಿ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಮಹಾನುಭಾವರ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಜಯಂತಿಗಳ ಆಚರಣೆಯ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದು ಆಗಿದೆ. ಬಸವಣ್ಣನವರನ್ನು ರಾಜ್ಯ ಸರಕಾರವು ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ ಎಂದು ತಿಳಿಸಿದರು. ಏ.30 ರಂದು ಬೆಳಗ್ಗೆ 9 ಗಂಟೆಗೆ ನಗರದ ಎಚ್.ಆರ್.ಗವಿಯಪ್ಪ ವೃತ್ತದ ಬಳಿಯ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಲಾಗುವುದು. ನಂತರ ಸಂಜೆ 7.30 ಗಂಟೆಗೆ ಬಸವಣ್ಣನವರ ಜಯಂತಿಯನ್ನು ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು. ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಜಯಂತಿ ಅಂಗವಾಗಿ ಅಂದು ಸಂಜೆ 5 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಭವ್ಯ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ಗಡಿಗಿ ಚೆನ್ನಪ್ಪ ವೃತ್ತ-ಬೆಂಗಳೂರು ರಸ್ತೆ-ಬ್ರೂಸ್ ಪೇಟೆ ಪೊಲೀಸ್ ಠಾಣೆ-ಜೈನ್ ಮಾರ್ಕೆಟ್ ರಸ್ತೆ-ಎಚ್.ಆರ್. ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದ ವರೆಗೆ ನಡೆಯಲಿದೆ ಎಂದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ, ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಮಹಾನಗರ ಪಾಲಿಕೆಯ ರೆಹಮಾನ್ ಸೇರಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಮತ್ತೀತರರು ಉಪಸ್ಥಿತರಿದ್ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬಸವಣ್ಣನವರ ಜಯಂತಿಯ ಬಗ್ಗೆ ಪೂರ್ವಭಾವಿ ಸಭೆ ನಡೆಯಿತು.

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

# ಸಾಲಕ್ಕೆ ನಕಲಿ ಚಿನ್ನದ ಅಡಮಾನ ಹೋಯಿತು ಮಲೆನಾಡ ಮಾನ

ಜಿಲ್ಲೆಯ ಜನರು ಮರೆತೇ ಹೋಗಿದ್ದ ಹತ್ತು ವರ್ಷಗಳ ಹಿಂದೆ ನಡೆದ ಡಿಸಿಸಿ ಬ್ಯಾಂಕ್ ಬಹುದೊಡ್ಡ ಹಗರಣವೊಂದು ತನಿಖೆಯ ಹೆಸರಿನಲ್ಲಿ ಈಗ ಧಗ್ಗನೆ ಎದ್ದು ಕುಳಿತಿರುವುದು ಜಿಲ್ಲೆಯ ಸಹಕಾರ ವ್ಯವಸ್ಥೆಯನ್ನೇ ಅನುಮಾನದ ಕಣ್ಣಿಂದ ನೋಡುವಂಥ ಪರಿಸ್ಥಿತಿ ಎದುರಾಗಿದೆ. ಪ್ರತಿಷ್ಠಿತ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿಯೇ ಇಂತಹ ಹಗರಣ ನಡೆದಾಗ ಉಳಿದ ಸಹಕಾರ ಬ್ಯಾಂಕ್‌ಗಳ ಬಗ್ಗೆ ಇನ್ನಿಲ್ಲದ ಅನುಮಾನ ಕಾಡದೇ ಇರಲಾರದು..!

- ಶಿವಮೊಗ್ಗ ಡಿಸಿಸಿ ಬ್ಯಾಂಕ್ ಕರ್ಮಕಾಂಡ
- ದಶಕದ ಹಗರಣ ಬಗೆದಷ್ಟು ಬ್ರಹ್ಮಾಂಡ
- ಬಹುಕೋಟಿ ವಂಚನೆ ಪ್ರಕರಣ ಇ.ಡಿ. ಕೈಗೆ
- ಬ್ಯಾಂಕ್ ಅಧ್ಯಕ್ಷರ ಬಂಧನ - ಇ.ಡಿ. ಕಸ್ಟಡಿಗೆ

### ದಶಕದ ಹಗರಣ

ಪ್ರತಿಷ್ಠೆ ಹಾಗೂ ತನ್ನದೇ ಸ್ವಂತ ವರ್ಚಸ್ಸು ಹೊಂದಿದ್ದ ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಈಗ ಅನುಮಾನದ ನೆರಳಿನಲ್ಲಿ ಬೇಯು ತ್ತಿದೆ. ಹತ್ತು ವರ್ಷಗಳ ಹಿಂದೆ ನಡೆದು ಹೋದ ಹಗರಣ ಈಗ ತನಿಖೆಯ ಹೆಸರಿನಲ್ಲಿ ಇನ್ನೊಮ್ಮೆ ಹೆಗಲೇರಿ ನಿಂತಿದೆ. ಅಧ್ಯಕ್ಷ ಮಂಜುನಾಥಗೌಡ ಅವರನ್ನು ಕೇಂದ್ರ ಜಾರಿ ನಿರ್ದೇಶನಾಲಯ ಬಂಧಿಸಿದ ಅನಂತರ ಇಡೀ ಪ್ರಕರಣದಲ್ಲಿ ರಾಜಕೀಯ ಒತ್ತಡಗಳು ಕೆಲಸ ಮಾಡಿರಬಹುದೇ ಅಥವಾ ಹಗರಣ ಹೇಗೆ ನಡೆಯಿತು ಎಂಬ ಕುತೂಹಲ ಎಲ್ಲರಲ್ಲಿಯೂ ಮೂಡಿದೆ.

### ಪ್ರಕರಣ ಏನು

ಶಿವಮೊಗ್ಗ ಡಿಸಿಸಿ ಬ್ಯಾಂಕ್ ಗಾಂಧಿ ಬಜಾರ್ ಶಾಖೆಯಲ್ಲಿ, 2014ರಲ್ಲಿ 62.77 ಕೋಟಿ ನಕಲಿ ಬಂಗಾರ ಅಡಮಾನ ಸಾಲದ ಹಗರಣ ನಡೆದಿತ್ತು. ಈ ಸಂಬಂಧ 2014ರಲ್ಲಿ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು 2014ರ ಅಕ್ಟೋಬರ್ 18ರಂದು ವಿಚಾರಣಾ ನ್ಯಾಯಾಲಯಕ್ಕೆ ಮೊದಲ ದೋಷಾರೋಪಪಟ್ಟಿ ಸಲ್ಲಿಸಿದ್ದರು.

### ಆರೋಪ ಪಟ್ಟಿ

ನಗರ ಶಾಖೆಯಲ್ಲಿ ಬ್ಯಾಂಕ್ ನಿಧಿಯ ದೊಡ್ಡ ಪ್ರಮಾಣದ ದುರುಪಯೋಗವನ್ನು ಬಹಿರಂಗಪ ಡಿಸಿದವು, ಇದನ್ನು ಗೌಡರ ಸೂಚನೆಯ ಮೇರೆಗೆ ಶಾಖಾ ವ್ಯವಸ್ಥಾಪಕಿ ಬಿ. ಶೋಭಾ ಸಂಘಟಿಸಿದ್ದಾರೆ ಎಂದು ಆರೋಪಿಸಲಾಗಿದೆ. ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಆರೋಪ ಪಟ್ಟಿಯ ಪ್ರಕಾರ, ಶೋಭಾ, ಇತರ ಸಹ-ಆರೋಪಿಗಳೊಂದಿಗೆ ಪಿತೂರಿ ನಡೆಸಿ, ಗಣನೀಯ ಪ್ರಮಾಣದ ಬ್ಯಾಂಕ್ ಹಣವನ್ನು ಬೇರೆಡೆಗೆ ತಿರುಗಿಸಿದ್ದಾರೆ, ಒಟ್ಟು 62.77 ಕೋಟಿ ರು. ವೈಯಕ್ತಿಕ ಖಾತೆದಾರರ ಅರಿವಿಲ್ಲದೆ ಮೋಸದ ಚಿನ್ನದ ಸಾಲ ಖಾತೆಗಳನ್ನು ತೆರೆಯುವುದು, ನಕಲಿ ದಾಖಲೆಗಳನ್ನು ಬಳಸುವುದು ಈ ಕಾರ್ಯಾಚರಣೆಯ ವಿಧಾನವಾಗಿತ್ತು ಎಂದು ಆರೋಪಿಸಲಾಗಿತ್ತು.

### ಮೇಲ್ಮನವಿ ವಜಾ:

ಶಿವಮೊಗ್ಗ ಡಿಸಿಸಿ ಬ್ಯಾಂಕ್ (1997ರಿಂದ 2020ರವರೆಗೆ) ಅಧ್ಯಕ್ಷರಾಗಿದ್ದ ಆರ್.ಎಂ. ಮಂಜುನಾಥ ಗೌಡಗೆ ಇ.ಡಿ ಸಮನ್ಸ್ ಜಾರಿಗೊಳಿ ಸಿತ್ತು. ಕಳೆದ ವಾರವಷ್ಟೇ ಇ.ಡಿ ಸಮನ್ಸ್ ಪ್ರಶ್ನಿಸಿ ಮಂಜುನಾಥ್ ಗೌಡ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

### ಇ.ಡಿ. ವಾದವೇನು

ಅಂದಿನ ಬ್ಯಾಂಕ್ ಮ್ಯಾನೇಜರ್ ಶೋಭಾ ಅವರು ಇತರ ಸಹ-ಆರೋಪಿಗಳೊಂದಿಗೆ ಸೇರಿ ನಿಗದಿತ ಅಪರಾಧದಲ್ಲಿ ಪಿತೂರಿ ನಡೆಸಿ ಗಳಿಸಿದ ಅಪರಾಧದ ಆದಾಯವನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಮಂಜುನಾಥ ಗೌಡರಿಗೆ ಹಸ್ತಾಂತರಿಸಲಾಗಿದೆ ಎಂದು ಇಡಿ ತನಿಖೆಯಿಂದ ತಿಳಿದುಬಂದಿದೆ. ಅವರು ವಿವಿಧ ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದಾರೆಂದು ಕಂಡುಬಂದಿದೆ. ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಆರೋಪಪಟ್ಟಿಯ ಪ್ರಕಾರ, ಅವರು ಆದಾಯ ಮೀರಿ ಆಸ್ತಿಯನ್ನು ಹೊಂದಿದ್ದಾರೆಂದು ಕಂಡುಬಂದಿದೆ ಎಂದು ಇಡಿ ವರದಿ ತಿಳಿಸಿದೆ.

### ನಿಜವಾದ ಆರೋಪ

ಗಾಂಧೀಬಜಾರ್ ಶಾಖೆಯಲ್ಲಿ ವಿವಿಧ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಬಂಗಾರವನ್ನು ಅಡಮಾನ ಮಾಡಿ ಸಾಲವನ್ನು ಮಂಜೂರು ಮಾಡಲಾಗಿತ್ತು. ಅದು 62 ಕೋಟಿ ರೂ.ಗಳಿಗೂ ಅಧಿಕವಾಗಿ ದ್ದರೂ, ಅದಕ್ಕೆ ಕೇಂದ್ರ ಬ್ಯಾಂಕ್ ಒಪ್ಪಿಗೆ ಸೂಚನೆ ನೀಡಿರುವುದು ಹಾಗೂ ಬಂಗಾರ ಸಾಲವನ್ನು ಅಷ್ಟು ಪ್ರಮಾಣದಲ್ಲಿ ಮಂಜೂರು ಮಾಡಲು ಅಂದಿನ ಆಡಳಿತ ಮಂಡಳಿ ಒಪ್ಪಿಗೆ ನೀಡಿರುವುದು ಅನೇಕ ಅನುಮಾನ ಹುಟ್ಟು ಹಾಕಿದೆ.

### ನಕಲಿ ಚಿನ್ನದ ಅಡಮಾನ

ನಕಲಿ ಬಂಗಾರ ಅಡಮಾನದ ಪ್ರಕರಣ ಎರಡು ವರ್ಷಗಳವರೆಗೆ ನಡೆದಿದ್ದು ಇದು ಯಾರ ಗಮನಕ್ಕೂ ಬಾರದೇ ಹೇಗೆ ನಡೆಯಿತು ಎಂಬು ದೇ ರಹಸ್ಯ. ಅಡಮಾನ ಸಾಲಗಳನ್ನು ಶಾಖಾ ಮ್ಯಾನೇಜರ್‌ಗಿಂತ ಮೇಲಿರುವ ಅಧಿಕಾರಿಗಳೂ ಹೇಗೆ ಒಪ್ಪಿಗೆ ನೀಡಿದರು. ಅದಕ್ಕೆ ಯಾರು ಪ್ರಭಾವ ಬೀರಿದ್ದರು. ಹಾಗೆ ನಕಲಿ ಬಂಗಾರ ಇಟ್ಟು ಅಡಮಾನ ಪಡೆದ ಸಾಲ ಯಾರ ಹೆಸರಿಗೆ ಮಂಜೂರಾಗಿದೆ. ಅದು ಯಾರ ಬಳಿ ಸೇರಿತು ಎಂಬ ಎಲ್ಲ ದಾಖಲೆಗಳನ್ನು ಜಾರಿ ನಿರ್ದೇಶನಾ ಲಯ ವಶಕ್ಕೆ ಪಡೆದಿದೆ ಎಂದು ಹೇಳಲಾಗುತ್ತಿದೆ.

### ಹೊರಗಿನವರ ಶಾಮೀಲು

ಇದರಲ್ಲಿ ಬ್ಯಾಂಕ್‌ನವರ ಜತೆ ಹೊರಗಿನ ವ್ಯಕ್ತಿಗಳು ಶಾಮೀಲಾಗಿರುವ ಶಂಕೆ ಇದ್ದು, ಏಪ್ರಿಲ್ 8 ರಂದು ಜಾರಿ ನಿರ್ದೇಶನಾಲಯ ಆ ಎಲ್ಲ ವ್ಯಕ್ತಿಗಳ ಮನೆಗಳ ಮೇಲೆ ದಾಳಿ ಮಾಡಿ ದಾಖಲೆಗಳನ್ನು ವಶಕ್ಕೆ ಪಡೆದಿದೆ. ಆದರೆ, ಈ ಪ್ರಕರಣದಲ್ಲಿ ಮ್ಯಾನೇಜರ್ ಶೋಭಾ ಅವರ ತಂದೆ ಹಾಗೂ ತಮ್ಮ ಪ್ರಕರಣದ ಒತ್ತಡದಿಂದ ಮೃತಪಟ್ಟಿದ್ದಾರೆ ಎಂದು ಶೋಭಾ ಅವರ ತಾಯಿ ರಾಷ್ಟ್ರಪತಿಯವರೆಗೂ ತಮ್ಮ ಅಹವಾಲು ಸಲ್ಲಿಸಿರುವ ಸಂಗತಿ ಬೆಳಕಿಗೆ ಬಂದಿದೆ.

### ಅಧಿಕಾರಿಗಳೂ ಬಲಿಪಶು

ಹಲವು ಅಧಿಕಾರಿಗಳೂ ಈ ವಿಚಾರದಲ್ಲಿ ನಾವು ಬಲಿಪಶುಗಳಾಗಿದ್ದೇವೆ ಎಂಬ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಅಂದಿನ ಪ್ರಕರಣದ ನಂತರ ನಿವೃತ್ತರಾಗಿರುವ ಕೆಲವು ಅಧಿಕಾರಿಗಳಿಗೆ ಇದುವರೆಗೆ ನಿವೃತ್ತಿಯ ಯಾವ ಸೌಲಭ್ಯವೂ ದೊರೆತಿಲ್ಲ. ಏಪ್ರಿಲ್ 8 ರಂದು ಶಿವಮೊಗ್ಗ ಡಿಸಿಸಿ ಬ್ಯಾಂಕ್ ಶಾಖೆ ಸೇರಿದಂತೆ ಬೆಂಗಳೂರಿನ ಹಲವು ಸ್ಥಳಗಳಲ್ಲಿ ಇಡಿ ಶೋಧ ನಡೆಸಿತ್ತು.

### ಬಹುಕೋಟಿ ಹಗರಣ

ನಕಲಿ ಚಿನ್ನದ ಸಾಲಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಅಧ್ಯಕ್ಷರನ್ನು ಏಪ್ರಿಲ್ 9 ರಂದು ವಶಕ್ಕೆ ತೆಗೆದುಕೊಳ್ಳಲಾಯಿತು. ಬಂಧನದ ನಂತರ ಮಂಜುನಾಥಗೌಡರನ್ನು ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯ 14 ದಿನಗಳ ಇಡಿ ಕಸ್ಟಡಿಗೆ ನೀಡಿದೆ. ಶಿವಮೊಗ್ಗ ಜಿಲ್ಲೆಯ ಮಟ್ಟಿಗೆ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ಆಗಿದ್ದ ಡಿಸಿಸಿಬಿ ಅಡಮಾನ ಸಾಲದ ಕರ್ಮ ಕಾಂಡದಲ್ಲಿ ಮುಳುಗಿ ಇಡೀ ಜಿಲ್ಲೆಯ ಸಹಕಾರಿಗಳಿಗೆ ನಂಬಿಕೆ ದ್ರೋಹ ಎಸಗಿದಂತಾಗಿದೆ. ಇದರೊಂದಿಗೆ ಜಿಲ್ಲೆಯ ಮಾನವನ್ನು ಹರಾಜು ಹಾಕಿದಂತಾಗಿದೆ ಎನ್ನುತ್ತಾರೆ ರೈತ ಸಂಘಟನೆಗಳ ಮುಖಂಡರು.

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥ ರಾವ್, ಕೋಲಾರ

ಅಕಾಲಿಕ ಆಲಿಕಲ್ಲು ಮಳೆಯಿಂದ ಮಾವಿನ ಕಾಯಿಗಳು ಉದುರಿಬಿದ್ದಿರುವುದು.

# ಚಿನ್ನದ ನಾಡಿದು ಮಾವಿನ ಕಣಜ ಇಳುವರಿ ಕುಸಿದರೇ ಚಿನ್ನದ ಬೆಲೆ

ಆಲಿಕಲ್ಲು ಮಳೆ, ತಡವಾಗಿ ಹೂವು ಅರಳಿದ್ದು, ಮಳೆಗಾಳಿಗೆ ಹೂವು ಉದುರಿದ್ದು, ಬಿಸಿಲಿನ ಬೇಗೆ, ಕೀಟಬಾಧೆ, ಈ ಎಲ್ಲ ಬಗೆಯ ಉಪದ್ರವಗಳಿಂದಾಗಿ ಚಿನ್ನದನಾಡಿನಲ್ಲಿ ಮಾವಿನ ಫಸಲು ಶೇ.50 ಕುಸಿಯುವ ಸಾಧ್ಯತೆ ನಿಚ್ಚಳವಾಗಿರುವುದು ಆತಂಕಕಾರಿ ಬೆಳವಣಿಗೆ. ಇದಕ್ಕೆ ಸಮಾನಾಂತರವಾಗಿ ಅರ್ಧಕ್ಕರ್ಧ ಇಳುವರಿ ಕುಸಿದರೇ ಬೆಳೆಗೆ ಹಿಂದೆಂದೂ ಕಾಣದ ಚಿನ್ನದ ಬೆಲೆ ಸಿಗುತ್ತದೆಂಬ ಸಮಾಧಾನ ರೈತರಲ್ಲಿ ಮನೆ ಮಾಡಿದೆ.

- ಈ ಬಾರಿ ಮಾವಿಗಿಲ್ಲ ಗಮ್ಮತ್ತು
- ಅರ್ಧಂಬರ್ಧ ಇಳುವರಿ ಆಪತ್ತು
- ಬಂಪರ್ ಬೆಲೆಗಾಗಿ ರೈತನ ನಿರೀಕ್ಷೆ
- ಅಕಾಲಿಕ ಮಳೆಗೆ ಮಾವು ಬೆಳೆ ಹಾನಿ

### ಮಾವು ಬೆಳೆ ಹಾನಿ

ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆ ಹಾನಿಯಾಗಿದೆ. ಜಿಲ್ಲೆಯ 39,331 ಹೆಕ್ಟೇರ್‌ನಲ್ಲಿ ಬೆಳೆ ಮಾಡಲಾಗುತ್ತಿದ್ದು, ಮಾರ್ಚ್ ಅಂತ್ಯದಲ್ಲಿ ಬಿದ್ದ ಆಲಿಕಲ್ಲು ಮಳೆಯಿಂದಾಗಿ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಯಿ ಕಟ್ಟುವ ಸಂದರ್ಭದಲ್ಲಿ ಮಿಡಿ ಮಾವು ಧರೆಗುರುಳಿ ನಷ್ಟವಾಗಿದೆ. ಇಂದಿಗೂ ಆಗಾಗ್ಗೆ ಮಳೆ ಸುರಿಯುತ್ತಿದ್ದು ಮಾವು ಬೆಳೆಗಾರರ ಆತಂಕ ಮತ್ತಷ್ಟು ಹೆಚ್ಚಾಗಿದೆ.

### ಒಟ್ಟು 39,331 ಹೆಕ್ಟೇರ್ ಬೆಳೆ

ಮಾವು ಚಿನ್ನದನಾಡಿನ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು 39,331 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ. ಶ್ರೀನಿವಾಸಪುರ ಮಾವಿನನಗರಿ ಎಂದೇ ಖ್ಯಾತಿಗೊಂಡಿದ್ದು 22,993 ಹೆಕ್ಟೇರ್, ಮಾಲೂರಿನಲ್ಲಿ 1561 ಹೆಕ್ಟೇರ್, ಬಂಗಾರಪೇಟೆಯಲ್ಲಿ 1821 ಹೆಕ್ಟೇರ್, ಕೋಲಾರದಲ್ಲಿ 5670 ಹೆಕ್ಟೇರ್, ಮುಳಬಾಗಿಲು ತಾಲೂಕಿನಲ್ಲಿ 7286 ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ.

### ಉದುರಿದ ಹೂವು

ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಡಿಸೆಂಬರ್, ಜನವರಿಯಲ್ಲಿ ಮಾವು ಮರಗಳಲ್ಲಿ ಹೂವು ಕಾಣಿಸಿಕೊಳ್ಳುತ್ತಿತ್ತು. ಆದರೆ ಈ ಬಾರಿ ತಡವಾಗಿ ಅಂದರೆ ಫೆಬ್ರವರಿ, ಮಾರ್ಚ್ ತಿಂಗಳವರೆವಿಗೂ ಮಾವಿನ ಮರಗಳಲ್ಲಿ ದಟ್ಟವಾಗಿ ಹೂವು ಕಾಣಿಸಿಕೊಂಡಿತ್ತು. ತಡವಾಗಿ ಹೂವು ಬಿಟ್ಟದ್ದರಿಂದ ಬೇಸಿಗೆ ಆರಂಭವಾಗಿ ಬಿಸಿ ವಾತಾವರಣ ಇದ್ದುದ್ದರಿಂದ ಒಂದಷ್ಟು ಪ್ರಮಾಣದಲ್ಲಿ ಹೂವು ಉದುರಿ ಬಿದ್ದಿತ್ತು. ಗಾಯದ ಮೇಲೆ ಬರೆ ಎಳೆಯುವಂತೆ ಮಾರ್ಚ್ ಕೊನೆಯ ವಾರದಲ್ಲಿ ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲೂಕಿನ ವಿವಿಧೆಡೆ ಆಲೀಕಲ್ಲು ಮಳೆಯಾಗಿದ್ದರಿಂದ ಮಿಡಿ ಕಾಯಿಗಳು ಸಾಕಷ್ಟು ಪ್ರಮಾಣದಲ್ಲಿ ಉದುರಿ ಹೋಗಿದ್ದು ಇದರ ಪರಿಣಾಮ ಅಂತಿಮ ಫಸಲಿನ ಮೇಲೆ ಬೀಳುತ್ತದೆ.

### ಕೀಟಗಳ ಹಾವಳಿ

ಜತೆಗೆ ಮಾವಿನ ಕಾಯಿಗಳಿಗೆ ಟ್ರಿಪ್ಸ್ ಕೀಟಗಳ ಹಾವಳಿ ಹೆಚ್ಚಾಗಿದ್ದು ಕೆಲವೆಡೆ ಇದು ನಿಯಂತ್ರಣಕ್ಕೆ ಬಾರದಷ್ಟು ಹೆಚ್ಚಳವಾಗಿದ್ದರಿಂದ ಕಾಯಿಗಳಿಗೆ ಹುಳುಕಾಟ ಆರಂಭವಾಗಿದೆ. ಇದರಿಂದ ಉತ್ತಮ ಗುಣಮಟ್ಟ ನಿರೀಕ್ಷಿಸುತ್ತಿದ್ದ ಬೆಳೆಗಾರರಿಗೆ ನಿರಾಸೆಯಾಗಿದ್ದು ಗುಣಮಟ್ಟವಿಲ್ಲದ ಹುಳುಕಾಟದ ಫಸಲಿಗೆ ಉತ್ತಮ ಧಾರಣೆ ಸಿಗದೆ ನಷ್ಟ ಆಗುತ್ತದೆ ಎಂಬ ಆತಂಕ ರೈತರನ್ನು ಈಗಲೇ ಕಾಡುತ್ತಿದೆ.

### ಒಳ್ಳೆ ಫಸಲಿನ ನಿರೀಕ್ಷೆ

ಕಳೆದ ವರ್ಷ ಜಿಲ್ಲೆಯಲ್ಲಿ ಮಾವು ಬೆಳೆಯಲ್ಲಿ ಹೂವು ಕಡಿಮೆ ಪ್ರಮಾಣದಲ್ಲಿ ಬಿಟ್ಟಿತ್ತಾದರೂ, ಶೇ.45 ರಿಂದ 50 ರಷ್ಟು ಫಸಲನ್ನು ರೈತರು ಪಡೆದುಕೊಂಡಿದ್ದರು. ಆದರೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ತಡವಾಗಿಯಾದರೂ ದಟ್ಟವಾಗಿ ಹೂವು ಬಿಟ್ಟಿತ್ತು. ಆದರೆ ಬಿಸಿಲಿನ ಬೇಗೆ, ಆಲಿಕಲ್ಲಿನ ಮಳೆ ಹೊಡೆತಕ್ಕೆ ಸಿಕ್ಕಿ ಶೇ.100 ಫಸಲಿನ ಕನಸು ಭಗ್ನಗೊಂಡಿದೆ. ಆದರೂ ರೈತರು ದೇವರ ಮೇಲೆ ಭಾರ ಹಾಕಿ ಫಸಲಿನ ನಿರೀಕ್ಷೆಯಲ್ಲಿದ್ದಾರೆ.

ಮಾರ್ಚ್ ಕೊನೆಯ ವಾರದ ಎರಡು ದಿನ ಮಳೆ ಸುರಿದಿತ್ತು. ಈ ಮಳೆ ಬಿಸಿಲಿನ ಬೇಗೆಯನ್ನು ಕಡಿಮೆ ಮಾಡುವುದರಿಂದ ಮಾವು ಬೆಳೆಗೆ ಅನುಕೂಲವೇ ಆಗಿತ್ತು. ಆದರೆ, ಆಲೀಕಲ್ಲು ಮಳೆ ಸುರಿದರೆ ಮಾತ್ರವೇ ಕಾಯಿಗಳು ಉದುರಿ ಹೋಗುವ ಆತಂಕ ಇರುತ್ತಿತ್ತು. ಕಾಯಿ ಉದುರಿ ಹೋಗಿದ್ದರಿಂದಲೂ ಒಂದಷ್ಟು ಅನುಕೂಲಗಳಾಗಿವೆ. ದಟ್ಟವಾಗಿ ಹೂವು ಬಿಟ್ಟಿದ್ದರಿಂದ ಅಷ್ಟೂ ಹೂವುಗಳ ಮರದ ತುಂಬ ಕಾಯಿಗಳನ್ನು ಬಿಟ್ಟರೂ ಉತ್ತಮ ಗುಣಮಟ್ಟದ ಫಸಲನ್ನು ಪಡೆಯಲು ಆಗುತ್ತಿರಲಿಲ್ಲ. ಮಳೆಯಿಂದಾಗಿ ಕಾಯಿಗಳು ಉದುರಿ ಫಸಲಿನ ಪ್ರಮಾಣವನ್ನು ತೆಳುವು ಮಾಡಿದ ಕಾರಣ ಉಳಿದ ಕಾಯಿಗಳು ಗಾಳಿ ಬೆಳಕು ಚೆನ್ನಾಗಿ ತಗುಲಿ ಕಾಯಿ ಪಕ್ವವಾಗಿ ಅರಳುತ್ತದೆ. ಮಳೆ ಬಂದರೂ ಆಲಿಕಲ್ಲಿನ ಮಳೆ ಬೇಡ ಎಂದು ಮಾವು ಬೆಳೆಗಾರರು ದೇವರ ಮೊರೆ ಹೊಕ್ಕಿದ್ದಾರೆ.

### ಮಾವು ಬೆಳೆ ಜಂಟಿ ಸರ್ವೇ

ಮಳೆಯಿಂದಾಗಿ ಸುಮಾರು ಒಂದು ಸಾವಿರ ಹೆಕ್ಟೇರ್ ಮಾವು ಬೆಳೆಗೆ ಹಾನಿಯಾಗಿದೆ ಎಂದು ಸಮೀಕ್ಷೆ ಮಾಡಲಾಗಿದ್ದು ಕಂದಾಯ ಹಾಗೂ ತೋಟಗಾರಿಕೆ ಇಲಾಖೆಯಿಂದ ಜಂಟಿ ಸರ್ವೇ ಮುಂದುವರೆದಿದೆ. ಜಿಲ್ಲೆಯಲ್ಲಿ ತಡವಾಗಿ ಮಾವು ಮಾರುಕಟ್ಟೆಗೆ ಆಗಮಿಸಲಿದ್ದು ಮೇ, ಜೂನ್ ತಿಂಗಳು ಸೀಸನ್ ಆಗಿತ್ತಾದರೂ ಈ ಬಾರಿ ತಡವಾಗಿ ಹೂವು ಬಿಟ್ಟಿದ್ದರಿಂದ ಮಾವಿನ ಸೀಸನ್ ಮೇ.15 ರಿಂದ ಆರಂಭವಾಗಿ ಜುಲೈ ಅಂತ್ಯದವರೆಗೂ ಇರುವ ಸಾಧ್ಯತೆ ಇದೆ.

> ಕೋಲಾರ ಜಿಲ್ಲೆಯಲ್ಲಿ ಈ ಬಾರಿ ಶೇ.50 ಮಾವು ಬೆಳೆಯನ್ನು ನಿರೀಕ್ಷಿಸಲಾಗಿದ್ದು ಇದರಿಂದಾಗಿ ಉತ್ತಮ ಧಾರಣೆ ಸಿಗಲಿದೆ. ಕೀಟ ಬಾಧೆ ಇತ್ಯಾದಿ ಸಮಸ್ಯೆ ಕುರಿತು ರೈತರಿಗೆ ಮಾಹಿತಿ ನೀಡಲಾಗಿದ್ದು ಮಳೆಯಿಂದ ಉಂಟಾಗಿರುವ ಬೆಳೆ ನಷ್ಟದ ಸಮೀಕ್ಷೆ ಇನ್ನೂ ಮುಂದುವರೆದಿದೆ.
> -ಎಸ್.ಆರ್.ಕುಮಾರಸ್ವಾಮಿ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ

> ಸಮರ್ಪಕ ಮಾವು ಮಾರುಕಟ್ಟೆ ವ್ಯವಸ್ಥೆ ಇಲ್ಲ, ಇತರೆ ಮೂಲ ಸೌಲಭ್ಯಗಳಿಲ್ಲದೆ ತೊಂದರೆ ಆಗಿದೆ. ಶ್ರೀನಿವಾಸಪುರದಲ್ಲಿ ರಾತ್ರಿ 12 ಗಂಟೆಗೆ ಹರಾಜು ನಡೆದರೆ ದಲ್ಲಾಳಿಗಳದೇ ದರ್ಬಾರ್. ಶೇ.12 ಕಮಿಷನ್, 20 ಟನ್‌ಗೆ 500 ಕೆಜಿ ಹುಳುಕು ತೆಗೆಯುತ್ತಾರೆ. ಕೋಟ್ಯಂತರ ರೂ. ವಹಿವಾಟು ಬಿಳಿಚೀಟಿ ಮೇಲೆ ನಡೆದು ತೆರಿಗೆ ವಂಚನೆ ಆಗುತ್ತದೆ. ಮಹಿಳಾ ಕಾರ್ಮಿಕರ ರಕ್ಷಣೆಗೆ ಸಿಸಿ ಟಿವಿ ವ್ಯವಸ್ಥೆ ಮಾಡಬೇಕು. ಡಿಸಿಯವರು ಮಾವು ಬೆಳೆಗಾರರು ಮತ್ತು ಅಧಿಕಾರಿಗಳ ಜಂಟಿ ಸಭೆ ಕರೆದು ಸಮಸ್ಯೆ ಚರ್ಚಿಸಬೇಕು.
> -ಕೆ.ನಾರಾಯಣಗೌಡ, ರೈತ ಸಂಘದ ರಾಜ್ಯ ಉಪಾಧ್ಯಕ್ಷ

**ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಸೀಮೆಯ ಕೋಟೆಮನೆಯು ಹಿಂದೆ ಸಂಸ್ಕೃತ ವೇದ ಅಧ್ಯಯನಕ್ಕೆ ಹೆಸರಾಗಿತ್ತು. ಆ ಪುಟ್ಟೂರಿಗೆ ಈಗ ಸಂಗೀತ ಸಂಸ್ಕೃತಿಯ ಹೊಸ ಛಾಪು ನೀಡಿರುವ ಕೀರ್ತಿ ರೇಖಾ ಭಟ್ ಅವರಿಗೆ ಸಲ್ಲುತ್ತದೆ. ಅವರ ಸಂಗೀತದ ಸಾಧನೆಯ ರೇಖೆ ಕೋಟೆ ಮನೆಯಿಂದ ಪ್ರಾರಂಭವಾಗಿ, ಅಮೆರಿಕದವರೆಗೂ ಸಾಗಿರುವುದು ನಿಜಕ್ಕೂ ವಿಶೇಷ.**

# ಸಂಗೀತ-ಶಿಕ್ಷಣ ಸಂಪ್ರೀತಿಯ ರೇಖಾ ಕೋಟೆಮನೆ

• ರಾಜು ಅಡಕಳ್ಳಿ

ಮಲೆನಾಡಿನ ಅಡಿಕೆ, ಬಾಳೆ ತೋಟಗಳ ಸೆರಗಿನಂಚಿನಲ್ಲಿರುವ ಉ.ಕ ಜಿಲ್ಲೆಯ ಯಲ್ಲಾಪುರದ ಬಾಳೆಹದ್ದದಲ್ಲಿ ಹುಟ್ಟಿ, ಕೋಟೆಮನೆ ಭಟ್ಟರ ಮನೆಯ ಸೊಸೆಯಾಗಿ, ಕೇವಲ ಕುಟ್ಟವಲಕ್ಕಿ, ಗೊಜ್ಜವಲಕ್ಕಿ, ಮೊಸರವಲಕ್ಕಿ, ಅವಲಕ್ಕಿ ಒಗ್ಗರಣೆಗಳಲ್ಲಿಯೇ ಕಳೆದು ಹೋಗದೇ, ಕೋಟೆಮನೆಯಲ್ಲಿಯೇ ಸಂಗೀತ ಸ್ವರ-ನಾದಗಳ ಕೋಟೆ ಕಟ್ಟಿ, ಸಂಗೀತ ಸರಸ್ವತಿಯ ಲಾಲನೆ, ಪಾಲನೆ ಮಾಡುತ್ತಿದ್ದಾರೆ ಈ ರೇಖಾ. ಇವರಿಗೆ ಸಂಗೀತವೇ ಬದುಕಿನ ಸಾಧನೆಗೆ ಸರಳ ರೇಖೆ. ಪಕ್ಕದ ಹಿರೇಸರದಲ್ಲೂ ವಿದ್ಯಾಮಾತೆ ಶಾರದೆಯ ಮಂದಿರದಂತೆ, ಮಾದರಿ ಶಾಲೆಯೊಂದನ್ನು ನಿರ್ಮಿಸಿ ಬದುಕಿನ ಸಾರ್ಥಕತೆ ಕಂಡುಕೊಳ್ಳುತ್ತಿದ್ದಾರೆ ಈ ರೇಖಕ್ಕ.

ನಾಡಿನ ಸಾಂಸ್ಕೃತಿಕ ರಂಗದಲ್ಲಿ ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿಗೆ ಮೊದಲ ಸ್ಥಾನದಲ್ಲಿದ್ದರೆ, ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯೂ ನಂತರದ ಸ್ಥಾನದಲ್ಲಿದೆ ಎಂಬ ಖ್ಯಾತಿ ಪಡೆಯುವಲ್ಲಿ ಹಾಸಣಗಿ ಗಣಪತಿ ಭಟ್ಟರ ಮತ್ತು ಅವರ ಶಿಷ್ಯರ ಕೊಡುಗೆಗಳೂ ಸಾಕಷ್ಟಿವೆ, ಇವರಲ್ಲಿ ರೇಖಾ ಭಟ್ ಅವರೂ ಒಬ್ಬರು.

ಮದುವೆ, ಮನೆಕಾಲ, ಜವಾಬ್ದಾರಿ, ಸಂಸಾರ, ಸುಖ-ದುಃಖ ಆಘಾತಗಳಂತಹ ಬದುಕಿನ ಸ್ಥಿತ್ಯಂತರಗಳಾದಾಗಲೂ ಇವರು ತಾಳ, ಲಯ, ಸ್ವರ, ರಾಗಗಳ ಅನವರತ ಆರಾಧನೆಯಲ್ಲಿಯೇ ತಮಗೆ ತಾವೇ ಸಂಗೀತದ ಸಾಂತ್ವನ ಮಾಡಿಕೊಂಡವರು. ಅಪಘಾತದಲ್ಲಿ ಅವರ ಪತಿಯ ಸಾವು ಸೃಷ್ಟಿಸಿದ ಭಾವ ವೇದನೆ ಊಹಿಸುವುದಕ್ಕೂ ಅಸಾಧ್ಯ, ಆದರೆ ಸುದೈವದಿಂದ ರೇಖಾ ಅವರನ್ನು ಸಂತೈಸುವ ಸಂಗೀತದ ತಂತುಗಳು, ಮಧುವಂತಿ, ಯಮನ್, ಅಹಿರ್ ಭೈರವ್, ಮೇಘಗಳಂತಹ ರಾಗಗಳು ರೇಖಾ ಅವರ ಜೀವಭಾವವಾಗಿ, ಅವರ ಬಾಳದೋಣಿಯ ಪಯಣವನ್ನು ಮುನ್ನಡೆಸಿದವು. ಮಗಳು ಸಾಕ್ಷಿ ಅಮ್ಮನ ಆಶಾವಾದಕ್ಕೆ ಊರುಗೋಲಾಗಿ ನಿಂತಳು.

ಸಂಗೀತದಿಂದ ಸಾಂತ್ವನ, ಸಮಚಿತ್ತ, ಸಾಧನೆ, ಸುಖ, ಸಮಾಧಾನ ಇವೆಲ್ಲವುಗಳನ್ನೂ ಕಂಡುಕೊಂಡು, ರೇಖಾ ಬದುಕಿನ ಪ್ರವಾಹಗಳಿಗೆ, ಅದು ಒಡ್ಡುವ ಸವಾಲುಗಳಿಗೆ ಮುಖಾಮುಖಿಯಾಗಿ ಮುನ್ನಡೆಯುತ್ತಲೇ ಇರುವುದು ವಿಶೇಷ, ಇಲ್ಲದಿದ್ದರೆ ಮನಸ್ವಿನಿ ವಿದ್ಯಾಲಯದಂಥ ಮಾದರಿ ಶಾಲೆಯನ್ನು ಕಟ್ಟಿ ಬೆಳೆಸುವುದಕ್ಕೆ ರೇಖಾ ಅವರಿಗೆ ಸಾಧ್ಯವಾಗುತ್ತಿತ್ತೇ?

ಹಾಸಣಗಿ ಗಣಪತಿ ಭಟ್ಟರಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಏಳು ವರ್ಷಗಳ ಕಾಲ ಇವರು ಮತ್ತು ಇವರ ಸಹೋದರ ನಾಗಭೂಷಣ ಹೆಗಡೆಯವರು ಕಲಿತೇ, ಸಂಗೀತದ ಸಾಧನೆಯ ವೇದಿಕೆ ಏರಿದವರು. ಹೀಗೆ ಸಪ್ತ ಸಂವತ್ಸರದುದ್ದಕ್ಕೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಸಾಂಗತ್ಯದಲ್ಲಿದ್ದ ರೇಖಾ ಅವರು ಮುಂದೆ ಭಾವಗೀತೆ, ಲಘು ಸಂಗೀತ ಕಲಿಯುವಲ್ಲಿ ಕಂಪ್ಲಿಯ ಶ್ರೀಪಾದ ಹೆಗಡೆಯವರ ಮಾರ್ಗದರ್ಶನಕ್ಕೆ ಮೊರೆ ಹೋದರು. ಇಷ್ಟಕ್ಕೆ ರೇಖಾ ಅವರ ಕಲಿಕೆಯ ಹಂಬಲ ಮುಗಿಯಲಿಲ್ಲ. ಠುಮ್ರಿ ಕಲಿಯಲು ಡಾ.ಅಲಕಾ ದೇವ್ ಅವರನ್ನು ಹುಡುಕಿಕೊಂಡು, ಅಘನಾಶಿನಿ, ಗಂಗಾವಳಿ, ಶರಾವತಿ ಹೊಳೆಗಳನ್ನೂ ದಾಟಿ, ಕಡಲ ತೀರ ಗೋವಾಕ್ಕೆ ಹೋಗಿ ಅಭ್ಯಾಸ ಕೈಗೊಂಡರು.

ಹೀಗೆ ನಿರಂತರ ಕಲಾರಾಧನೆಯಿಂದ ಸಂಗೀತದ ವರಪ್ರಸಾದ ಸಿದ್ಧಿಸಿಕೊಂಡ ಫಲಶ್ರುತಿಯಾಗಿ ರೇಖಾ, ನಾಡಿನ ತುಂಬೆಲ್ಲ ಖ್ಯಾತ ಸಂಗೀತಗಾರ್ತಿಯಾಗಿ ಸಂಗೀತ ಕಚೇರಿಗಳನ್ನು ನಡೆಸುವುದಕ್ಕೆ ಸಾಧ್ಯವಾಯಿತು. ಮಂಚಿಕೇರಿಯಿಂದ ಹಿಡಿದು ಮುಂಬೈವರೆಗೆ ಹಲವು ಕಡೆಗಳಲ್ಲಿ ಇವರ ಬೈಠಕ್ ನಡೆದವು. ಅನೇಕ ವೇದಿಕೆಗಳಲ್ಲಿ ಇವರ ಭಾವಗೀತೆ, ಭಕ್ತಿಗೀತೆ, ಭಜನ್ ಕಾರ್ಯಕ್ರಮಗಳೂ ಸೃಜಿಸಿದವು.

ಕೃಷ್ಣ ಹಾನಗಲ್ ರಾಷ್ಟ್ರೀಯ ಪ್ರಶಸ್ತಿ, ಆಕಾಶವಾಣಿಯ ಪ್ರಶಸ್ತಿ ಮತ್ತಿತರ ಪುರಸ್ಕಾರಗಳೂ ಇವರ ಮುಡಿಗೇರಿದವು. ಧಾರವಾಡ ಆಕಾಶವಾಣಿಯಲ್ಲಿ ಇವರು ಎ-ಗ್ರೇಡ್ ಕಲಾವಿದರಾದರು. ಆಕಾಶವಾಣಿಯ ಕಲಾವಿದರ ಆಯ್ಕೆ ಮಂಡಳಿಯ ಸಂಗೀತ ತಜ್ಞರ ಪೈಕಿ ಇವರೂ ಒಬ್ಬರಾಗಿದ್ದರು.

ಪಿಟ್ಸ್‌ಬರ್ಗ್, ನ್ಯೂಜೆರ್ಸಿ, ವರ್ಜಿನಿಯ, ವಾಷಿಂಗ್ಟನ್ ಹೀಗೆ ಅಮೆರಿಕದ ಅನೇಕ ಕಡೆ ಇವರು ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿ ಸೈ ಎನಿಸಿಕೊಂಡಿದ್ದಾರೆ.

ರೇಖಾ ಅವರು ಗಾಯಕಿಯು ಹೌದು, ಸಂಗೀತ ಶಿಕ್ಷಕಿಯೂ ಹೌದು. ಅನೇಕ ಕಡೆಗಳಲ್ಲಿ ಇವರು ಸಂಗೀತ ಶಾಲೆಗಳನ್ನೂ ನಡೆಸಿ, ತನ್ಮೂಲಕ ಸಂಗೀತ ವಿದ್ಯೆಯನ್ನು ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಧಾರೆಯೆರೆದಿದ್ದಾರೆ. ತಮ್ಮ ಕೋಟೆಮನೆಯ ಅಂಗಳದಲ್ಲಿ ಸಂಗೀತ ಶಾಲೆ ನಡೆಸಿದ್ದಷ್ಟೇ ಅಲ್ಲ, 10 ವರ್ಷಗಳ ಕಾಲ ಪ್ರತಿ ವರ್ಷವೂ ಪ್ರಸಿದ್ಧ ಸಂಗೀತಗಾರರನ್ನು ಆಹ್ವಾನಿಸಿ, ಅಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದ ಉತ್ತಮ ಸಂಘಟಕಿಯಾಗಿಯೂ ಆಗಿ ರೇಖಾ ಗುರುತಿಸಿಕೊಂಡಿದ್ದಾರೆ.

### ಅಂತಾರಾಷ್ಟ್ರೀಯ ಪ್ರಶಸ್ತಿ

**ರೇಖಾ ಕೋಟೆಮನೆಯವರ ಸಮಗ್ರ ಸಾಧನೆಗಳನ್ನು ಗುರುತಿಸಿ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಇವರನ್ನು ಆಯ್ಕೆ ಮಾಡಲಾಗಿದೆ. ಜಾರ್ಜಿಯಾ ದೇಶದಲ್ಲಿ ಮುಂದಿನ ಮೇ-20ರಂದು ನಡೆಯುವ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ರೇಖಾ ಕೋಟೆಮನೆಯವರು ವಿವಿಧ ದೇಶಗಳ ಗಣ್ಯಮಾನ್ಯರ ಸಮ್ಮುಖದಲ್ಲಿ ಈ ಗೌರವ ಸ್ವೀಕರಿಸಲಿದ್ದಾರೆ.**

ಇವರ ಕೋಟೆಮನೆಯ ಎಡ ದಿಕ್ಕಿಗೆ ಶಿರಸಿ, ಬಲ ದಿಕ್ಕಿಗೆ ಯಲ್ಲಾಪುರ ಪೇಟೆಗಳಿವೆ. ಇವೆರಡೂ ಪೇಟೆಗಳಲ್ಲಿಯೂ ರೇಖಾ ಸಂಗೀತ ಶಾಲೆ ನಡೆಸಿದ ಅಕ್ಕೋರಾಗಿ, ಆ ಭಾಗದ ಅನೇಕರಿಗೆ ರಾಗ-ತಾಳ-ಲಯಗಳ ಅಭ್ಯಾಸ ಮಾಡಿಸಿ ಸಂಗೀತವನ್ನು ಮುಡಿಸಿದ್ದಾರೆ. ಅನೇಕ ಹೆಣ್ಮಕ್ಕಳಿಗೆ ಇವರು ಸಂಗೀತದ ಬಾಗಿನ ನೀಡಿ ಅವರ ಕಲಾ ಬದುಕಿನ ಬೆಳಕಾಗಿದ್ದಾರೆ.

ಅಮೆರಿಕದಲ್ಲೂ ಎರಡು ವರ್ಷ ಇವರು ಸಂಗೀತದ ಮಾಸ್ತರ್ಣಿಯಾಗಿದ್ದರು. ಅಲ್ಲಿಯ ವರ್ಜಿನಿಯಾದ ಮುದ್ರಾ ಕಲಾ ಕೇಂದ್ರದಲ್ಲಿ ಹಿಂದುಸ್ತಾನಿ ಸಂಗೀತದ ಶಿಕ್ಷಕಿಯಾಗಿ ಮಾರ್ಗದರ್ಶನದ ಜೊತೆಗೆ ಕಲಾದರ್ಶನವನ್ನೂ ಮಾಡಿ ಇವರು ವಿದ್ಯಾರ್ಥಿಗಳ ಮನ ಗೆದ್ದಿದ್ದರು. ಆ ಕೇಂದ್ರಕ್ಕೆ ಅಮೆರಿಕನ್ನರಷ್ಟೇ ಅಲ್ಲ, ಅಲ್ಲಿ ನೆಲೆಸಿರುವ ಭಾರತ, ಪಾಕಿಸ್ತಾನ, ಅಫಘಾನಿಸ್ತಾನ, ನೇಪಾಳ ಮುಂತಾದ ದೇಶಗಳ ಸಂಗೀತ ಪ್ರೇಮಿಗಳು ಕೂಡ ಆಗ ಇವರಲ್ಲಿ ಈ ಭಾರತೀಯ ಕಲೆಯನ್ನು ಅಭ್ಯಾಸ ಮಾಡಿದ್ದು ವಿಶೇಷ.

'ಟ್ವಿಂಕಲ್, ಟ್ವಿಂಕಲ್..ಲಿಟಲ್ ಸ್ಟಾರ್' ಎಂದೇ ಹಾಡಿಕೊಂಡು ಬೆಳೆದವರಿಗೆ, ಪಿಜ್ಜಾ ಬರ್ಗರ್ ತಿಂದು ತಿಂದು ನಾಲಿಗೆ ದಪ್ಪ ಮಾಡಿಕೊಂಡವರಿಗೆ 'ಕೊಯಾಲಿಯ ಬೋಲೇ ಅಂಬುವಾ' ಎಂದು ಉಚ್ಚರಿಸುವುದಕ್ಕೆ ಒದ್ದಾಡುತ್ತಿದ್ದರು, ಅದರಲ್ಲಿಯೂ ರಾಗಬದ್ಧವಾಗಿ ಹೇಳಿಕೊಡುವಷ್ಟರಲ್ಲಿ ಈ ರೇಖಾ ಮೇಡಮ್ಮಿಗೆ ಸಾಕೋ ಸಾಕಾಗುತ್ತಿತ್ತಂತೆ. ಆದರೂ ಸಹನೆಯಿಂದ, ಮಮಕಾರದಿಂದ ಅವರಿಗೆ ಸರಿಯಾಗಿ ಸಂಗೀತ ಕಲಿಸಿ, ದೊಡ್ಡ ಸವಾಲನ್ನೇ ದಾಟಿ ಬಂದಂತಹ ಸಾಧನೆ ರೇಖಾ ಅವರದ್ದಾಗಿದೆ. ಇದರಿಂದಾಗಿ ಇವರಿಗೆ ಬೇಡ್ತಿ ಹೊಳೆಯ ದೊಡ್ಡ ಪ್ರವಾಹದಲ್ಲೇ ಈಜಿ ಸುರಕ್ಷಿತವಾಗಿ ದಡ ಸೇರಿ, ವಾಪಸ್ ಮನೆಗೆ ಬಂದಂತಹ ಸಮಾಧಾನ.

ಅಮೆರಿಕದಲ್ಲಿದ್ದ ದಿನಗಳಲ್ಲಿ ತಮಗೆ ಕುಂದರಗಿ ಮೂಲದ ಸರ್ವೇಶ್ವರಿಯವರು ಮತ್ತು ಅಮಚಿಮನೆಯ ಗಜಾನನ ಹೆಗಡೆ ಅವರಂಥವರು ನೀಡಿದ ಪ್ರೋತ್ಸಾಹವನ್ನು ನಾನು ಯಾವತ್ತೂ ಮರೆಯಲಾರೆ ಎಂಬುದು ರೇಖಾ ಅವರಲ್ಲಿನ ಕೃತಜ್ಞತಾ ಭಾವ.

ಇವರು ಸಂಗೀತದ ಗಾಯಕಿ, ಸಾಧಕಿ, ಸಂಶೋಧಕಿ, ಲೇಖಕಿ. ಹಾಗಾಗಿ ತಮ್ಮ ಸಂಗೀತ ಸಂಶೋಧನೆಯ ಸಾರವನ್ನೆಲ್ಲ ಪುಸ್ತಕವಾಗಿ ಪ್ರಕಟಿಸಿದ್ದಾರೆ. ಸಾಹಿತ್ಯಕ್ಕಿಂತ ಆಲಾಪಕ್ಕೆ, ತಾನುಗಳಿಗೇ ಹೆಚ್ಚು ಪ್ರಾಶಸ್ತ್ಯ ನೀಡಬೇಕೆಂಬ ಅಭಿಪ್ರಾಯವನ್ನು ಇವರು ಒಪ್ಪುವುದಿಲ್ಲ. ಅಮೆರಿಕದಿಂದ ಬಂದ ನಂತರ ರೇಖಾ ಅವರು ಮತ್ತಷ್ಟು ಕ್ರಿಯಾಶೀಲರಾದರು. ತಮ್ಮ ಶ್ರೀಮಹಾಗಣಪತಿ ಸಂಗೀತ ಪ್ರತಿಷ್ಠಾನವನ್ನು ಇನ್ನಷ್ಟು ಚುರುಕುಗೊಳಿಸಿದರು. ಪಕ್ಕದ ಹಿರೇಸರ ಊರಿನಲ್ಲಿದ್ದ ಎರಡೆಕರೆ ಕರಡದ ಬ್ಯಾಣ ಖರೀದಿಸಿ ಅಲ್ಲಿ ಸುಸಜ್ಜಿತ ಶಾಲೆಯೊಂದನ್ನು ಸ್ಥಾಪಿಸಿ ಮಾದರಿಯಾಗಿದ್ದಾರೆ.

ಊರಿನಲ್ಲಿರುವ ತಮ್ಮ ಗದ್ದೆ-ತೋಟಗಳ ಕೆಲಸಗಳನ್ನು ಮಾಡಿಸುತ್ತಾ, ಸಂಗೀತ ಕೃಷಿಯ ಜೊತೆಗೆ ಅಡಿಕೆ, ತೆಂಗು, ಬಾಳೆ ಕೃಷಿಯನ್ನೂ ಅಷ್ಟೇ ಆಸಕ್ತಿಯಿಂದ ಇವರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಆಫ್ರಿಕಾದ ಸೆನಗಲ್‌ಗೂ ತೆರಳಿ ಅಲ್ಲಿಯ ಕಲೆ, ಸಂಸ್ಕೃತಿಯನ್ನು ಇವರು ಅಧ್ಯಯನ ಮಾಡಿರುವುದು ವಿಶೇಷ.

ರೇಖಾ ಅವರು ಸ್ಥಾಪಿಸಿರುವ ಮನಸ್ವಿನಿ ಶಾಲೆ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಎಲ್.ಕೆ.ಜಿ.ಯಿಂದ ಹಿಡಿದು 8ನೇ ತರಗತಿಯವರೆಗೆ ಪ್ರಸ್ತುತ ಅಧ್ಯಯನಕ್ಕೆ ಅವಕಾಶವಿದೆ. ಇನ್ನೆರಡು ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ.ವರೆಗೂ ಅಧ್ಯಯನ ನಡೆಸಲು ಮಕ್ಕಳಿಗೆ ಅವಕಾಶ ಕಲ್ಪಿಸುವ ಕನಸು ಈ ರೇಖಾ ಅವರದ್ದು. ಉಮ್ಮಚಗಿ, ಎಣ್ಣೆಸರ, ಮಾವಿನಕಟ್ಟಾ, ಉಪಳೇಶ್ವರ, ಚೌವತ್ತಿ, ಚಿಪಗೇರಿ ಮುಂತಾದ ಅನೇಕ ಊರುಗಳಿಂದ ಈ ಶಾಲೆಗೆ ಶಿಸ್ತಾಗಿ ವಿದ್ಯಾರ್ಥಿಗಳು ಬಂದು ಪಾಠ ಪ್ರವಚನಗಳಲ್ಲಿ ಪಾಲ್ಗೊಳ್ಳುವುದನ್ನು ನೋಡುವುದೇ ಚೆಂದ.



ಮಕ್ಕಳಿಗೆ ಶೈಕ್ಷಣಿಕ ಅಗತ್ಯ ಪೂರೈಸುವುದಲ್ಲದೇ, ಅವರ ಸೃಜನಶೀಲತೆ ಬೆಳೆಸುವ ಸಂಗೀತ, ಸಾಹಿತ್ಯ ಮತ್ತಿತರ ಲಲಿತ ಕಲೆಗಳ ತರಬೇತಿ ಶಿಬಿರ ಏರ್ಪಡಿಸುವುದು, ದೀಪೋತ್ಸವ, ರಾಖಿ, ಗಣೇಶ ಚತುರ್ಥಿ, ಯುಗಾದಿಯಂತಹ ಹಬ್ಬಗಳನ್ನು ಆಚರಿಸುವುದು, ಕೃಷಿಯ ಬಗ್ಗೆ ಆಸಕ್ತಿ ಹುಟ್ಟಿಸುವಂತಹ ಪ್ರಾಯೋಗಿಕ ಶಿಕ್ಷಣ ನೀಡುವುದು ಈ ಮನಸ್ವಿನಿ ಶಾಲೆಯ ವೈಶಿಷ್ಟ್ಯ. ಮಲೆನಾಡು ಶೈಲಿಯ ಮಧ್ಯಾಹ್ನದ ಊಟದ ವ್ಯವಸ್ಥೆಯೂ ಇಲ್ಲಿಯ ಮತ್ತೊಂದು ಆಕರ್ಷಣೆ.

# ಜಗತ್ತಿನ ಉದ್ಧಾರವೇ ನನ್ನ ಆತ್ಮದ ಉದ್ಧಾರ

**ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು,**
**ಜಗದ ಬೀದಿಗಳೊಳು ನಿಜಾತ್ಮ ಯಾತ್ರೆಯನು**
**ಜಗದ ಜೀವಿತದಿ ನಿಜ ಜೀವಿತದ ಪೂರ್ತಿಯನು?**
**ಬಗೆಯಲರಿತವನೆ ಸುಖಿ**

**-ಮಂಕುತಿಮ್ಮ**

ಜಗತ್ತಿನ ಉದ್ಧಾರ, ಜಗತ್ತಿನ ಕಲ್ಯಾಣವಾಗಬೇಕು ಎಂಬ ಸದೃಢತೆಯ ಗುರಿಯನ್ನು ಹೊಂದಿರುವುದರೊಂದಿಗೆ ತನ್ನ ಆತ್ಮದ ಕಲ್ಯಾಣವನ್ನೂ, ಈ ಜಗದ ಬೀದಿಯೊಳು ಪ್ರವಾಸಿಗನಾಗಿ ಯಾತ್ರೆ ಮಾಡುವಾಗ ತನ್ನ ಆತ್ಮದೊಂದಿಗೂ ಯಾತ್ರೆ ಮಾಡುವವನೂ, ಬದುಕಿರುವಷ್ಟು ದಿನ ಜೀವನದಲ್ಲಿ ಎದುರಾಗುವ ಕಷ್ಟ, ದುಃಖಗಳನ್ನು ಬಗೆಹರಿಸಿಕೊಂಡು ಸಂತೋಷದಿಂದ ಬದುಕು ಸಾಗಿಸುವಂತಹ ಮನಸ್ಥಿತಿಯವನೇ ಈ ಜಗದಲ್ಲಿ ಬಹಳ ಸುಖೀವಂತನಾಗಿರುತ್ತಾನೆ.

ಯಾವುದೇ ವ್ಯಕ್ತಿಯು ಈ ಜಗತ್ತು ಉದ್ಧಾರವಾಗಬೇಕು, ಈ ಜಗತ್ತು ಉದ್ಧಾರವಾದರೆ ಅದರಲ್ಲಿ ನಾನೂ ಸಹ ಉದ್ಧಾರವಾಗುವೆ ಎಂದು ಹೇಗೆ ನಂಬಿರುತ್ತಾನೋ, ಅದೇ ರೀತಿಯಲ್ಲಿ ಆತನು ತನ್ನ ಆತ್ಮದ ಉದ್ಧಾರಕ್ಕೂ ಮನಸ್ಸು ಮಾಡಿರಬೇಕು. ಜಗತ್ತಿನ ಉದ್ಧಾರ ಎಂದರೆ ಭೌತಿಕ ವಾದ, ಕಣ್ಣಿಗೆ ಕಾಣುವಂತಹ ಉದ್ಧಾರಗಳಾದರೆ, ಮಾನಸಿಕ ಉದ್ಧಾರವೆಂದರೆ ತಮಸ್ಸು ಗುಣಗಳನ್ನು ವರ್ಜಿಸಿ, ರಜಸ್ಸು ಗುಣಗಳನ್ನು ಬೆಳೆಸಿಕೊಂಡು ಸ್ವಾರ್ಥ ರಹಿತ ಬದುಕುವ ಕಲೆಯನ್ನು ಮೈಗೂಡಿಸಿಕೊಂಡು ಆತ್ಮೋದ್ಧಾರದ ದಾರಿಯನ್ನು ಕಂಡುಕೊಳ್ಳುವುದಾಗಿದೆ. ಭೌತಿಕ ಪ್ರಗತಿಯೊಂದಿಗೆ ಆತ್ಮಗಳ ಪ್ರಗತಿ ಸಾಧಿಸಿ ಸಾಧನೆಗೈದ ವ್ಯಕ್ತಿಯಾಗು ತ್ತಾನೆ. ಈ ಜಗಕ್ಕೆ ನಾವು ಬಂದಿರುವುದು ಪ್ರವಾಸಿಗರಾಗಿ, ಯಾತ್ರಿಯಾಗಿ ಎಂಬ ಸತ್ಯವನ್ನು ಅರಿಯುವಂತವರಾಗಿ, ಒಬ್ಬ ಯಾತ್ರಿಕನು ಹೇಗೆ ಈ ಜಗದ ಬೀದಿಗಳಲ್ಲಿ ಸುತ್ತಾಡುತ್ತಾ, ತಾನು ಸ್ಥಳಗಳನ್ನು ನೋಡುತ್ತಾ ಹೇಗೆ ಸಂತೋಷ ಪಡುತ್ತಾನೋ ಅದೇ ತೆರನಾಗಿ ತನ್ನ ಮನದ ಬಯಲಾಲಯದಲ್ಲಿಯ ಬಯಲದಾರಿಯಲ್ಲೂ ಆತ ಓಡಾಡುವಂತನಾಗಿ, ದಾನ, ಧರ್ಮ, ಪ್ರೀತಿ, ಭಾತೃತ್ವ, ವಿಶ್ವಾಸ, ಕ್ಷಮೆ, ನಗು, ಗೌರವಗಳೊಂದಿಗೆ ಸ್ಥಳಗಳನ್ನು ಭೇಟಿ ಮಾಡಿ ಅವುಗಳ ಸವಿಯನ್ನು ಉಣ್ಣುವಂತವಾಗಬೇಕು. ಆಗ ಆತನಲ್ಲಿ ತಮಸ್ಸು ಕಡಿಮೆಯಾಗುತ್ತಾ ರಜಸ್ಸು ಹೆಚ್ಚಳವಾಗಿ ಆತನು ತನ್ನ ಆತ್ಮದಲ್ಲಿ ಶೋಭಾಯಮಾನನಾಗುತ್ತಾನೆ. ಹಾಗೆಯೇ ಈ ಜೀವನ ಎಂಬುದು ಕಡಲೆ-ಬೆಲ್ಲವಂತೂ ಅಲ್ಲವೇ ಅಲ್ಲ, ಇದೊಂದು ಅನಿರೀಕ್ಷಿತವಾದ ಘಟನೆಗಳ ಉಕ್ಕಿನ ಕಡಲೆ. ಯಾವಾಗ ಏನುಬೇಕಾದರೂ ಜರುಗಬಹುದು. ಇಲ್ಲಿ ಪ್ರತಿದಿನವೂ ನಮ್ಮದು ಹೋರಾಟದ ಬದುಕು. ಇಂಥ ಹೋರಾಟದ ಬದುಕಿನಲ್ಲಿ ಬಂದೊದಗುವ ಕಷ್ಟಗಳನ್ನು, ಬಂದೊದಗುವ ವಿಪ್ಲತೆಗಳನ್ನು ಆಯಾ ಕಾಲಕ್ಕೆ, ಆಯಾ ಸಂದರ್ಭಕ್ಕನುಗುಣವಾಗಿ, ಮತ್ತೊಬ್ಬರಿಗೆ ತೊಂದರೆ ಮಾಡದಂತೆ, ಮತ್ತೊಬ್ಬರಿಗೆ ನೋಯಿಸದಂತೆ ಬರುವ ಕಷ್ಟಗಳನ್ನು ಬಗೆಹರಿಸಿಕೊಂಡು, ಅಸಮಾನತೆಯಲ್ಲಿ ಸಮಾನತೆಯನ್ನು ಕಂಡುಕೊಂಡು, ವಿಷಮತೆಯಲಿ ಮೈತ್ರಿಯನ್ನು ಮಾಡಿಕೊಂಡು, ಎಲ್ಲರಲ್ಲಿ ನಾನೂ ಒಬ್ಬ ಎಂಬ ಮನೋಭಾವದಲ್ಲಿ, ಪರೋಪಕಾರದಲ್ಲಿ ಪರಮಸುಖ ಕಂಡುಕೊಂಡು, ಆತ್ಮನಲ್ಲಿ ಪರತತ್ವ ಅಳವಡಿಸಿಕೊಂಡು, ಆತ್ಮವನ್ನೇ ಪರಮಾತ್ಮನನ್ನಾಗಿಸುವ ಕಲೆಯನ್ನು ಕಂಡುಕೊಂಡವನು ಈ ಜಗತ್ತಿನಲ್ಲಿ ಅತ್ಯಂತ ಸುಖಿಯೇ ಆಗಿರುತ್ತಾನೆ ಎಂಬುದು ಈ ಕಗ್ಗದ ಅರ್ಥವಾಗಿದೆ.

ಸ್ವಾರ್ಥವಿಲ್ಲದ ಬದುಕು ಸರ್ವಕಾಲಕ್ಕೂ ಶ್ರೇಷ್ಠ ಎಂಬ ಧ್ಯೇಯ, ಆತ್ಮೋನ್ನತಿ ದಾರಿಯ ತಲಾಶು. ಪರರ ಸುಖದಲ್ಲಿ ಸಂತಸ ಕಾಣುವ ಮನಸ್ಸು, ಭೌತಿಕ ಜಗತ್ತಿನ ಉದ್ಧಾರದೊಂದಿಗೆ ಆತ್ಮೋದ್ಧಾರದ ಕನಸು, ಕಷ್ಟಗಳ ಕಲ್ಲಿನ ಮಳೆ ಸುರಿಯುವಾಗ ಅದರೊಳಗೆ ಸುಖದ ವಿಚಾರಗಳ ಬಗೆಗಿನ ಧನಾತ್ಮಕ ಚಿಂತನೆಗಳನ್ನು ಅರ್ಜಿಸುವ ಮನಸ್ಸುಗಳು ಎಂದೆಂದಿಗೂ ಸುಖದಿಂದ ಕೂಡಿರುತ್ತವೆ. ಈ ಜಗತ್ತಿನ ಈ ಹಿಂದಿನ ಮಹಾಮಹಿಮರೆಲ್ಲರೂ ಸಹ ಈ ರೀತಿಯ ಜೀವನ ಮಾಡಿದ್ದರಿಂದಲೇ ಇಂದಿಗೂ ಸಹ ಇತಿಹಾಸ ಅವರನ್ನು ಮರೆತಿಲ್ಲ. ಬುದ್ಧ, ಬಸವಣ್ಣ, ರಾಮಕೃಷ್ಣ ಪರಮಹಂಸ, ಸರ್ವಜ್ಞ, ವಿವೇಕಾನಂದರು, ಜೀಸಸ್, ಪ್ರವಾದಿ ಪೈಗಂಬರರು, ಮಹಾವೀರ ಹೀಗೆ ಎಲ್ಲ ಮಹನೀಯರೂ ಸಹ ಜಗತ್ತಿನ ಉದ್ಧಾರದೊಂದಿಗೆ ತಮ್ಮ ಆತ್ಮೋದ್ಧಾರ ಮಾಡಿಕೊಂಡಿದ್ದರಿಂದಲೇ ಇತಿಹಾಸದ ಪುಟಗಳಲ್ಲಿ ಅವರೆಲ್ಲರ ಹೆಸರು ಅಜರಾಮರವಾಗಿದೆ.

**ಶುಭೋದಯಕ್ಕೊಂದು ಕಗ್ಗ**



**ರವೀ ಚಿಕ್ಕನಾಯಕನಹಳ್ಳಿ**

## ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



**ಎಡದಿಂದ ಬಲಕ್ಕೆ**

1. ಮನದಲ್ಲಿನ ತೀವ್ರವಾದ ಆಸೆ (3)
3. ಅನುಸರಿಸಿ ಜನಿಸಿದ ತಮ್ಮ (3)
7. ಶ್ರೀರಾಮನ ಜೊತೆಗೆ ವನವಾಸಕ್ಕೆ ಹೋದ ಸಹೋದರ (3)
8. ಶಿವನಿಗೆ ಹೀಗೂ ಹೇಳಬಹುದು (4)
10. ತಾವರೆಯ ಮತ್ತೊಂದು ಹೆಸರು (4)
12. ಸ್ವಾದವನ್ನು ತಿಳಿಸಿದ ನಾಲಗೆ (3)
13. ಅಗಲವಾದ ತಟ್ಟೆ (4)
15. ಕೈಗಡವನ್ನು ಹೀಗೆ ಹೇಳಬಹುದು (4)
17. ಮಯನೊಂದಿಗೆ ಬಂದಿರುವ ಕಾಲ (3)
18. ಇದೊಂದು ಮಾದರಿ (3)
19. ಮತ್ತೊಂದು ಕೈಯೊಂದಿಗೆ ಬಂದಿರುವ ಮೊಸಳೆ (3)

**ಮೇಲಿಂದ ಕೆಳಕ್ಕೆ**

2. ಪಾಟಿಯ ಮೇಲೆ ಬರೆಯುವ ಮೆದುವಾದ ಕಲ್ಲು (3)
4. ನೀರು ತುಂಬಿರುವ ಮೋಡಕ್ಕೆ ಮತ್ತೊಂದು ಹೆಸರು (4)
5. ಬಿಲ್ಲಿನಿಂದ ಬಿಡುವ ಆಯುಧವಿದು (2)
6. ಸಾಧನ ಅಥವಾ ಸಲಕರಣೆ (5)
9. ಗುಂಪಿಗೆ ಇನ್ನೊಂದು ಹೆಸರು (3)
10. ಎಡೆಬಿಡದೆ ಎಂದರ್ಥ (5)
11. ತುಂಬಾ ಜನರಿರುವಲ್ಲಿನ ಸಾಂದ್ರತೆ (3)
14. ಗಾಳಿ, ಬೆಳಕಿಗಾಗಿ ಮಾಡಿಕೊಂಡ ವ್ಯವಸ್ಥೆ (4)
16. ತಿರುಗಿ ಬಂದಿರುವ ರೆಂಬೆ (3)

**ಸರಿಯುತ್ತರಗಳು**

# ಪ್ರಾಮಾಣಿಕವಾಗಿ ಬದುಕುವುದು ದೊಡ್ಡ ಸಂಸ್ಕಾರ

ಅನೇಕ ಸಾಧಕರು ನಮ್ಮ ನಡುವೆ ತಮ್ಮ ಪಾಡಿಗೆ ತಾವು ಯಾವುದೇ ಸದ್ದಿಲ್ಲದೆ, ಶ್ರದ್ಧೆಯಿಂದ ತಮ್ಮ ವಿವೇಚನೆಗೆ ತಕ್ಕದಾದ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುತ್ತಲೇ ಇರುತ್ತಾರೆ. ಅಂತಹ ಒಬ್ಬ ಸಾಧಕರಲ್ಲಿ ಡಾಕ್ಟರ್ ಬಾಲಸುಬ್ರಹ್ಮಣ್ಯಂರವರೂ ಒಬ್ಬರು.

ಎಲ್ಲರೂ ಅವರನ್ನು ಪ್ರೀತಿಯಿಂದ ಬಾಲು ಸರ್ ಎಂದೇ ಕರೆಯುವುದು. ಇವರು ವೃತ್ತಿಯಿಂದ ವೈದ್ಯರಾಗಿದ್ದರೂ, ಪ್ರವೃತ್ತಿಯಿಂದ ಸಮಾಜಸೇವಕರಾಗಿ ಹೆಗ್ಗಡ ದೇವನಕೋಟೆಯ ಆಚೆ ಇರುವ ಹೊಸಹಳ್ಳಿಯಲ್ಲಿ ತಮ್ಮ ವೈದ್ಯ ಸ್ನೇಹಿತರನ್ನು ಸೇರಿಸಿಕೊಂಡು ಒಂದು ಆಸ್ಪತ್ರೆಯನ್ನು ಅಲ್ಲಿಯ ಗಿರಿಜನ, ಕಾಡು ಕುರುಬ ಹಾಗೂ ಜೇನು ಕುರುಬರಿಗಾಗಿ ಕಟ್ಟಿದ್ದಾರೆ. ನಂತರ ಅವರಿಗಾಗಿ ಒಂದು ಶಾಲೆಯನ್ನು ಕೂಡ ತೆರೆದರು. ನೂರಾರು ಗಿರಿಜನ ಮಕ್ಕಳು ಈಗ ಆ ಶಾಲೆಯಲ್ಲಿ ಓದುತ್ತಿದ್ದಾರೆ.

ಕಾಡಿನಲ್ಲಿದ್ದ ಈ ಮಕ್ಕಳಿಗೆ ಯಾವ ಸಂಸ್ಕೃತಿಯ ಅರಿವೂ ಇಲ್ಲದೆ ಅನಾಗರಿಕರಾಗಿರುತ್ತಾರೆ ಎಂದು ನಗರದಲ್ಲಿರುವ ನಾವೆಲ್ಲರೂ ಭಾವಿಸಿರುತ್ತೇವೆ, ಆದರೆ ಅದು ಯಾವಾಗಲೂ ನಿಜವಾಗಿರುವುದಿಲ್ಲ. ವಾಸ್ತವ ಬೇರೆಯೇ ಇರುತ್ತದೆ. ಡಾ. ಬಾಲಸುಬ್ರಹ್ಮಣ್ಯಂರವರೇ ಹೇಳಿದ ಒಂದು ಘಟನೆ ಹೀಗಿದೆ.

ಅಲ್ಲಿಯ ಗಿರಿಜನ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟಕ್ಕೆ ಪ್ರತಿದಿನ ರಾಗಿ ಮುದ್ದೆಯನ್ನು ಕೊಡುತ್ತಾರೆ. ಊಟ ಬಡಿಸುವುದು ಅಲ್ಲಿನ ವಿದ್ಯಾರ್ಥಿಗಳೇ. ಒಬ್ಬೊಬ್ಬ ವಿದ್ಯಾರ್ಥಿಗೂ ಒಂದೊಂದು ಕೆಲಸದ ಜವಾಬ್ದಾರಿ ಕೊಟ್ಟಿರುತ್ತಾರೆ. ಆ ಜವಾಬ್ದಾರಿಯನ್ನು ಮಕ್ಕಳು ನಿಭಾಯಿಸುವುದನ್ನು ನೋಡುವುದೇ ಒಂದು ಅನುಭವ.

ಒಂದು ದಿನ ಒಬ್ಬ ಹುಡುಗನಿಗೆ ರಾಗಿಮುದ್ದೆಯನ್ನು ಮಾಡಿ ಬಡಿಸುವ ಜವಾಬ್ದಾರಿ ಬಿದ್ದಿತ್ತು. ಅವನ ತರಗತಿಯಲ್ಲಿ ಸುಮಾರು ಇಪ್ಪತ್ತೆಂಟು ಜನ ವಿದ್ಯಾರ್ಥಿಗಳಿದ್ದರು. ಆಗ ಆ ಹುಡುಗ ಎಲ್ಲಾ ರಾಗಿಹಿಟ್ಟನ್ನು ಸೇರಿಸಿ ಇಪ್ಪತ್ತೆಂಟು ಸಾಧಾರಣ ಗಾತ್ರದ ಉಂಡೆಗಳನ್ನು ಮಾಡಿ ಜೋಡಿಸಿಟ್ಟ. ಅದರಲ್ಲಿ ಒಂದು ಉಂಡೆಯನ್ನು ಮಾತ್ರ ತೆಗೆದುಕೊಂಡು ಅದರಲ್ಲಿ ಎರಡು ಭಾಗ ಮಾಡಿಟ್ಟ, ಅಂದರೆ ಒಟ್ಟು ಇಪ್ಪತ್ತೊಂಬತ್ತು ಮುದ್ದೆಗಳಾಗಿದ್ದವು. ಇಪ್ಪತ್ತೇಳು ಮುದ್ದೆಗಳು ಒಂದೇ ಗಾತ್ರದವು, ಇನ್ನೆರಡು ಮುದ್ದೆಗಳು ಮಾತ್ರ ಚಿಕ್ಕವುಗಳಾಗಿದ್ದವು.

ಯಾವುದೋ ಕಾರಣಕ್ಕಾಗಿ ಡಾಕ್ಟರ್ ಬಾಲು ಅವರು ಅಡುಗೆಮನೆಯೊಳಗೆ ಬಂದರು. ಅಲ್ಲಿ ಆ ಹುಡುಗ ತಟ್ಟೆಯಲ್ಲಿ ರಾಗಿ ಮುದ್ದೆಯನ್ನು ಜೋಡಿಸಿಟ್ಟುಕೊಂಡು ನಿಂತಿದ್ದನ್ನು ನೋಡಿದರು. ಎರಡು ಮುದ್ದೆಗಳು ಮಾತ್ರ ಸಣ್ಣಗಿದ್ದುದ್ದನ್ನು ಅವರು ಗಮನಿಸಿ,

'ಯಾಕಪ್ಪಾ, ಎಷ್ಟು ಹುಡುಗರಿದ್ದಾರೆ? ಎಷ್ಟು ಮುದ್ದೆ ಮಾಡಿದ್ದೀಯಾ?' ಎಂದು ಕೇಳಿದರು.

ಹುಡುಗ ಹೇಳಿದ, 'ಇಪ್ಪತ್ತೆಂಟು ಜನ ಇದ್ದಾರೆ ಸರ್'

'ಹಾಗಾದರೆ ಇಪ್ಪತ್ತೊಂಬತ್ತು ಮುದ್ದೆ ಇದೆಯಲ್ಲಾ' ಎಂದು ಕೇಳಿದರು ಡಾ. ಬಾಲು.

ಆಗ ಆ ಹುಡುಗ, 'ಅದೂ ಸರ್, ಊಟದ ಹೊತ್ತಿಗೆ ನನ್ನ ತಂಗಿ ಇಲ್ಲಿಗೆ ಬರ್ತಾಳೆ, ಅವಳಿಗಾಗಿ ನನ್ನ ಮುದ್ದೆಯಲ್ಲಿ ಅರ್ಧ ಮಾಡಿ ಇನ್ನೊಂದು ಮುದ್ದೆ ಮಾಡಿದ್ದೀನಿ' ಎಂದು ಹೇಳಿದ.

'ಅಯ್ಯೋ ದಡ್ಡ.. ಒಟ್ಟು ಹಿಟ್ಟಿನಲ್ಲೇ ಇಪ್ಪತ್ತೊಂಬತ್ತು ಮುದ್ದೆ ಮಾಡಿದ್ದರೆ ಆಗುತ್ತಿರಲಿಲ್ಲವೇ? ಅದರಲ್ಲೇಕೆ ಅರ್ಧ ಮಾಡಿದೆ?' ಎಂದರು ಬಾಲು.

ಆಗ ಹುಡುಗ, 'ಹಾಗೆ ಮಾಡಿದರೆ ಬೇರೆ ಎಲ್ಲರಿಗೂ ಸ್ವಲ್ಪ ಕಡಿಮೆಯಾಗುತ್ತಿತ್ತಲ್ಲಾ ಸರ್. ಅವಳು ನನ್ನ ತಂಗಿ, ನನ್ನ ಪಾಲಿನಲ್ಲಿ ಮಾತ್ರ ಅವಳಿಗೆ ಕೊಡುವುದು ಸರಿಯಲ್ಲವೇ ಸರ್?' ಎಂದ. ಆ ಹುಡುಗನ ಮಾತನ್ನು ಕೇಳಿ, ಡಾಕ್ಟರ್ ಬಾಲುರವರ ಕಣ್ಣುಗಳಲ್ಲಿ ನೀರು ಹರಿಯಿತು. ಅವನ ಪ್ರಾಮಾಣಿಕತೆಗೆ ಭೇಷ್ ಎಂದು ಅವನ ಬೆನ್ನು ತಟ್ಟಿದರು.

ಅನೇಕ ಕಛೇರಿಗಳಲ್ಲಿ ಕೆಲಸ ಮಾಡುವ ನಾವು ಎಲ್ಲಾದರೂ ಏನಾದರೂ ಉಚಿತವಾಗಿ ಸಿಕ್ಕರೆ ಸಾಕು ಎಂದು ಕಾಯುತ್ತಿರುತ್ತೇವೆ ಪೆನ್ಸಿಲಿನಿಂದ ಹಿಡಿದು ಪೇಪರ್, ಪೆನ್ನು ಅದೇನೇ ಇದ್ದರೂ ಮನೆಗೆ ತೆಗೆದುಕೊಂಡು ಹೋಗುವ ಅದನ್ನು ಮನೆಯಲ್ಲಿ ಉಪಯೋಗಿಸುವ ಹಪಹಪಿ. ಆಫೀಸಿನಲ್ಲಿ ಅಷ್ಟೆಲ್ಲ ಸೌಲಭ್ಯಗಳಿದ್ದರೂ, ಮನೆಯಲ್ಲಿ ಒಂದಷ್ಟು ಕಾಸು ಉಳಿಸಲು ದುರಾಸೆ ಪಡುತ್ತೇವೆ. ಬರುವ ಅಷ್ಟೊಂದು ಸಂಬಳ ಕೂಡ ನಮ್ಮ ದುರಾಸೆಯನ್ನು ನೀಗಿಸುವುದಿಲ್ಲ. ಪ್ರಾಮಾಣಿಕತೆ ಮನಸ್ಸಿನಲ್ಲಿ ಹುಟ್ಟಬೇಕು, ಅದಕ್ಕೂ ದುಡ್ಡಿಗೂ ಸಂಬಂಧವಿರುವುದಿಲ್ಲ.

**ಒಂದೊಳ್ಳೆ ಮಾತು**

**ರೂಪಾ ಗುರುರಾಜ್**
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

# ಆಧ್ಯಾತ್ಮಿಕತೆಯ ಸರಳೀಕರಣ

ಆಧ್ಯಾತ್ಮಿಕ ಮಾರ್ಗವು ಅನುಸರಿಸಲು ತುಂಬಾ ಕಠಿಣ ಎನ್ನುವುದು ಜನಸಾಮಾನ್ಯರ ಅಭಿಪ್ರಾಯವಾಗಿದೆ. ಅಂಥವರಿಗೆ ಕರ್ಮ ಯೋಗದಲ್ಲಿ (2.40) ಸಣ್ಣ ಪ್ರಯತ್ನಗಳು ದೊಡ್ಡ ಫಲ ನೀಡುತ್ತವೆ ಎಂದು ಕೃಷ್ಣ ಭರವಸೆ ನೀಡಿರುತ್ತಾನೆ. ಅವನು ಇದನ್ನು ಇನ್ನೂ ಸರಳಗೊಳಿಸುತ್ತಾನೆ -ಯಾರು ಸರಿಯಾಗಿ ಆಹಾರ ಸೇವಿಸುತ್ತಾರೋ, ವಿಶ್ರಾಂತಿ ಪಡೆಯುತ್ತಾರೋ, ಕೆಲಸ ಮಾಡುತ್ತಾರೋ, ನಿದ್ರಿಸುತ್ತಾರೋ ಹಾಗೂ ಎಚ್ಚರವಾಗಿರುತ್ತಾರೋ ಅವರ ದುಃಖವನ್ನು ಯೋಗ ನಾಶ ಮಾಡುತ್ತದೆ. (6.17) ಯೋಗ ಅಥವಾ ಆಧ್ಯಾತ್ಮಿಕ ಮಾರ್ಗ ಹಸಿವಾದಾಗ ಊಟ ಮಾಡಿದಷ್ಟು, ಕೆಲಸ ಮಾಡಬೇಕಾದಾಗ ಕೆಲಸ ಮಾಡಿದಷ್ಟು, ನಿದ್ರಿಸಬೇಕಾದಾಗ ನಿದ್ರೆ ಮಾಡಿದಷ್ಟು, ದಣಿದಾಗ ವಿಶ್ರಾಂತಿ ಪಡೆದಷ್ಟು ಸುಲಭ. ಇದನ್ನು ಬಿಟ್ಟರೆ ನಾವು ನಮಗೆ ಹಾಗೂ ಇತರರಿಗೆ ಹೇಳಿದ ಕಥೆಯಾಗುತ್ತದೆ.

ವೃದ್ಧನಿಗಿಂತ ಮಗುವಿಗೆ ಹೆಚ್ಚು ನಿದ್ರೆ ಬೇಕಾಗುತ್ತದೆ. ದಿನದಲ್ಲಿಯೇ ನಮ್ಮ ದೈಹಿಕ ಶ್ರಮದ ಆಧಾರದ ಮೇಲೆ ನಮ್ಮ ಆಹಾರ ಬೇರೆ ಬೇರೆ ಪ್ರಮಾಣದಲ್ಲಿರಬಹುದು. ಆ ಕ್ಷಣದಲ್ಲಿ ಎಷ್ಟು ಬೇಕಾಗುತ್ತದೆ ಎಂಬುದರ ಬಗ್ಗೆ ನಮಗೆ ಎಚ್ಚರವಿರಬೇಕು. ಇದನ್ನೇ ಮೊದಲು ಅನಿವಾರ್ಯ ಕರ್ತವ್ಯ ಅಥವಾ ಕರ್ಮ ಎಂದು ಹೇಳಲಾಗಿದೆ. (6.1, 3.8)

ಇದರ ಬದಲಾಗಿ ನಮ್ಮ ಮನಸ್ಸು ವಿಷಯಗಳ ಬಗ್ಗೆ ಅನುಮಾನಿ ಸುತ್ತದೆ ಹಾಗೂ ಆ ವಿಷಯಗಳ ಬಗ್ಗೆ ಸಂಕೀರ್ಣ ಕಥೆಗಳನ್ನು ನಮ್ಮ ಕಲ್ಪನೆಯೊಂದಿಗೆ ಜೋಡಿಸುತ್ತದೆ. ನಮಗೆ ನಾವೇ ಹೇಳುವ ಈ ಕಥೆಗಳು ಒಬ್ಬನನ್ನು ನಾಯಕನನ್ನಾಗಿ ಅಥವಾ ಖಳನಾಯಕನನ್ನಾಗಿ ಮಾಡುತ್ತವೆ ಹಾಗೂ ಅಂಥ ಸಂದರ್ಭವನ್ನು ಸುಖಮಯ ಅಥವಾ ದುಃಖಮಯವನ್ನಾಗಿ ಮಾಡುತ್ತವೆ. ಈ ಕಥೆಗಳು ನಮ್ಮ ಮಾತು ಹಾಗೂ ನಡತೆಯನ್ನು ನಿರ್ದೇಶಿಸುತ್ತವೆ. ಆದ್ದರಿಂದ ಕೃಷ್ಣ ಹೇಳುತ್ತಾನೆ, ಎಲ್ಲ ಸುಖಭೋಗಗಳ ವ್ಯಾಮೋಹವನ್ನು ತ್ಯಜಿಸಿ ಇಂತಹ ಕಥೆಗಳನ್ನು ಹೇಳುವ ಮನಸ್ಸನ್ನು ನಿಗ್ರಹಿಸಿ ನಾವು ಜಯಶೀಲರಾಗಬೇಕು, ಅದುವೇ ಭಗವಂತನೊಂದಿಗೆ ಹೊಂದುವ ಏಕತೆಯಾಗಿದೆ. (6.18)

ಕೃಷ್ಣ ಹೇಳುತ್ತಾನೆ-ಗಾಳಿ ಇಲ್ಲದ ಸ್ಥಳದಲ್ಲಿ ದೀಪವು ಅಲ್ಲಾಡದಿರುವಂತೆ, ಆತ್ಮನೊಂದಿಗೆ ಏಕತೆ ಹೊಂದುವುದನ್ನು ಅಭ್ಯಾಸ ಮಾಡುತ್ತಿರುವ ಯೋಗಿಯ ನಿಗ್ರಹಿತ ಮನಸ್ಸು ಹೊಯ್ದಾಡುವುದಿಲ್ಲ. (6.19) ಈ ಮೊದಲು ಕೃಷ್ಣ ಆಮೆ (2.58) ಮತ್ತು ನದಿ ಹಾಗೂ ಮಹಾಸಾಗರಗಳ (2.70) ಉದಾಹರಣೆಯನ್ನು ಕೊಟ್ಟಿದ್ದಾನೆ. ಅಲ್ಲಿ ನದಿಗಳು ಒಮ್ಮೆ ಮಹಾಸಾಗರ ಸೇರಿದಾಗ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ. ಆದರೆ ಎಷ್ಟೇ ನದಿಗಳು ಸೇರಿದರೂ ಮಹಾಸಾಗರ ಶಾಂತವಾಗಿರುತ್ತದೆ. ಅಂತೆಯೇ ಮಹಾಸಾಗರದಂತೆ ಸ್ಥಿರವಾಗಿರುವ ಯೋಗಿಯ ಮನಸ್ಸನ್ನು ಪ್ರವೇಶಿಸಿದ ಆಸೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ.

**ನಿತ್ಯಜೀವನದಲ್ಲಿ ಭಗವದ್ಗೀತೆ**



**ಕೆ.ಶಿವಪ್ರಸಾದ್**
**ಹಿರಿಯ ಐಎಎಸ್ ಅಧಿಕಾರಿ**

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

## ಅಂಕ ಪಟ್ಟಿ

| | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| ಗುಜರಾತ್ | 06 | 04 | 02 | 08 |
| ಡೆಲ್ಲಿ | 05 | 04 | 01 | 08 |
| ಬೆಂಗಳೂರು | 06 | 04 | 02 | 08 |
| ಪಂಜಾಬ್ | 06 | 04 | 02 | 08 |
| ಲಖನೌ | 07 | 04 | 03 | 08 |
| ಕೋಲ್ಕತ್ತಾ | 07 | 03 | 04 | 06 |
| ಮುಂಬೈ | 06 | 02 | 04 | 04 |
| ರಾಜಸ್ಥಾನ್ | 06 | 02 | 04 | 04 |
| ಹೈದರಾಬಾದ್ | 06 | 02 | 04 | 04 |
| ಚೆನ್ನೈ | 07 | 02 | 05 | 04 |

## ಇಂದಿನ ಪಂದ್ಯ

7.30 PM

ಮುಂಬೈ ಇಂಡಿಯನ್ಸ್ Vs ಸನ್‌ರೈಸರ್ಸ್ ಹೈದರಾಬಾದ್

ವಾಂಖೆಡೆ ಸ್ಟೇಡಿಯಂ ಮುಂಬೈ

'ಮಂಗಳವಾರ ಪಂಜಾಬ್ ವಿರುದ್ಧ ನಡೆದ ಪಂದ್ಯದ ಸೋಲನ್ನು ವಿವರಿಸಲು ಏನೂ ವಿಷಯ ಇಲ್ಲ, ಏನಾಯಿತು ಎಂದು ಎಲ್ಲರೂ ನೋಡಿದ್ದಾರೆ. ತಂಡದ ಪ್ರದರ್ಶನದಿಂದ ನಿಜಕ್ಕೂ ತುಂಬಾ ನಿರಾಶೆಯಾಗಿದೆ. ನಾನು ಕೆಟ್ಟ ಆಟವಾಡಿದ್ದೇನೆ. ಹೀಗಾಗಿ ಸೋಲಿನ ಸಂಪೂರ್ಣ ಹೊಣೆಯನ್ನು ನಾನೇ ಹೊರುತ್ತೇನೆ. ನಾನು ವಿಕೆಟ್ ಕಳೆದುಕೊಂಡ ಬಳಿಕ ಕೆಕೆಆರ್ ತಂಡದ ಪತನ ಶುರುವಾಗಿತ್ತು. ಎಲ್‌ಬಿಡಬ್ಲ್ಯು ಆಗಿದ್ದರೂ, ನಾನು ರಿವ್ಯೂ ತೆಗೆದುಕೊಂಡಿರಲಿಲ್ಲ. ಆ ಸಮಯದಲ್ಲಿ ಯಾವುದೇ ಸವಾಲನ್ನು ತೆಗೆದುಕೊಳ್ಳಲು ನಾನು ಬಯಸಲಿಲ್ಲ, ಅಲ್ಲದೆ ನನಗೂ ಆ ಬಗ್ಗೆ ಖಚಿತತೆವಿರಲಿಲ್ಲ, ಆದ್ದರಿಂದ ರಿವ್ಯೂವನ್ನು ತೆಗೆದುಕೊಳ್ಳದಿರಲು ನಿರ್ಧರಿಸಿದೆ. ನಾವು ಬ್ಯಾಟಿಂಗ್‌ನಲ್ಲಿ ನಿರ್ಲಕ್ಷ್ಯ ತೋರಿದ್ದೇವೆ, ಅದರಿಂದಾಗಿ 111 ರನ್‌ಗಳ ಗುರಿ ಕೂಡ ಬೆನ್ನಟ್ಟಲು ಸಾಧ್ಯವಾಗಿಲ್ಲ. ಹೀಗಾಗಿ ಕಳಪೆಯಾಟದಿಂದಾಗಿಯೇ ನಾವು ಸೋತಿದ್ದೇವೆ..'

–ಅಜಿಂಕ್ಯಾ ರಹಾನೆ, ಕೋಲ್ಕತ್ತಾ ತಂಡದ ನಾಯಕ

## ಕಾಮೆಂಟರಿ ತಂಡ: ಅಲನ್ ವಿಲ್ಕಿನ್ಸ್ ಸೇರ್ಪಡೆ

**ಮುಂಬೈ:** ಜನಪ್ರಿಯ ಕ್ರಿಕೆಟ್ ನಿರೂಪಕ ಮತ್ತು ಮಾಜಿ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟಿಗ ಅಲನ್ ವಿಲ್ಕಿನ್ಸ್ ಗಂಟಲು ಕ್ಯಾನ್ಸರ್‌ನಿಂದ ಗುಣಮುಖರಾಗಿ ಹಾಲಿ ಆವೃತ್ತಿಯ ಐಪಿಎಲ್ ಟೂರ್ನಿಯ ಕಾಮೆಂಟರಿ

ತಂಡವನ್ನು ಸೇರಲು ಸಜ್ಜಾಗಿದ್ದಾರೆ. ಶೀಘ್ರದಲ್ಲೇ ಅವರು ಭಾರತಕ್ಕೆ ಆಗಮಿಸಲಿದ್ದಾರೆ ಎಂದು ಐಪಿಎಲ್ ಆಡಳಿತ ಮಂಡಳಿ ತಿಳಿಸಿದೆ. ಗಂಟಲು ಕ್ಯಾನ್ಸರ್ ನಿಂದ ಸಂಪೂರ್ಣ ಮುಕ್ತಿ ಪಡೆದಿರುವುದಾಗಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ವಿಲ್ಕಿನ್ಸ್, ಐಪಿಎಲ್‌ಗೆ ಮತ್ತೆ ಮರಳುವ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ. 71 ವರ್ಷದ ವಿಲ್ಕಿನ್ಸ್ ಈ ಹೊಸ ಅಧ್ಯಾಯವು ತಮ್ಮನ್ನು ಮತ್ತೆ ಯುವಕರನ್ನಾಗಿ ಮಾಡಿದೆ ಎಂದು ಹೇಳಿದ್ದಾರೆ. ಇಂಗ್ಲೆಂಡ್ ದೇಶೀಯ ಟೂರ್ನಿಯಲ್ಲಿ ಆಡುತ್ತಿದ್ದ ವೇಳೆ ಗಾಯಗೊಂಡು ಕ್ರಿಕೆಟ್ ತ್ಯಜಿಸಿದ ವಿಲ್ಕಿನ್ಸ್ ಆ ಬಳಿಕ ಕಾಮೆಂಟರಿ ಕ್ಷೇತ್ರದಲ್ಲಿ ತೊಡಗಿಕೊಂಡರು. ಕ್ರಿಕೆಟ್ ಮಾತ್ರವಲ್ಲದೆ ರಗ್ಬಿ, ಟೆನಿಸ್ ಮತ್ತು ಗಾಲ್ಫ್ ಪಂದ್ಯಗಳ ವೀಕ್ಷಕ ವಿವರಣೆಯನ್ನೂ ಕೂಡ ವಿಲ್ಕಿನ್ಸ್ ಮಾಡುತ್ತಾರೆ.

## ಆರ್‌ಸಿಬಿ ಹೊಗಳಿದ ಜಿತೇಶ್

**ಬೆಂಗಳೂರು:** ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ತನ್ನ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಒಂದು ವೀಡಿಯೊವನ್ನು ಹಂಚಿಕೊಂಡಿದೆ. ಇದರಲ್ಲಿ ಜಿತೇಶ್ ಶರ್ಮಾ ತಮ್ಮ ಕ್ರಿಕೆಟ್ ಪ್ರಯಾಣದ

ಬಗ್ಗೆ ಮಾತನಾಡಿದ್ದು, 'ನಾನು ಆರ್‌ಸಿಬಿ ಸೇರಿದ ಬಳಿಕ ಐಪಿಎಲ್‌ಗೂ ಮುನ್ನ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಆಡಿದ್ದೆ. ಆ ವೇಳೆ ಅಭಿಮಾನಿಗಳು ಜಿತೇಶ್, ಜಿತೇಶ್, ಆರ್‌ಸಿಬಿ, ಆರ್‌ಸಿಬಿ ಎಂದು ಕೂಗುತ್ತಿದ್ದರು, ಹಾಗಾಗಿ ಆಗ ನಾನು ಯಾವುದೇ ಸಣ್ಣ ತಂಡಕ್ಕೆ ಹೋಗಿಲ್ಲ ಎಂದು ಅರಿತುಕೊಂಡೆ. ಆರ್‌ಸಿಬಿ ಪರ ಆಡುವುದು ಸಣ್ಣ ವಿಷಯವಲ್ಲ. ಈ ತಂಡದಲ್ಲಿ ವಿಭಿನ್ನ ಭಾವನೆ ಇದೆ. ಇದೀಗ 100–150 ಜನರು ಆಟೋಗ್ರಾಫ್ ಕೇಳುತ್ತಾರೆ, ಇದಕ್ಕೂ ಮೊದಲು ನಾನು ಭಾರತಕ್ಕಾಗಿ ಆಡಿದಾಗ 2 ಜನರು ಸಹ ಬಂದಿರಲಿಲ್ಲ. ಆಗ ನನಗೆ ಈ ಫ್ರಾಂಚೈಸಿ ವಿಭಿನ್ನವಾಗಿದೆ ಎಂದು ಅನಿಸಿತು' ಎಂದಿದ್ದಾರೆ. ಜಿತೇಶ್ ಶರ್ಮಾ ಐಪಿಎಲ್‌ನಲ್ಲಿ ಆರ್‌ಸಿಬಿ ಪರ 4 ಇನ್ನಿಂಗ್ಸ್‌ಗಳಲ್ಲಿ 29 ಸರಾಸರಿ ಮತ್ತು 157 ಸ್ಟ್ರೈಕ್ ರೇಟ್‌ನೊಂದಿಗೆ 88 ರನ್ ಗಳಿಸಿದ್ದಾರೆ.

## ನರೇನ್ ಔಟ್: ರಣತಂತ್ರ ಬಹಿರಂಗ ಪಡಿಸಿದ ಪಾಂಟಿಂಗ್

**ದೆಹಲಿ:** ಕೋಲ್ಕತಾ ನೈಟ್ ರೈಡರ್ಸ್ ತಂಡದ ಅಪಾಯಕಾರಿ ಬ್ಯಾಟ್ಸ್‌ಮನ್ ಸುನೀಲ್ ನರೇನ್ ಅವರನ್ನು ಔಟ್ ಮಾಡಲು ರೂಪಿಸಿದ್ದ ಬೌಲಿಂಗ್ ರಣತಂತ್ರವನ್ನು ಪಂಜಾಬ್ ಕಿಂಗ್ಸ್ ಹೆಡ್ ಕೋಚ್ ರಿಕಿ ಪಾಂಟಿಂಗ್ ಬಹಿರಂಗ ಪಡಿಸಿದ್ದಾರೆ.

ಪಂಜಾಬ್ ಕಿಂಗ್ಸ್ ಹಂಚಿಕೊಂಡಿರುವ ವಿಡಿಯೊದಲ್ಲಿ ಮಾತನಾಡಿದ ರಿಕಿ ಪಾಂಟಿಂಗ್, ಮಾರ್ಕೊ, ಎಲ್ಲಾ ಪಂದ್ಯದಂತೆ ಈ ಪಂದ್ಯದ ಬೌಲಿಂಗ್ ಬಗ್ಗೆಯೂ ಇವತ್ತಿನ ಮೀಟಿಂಗ್‌ನಲ್ಲಿ ಮಾತನಾಡಿದೆವು. ಬ್ರೇಕ್ ಟೈಮ್ ವೇಳೆ ನಾವು ನಾಯಕನ ಬಳಿ ಮಾತನಾಡಿದ್ದೆವು. ನರೇನ್ ಅವರನ್ನು ಔಟ್ ಮಾಡಲು ಮಾರ್ಕೊ ಮೊದಲ ಓವರ್ ಬೌಲ್ ಮಾಡಬೇಕೆಂಬ ಯೋಜನೆಯನ್ನು ಶ್ರೇಯಸ್ ಅಯ್ಯರ್ ಹೊಂದಿದ್ದರು. ಎರಡನೇ ಓವರ್ ಯಾರೇ ಬೌಲ್ ಮಾಡಿದರೂ ಕ್ವಿಂಟನ್ ಡಿ ಕಾಕ್ ಅವರನ್ನು ಔಟ್ ಮಾಡಬೇಕೆಂಬ ಯೋಚನೆ ಇತ್ತು ಹಾಗೂ ಅದು ಒಳ್ಳೆಯ ಕ್ಯಾಚ್ ಆಗಿತ್ತು' ಎಂದೂ ತಿಳಿಸಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಎದುರಾಳಿ ಕೆಕೆಆರ್‌ಗೆ ಕಡಿಮೆ ಮೊತ್ತದ ಗುರಿ ನೀಡಿದ್ದರ ಹೊರತಾಗಿಯೂ ಪಂಜಾಬ್ ಕಿಂಗ್ಸ್ ತಂಡ ಯುಜ್ವೇಂದ್ರ ಚಹಲ್ ಸ್ಪಿನ್ ಮೋಡಿಯ ಬಲದಿಂದ 16 ರನ್‌ಗಳ ರೋಚಕ ಗೆಲುವು ಪಡೆದಿತ್ತು, ಆ ಮೂಲಕ ಟೂರ್ನಿಯಲ್ಲಿ ನಾಲ್ಕನೇ ಗೆಲುವು ಪಡೆದಿತ್ತು.

## ಜಹೀರ್ ಖಾನ್‌ಗೆ ತಂದೆಯಾದ ಸಂಭ್ರಮ

**ಮುಂಬೈ:** ಭಾರತ ತಂಡದ ಮಾಜಿ ವೇಗಿ ಜಹೀರ್ ಖಾನ್ ತಂದೆಯಾದ ಸಂತಸದಲ್ಲಿದ್ದಾರೆ. ಪತ್ನಿ ಸಾಗರಿಕಾ ಘಾಟ್ಗೆ ಬುಧವಾರ ಗಂಡು



ಮಗುವಿಗೆ ಜನ್ಮ ನೀಡಿದ್ದಾರೆ. ಈ ಸಂತಸದ ವಿಚಾರವನ್ನು ಸ್ವತಃ ಸಾಗರಿಕಾ ಘಾಟ್ಗೆ ಸಾಮಾಜಿಕ ಜಾಲತಾಣದಲ್ಲಿ ಪತಿ ಮತ್ತು ಮಗುವಿನ ಫೋಟೊವೊಂದನ್ನು ಹಂಚಿಕೊಂಡು ಪ್ರಕಟಿಸಿದ್ದಾರೆ. ಮಗನಿಗೆ ಫತೇಸಿನ್ಹ್ ಖಾನ್ ಎಂದು ಹೆಸರಿಡಲಾಗಿದೆ. 'ಫತೇಹ್' ಎಂದರೆ ವಿಜಯಶಾಲಿ ಎಂದು ಅರ್ಥ. ಸಾಗರಿಕಾ ಘಾಟ್ಗೆ ರಜಪೂತ ವಂಶಸ್ಥರಾಗಿದ್ದು, ಹೀಗಾಗಿ ಮಗುವಿನ ಹೆಸರಿನಲ್ಲಿ ಸಿನ್ಹ ಸೇರಿಸಲಾಗಿದೆ. ಪ್ರೀತಿ, ಕೃತಜ್ಞತೆ ಮತ್ತು ದೈವಿಕ ಆಶೀರ್ವಾದಗಳೊಂದಿಗೆ ನಾವು ನಮ್ಮ ಪುಟ್ಟ ಗಂಡು ಮಗು ಫತೇಸಿನ್ ಖಾನ್‌ನನ್ನು ಈ ಜಗತ್ತಿಗೆ ಸ್ವಾಗತಿಸುತ್ತೇವೆ ಎಂದು ಸಾಗರಿಕಾ ತಮ್ಮ ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಬರೆದಿದ್ದಾರೆ. 46 ವರ್ಷದ ಭಾರತೀಯ ಕ್ರಿಕೆಟ್‌ನ ಎಡಗೈ ವೇಗಿ, ಜಹೀರ್ ಖಾನ್ 2015ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ಸದ್ಯ ಐಪಿಎಲ್‌ನಲ್ಲಿ ಲಕ್ನೋ ತಂಡದ ಮೆಂಟರ್ ಮತ್ತು ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಂದೆಯಾದ ಜಹೀರ್ ಖಾನ್‌ಗೆ ಲಕ್ನೋ ಫ್ರಾಂಚೈಸಿ ಶುಭ ಹಾರೈಸಿದೆ.

## ಕರುಣ್‌ಗೆ ನಿರಾಶೆ

**ದೆಹಲಿ:** ಮುಂಬೈ ಇಂಡಿಯನ್ಸ್ ವಿರುದ್ದದ ಐಪಿಎಲ್ ಟೂರ್ನಿಯಲ್ಲಿ ಕಮ್‌ಬ್ಯಾಕ್ ಮಾಡಿ 89 ರನ್ ಸಿಡಿಸಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ

ಬ್ಯಾಟ್ಸ್‌ಮನ್ ಕರುಣ್ ನಾಯರ್, ರಾಜಸ್ಥಾನ್ ರಾಯಲ್ಸ್ ವಿರುದ್ದದ ಪಂದ್ಯದಲ್ಲಿ ಡಕ್‌ಔಟ್ ಆದರು. ಮೂರು ಎಸೆತಗಳನ್ನು ಆಡಿದರೂ ರನ್ ಔಟ್ ಆಗಿ ನಿರಾಶೆಯೊಂದಿಗೆ ಪೆವಿಲಿಯನ್‌ಗೆ ಹೆಜ್ಜೆ ಹಾಕಿದರು. ಡ್ರೆಸ್ಸಿಂಗ್ ಕೊಠಡಿಗೆ ತೆರಳಿದ ಬಳಿಕ ಕನ್ನಡಿಗ ಕರುಣ್ ನಾಯರ್ ಆಕ್ರೋಶ ವ್ಯಕ್ತಪಡಿಸಿದರು. ಆ ವಿಡಿಯೊ ಹಾಗೂ ಫೋಟೋಗಳು ಟ್ವಿಟರ್ ಸೇರಿದಂತೆ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿವೆ. ಬುಧವಾರ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿಯೂ ಕರುಣ್ ನಾಯರ್ ಅವಕಾಶ ಪಡೆದಿದ್ದರು. ಆದರೆ ಖಾತೆ ತೆರೆಯದೆ ವಿಕೆಟ್ ಒಪ್ಪಿಸಿದರು. ಅವರು ಮೂರನೇ ಓವರ್‌ನಲ್ಲಿ ಬ್ಯಾಟಿಂಗ್ ಮಾಡಲು ಬಂದು, ನಾಲ್ಕನೇ ಓವರ್‌ನಲ್ಲಿ ಅಭಿಷೇಕ್ ಪೊರೆಲ್ ಜೊತೆ ಹೊಂದಾಣಿಕೆ ಕಳೆದುಕೊಂಡು ರನ್ ಔಟ್ ಆದರು.

ಮಿಂಚಿದ ಪೊರೆಲ್, ರಾಹುಲ್, ಸ್ಟಬ್ಸ್, ಅಕ್ಷರ್ | ಸಾಮಾನ್ಯ ಮೊತ್ತ ಪೇರಿಸಿದ ದೆಹಲಿ

# ರಾಜಸ್ಥಾನಕ್ಕೆ 189 ರನ್‌ಗಳ ಗುರಿ

**ದೆಹಲಿ:** ತವರಿನಲ್ಲಿ ನಡೆದ 2ನೇ ಪಂದ್ಯದಲ್ಲೂ ಡೆಲ್ಲಿ ಕ್ಯಾಪಿಟಲ್ಸ್ ತಂಡವು ರಾಜಸ್ಥಾನ ರಾಯಲ್ಸ್ ತಂಡಕ್ಕೆ 189 ರನ್‌ಗಳ ಸವಾಲಿನ ಗುರಿ ನೀಡಿದೆ. ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗೆ ಇಳಿದ ಡೆಲ್ಲಿ ಕ್ಯಾಟಪಿಲ್ಸ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 188 ರನ್ ಗಳಿಸಿದೆ. ಅಭಿಷೇಕ್ ಪೊರೆಲ್ 49, ಕೆಎಲ್ ರಾಹುಲ್ 38, ಅಕ್ಷರ್ ಪಟೇಲ್ 34 ಹಾಗೂ ಸ್ಟಬ್ಸ್ ಅಜೇಯ 34 ರನ್ ಗಳಿಸಿದರು.

ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಅತಿಥೇಯ ತಂಡಕ್ಕೆ ಬ್ಯಾಟಿಂಗ್ ನೀಡಿತು. ಡೆಲ್ಲಿಗೆ ಬುಧವಾರ ಕೂಡ ಉತ್ತಮ ಆರಂಭ ಸಿಗಲಿಲ್ಲ. ಆಸೀಸ್ ಯುವ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗರ್ಕ್ ಕೇವಲ 9 ರನ್‌ಗಳಿಸಿ ಜೋಫ್ರಾ ಆರ್ಚರ್ ಬೌಲಿಂಗ್‌ನಲ್ಲಿ ಜೈಸ್ವಾಲ್‌ಗೆ ಕ್ಯಾಚ್ ನೀಡಿ ಔಟ್ ಆದರು. ನಂತರ ಬಂದ ಕಳೆದ ಪಂದ್ಯದಲ್ಲಿ 89 ರನ್ ಗಳಿಸಿದ್ದ ಕನ್ನಡಿಗ ಕರುಣ್ ನಾಯರ್ ರನ್ ಕದಿಯುವ ಆತುರದಲ್ಲಿ ಒಂದೂ ರನ್ ಗಳಿಸದೇ ರನ್‌ಔಟ್ ಆಗಿ ಪೆವಿಲಿಯನ್ ಸೇರಿಕೊಂಡರು.

3ನೇ ವಿಕೆಟ್‌ಗೆ ಅಭಿಷೇಕ್ ಪೊರೆಲ್ ಹಾಗೂ ಕೆಎಲ್ ರಾಹುಲ್ 63 ರನ್ ಗಳಿಸಿದರು. ಆದರೆ ಇವರಿಬ್ಬರು ವೇಗವಾಗಿ ರನ್ ಗಳಿಸುವಲ್ಲಿ ವಿಫಲರಾದರು. 63 ರನ್‌ಗಳಿಗಾಗಿ 57 ಎಸೆತಗಳನ್ನೆ ದುರಿಸಿದರು. 7 ಎಸೆತಗಳಲ್ಲಿ 24 ರನ್ ಗಳಿಸಿದ್ದ ಪೊರೆಲ್ ಒಟ್ಟಾರೆ 37 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 49 ರನ್ ಗಳಿಸಿ ಔಟ್ ಆದರು. ಪವರ್ ಪ್ಲೇನ 2ನೇ ಓವರ್‌ನಲ್ಲಿ 4 ಬೌಂಡರಿ, 1 ಸಿಕ್ಸರ್ ಸಿಡಿಸಿದ್ದ ಪೊರೆಲ್ ನಂತರ 30 ಎಸೆತಗಳಲ್ಲಿ ಕೇವಲ 1 ಬೌಂಡರಿ ಮಾತ್ರ ಸಿಡಿಸಿದರು. ಕೆ.ಎಲ್. ರಾಹುಲ್ 32 ಎಸೆತಗಳಲ್ಲಿ 2 ಬೌಂಡರಿ, 2 ಸಿಕ್ಸರ್‌ಗಳ ಸಹಿತ 38 ರನ್ ಗಳಿಸಿ ಆರ್ಚರ್‌ಗೆ ವಿಕೆಟ್ ನೀಡಿದರು. ನಾಯಕ ಅಕ್ಷರ್ ಪಟೇಲ್ 14 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ 32, ಟ್ರಿಸ್ಟಾನ್ ಸ್ಟಬ್ಸ್ 18 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸಹಿತ ಅಜೇಯ 32, ಅಶುತೋಷ್ ಶರ್ಮಾ 11 ಎಸೆತಗಳಲ್ಲಿ ಅಜೇಯ 15 ರನ್ ಗಳಿಸಿ ತಂಡದ ಮೊತ್ತವನ್ನು ಹೆಚ್ಚಿಸುವ ಪ್ರಯತ್ನ ಮಾಡುವಲ್ಲಿ ತಮ್ಮ ಕೊಡುಗೆ ನೀಡಿದರು.

ರಾಜಸ್ಥಾನ ರಾಯಲ್ಸ್ ಪರ ಜೋಫ್ರಾ ಆರ್ಚರ್ 32 ರನ್ ನೀಡಿ 2 ವಿಕೆಟ್, ವನಿಂದು ಹಸರಂಗ 38 ರನ್ ನೀಡಿ 1 ವಿಕೆಟ್ ಹಾಗೂ ಮಹೀಶ್ ತೀಕ್ಷಣ 40 ರನ್ ಕೊಟ್ಟು 1 ವಿಕೆಟ್ ಪಡೆದು ಮಿಂಚಿದರು.

### ತವರಿನಲ್ಲಿ ಡೆಲ್ಲಿಯ ದಾಖಲೆ

**ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಇಲ್ಲಿಯವರೆಗೆ 29 ಬಾರಿ ಮುಖಾಮುಖಿಯಾಗಿದ್ದು, ಡೆಲ್ಲಿ 14 ಹಾಗೂ ರಾಜಸ್ಥಾನ್ 15ರಲ್ಲಿ ಗೆಲುವು ಸಾಧಿಸಿವೆ. ದೆಹಲಿಯ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದಿರುವ 9 ಪಂದ್ಯಗಳಲ್ಲಿ ಡೆಲ್ಲಿ 6ರಲ್ಲಿ ಗೆದ್ದಿದ್ದರೆ, ರಾಯಲ್ಸ್ 3ರಲ್ಲಿ ಮಾತ್ರ ಗೆಲುವು ಸಾಧಿಸಿದೆ. ರಾಜಸ್ಥಾನ್ ವಿರುದ್ಧ ಡೆಲ್ಲಿ ತಂಡ ಈ ಮೈದಾನದಲ್ಲಿ ಪ್ರಾಬಲ್ಯ ಸಾಧಿಸಿದರೂ ಒಟ್ಟಾರೆ ಇಲ್ಲಿ ನಡೆದಿರುವ 86 ಪಂದ್ಯಗಳಲ್ಲಿ 38ರಲ್ಲಿ ಗೆಲುವು ಸಾಧಿಸಿದ್ದರೆ, 46 ಸೋಲು ಕಂಡಿದೆ. ಒಂದು ಪಂದ್ಯ ರದ್ದು, ಒಂದು ಟೈ ಆಗಿದೆ.**

ತವರಲ್ಲಿ ಪಾಂಡ್ಯಗೆ ಕಮಿನ್ಸ್ ಪಡೆ ಎದುರಾಳಿ
ನಾಲ್ಕು ಅಂಕಗಳನ್ನಷ್ಟೇ ಪಡೆದಿರುವ ಎರಡೂ ತಂಡಗಳು

# ಇಂದು ಮುಂಬೈಗೆ ಹೈದರಾಬಾದ್ ಸವಾಲು

**ಮುಂಬೈ ತಂಡ:** ಹಾರ್ದಿಕ್ ಪಾಂಡ್ಯ (ನಾಯಕ), ರೋಹಿತ್ ಶರ್ಮಾ, ವಿಲ್ ಜ್ಯಾಕ್ಸ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ನಮನ್ ಧೀರ್, ಮಿಚೆಲ್ ಸ್ಯಾಂಟ್ನರ್, ದೀಪಕ್ ಚಹರ್, ಟ್ರೆಂಟ್ ಬೌಲ್ಟ್, ಅಶ್ವಿನಿ ಕುಮಾರ್, ವಿಘ್ನೇಶ್ ಪುತ್ತೂರು, ರಿಯಾನ್ ರಿಕೆಲ್ಟನ್, ಸತ್ಯನಾರಾಯಣ ರಾಜು, ಅರ್ಜುನ್ ತೆಂಡೂಲ್ಕರ್



**ಹೈದರಾಬಾದ್ ತಂಡ:** ಪ್ಯಾಟ್ ಕಮಿನ್ಸ್ (ನಾಯಕ), ಅಭಿಷೇಕ್ ಶರ್ಮಾ, ನಿತೀಶ್ ರೆಡ್ಡಿ, ಹೆನ್ರಿಚ್ ಕ್ಲಾಸೆನ್, ಟ್ರಾವಿಸ್ ಹೆಡ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ಇಶಾನ್ ಕಿಶನ್, ರಾಹುಲ್ ಚಹರ್, ಆಡಂ ಝಂಪಾ, ಅಭಿನವ್ ಮನೋಹರ್, ಸಿಮ್ರಾನ್‌ಜಿತ್ ಸಿಂಗ್, ಜಯದೇವ್ ಉನದ್ಕಟ್, ಕಮಿಂದು ಮೆಂಡಿಸ್

**ಮುಂಬೈ:** ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಮುಂಬೈ ತಂಡವು ಹೈದರಾಬಾದ್ ತಂಡವನ್ನು ಎದುರಿಸಲಿದೆ. ಈಗಾಗಲೇ ಈ ಎರಡೂ ತಂಡಗಳು 6 ಪಂದ್ಯಗಳನ್ನು ಆಡಿದ್ದು, ತಲಾ ಎರಡು ಪಂದ್ಯದಲ್ಲಿ ಮಾತ್ರ ಗೆದ್ದು, ಅಂಕಪಟ್ಟಿಯಲ್ಲಿ 4 ಅಂಕಗಳನ್ನಷ್ಟೇ ಸಂಪಾದಿಸಿವೆ.

ಮಾರ್ಚ್–23ರಂದು ನಡೆದಿದ್ದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಮುಂಬೈ 9 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತ್ತು. ಆ ಗುರಿ ಬೆಂಬತ್ತಿದ ಚೆನ್ನೈ ತಂಡವು 4 ವಿಕೆಟ್‌ಗಳಿಂದ ಪಂದ್ಯ ಗೆದ್ದಿತ್ತು. ಮಾರ್ಚ್ 29ರಂದು ನಡೆದ ಪಂದ್ಯದಲ್ಲೂ ಗುಜರಾತ್ ತಂಡವು ಮುಂಬೈಯನ್ನು 36 ರನ್‌ಗಳಿಂದ ಸೋಲಿಸಿತ್ತು.

ಆದರೆ ಮಾರ್ಚ್–31ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾ ನೀಡಿದ್ದ ಗುರಿಯನ್ನು ಬೆಂಬತ್ತಿದ್ದ ಮುಂಬೈ 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತ್ತು. ಏಪ್ರಿಲ್–4ರಂದು ನಡೆದ ಪಂದ್ಯದಲ್ಲಿ ಮುಂಬೈ ತಂಡವನ್ನು ಮಣಿಸಿ, ಲಖನೌ ತಂಡವು 12 ರನ್‌ಗಳ ಗೆಲುವು ಸಾಧಿಸಿತ್ತು. ತವರಿನಲ್ಲಿ ಏಪ್ರಿಲ್–7ರಂದು ಆಯೋಜನೆಗೊಂಡಿದ್ದ ಪಂದ್ಯದಲ್ಲಿ ಮುಂಬೈಯನ್ನು ಆರ್‌ಸಿಬಿ 12 ರನ್‌ಗಳಿಂದ ಪರಾಭವಗೊಳಿಸಿತ್ತು. ಏಪ್ರಿಲ್–13ರಂದು ನಡೆದಿದ್ದ ಪಂದ್ಯದಲ್ಲಿ ಮತ್ತೆ ಪುಟಿದೆದ್ದ ಮುಂಬೈ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 12 ರನ್‌ಗಳಿಂದ ಮಣಿಸಿತ್ತು.

ಮುಂಬೈಯನ್ನು ಗುರುವಾರ ಎದುರಿಸಲಿರುವ ಹೈದರಾಬಾದ್ ತಂಡ ಕೂಡಾ ಅಂಕಪಟ್ಟಿಯಲ್ಲಿ ಬರೀ 4 ಅಂಕಗಳನ್ನಷ್ಟೇ ಗಳಿಸಿದೆ. ಮಾರ್ಚ್–23ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು 44 ರನ್‌ಗಳಿಂದ ಸೋಲಿಸಿ, ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಆದರೆ ಮಾರ್ಚ್–27ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ಲಖನೌ ವಿರುದ್ಧ 5 ವಿಕೆಟ್‌ಗಳ ಅಂತರದಲ್ಲಿ ಸೋತಿತ್ತು.

ಮಾರ್ಚ್ 30ರಂದು ನಡೆದ ಪಂದ್ಯದಲ್ಲಿ ಮತ್ತೆ ಹೈದರಾಬಾದ್ ತಂಡವು ಡೆಲ್ಲಿ ವಿರುದ್ಧ ಮುಗ್ಗರಿಸಿತ್ತು. ಏಪ್ರಿಲ್–3ರಂದು ನಡೆದ ಪಂದ್ಯದಲ್ಲೂ ಕೋಲ್ಕತ್ತಾ ತಂಡವು ಹೈದರಾಬಾದ್ ತಂಡವನ್ನು 80 ರನ್‌ಗಳಿಂದ ಮಣಿಸಿ ಗೆಲುವಿನ ನಗೆ ಬೀರಿತ್ತು. ಅದು ಹೈದರಾಬಾದ್ ತಂಡದ ಈ ಬಾರಿಯ ಹ್ಯಾಟ್ರಿಕ್ ಸೋಲಾಗಿತ್ತು.

ಏಪ್ರಿಲ್–6ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಹೈದರಾಬಾದ್ ತಂಡವು 152 ರನ್ ಕಲೆ ಹಾಕಿತ್ತು. ಆದರೆ ಆ ಗುರಿ ಬೆಂಬತ್ತಿದ ಗುಜರಾತ್ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು.

ಏಪ್ರಿಲ್–12ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಪಂಜಾಬ್ 245 ರನ್ ಗಳಿಸಿತ್ತು. ಆದರೆ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ್ದ ಹೈದರಾಬಾದ್ ಕೇವಲ 2 ವಿಕೆಟ್‌ಗಳನ್ನು ಕಳೆದುಕೊಂಡು, 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತ್ತು. ಗುರುವಾರದ ಪಂದ್ಯವು ಸಮಬಲರ ನಡುವಿನ ಸೆಣಸಾಟ ಎಂದೇ ವಿಶ್ಲೇಷಿಸಲಾ ಗುತ್ತಿದೆ. ಅತಿಥೇಯ ಮುಂಬೈ ಇಂಡಿಯನ್ಸ್ ತಂಡಕ್ಕೆ ತವರಿನ ಪ್ರೇಕ್ಷಕರ ಬೆಂಬಲ ಸಹಜ. ಈಗಾಗಲೇ ನಾಲ್ಕು ಪಂದ್ಯಗಳನ್ನು ಕಳೆದುಕೊಂಡಿರುವ ಸನ್ ರೈಸ್ ಹೈದರಾಬಾದ್ ತಂಡವು ಅಂಕ ಪಟ್ಟಿಯಲ್ಲಿ ಮೇಲೇರಬೇಕಾದರೆ ಪಂದ್ಯದಲ್ಲಿ ಗೆಲುವುಪಡೆಯ ಬೇಕಾಗಿರುವುದು ಕೂಡಾ ಅನಿವಾರ್ಯ.

## ಕೋಲ್ಕತ್ತಾದಲ್ಲಿ ಬಿಎಫ್‌ಸಿ ಮಾಲೀಕನಿಗೆ ಪಟಾಕಿ ಎಸೆತ

**ಕೋಲ್ಕತಾ:** ಮೋಹನ್ ಬಗಾನ್ ಸೂಪರ್ ಜಯಂಟ್ಸ್ ಹಾಗೂ ಬೆಂಗಳೂರು ಎಫ್‌ಸಿ ತಂಡಗಳ ನಡುವೆ

ನಡೆದಿದ್ದ 2025ರ ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಫೈನಲ್ ಪಂದ್ಯದ ವೇಳೆ ಬಿಎಫ್‌ಸಿ ಮಾಲಿಕ ಪಾರ್ಥ್ ಜಿಂದಾಲ್ ಮೇಲೆ ದಾಳಿ ನಡೆದಿದೆ. ಈ ಬಗ್ಗೆ ಬೆಂಗಳೂರು ಎಫ್‌ಸಿ ತಂಡದ ಮಾಲೀಕ ಪಾರ್ಥ್ ಜಿಂದಾಲ್ ಅವರೇ ಹೇಳಿಕೊಂಡಿದ್ದಾರೆ. ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಅವರು ಮಾಹಿತಿ ನೀಡಿದ್ದಾರೆ. ಕೋಲ್ಕತ್ತಾದಲ್ಲಿ ನಡೆದ ಪಂದ್ಯದ ವೇಳೆ ಗ್ಯಾಲರಿಗೆ

ಉರಿಯುತ್ತಿರುವ ಪಟಾಕಿಯನ್ನು ಎಸೆಯ ಲಾಗಿದ್ದು, ಅದರ ಬೆಂಬಲಿಗರೊಬ್ಬರ ಕಣ್ಣಿಗೆ ಗಾಯ ವಾಗಿದೆ ಎಂದು ಬಿಎಫ್‌ಸಿ ಆರೋಪ ಮಾಡಿದೆ.

ಕಳೆದ ಹಲವು ವರ್ಷಗಳಿಂದ ಬೆಂಗಳೂರು ಎಫ್‌ಸಿ ಪಂದ್ಯಗಳನ್ನು ವೀಕ್ಷಿಸಲು ಮಾಲಿಕ ಪಾರ್ಥ್ ಜಿಂದಾಲ್ ಕ್ರೀಡಾಂಗಣಕ್ಕೆ ಹೋಗಿದ್ದರು. ಅದರಂತೆ ಕೋಲ್ಕ ತಾದ ಸಾಲ್ಟ್‌ಲೇಕ್‌ನಲ್ಲಿ ನಡೆದಿದ್ದ ಬೆಂಗಳೂರು ಎಫ್‌ಸಿ ಹಾಗೂ ಮೋಹನ್ ಬಗಾನ್ ನಡುವಿನ ಫೈನಲ್ ಪಂದ್ಯವನ್ನು ವೀಕ್ಷಿಸಲು ಅವರು ಮೈದಾನಕ್ಕೆ ತೆರಳಿದ್ದರು. ಈ ಪಂದ್ಯದ ಎರಡನೇ ಅವಧಿಯಲ್ಲಿ ಮುನ್ನಡೆ ಸಾಧಿಸಿದ್ದರ ಹೊರತಾಗಿಯೂ ಮೋಹನ್ ಬಗಾನ್ ತಂಡ ಪಂದ್ಯದ ಹೆಚ್ಚುವರಿ ಸಮಯದಲ್ಲಿ ಬಿಎಫ್‌ಸಿ ತಂಡವನ್ನು 2–1 ಅಂತರದಲ್ಲಿ ಮಣಿಸಿತ್ತು.

'ಬೆಂಗಳೂರು ಎಫ್‌ಸಿ ತಂಡದ ನಮ್ಮ ಹುಡುಗರಿಗೆ ಬೆಂಬಲ ನೀಡುತ್ತಿದ್ದ ಸಂದರ್ಭದಲ್ಲಿ ಪಟಾಕಿ ತನಗೆ ತಗುಲಿತ್ತು. ನಾವು ನಿರೀಕ್ಷೆ ಮಾಡಿಸಿದಷ್ಟು ಭದ್ರತೆ ನಮಗೆ ಕೋಲ್ಕತಾದಲ್ಲಿ ನೀಡಲಾಗಿತ್ತೇ?' ಎಂದು ಪಾರ್ಥ್ ಜಿಂದಾಲ್ ಟ್ವೀಟ್ ಮಾಡಿ ಕೋಲ್ಕತಾದಲ್ಲಿ ಭದ್ರತೆ ಬಗ್ಗೆ ಪ್ರಶ್ನೆಯನ್ನು ಮಾಡಿದ್ದರು.

## ಚೆಂಡು ಬದಲಾವಣೆ ನಿಯಮ ಬೌಲರ್‌ಗಳಿಗೆ ನೆರವು: ಮೋಹಿತ್

**ದೆಹಲಿ:** ಚೆಂಡಿನ ಹೊಳಪು ಹೆಚ್ಚಿಸಲು ಎಂಜಲು ಬಳಸುವುದು ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಎರಡು ಚೆಂಡು ಬಳಕೆಗೆ ಅವಕಾಶ

ಕಲ್ಪಿಸಿರುವುದರಿಂದ ಈ ಬಾರಿಯ ಐಪಿಎಲ್‌ನಲ್ಲಿ ಬೌಲರ್‌ಗಳಿಗೆ ಖಂಡಿತವಾ ಗಿಯೂ ನೆರವಾ ಗುತ್ತಿದೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮೋಹಿತ್ ಶರ್ಮಾ ಹೇಳಿದ್ದಾರೆ.

ಚೆಂಡಿಗೆ ಎಂಜಲು ಹಚ್ಚುವುದನ್ನು ಕೋವಿಡ್ ಸಂದರ್ಭದಲ್ಲಿ ನಿಷೇಧಿಸಲಾಗಿತ್ತು. ಆದರೆ ಈ ಬಾರಿಯ (2025ರ) ಐಪಿಎಲ್ ಆರಂಭಕ್ಕೂ ಮುನ್ನ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆ ನಿಷೇಧ ತೆಗೆದು ಹಾಕಿತ್ತು. ಹಾಗೆಯೇ ಸಂಜೆ ಪಂದ್ಯಗಳ ಎರಡನೇ ಇನಿಂಗ್ಸ್ ವೇಳೆ ಇಬ್ಬನಿ ಸುರಿಯುವ ಸಾಧ್ಯತೆ ಇರುವುದರಿಂದ, ಬಳಸಿದ ಮತ್ತೊಂದು ಚೆಂಡನ್ನು 10 ಓವರ್‌ಗಳ ನಂತರ ಬಳಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ.

ಈ ಕುರಿತು ಮಾತನಾಡಿರುವ ಶರ್ಮಾ, 'ಹೌದು, ಇದು (ಚೆಂಡು ಬದಲಾವಣೆ ನಿಯಮ) ಶೇ 100 ರಷ್ಟು ಸಹಕಾರಿ. ಕಳೆದ ಪಂದ್ಯದಲ್ಲಿ ನಾವು ಅದನ್ನು ನೋಡಿದ್ದೇವೆ. ಮೊದಲ ಇನಿಂಗ್ಸ್ ವೇಳೆ 12 ಓವರ್‌ಗಳ ನಂತರ ಇಬ್ಬನಿ ಸುರಿಯಲಾಗಿತ್ತು. ಎರಡನೇ ಇನಿಂಗ್ ವೇಳೆ ಅದು ಮತ್ತಷ್ಟು ಹೆಚ್ಚಾಯಿತು. ಹಾಗಾಗಿ ಚೆಂಡು ಬದಲಾವಣೆಯು ಮಹತ್ವದ ಪಾತ್ರ ವಹಿಸಲಿದೆ. ಆದರೆ 15 ಅಥವಾ 16 ಓವರ್ ಮುಗಿಯುವ ಹೊತ್ತಿಗೆ ಎರಡನೇ ಚೆಂಡು ಕೂಡ ಹಳೇ ಚೆಂಡಿನಂತೆಯೇ ಆಗುತ್ತದೆ' ಎಂದು ಹೇಳಿದ್ದಾರೆ. 'ಇಬ್ಬನಿ ಸುರಿಯುವುದು ಖಾತ್ರಿಯಾದರೆ ಅದಕ್ಕೆ ತಕ್ಕಂತೆ ಯೋಜನೆ ರೂಪಿಸಬಹುದು' ಎಂದು ಅಭಿಪ್ರಾಯಪಟ್ಟಿರುವ ಅವರು, 'ಚೆಂಡಿಗೆ ಎಂಜಲು ಬಳಸುವುದರಿಂದ ಖಂಡಿತಾ ಬದಲಾವಣೆ ಕಾಣಲಿದೆ, ನಿಯಂತ್ರಣ ಸಾಧಿಸಲು ಬೌಲರ್‌ಗಳಿಗೆ ನೆರವಾಗುತ್ತದೆ' ಎಂದಿದ್ದಾರೆ.

## ಧೋನಿ ಕ್ರಿಕೆಟ್‌ನ ಬಾಹುಬಲಿ

**ದೆಹಲಿ:** ಲಖನೌ ಸೂಪರ್ ಜಯಂಟ್ಸ್ ವಿರುದ್ದದ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಕೇವಲ 11 ಎಸೆತಗಳಲ್ಲಿ 26 ರನ್ ಸಿಡಿಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಗೆಲ್ಲಿಸಿದ್ದ ಎಂಎಸ್

ಧೋನಿಯನ್ನು ಭಾರತದ ಸ್ಪಿನ್ ದಿಗ್ಗಜ ಹರ್ಭಜನ್ ಸಿಂಗ್ ಮುಕ್ತಕಂಠದಿಂದ ಗುಣಗಾನ ಮಾಡಿದ್ದಾರೆ. ಎಂಎಸ್ ಧೋನಿಯನ್ನು ಕ್ರಿಕೆಟ್‌ನ ಬಾಹುಬಲಿ ಎಂದು ಭಜ್ಜಿ ಬಣ್ಣಿಸಿದ್ದಾರೆ.

ತಮ್ಮ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಮಾತನಾಡಿದ್ದ ಹರ್ಭಜನ್ ಸಿಂಗ್, 'ಎಂಎಸ್ ಧೋನಿ ಬಾಹುಬಲಿ. ಅಗ್ರ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದರೆ ತಾನು ಏನು ಮಾಡಬಹುದೆಂಬುದನ್ನು ಧೋನಿ ಇಡೀ ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ. ಬ್ಯಾಟಿಂಗ್ 9ನೇ ಕ್ರಮಾಂಕ ಇವರಿಗೆ ಸೂಕ್ತವಾಗುವುದಿಲ್ಲ. ಅವರು ಅತ್ಯುತ್ತಮವಾಗಿ ಬ್ಯಾಟಿಂಗ್ ಪ್ರದರ್ಶನ ತೋರಿದ್ದರು ಹಾಗೂ ಶಿವಂ ದುಬೆಗೂ ಕೂಡ ನೆರವಾಗಿದ್ದರು. ಧೋನಿ ಬ್ಯಾಟಿಂಗ್‌ನಲ್ಲಿ ಅತ್ಯುತ್ತಮ ಫಾರ್ಮ್‌ನಲ್ಲಿದ್ದು, ಅವರು ಪಂದ್ಯದ ದಿಕ್ಕನ್ನೇ ಬದಲಾಯಿಸಿದ್ದಾರೆ' ಎಂದು ಹರ್ಭಜನ್ ಸಿಂಗ್ ತಿಳಿಸಿದ್ದಾರೆ.

'ಎಂಎಸ್ ಧೋನಿ ನಾಯಕನಾದ ಬಳಿಕ ಎಲ್ಲವೂ ಬದಲಾಗುತ್ತದೆ, ಅವರು ವಿಭಿನ್ನವಾಗಿ ಬ್ಯಾಟ್ ಮಾಡಿದರು. ಅವರ ನಾಯಕತ್ವದ ಅಡಿಯಲ್ಲಿ ತಂಡ ವಿಭಿನ್ನವಾಗಿ ಆಡಿದೆ. ಬೌಲಿಂಗ್ ಬದಲಾವಣೆ ಬುದ್ಧಿವಂತಿಕೆಯಿಂದ ಕೂಡಿತ್ತು. ಧೋನಿ ಸರಿಯಾದ ಸಮಯದಲ್ಲಿ ತಂಡದ ನಾಯಕತ್ವವನ್ನು ತೆಗೆದುಕೊಂಡು ತಮ್ಮ ತಂಡದ ಪಂದ್ಯಗಳ ಗತಿ ಬದಲಿಸಿದ್ದಾರೆ' ಎಂದು ಹರ್ಭಜನ್ ಸಿಂಗ್ ಹೇಳಿದ್ದಾರೆ.

## ಎರಡೂ ತಂಡಗಳು ಆಲ್‌ಔಟ್ ಆದ 5 ಪಂದ್ಯಗಳು

**ಚಂಡೀಗಢ:** ಇಲ್ಲಿ ಮಂಗಳವಾರ ನಡೆದಿದ್ದ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವಿನ ಕಡಿಮೆ ಸ್ಕೋರಿಂಗ್ ರೋಮಾಂಚಕ ಪಂದ್ಯದಲ್ಲಿ ಎರಡೂ ತಂಡಗಳು ಆಲ್ ಔಟ್ ಆಗಿದ್ದವು. ಐಪಿಎಲ್ ಟೂರ್ನಿಯ ಇತಿಹಾಸದಲ್ಲಿಯೇ ಪಂದ್ಯವೊಂದರಲ್ಲಿ ಎರಡೂ ತಂಡಗಳು ಆಲ್‌ಔಟ್ ಆಗಿರುವ ಘಟನೆಗಳು ಹಲವು ಬಾರಿ ನಡೆದಿವೆ. 2008ರಿಂದ 2025ರ ಐಪಿಎಲ್ ಟೂರ್ನಿಗಳವರೆಗೂ ಪಂದ್ಯವೊಂದರಲ್ಲಿ ಎರಡೂ ತಂಡಗಳು ಆಲ್‌ಔಟ್ ಆದ ಐದು ಪಂದ್ಯಗಳು ಹೀಗಿದ್ದು, ಅದರಲ್ಲಿ ಆರ್‌ಸಿಬಿ, ಕೆಕೆಆರ್, ಮುಂಬೈ ಸೇರಿದಂತೆ ಹಲವು ತಂಡಗಳು ಭಾಗಿಯಾಗಿವೆ.

**ರಾಜಸ್ಥಾನ–ಡೆಕ್ಕನ್ ಚಾರ್ಜಸ್:** 2010ರ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಮತ್ತು ಡೆಕ್ಕನ್ ಚಾರ್ಜರ್ಸ್ ಕಾದಾಟ ನಡೆಸಿದ್ದವು. ರಾಜಸ್ಥಾನ್ ತಂಡ ಪ್ರಥಮ ಇನಿಂಗ್ಸ್‌ನಲ್ಲಿ 159 ರನ್‌ಗಳಿಗೆ ಆಲೌಟ್ ಆಗಿತ್ತು. ಪ್ರತಿಯಾಗಿ ಡೆಕ್ಕನ್ ಚಾರ್ಜರ್ಸ್ 19.5 ಓವರ್‌ಗಳಲ್ಲಿ 157 ರನ್ ಸರ್ವಪತನ ಕಂಡಿತ್ತು. ಅಂತಿಮವಾಗಿ ರಾಜಸ್ಥಾನ್ 2 ರನ್ ರೋಚಕ ಗೆಲುವು ಸಾಧಿಸಿತ್ತು.

**ಕೆಕೆಆರ್–ಆರ್‌ಸಿಬಿ ಪಂದ್ಯ:** 2017ರ ಐಪಿಎಲ್ ಟೂರ್ನಿಯಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವೆ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆಲ್ ಔಟ್ ಆಗಿದ್ದವು. ಮೊದಲು ಬ್ಯಾಟ್ ಮಾಡಿದ್ದ ಕೆಕೆಆರ್ 131 ರನ್ ಗಳಿಗೆ ಆಲ್‌ಔಟ್ ಆಗಿತ್ತು, ಬಳಿಕ 132 ರನ್‌ಗಳ ಗುರಿ ಹಿಂಬಾಲಿಸಿದ್ದ ಆರ್‌ಸಿಬಿ ಕೇವಲ 49 ರನ್‌ಗಳಿಗೆ ಆಲೌಟ್ ಆಗಿತ್ತು.

**ಹೈದರಾಬಾದ್–ಮುಂಬೈ:** 2018ರ ಐಪಿಎಲ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಮೊದಲು ಬ್ಯಾಟಿಂಗ್ ನಡೆಸಿ ಕೇವಲ 118 ರನ್‌ಗಳಿಗೆ ಆಲ್‌ಔಟ್ ಆಗಿತ್ತು. ನಂತರ 119 ರನ್‌ಗಳ ಸಾಧಾರಣ ಗುರಿಯನ್ನು ಹಿಂಬಾಲಿಸಿದ್ದ ಮುಂಬೈ ಇಂಡಿಯನ್ಸ್ 18.5 ಓವರ್‌ಗಳಲ್ಲಿ 87 ರನ್‌ಗಳಿಗೆ ಆಲೌಟ್ ಆಗಿತ್ತು. ಆ ಮೂಲಕ ಈ ಲೋ–ಸ್ಕೋರಿಂಗ್ ಪಂದ್ಯವನ್ನು ಸನ್ ರೈಸರ್ಸ್ ಹೈದರಾಬಾದ್ ಗೆದ್ದುಕೊಂಡಿತ್ತು.

**ಕೆಕೆಆರ್–ಮುಂಬೈ:** 2024ರಲ್ಲಿ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಮುಂಬೈ ಇಂಡಿಯನ್ಸ್ ನಡುವೆ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆಲ್ ಔಟ್ ಆಗಿದ್ದವು. ಮೊದಲ ಇನಿಂಗ್ಸ್‌ನಲ್ಲಿ ಕೆಕೆಆರ್ 169 ರನ್‌ಗಳಿಗೆ ಆಲೌಟ್ ಆಗಿತ್ತು. ಇದಕ್ಕೆ ಉತ್ತರವಾಗಿ ಮುಂಬೈ ಇಂಡಿಯನ್ಸ್ 18.5 ಓವರ್‌ಗಳಲ್ಲಿ 145 ರನ್‌ಗಳಿಗೆ ಸರ್ವಪತನ ಕಂಡಿತು.

**ಕೆಕೆಆರ್–ಪಂಜಾಬ್:** ಏಪ್ರಿಲ್ 15ರಂದು ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವೆ ಪಂದ್ಯ ನಡೆದಿತ್ತು. ಚಂಡೀಗಢದಲ್ಲಿ ಬ್ಯಾಟಿಂಗ್ ಪಿಚ್‌ನಲ್ಲಿ ರನ್ ಹೊಳೆ ಹರಿಯಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅಲ್ಲೂ ಪಂಜಾಬ್–ಕೆಕೆಆರ್ ಆಲೌಟ್ ಆಗಿತ್ತು.

## ಒಲಿಂಪಿಕ್ಸ್ ಕ್ರಿಕೆಟ್: ಪೋಸ್ಟರ್‌ನಲ್ಲಿ ಕೊಹ್ಲಿಗೆ ಸ್ಥಾನ

**ಲಾಸ್‌ಏಂಜಲೀಸ್:** ಸುಮಾರು 128 ವರ್ಷಗಳ ನಂತರ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಯಾದ ಕ್ರಿಕೆಟ್ ಪಂದ್ಯಾವಳಿ ಯಾವ ಸ್ಥಳದಲ್ಲಿ ನಡೆಯಲಿದೆ ಎಂಬುದರ ಬಗ್ಗೆ ದೊಡ್ಡ ಮಾಹಿತಿ ಹೊರಬಿದ್ದಿದೆ. ಕ್ಯಾಲಿಫೋರ್ನಿಯಾದ ಪೊಮೊನಾ ನಗರದಲ್ಲಿ 500 ಎಕರೆ ವಿಸ್ತೀರ್ಣದ ಮೈದಾನದಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯಲಿವೆ ಎಂಬ ಮಾಹಿತಿಯನ್ನು ಇದೀಗ ಐಸಿಸಿ ತನ್ನ ಅಧಿಕೃತ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ.

**ತಾತ್ಕಾಲಿಕ ಕ್ರೀಡಾಂಗಣ:** ಪೊಮೋನಾದಲ್ಲಿ ಕ್ರಿಕೆಟ್ ಆಡಲಾಗುವ ಮೈದಾನವನ್ನು ಫೇರ್‌ಪ್ಲೆಕ್ಸ್ ಎಂದೂ ಕರೆಯುತ್ತಾರೆ. ಅಲ್ಲಿ ಕ್ರಿಕೆಟ್ ಅಥವಾ ಯಾವುದೇ ಇತರ ಕ್ರೀಡೆಗೆ ಈಗಾಗಲೇ ಇರುವ ಯಾವುದೇ ಸಂಕೀರ್ಣವಿಲ್ಲ. ಸಾಮಾನ್ಯವಾಗಿ ಇದನ್ನು ಮೇಳಗಳನ್ನು ಆಯೋಜಿಸಲು ಬಳಸಲಾಗುತ್ತಿತ್ತು. 500 ಎಕರೆ ಪ್ರದೇಶದಲ್ಲಿ ಹರಡಿರುವ ಈ ಮೈದಾನವು 103 ವರ್ಷಗಳಿಂದ (1922) ಲಾಸ್ ಏಂಜಲೀಸ್ ಕೌಂಟಿ ಮೇಳವನ್ನು ಆಯೋಜಿಸುತ್ತಿದೆ. ಆದರೆ ಈಗ ಕ್ರಿಕೆಟ್‌ಗಾಗಿ ಇಲ್ಲಿ ತಾತ್ಕಾಲಿಕ ಕ್ರೀಡಾಂಗಣವನ್ನು ಸಿದ್ಧಪಡಿಸಲಾಗುತ್ತದೆ. ಇದಕ್ಕೂ ಮೊದಲು, ಅಂದರೆ 2024ರಲ್ಲಿ ನಡೆದಿದ್ದ ಟಿ20 ವಿಶ್ವಕಪ್‌ಗೆ ಅಮೆರಿಕ ಆತಿಥ್ಯವಹಿಸಿತ್ತು, ಆ ವೇಳೆ ಉದ್ಯಾನವನ ಪ್ರದೇಶದಲ್ಲಿ ತಾತ್ಕಾಲಿಕ ಕ್ರೀಡಾಂಗಣವನ್ನು ನಿರ್ಮಿಸಲಾಗಿತ್ತು.

**ಕೊಹ್ಲಿಗೆ ಮಾತ್ರ ಸ್ಥಾನ:** ಒಲಿಂಪಿಕ್ಸ್ ಆಯೋಜಿಸುವ ಸಮಿತಿಯು ಕ್ರಿಕೆಟ್ ಪಂದ್ಯಾವಳಿ ನಡೆಯುವ ಸ್ಥಳದ ಬಗ್ಗೆ ಮಾಹಿತಿ ನೀಡುವ ಪೋಸ್ಟರ್ ಅನ್ನು ಸಹ ಹಂಚಿಕೊಂಡಿದೆ. ಈ ಪೋಸ್ಟರ್‌ನಲ್ಲಿ ವಿರಾಟ್ ಕೊಹ್ಲಿ ಅವರ ಭಾವಚಿತ್ರವನ್ನು ಹೊರತುಪಡಿಸಿ ಮತ್ಯಾವ ಕ್ರಿಕೆಟಿಗನಿಗೂ ಅವಕಾಶ ನೀಡಲಾಗಿಲ್ಲ. ಕೊಹ್ಲಿ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚಿರುವುದರಿಂದ ಕ್ರಿಕೆಟ್ ಅನ್ನು ಸೇರಿಸುವ ಬಗ್ಗೆ ಯೋಚಿಸಲು ಪ್ರಾರಂಭಿಸಿದ್ದೇವೆ ಎಂದು ಒಲಿಂಪಿಕ್ ಸಮಿತಿ ಈ ಹಿಂದೆ ಹೇಳಿತ್ತು.

ವರದಿಗಳ ಪ್ರಕಾರ, ಆತಿಥೇಯ ರಾಷ್ಟ್ರವಾಗಿರುವುದರಿಂದ ಅಮೆರಿಕ ತಂಡಕ್ಕೆ ನೇರ ಪ್ರವೇಶ ಸಿಗಬಹುದು. ಇದರ ನಂತರ, ಐಸಿಸಿ ಶ್ರೇಯಾಂಕಗಳ ಆಧಾರದ ಮೇಲೆ ಉಳಿದ 5 ಸ್ಥಾನಗಳಿಗೆ ತಂಡಗಳನ್ನು ಆಯ್ಕೆ ಮಾಡಬಹುದು.